ಶುಕ್ರವಾರ, ಮೇ 23, 2025 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

ಮಾರ್ಷ್ ಶತಕ ಸೊಬಗು

ಲಖನೌ ಸೂಪರ್ ಜೈಂಟ್ಸ್ ತಂಡದ ಮಿಚೆಲ್ ಮಾರ್ಷ್ ಅವರು ಗುರುವಾರ ಅಹಮದಾಬಾದಿನಲ್ಲಿ ನಡೆದ ಐಪಿಎಲ್ ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡದ ಎದುರು ಶತಕ ದಾಖಲಿಸಿದರು. ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ ನಿಕೊಲಸ್ ಪೂರನ್ ಅವರೊಂದಿಗೆ 121 (51ಎಸೆತ) ರನ್ ಸೇರಿಸಿದರು.

ಏಪ್ರಿಲ್ ಮಧ್ಯ ಭಾಗದಲ್ಲಿ ಬತ್ತಿದ್ದ 66 ಕೆರೆಗಳು; ಮೇ 20ರಂದು 63 ಕೆರೆಗಳು ಕೋಡಿ

ಕೆರೆಗಳಲ್ಲಿ 2,605 ಕೋಟಿ ಲೀ. ನೀರು

3,251 ಕೋಟಿ ಲೀಟರ್
183 ಕೆರೆಗಳ ಒಟ್ಟು ಸಾಮರ್ಥ್ಯ

1,059 ಕೋಟಿ ಲೀಟರ್
ಏಪ್ರಿಲ್ 11ರಂದು ನೀರಿನ ಸಂಗ್ರಹ

2,605 ಕೋಟಿ ಲೀಟರ್
ಮೇ 20ರಂದು ನೀರಿನ ಸಂಗ್ರಹ

ತುಂಬಿ ತುಳುಕುತ್ತಿರುವ ನಾಗೇಶ್ವರ ನಾಗೇನಹಳ್ಳಿ ಕೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮುಂಗಾರು ಪೂರ್ವ ಮಳೆಯ ಅಬ್ಬರದಿಂದ ಕೆರೆಗಳಿಗೆ ಭರಪೂರ ನೀರು ಹರಿದಿದ್ದು, 183 ಕೆರೆಗಳಲ್ಲಿ 2,605 ಕೋಟಿ ಲೀಟರ್ ಸಂಗ್ರಹವಾಗಿದೆ.

ನಗರದಲ್ಲಿ ವಾಡಿಕೆಗಿಂತ ದುಪ್ಪಟ್ಟು ಮಳೆ ಮೇನಲ್ಲಿ ಆಗಿದ್ದು, ಒಣಗುವ ಹಂತದಲ್ಲಿದ್ದ ಕೆರೆಗಳಿಗೆ ನೀರು ಬಂದಿದೆ. ಏಪ್ರಿಲ್ 11ರಂದು 66 ಕೆರೆಗಳು ಸಂಪೂರ್ಣ ಒಣಗಿದ್ದವು. 44 ಕೆರೆಗಳಲ್ಲಿ ಅರ್ಧಕ್ಕಿಂತ ಕಡಿಮೆ ಹಾಗೂ 13 ಕೆರೆಗಳಲ್ಲಿ ಮುಕ್ಕಾಲು ಭಾಗ ನೀರಿತ್ತು. ಮೇ 20ಕ್ಕೆ 63 ಕೆರೆಗಳು ಕೋಡಿ ಹರಿದಿವೆ. 40 ಕೆರೆಗಳಲ್ಲಿ ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚು ನೀರಿದೆ.

ಯಲಹಂಕ ವಲಯದಲ್ಲಿ 19 ಕೆರೆಗಳು, ರಾಜರಾಜೇಶ್ವರಿ ನಗರ ವಲಯದಲ್ಲಿ 16 ಕೆರೆಗಳು, ಮಹದೇವಪುರ ವಲಯದಲ್ಲಿ 13 ಕೆರೆಗಳು, ಬೊಮ್ಮನಹಳ್ಳಿ ವಲಯದಲ್ಲಿ 7 ಕೆರೆಗಳು, ದಕ್ಷಿಣ ವಲಯದಲ್ಲಿ ನಾಲ್ಕು, ಪೂರ್ವ ಹಾಗೂ ದಾಸರಹಳ್ಳಿ ವಲಯದಲ್ಲಿ ತಲಾ ಎರಡು ಕೆರೆಗಳು ಪೂರ್ಣ ತುಂಬಿವೆ.

'ತುಂಬಿರುವ ಎಲ್ಲ ಕೆರೆಗಳ ತೂಬುಗಳ ಬಳಿ ಹಾಗೂ ಕೆರೆಯಲ್ಲಿ ಸ್ವಚ್ಛತಾ ಕಾರ್ಯವನ್ನು ಮಾಡಲಾಗುತ್ತಿದೆ. ಕೆರೆಗಳು ನೀರು ಹೋಗುವ ಕಾಲುವೆಗಳಲ್ಲಿ ಕಸ-ಕಡ್ಡಿ, ಪ್ಲಾಸ್ಟಿಕ್ ಸೇರಿದಂತೆ ತ್ಯಾಜ್ಯವನ್ನು ತೆರವುಗೊಳಿಸಲು ಸಿಬ್ಬಂದಿ ನಿಯೋಜಿಸಿ ಸ್ವಚ್ಛತಾ ಕಾರ್ಯವನ್ನು ಮಾಡಲಾಗುತ್ತಿದೆ' ಎಂದು ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದರು.

ಕೆಂಗೇರಿ ಕೆರೆಯ ಜಲವೈಭವ

ಯಾವ ಕೆರೆಗಳು ಭರ್ತಿ?

- **ಬೊಮ್ಮನಹಳ್ಳಿ:** ದೊರೆಕೆರೆ, ವೆಂಕೋಜಿರಾವ್ ಕೆರೆ, ಕೂಡ್ಲು ದೊಡ್ಡಕೆರೆ, ಅಣ್ಣಪ್ಪನಕೆರೆ, ಸುಬ್ರಮಣ್ಯ-ಪುರ ಕೆರೆ, ದೇವರಕೆರೆ, ಸುಬೇದಾರನಕೆರೆ.
- **ದಕ್ಷಿಣ:** ಗೌಡನಪಾಳ್ಯ ಕೆರೆ, ಕೆಂಪಾಂಬುಧಿ ಕೆರೆ, ಯಡಿಯೂರು ಕೆರೆ, ಮಡಿವಾಳ ಕೆರೆ.
- **ಪೂರ್ವ:** ಕೆಳಗಿನ ಬೈರಸಂದ್ರ ಕೆರೆ, ಹಲಸೂರು ಕೆರೆ.
- **ರಾಜರಾಜೇಶ್ವರಿ ನಗರ;** ಭೀಮನಕಟ್ಟೆ, ಹೊಸಕೆರೆಹಳ್ಳಿ, ಗಟ್ಟಿಗೆರೆಪಾಳ್ಯ , ಹೇರೋಹಳ್ಳಿ ಕೆರೆ, ಲಿಂಗಧೀರನಹಳ್ಳಿ ಕೆರೆ, ಅಂದ್ರಹಳ್ಳಿ ಕೆರೆ, ಎಚ್. ಗೊಲ್ಲಹಳ್ಳಿ ಕೆರೆ, ಚಿಕ್ಕಬಸ್ತಿ ಕೆರೆ, ಗಾಂಧಿನಗರ ಹೊಸಕೆರೆ, ಮಂಗಮ್ಮನಹಳ್ಳಿ ಕೆರೆ, ದುಬಾಸಿಪಾಳ್ಯ ಕೆರೆ, ಕೆಂಚನಪುರ ಕೆರೆ, ಕೊಡಿಗೆಹಳ್ಳಿ, ಭೀಮನಗುಪ್ಪೆ, ಕನ್ನಳ್ಳಿ ಕೆರೆ, ಸೂಲಿಕೆರೆ.
- **ದಾಸರಹಳ್ಳಿ;** ನೆಲಗೆದರನಹಳ್ಳಿ ಕೆರೆ, ದಾಸರಹಳ್ಳಿ ಕೆರೆ.
- **ಯಲಹಂಕ;** ಅಗ್ರಹಾರ ಕೆರೆ, ಕೋಗಿಲು ಕೆರೆ, ಯಲಹಂಕ ಕೆರೆ, ವೀರಸಾಗರ ಕೆರೆ, ಅಟ್ಟೂರು ಕೆರೆ, ನರಸೀಪುರ ಕೆರೆ, ಜಕ್ಕೂರು ಕೆರೆ, ಅಲ್ಲಾಳಸಂದ್ರ ಕೆರೆ, ಆವಲಹಳ್ಳಿ ಕೆರೆ, ದೊಡ್ಡಬೊಮ್ಮಸಂದ್ರ ಕೆರೆ, ಪಾಲನಹಳ್ಳಿ ಕೆರೆ, ರಾಚೇನಹಳ್ಳಿ ಕೆರೆ, ಹಾರೋಹಳ್ಳಿ ಕೆರೆ, ಸಿಂಗಾಪುರ ಕೆರೆ, ಬೆಟ್ಟಹಳ್ಳಿ ಕೆರೆ, ವೆಂಕಟೇಶಪುರ ಕೆರೆ, ಅಮೃತಹಳ್ಳಿ ಕೆರೆ, ಮೇಡಿಅಗ್ರಹಾರ ಕೆರೆ, ಕಟ್ಟಿಗೇನಹಳ್ಳಿ ಕೆರೆ.
- **ಮಹದೇಪುರ;** ಗೋಶಾಲಾ ಕೆರೆ, ಗರುಡಾಚಾರ್ ಪಾಳ್ಯ ಕೆರೆ, ಹರಳೂರು ಕೆರೆ, ಹೊರಮಾವು ಅಗರ ಕೆರೆ, ಕೌದೇನಹಳ್ಳಿ ಕೆರೆ, ಮಹದೇವಪುರ ಕೆರೆ, ನಾಗೇಶ್ವರ ನಾಗೇನಹಳ್ಳಿ ಕೆರೆ, ಪಟ್ಟಂದೂರು ಅಗ್ರಹಾರ-54 ಕೆರೆ, ಪಟ್ಟಂದೂರು ಅಗ್ರಹಾರ-124 ಕೆರೆ, ರಾಂಪುರ ಕೆರೆ, ಶೀಲವಂತನ ಕೆರೆ, ಸೀಗೇಹಳ್ಳಿ ಕೆರೆ, ವಿಜನಾಪುರ ಕೆರೆ.

ಅತಿಹೆಚ್ಚು ನೀರು ತುಂಬಿರುವ ಕೆರೆಗಳು (ಕೋಟಿ ಲೀಟರ್)

ಕೆರೆ	ಸಂಗ್ರಹ
ಯಲಹಂಕ	244
ಜಕ್ಕೂರು	109
ರಾಂಪುರ	108
ಮಡಿವಾಳ	101
ಹಲಸೂರು	92.5
ರಾಚೇನಹಳ್ಳಿ	84.9
ದೊಡ್ಡನೆಕ್ಕುಂದಿ	79
ವೆಂಕೋಜಿರಾವ್	73.6
ದೊಡ್ಡಬೊಮ್ಮಸಂದ್ರ	70.4
ಹೆಬ್ಬಾಳ	68

ಮಳೆ ನೀರು ಸಮಸ್ಯೆ: 'ಲೋಕಾ' ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಸಾಯಿ ಬಡಾವಣೆ ಬಳಿ ಅಧಿಕಾರಿಗಳಿಂದ ವಿವರಣೆ ಪಡೆದರು. ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ, ಬಿ.ವೀರಪ್ಪ ಉಪಸ್ಥಿತರಿದ್ದರು

ಬೆಂಗಳೂರು: ತೀವ್ರ ಮಳೆಯಿಂದ ಜಲಾವೃತವಾಗಿದ್ದ ನಗರದ ಪ್ರದೇಶಗಳಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಗುರುವಾರ ಭೇಟಿ ನೀಡಿ, ಪರಿಶೀಲಿಸಿದರು. ಈ ಪ್ರದೇಶಗಳಲ್ಲಿನ ಸಮಸ್ಯೆಗಳ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ಶುಕ್ರವಾರ ವಿಚಾರಣೆಗೆ ಬರುವಂತೆ ಬಿಎಂಆರ್‌ಸಿಎಲ್ ಮತ್ತು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಸಿಲ್ಕ್ ಬೋರ್ಡ್ ವೃತ್ತ, ಪಣತ್ತೂರಿನ ಎಸ್‌ಕ್ರಾಸ್ ರಸ್ತೆ, ಪಣತ್ತೂರು ರೈಲ್ವೆ ಕೆಳಸೇತುವೆ, ಸಾಯಿ ಬಡಾವಣೆ ಮತ್ತು ಮಾನ್ಯತಾ ಟೆಕ್ ಪಾರ್ಕ್ ಸಮೀಪದ ರಾಜಕಾಲುವೆ ಪ್ರದೇಶಗಳಿಗೆ ಲೋಕಾಯುಕ್ತರು, ಉಪ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಕೆ.ಎನ್.ಫಣೀಂದ್ರ ಮತ್ತು ಬಿ.ವೀರಪ್ಪ ಅವರು ಗುರುವಾರ ಮಧ್ಯಾಹ್ನ ದಿಢೀರ್ ಭೇಟಿ ನೀಡಿದರು.

ಸಿಲ್ಕ್ ಬೋರ್ಡ್ ವೃತ್ತದಲ್ಲಿ ಬಿಎಂಆರ್‌ಸಿಎಲ್ ರಾಜಕಾಲುವೆ ಕಾಮಗಾರಿ ನಡೆಸುತ್ತಿದ್ದು, ಅಲ್ಲಿ ಇನ್ನೂ ನೀರು ನಿಂತಿರುವುದನ್ನು ಲೋಕಾಯುಕ್ತರು ಗಮನಿಸಿದರು. ಬಿಎಂಆರ್‌ಸಿಎಲ್‌ನ ಮುಖ್ಯ ಎಂಜಿನಿಯರ್ ಅನ್ನು ಸ್ಥಳಕ್ಕೆ ಕರೆದು, ನೀರು ಏಕೆ ಹರಿಯುತ್ತಿಲ್ಲ ಎಂದು ಪ್ರಶ್ನಿಸಿದರು. ಲೋಕಾಯುಕ್ತ ಕಚೇರಿಯಲ್ಲಿ ಶುಕ್ರವಾರ ಮಧ್ಯಾಹ್ನ ನಡೆಯುವ ವಿಚಾರಣೆಗೆ ಹಾಜರಾಗಿ ಎಂದು ಸೂಚಿಸಿದರು.

ನಂತರ ಪಣತ್ತೂರು ರೈಲ್ವೆ ಕೆಳಸೇತುವೆ ಬಳಿ ಮಳೆ ನೀರು ನಿಂತಿರುವುದನ್ನು ಗಮನಿಸಿದ ಲೋಕಾಯುಕ್ತರು, ಕಾಮಗಾರಿ ನಡೆಸುತ್ತಿರುವ ರೈಲು ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ವಿವರಣೆ ಕೇಳಿದರು.

ಲೋಕಾಯುಕ್ತರು ಸಾಯಿ ಬಡಾವಣೆಗೆ ಭೇಟಿ ನೀಡಿದಾಗ ಅಲ್ಲಿನ ನಿವಾಸಿಗಳು, 'ಮೂರು ದಿನಗಳಿಂದ ವಿದ್ಯುತ್ ಸಂಪರ್ಕ ತೆಗೆದುಹಾಕಲಾಗಿದೆ, ಕುಡಿಯುವ ನೀರು ಪೂರೈಕೆ ಆಗುತ್ತಿಲ್ಲ, ತಗ್ಗಿನ ಪ್ರದೇಶದಿಂದ ಮಳೆ ನೀರನ್ನು ಇನ್ನೂ ತೆರವು ಮಾಡಿಲ್ಲ' ಎಂದು ದೂರಿತ್ತರು. 'ಈ ಎಲ್ಲ ಸಮಸ್ಯೆಗಳ ಬಗ್ಗೆ ಸಂಬಂಧಿತ ಇಲಾಖೆಯ ಅಧಿಕಾರಿಗಳನ್ನು ಶುಕ್ರವಾರ ಲೋಕಾಯುಕ್ತ ಕಚೇರಿಯಲ್ಲಿ ವಿಚಾರಣೆಗೆ ಕರೆದಿದ್ದೇವೆ. ನೀವು ಅಲ್ಲಿಗೆ ಬಂದು, ನಿಮ್ಮ ಸಮಸ್ಯೆಗಳ ವಿವರ ನೀಡಿ' ಎಂದು ಲೋಕಾಯುಕ್ತರು ಸಾರ್ವಜನಿಕರಿಗೆ ಹೇಳಿದರು.

ಅರ್ನಬ್, ಮಾಳವೀಯ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟರ್ಕಿಯ ಇಸ್ತಾಂಬುಲ್ ಕಾಂಗ್ರೆಸ್ ಕೇಂದ್ರವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಚೇರಿ ಎಂದು ಟ್ವೀಟ್ ಮಾಡಿದ್ದ ಬಿಜೆಪಿಯ ಸಾಮಾಜಿಕ ಮಾಧ್ಯಮದ ಮುಖ್ಯಸ್ಥ ಅಮಿತ್ ಮಾಳವೀಯ ಮತ್ತು ಅದನ್ನು 'ರಿಪಬ್ಲಿಕ್' ಸುದ್ದಿ ವಾಹಿನಿಯಲ್ಲಿ ಪ್ರಸಾರ ಮಾಡಿದ ಆರೋಪದಡಿ ವಾಹಿನಿಯ ಪ್ರಧಾನ ಸಂಪಾದಕ ಅರ್ನಬ್ ಗೋಸ್ವಾಮಿ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿದೆ.

ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸೀಂ ಮುನೀರ್ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸಂಬಂಧ ಬೆಸೆದು ಟ್ವೀಟ್ ಮಾಡಿದ ಕಾರಣದಿಂದ ಅಮಿತ್ ಮಾಳವೀಯ ವಿರುದ್ಧ ದಾಖಲಾಗಿರುವ ಮತ್ತೊಂದು ಎಫ್‌ಐಆರ್‌ಗೂ ತಡೆ ನೀಡಲಾಗಿದೆ.

ಈ ಸಂಬಂಧ ಅಮಿತ್ ಮಾಳವೀಯ ಮತ್ತು ಅರ್ನಬ್ ಗೋಸ್ವಾಮಿ ಸಲ್ಲಿಸಿದ್ದ ಅರ್ಜಿಯನ್ನು ರಜಾಕಾಲದ ಏಕಸದಸ್ಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಸ್. ರಾಚಯ್ಯ ಅವರು ಗುರುವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್ ಮತ್ತು ಸರ್ಕಾರದ ಪರ ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ಎರಡೂ ಪ್ರಕರಣಗಳಿಗೂ ಮುಂದಿನ ವಿಚಾರಣೆವರೆಗೆ ತಡೆ ನೀಡಿ ಆದೇಶಿಸಿತು.

7 ವರ್ಷದ ಅವಧಿಗೆ ₹4,791.95 ಕೋಟಿ: ಸಂಪುಟ ಸಭೆಯಲ್ಲಿ ತೀರ್ಮಾನ

ಕಸ ನಿರ್ವಹಣೆ: 33 ಪ್ಯಾಕೇಜ್‌ಗಳ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಹಸಿ ತ್ಯಾಜ್ಯ, ಒಣ ತ್ಯಾಜ್ಯ ಮತ್ತು ರಸ್ತೆ ಸ್ವಚ್ಛತೆಯ ಮೂಲಕ ತ್ಯಾಜ್ಯ ಸಂಗ್ರಹಣೆಯ ಪ್ರಾಥಮಿಕ ಸಾಗಣೆ ಮತ್ತು ದ್ವಿತೀಯ ಹಂತದ ಸಾಗಾಣಿಕೆ ಸೇವೆಯನ್ನು ಸಮರ್ಪಕವಾಗಿ ನಿರ್ವಹಿಸುವ ಉದ್ದೇಶದಿಂದ ಮರು ಟೆಂಡರ್ ಆಹ್ವಾನಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಸಂಪುಟ ಸಭೆಯ ಬಳಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಪ್ರಾಥಮಿಕ ಮತ್ತು ದ್ವಿತೀಯ ಹಂತದ ಸಾಗಾಣಿಕೆ ಸೇವೆಯನ್ನು ಸಮರ್ಪಕವಾಗಿ ನಿರ್ವಹಿಸಲು 7 ವರ್ಷದ ಅವಧಿಗೆ ₹4,791.95 ಕೋಟಿ ಮೊತ್ತದ 33 ಪ್ಯಾಕೇಜುಗಳನ್ನು ವಿಂಗಡಿಸಿ ಟೆಂಡರ್ ಪ್ರಕ್ರಿಯೆ ನಡೆಸುವ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ ಎಂದರು.

ಮೊದಲನೇ ವರ್ಷದ ವಾರ್ಷಿಕ ನಿರ್ವಹಣಾ ಅಂದಾಜು ವೆಚ್ಚ ₹588.54 ಕೋಟಿ ಆಗಿದ್ದು, ಆ ವೆಚ್ಚವನ್ನು ಬಿಬಿಎಂಪಿ ತನ್ನ ಅನುದಾನದಲ್ಲಿ ಭರಿಸಲಿದೆ. ಒಟ್ಟಾರೆ ₹4,791.95 ಕೋಟಿಗಳನ್ನು ಆಯಾ ವರ್ಷಗಳ ಬಿಎಸ್‌ಡಬ್ಲ್ಯುಎಂಎಲ್ ಸಂಸ್ಥೆಯ ನಿಧಿಯಿಂದ ಭರಿಸಲು ಅನುಮೋದನೆ ನೀಡಲಾಗಿದೆ ಎಂದರು.

ಈ ಕುರಿತು ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಈ ಹಿಂದೆ ಬಿಜೆಪಿ ಅವಧಿಯಲ್ಲಿ ಕಸ ವಿಲೇವಾರಿಗೆ 98 ಪ್ಯಾಕೇಜ್‌ಗಳ ಟೆಂಡರ್ ಕರೆಯಲಾಗಿತ್ತು. ಈ ವಿಚಾರವಾಗಿ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದರು. ನ್ಯಾಯಾಲಯ ಅವರ ಅರ್ಜಿಯನ್ನು ವಜಾಗೊಳಿಸಿದೆ. ಮುಂದಿನ ನಾಲ್ಕು ತಿಂಗಳಲ್ಲಿ ಈ ಟೆಂಡರ್ ಪ್ರಕ್ರಿಯೆ ಕುರಿತು ಅಂತಿಮ ತೀರ್ಮಾನ ಮಾಡುವಂತೆ ತೀರ್ಪು ನೀಡಿದೆ. ನಾವು ಪ್ರತಿ ಕ್ಷೇತ್ರದಲ್ಲೂ ಒಂದೊಂದು ಪ್ಯಾಕೇಜ್ ಮಾಡಲು ಮುಂದಾಗಿದ್ದೇವೆ. ದೊಡ್ಡ ಕ್ಷೇತ್ರಗಳಲ್ಲಿ ಎರಡು ಪ್ಯಾಕೇಜ್ ಸೇರಿ 33 ಪ್ಯಾಕೇಜ್ ಮೂಲಕ ಕಸ ವಿಲೇವಾರಿ ಮಾಡಲಾಗುವುದು' ಎಂದರು.

18 ಶಾಸಕರ ಅಮಾನತು 25ರಂದು ಸಭೆ

ವಿಧಾನಸಭೆಯ ಕಲಾಪದ ವೇಳೆ ಗದ್ದಲ ಎಬ್ಬಿಸಿದ ಬಿಜೆಪಿಯ 18 ಶಾಸಕರ ಅಮಾನತು ರದ್ದುಗೊಳಿಸುವ ವಿಚಾರವಾಗಿ ತೀರ್ಮಾನ ತೆಗೆದುಕೊಳ್ಳಲು ಇದೇ 25ರಂದು ಸಭಾಧ್ಯಕ್ಷರು ಸಭೆ ಕರೆದಿದ್ದಾರೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು. ಈ ವಿಷಯ ಸಂಪುಟ ಸಭೆಯಲ್ಲಿ ಚರ್ಚೆ ಆಗಿದೆ. ಸಭಾಧ್ಯಕ್ಷರು ಕರೆಯುವ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಇತರರು ಭಾಗವಹಿಸುತ್ತಾರೆ ಎಂದರು.

ಬಂಡೇಮಠದಲ್ಲಿ ವಸತಿ ಸಮುಚ್ಛಯ: ಬೆಂಗಳೂರು ನಗರದ ಕೆಂಗೇರಿ ಬಂಡೇಮಠ ಬಡಾವಣೆಯಲ್ಲಿ ಬಹುಮಹಡಿ ವಸತಿ ಸಮುಚ್ಚಯ ನಿರ್ಮಾಣ ಮಾಡಲಾಗುವುದು. 6 ಎಕರೆ 8 ಗುಂಟೆ ಜಮೀನಿನಲ್ಲಿ ಕ್ಲಬ್ ಹೌಸ್, ಈಜುಕೊಳ, ಜಿಮ್, ಗ್ರಂಥಾಲಯ, ಒಳಾಂಗಣ ಕ್ರೀಡಾಂಗಣಗಳನ್ನು ಒಳಗೊಂಡ 2 ಬಿಎಚ್‌ಕೆಯ 214 ಫ್ಲ್ಯಾಟ್‌ಗಳನ್ನು, 3 ಬಿಎಚ್‌ಕೆಯ 214 ಫ್ಲ್ಯಾಟ್‌ಗಳನ್ನು ನಿರ್ಮಿಸಲಾಗುವುದು. ವಸತಿ ಸಮುಚ್ಛಯ ₹180 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿದೆ ಎಂದು ಪಾಟೀಲ ತಿಳಿಸಿದರು.

ಗುತ್ತಿಗೆ ಮೌಲ್ಯ ಪಾವತಿಸಿದರೆ ಬಡ್ಡಿ ಮನ್ನಾ: ಬಿಡಿಎಯಿಂದ ಸಾರ್ವಜನಿಕ ಸೌಲಭ್ಯದ (ಸಿಎ) ನಿವೇಶನ ಪಡೆದು ಗುತ್ತಿಗೆ ಮೌಲ್ಯದ ಪಾವತಿ ಬಾಕಿ ಇರಿಸಿಕೊಂಡಿರುವ ವಿವಿಧ ಸಂಸ್ಥೆಗಳು 120 ದಿನಗಳೊಳಗೆ ಸಂಪೂರ್ಣ ಗುತ್ತಿಗೆ ಮೌಲ್ಯ ಪಾವತಿಸಿದರೆ ಬಡ್ಡಿಯನ್ನು ಸಂಪೂರ್ಣ ಮನ್ನಾ ಮಾಡಲಾಗುವುದು ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ಒಂದು ಬಾರಿಯ ಕ್ರಮವಾಗಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಸುಮಾರು ₹234 ಕೋಟಿ ಬಾಕಿ ಇದೆ ಎಂದು ಅವರು ಹೇಳಿದರು.

ಮುಂದೂಡಿಕೆ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವಿಚಾರವಾಗಿ ಇನ್ನೂ ಮೂರರಿಂದ ನಾಲ್ಕು ಮಂದಿ ಸಚಿವರು ತಮ್ಮ ಅಭಿಪ್ರಾಯವನ್ನು ಮುಖ್ಯಮಂತ್ರಿಯವರಿಗೆ ಲಿಖಿತವಾಗಿ ಕೊಡಬೇಕು. ಹೀಗಾಗಿ ಈ ವಿಷಯವನ್ನು ಮುಂದೂಡಲಾಗಿದೆ ಎಂದು ಪಾಟೀಲ ತಿಳಿಸಿದರು.

'ಪ್ಲಾಸ್ಟಿಕ್ ಬಾಟಲ್ ಹಾಕಿದರೆ ಕಾಯಿನ್'

ಪ್ಲಾಸ್ಟಿಕ್ ತ್ಯಾಜ್ಯ ಮುಕ್ತ ರಾಜ್ಯವನ್ನಾಗಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲಾಸ್ಟಿಕ್ ತ್ಯಾಜ್ಯ ಮುಕ್ತಗೊಳಿಸುವ ಉದ್ದೇಶದಿಂದ 'ಬಾಟಲಿ ಹಾಕಿದರೆ ಕಾಯಿನ್ ನೀಡುವ ಕಿಯೊಸ್ಕ್' ಅನ್ನು ರಾಜ್ಯದಾದ್ಯಂತ ಸ್ಥಾಪಿಸಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಉದ್ದೇಶಿಸಿದೆ.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಅರಮನೆ ಮೈದಾನದಲ್ಲಿ ಜೂನ್ 5ರಂದು ಆಯೋಜಿಸಲಾಗುವ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಕಿಯೊಸ್ಕ್‌ನ ಪ್ರಾತ್ಯಕ್ಷಿಕೆ ನೀಡಲಾಗುವುದು. ಇದನ್ನು ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ಸ್ಥಾಪಿಸುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುತ್ತದೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ಅವರು ಪತ್ರಿಕಾ ಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

'ರಾಜ್ಯದ ಸಂಸ್ಥೆಯೊಂದು ಕಿಯೊಸ್ಕ್ ತಯಾರಿಸಿದ್ದು, ಅದನ್ನು ಅಳವಡಿಸಿ ಪ್ಲಾಸ್ಟಿಕ್ ಬಾಟಲ್ ಸಂಗ್ರಹಿಸಬಹುದಾಗಿದೆ. ಎಷ್ಟು ಬಾಟಲ್ ಅನ್ನು ಕಿಯೊಸ್ಕ್‌ಗೆ ಹಾಕಿದರೆ ₹1 ಕಾಯಿನ್ ಲಭ್ಯವಾಗುತ್ತದೆ ಎಂಬುದನ್ನು, ನಿರ್ವಹಣಾ ಸಂಸ್ಥೆ ನಿರ್ಧರಿಸುತ್ತದೆ. ಕಿಯೊಸ್ಕ್‌ಗೆ (ಯಂತ್ರ) ಸ್ಥಳೀಯ ಸಂಸ್ಥೆಗಳು ಹಣ ಪಾವತಿಸಬೇಕು. ಸಂಸ್ಥೆ ನಿರ್ವಹಣೆ ಮಾಡಲಿದೆ. ಪ್ಲಾಸ್ಟಿಕ್ ಮುಕ್ತಗೊಳಿಸುವ ಪ್ರಯತ್ನದಲ್ಲಿ ಇದು ಪ್ರಮುಖ ಹೆಜ್ಜೆಯಾಗಲಿದೆ' ಎಂದರು.

ಪ್ಲಾಸ್ಟಿಕ್ ಮುಕ್ತ ರಾಜ್ಯವನ್ನಾಗಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ಹಲವು ಯೋಜನೆಗಳು ಅನುಷ್ಠಾನಗೊಳಿಸಲಿದೆ. ಅದರಲ್ಲಿ, ಬಾಟಲಿ ಸಂಗ್ರಹಿಸುವ ಕಿಯೊಸ್ಕ್ ಮೊದಲ ಪ್ರಯತ್ನ

ಪಿ.ಎಂ. ನರೇಂದ್ರಸ್ವಾಮಿ
ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

'ಬೆಂಗಳೂರಿನ ಕೆರೆಗಳಿಗೆ ನೀರು ಹರಿಯುವ ಮುನ್ನವೇ ತ್ಯಾಜ್ಯನೀರು ಸಂಸ್ಕರಣೆ ಘಟಕ (ಎಸ್‌ಟಿಪಿ) ಸ್ಥಾಪಿಸಬೇಕು. ಎಸ್‌ಟಿಪಿಗಳಲ್ಲಿ ನೀರು ಸರಿಯಾಗಿ ಸಂಸ್ಕರಣೆಯಾಗದೆ, ರಾಜ್ಯದ ಎಲ್ಲ ಭಾಗಗಳಲ್ಲಿ ಅಂತರ್ಜಲ, ನದಿಗಳು ಮಾಲಿನ್ಯಗೊಳ್ಳುತ್ತಿವೆ. ರಾಜ್ಯದ ಶೇ 50ರಷ್ಟು ಜನರಿಗೆ ಕುಡಿಯುವ ನೀರು ಒದಗಿಸುವ ಕಾವೇರಿ ನದಿಯಲ್ಲಿ ಮಾಲಿನ್ಯ ತಡೆಗೆ ಪರಿಸರಸ್ನೇಹಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ. ಈಗ ಈ ಕೆಲಸಗಳನ್ನು ಮಾಡದಿದ್ದರೆ, ಮುಂದೆ ದೇವರು ಬಂದರೂ ನದಿ-ಕೆರೆಗಳನ್ನು ಕಾಪಾಡಲು ಸಾಧ್ಯವಿಲ್ಲ' ಎಂದು ನರೇಂದ್ರಸ್ವಾಮಿ ಹೇಳಿದರು.

'ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ಅನುಮೋದನೆ ನೀಡಿದ್ದು, ಮೀಸಲಾತಿ ಅಂತಿಮಗೊಂಡ ಕೂಡಲೇ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ರಾಜ್ಯದ ಪ್ರತಿ ನಗರಗಳಲ್ಲೂ ವಾಯುಮಾಲಿನ್ಯ ಗುಣ ಮಟ್ಟ ಪರೀಕ್ಷಿಸುವ ಯಂತ್ರಗಳನ್ನು ಅಳವಡಿಸಲಾಗುತ್ತದೆ. ಕೈಗಾರಿಕೆಗಳು ಸಾರ್ವಜನಿಕ ಸ್ನೇಹಿ ಕೆಲಸ ಮಾಡಿದರೆ ಮಂಡಳಿಯೂ ಅವರಿಗೆ ಸ್ನೇಹಪೂರ್ವಕವಾಗಿರುತ್ತದೆ ಎಂದು ತಿಳಿಸಿದರು.

ಪರಿಸರ ನಡಿಗೆ: ಪರಿಸರ ದಿನಾಚರಣೆ ಅಂಗವಾಗಿ ಜೂನ್ 5 ರಂದು ಬೆಳಗ್ಗೆ 8 ಗಂಟೆಗೆ ವಿಧಾನಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಮುಂಭಾಗದಲ್ಲಿ 'ಪರಿಸರ ನಡಿಗೆ' ಏರ್ಪಡಿಸಲಾಗಿದೆ. ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಮತ್ತು ಎನ್‌ಸಿಸಿ ಕೆಡೆಟ್ಸ್ ಸೇರಿದಂತೆ ಸುಮಾರು 3,000 ಜನರು ಭಾಗವಹಿಸುತ್ತಾರೆ. ಅರಮನೆ ಮೈದಾನದಲ್ಲಿ 11 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ' ಪ್ರದಾನ ಮಾಡಲಿದ್ದಾರೆ ಎಂದು ತಿಳಿಸಿದರು.

ವಿದ್ಯುತ್ ಚಾಲಿತ ವಾಹನಗಳ ಬಳಕೆ, ರೈತರಿಗೆ ವಿದ್ಯುತ್ ಚಾಲಿತ ಟ್ರ್ಯಾಕ್ಟರ್‌ಗಳ ಮಾಹಿತಿ, ಹೊಸ ಆವಿಷ್ಕಾರಗಳ ಕುರಿತ ಪ್ರದರ್ಶನವಿರುತ್ತದೆ ಎಂದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಎಸ್.ಎಸ್. ಲಿಂಗರಾಜು ಉಪಸ್ಥಿತರಿದ್ದರು.

ಚಲನಚಿತ್ರಕ್ಕೆ ₹50 ಲಕ್ಷ ಬಹುಮಾನ

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 50ನೇ ವರ್ಷ ಆಚರಣೆ ಅಂಗವಾಗಿ ಉತ್ತಮ ಪರಿಸರಸ್ನೇಹಿ ಚಲನಚಿತ್ರಕ್ಕೆ ₹50 ಲಕ್ಷ ಬಹುಮಾನ ನೀಡಲಾಗುವುದು. ಇದಕ್ಕಾಗಿ ಆಯ್ಕೆ ಸಮಿತಿ ರಚಿಸಲಾಗುವುದು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ತಿಳಿಸಿದರು.

ಸೆಪ್ಟೆಂಬರ್ 1ಕ್ಕೆ ಮಂಡಳಿ ಸ್ಥಾಪನೆಯಾಗಿ 50 ವರ್ಷ ಪೂರ್ಣಗೊಳ್ಳಲಿದೆ. ಆಗಸ್ಟ್‌ನಲ್ಲಿ ಸಂಭ್ರಮಾಚರಣೆಯ ಉದ್ದೇಶವಿದ್ದು, ವರ್ಷಪೂರ್ತಿ ಪರಿಸರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದರು.

ಪ್ರಾಥಮಿಕ ಶಿಕ್ಷಣದಲ್ಲಿ ಪರಿಸರದ ಪಠ್ಯ ಸೇರಿಸಬೇಕು ಎಂದು ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೂ ಪ್ರಸ್ತಾವ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ಸೂಟ್‌ಕೇಸ್‌ನಲ್ಲಿ ಯುವತಿ ಶವ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹಳೆ ಚಂದಾಪುರದ ರೈಲ್ವೆ ಸೇತುವೆ ಬಳಿ ಬುಧವಾರ ಅನಾಥವಾಗಿ ಬಿದ್ದಿದ್ದ ಸೂಟ್‌ಕೇಸ್‌ನಲ್ಲಿ ಸುಮಾರು 18 ವರ್ಷದ ಯುವತಿಯ ಶವ ಪತ್ತೆಯಾಗಿದೆ.

ಬಾಲಕಿಯ ಕೈಕಾಲು ಮಡಚಿ ಸೂಟ್‌ಕೇಸ್‌ನಲ್ಲಿ ತುಂಬಲಾಗಿದ್ದು, ಕಿವಿ ಮತ್ತು ಮೂಗಿನಲ್ಲಿ ರಕ್ತಸ್ರಾವವಾಗಿರುವ ಕುರುಹುಗಳಿವೆ. ಯುವತಿಯನ್ನು ಬೇರೆ ಎಲ್ಲೋ ಕೊಲೆ ಮಾಡಲಾಗಿದೆ. ಸೂಟ್‌ಕೇಸ್‌ನಲ್ಲಿ ಶವವನ್ನು ರೈಲಿನ ಮೂಲಕ ತಂದು ಇಲ್ಲಿ ಎಸೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ರಸ್ತೆಯಲ್ಲಿ ಅನಾಥವಾಗಿ ಬಿದ್ದಿದ್ದ ನೀಲಿ ಬಣ್ಣದ ಸೂಟ್‌ಕೇಸ್ ಒಳಗಿಂದ ಯುವತಿಯ ದೇಹ, ಬಟ್ಟೆ ಕಂಡ ದಾರಿಹೋಕರು ಸೂರ್ಯಸಿಟಿ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಬೈಯಪ್ಪನಹಳ್ಳಿ ರೈಲ್ವೆ ಪೊಲೀಸರು ಮತ್ತು ಸೂರ್ಯ ಸಿಟಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸ್ಥಳಕ್ಕೆ ಬಂದ ಸೂರ್ಯಸಿಟಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸಂಜೀವ್ ಮಹಾಜನ್ ಹಾಗೂ ಸಿಬ್ಬಂದಿ ಸೂಟ್‌ಕೇಸ್ ತೆರೆದಾಗ ಕೈಕಾಲು ಮಡಚಿದ್ದ ಯುವತಿಯ ಶವ ಇತ್ತು.

ಸೂರ್ಯಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪ್ರಕರಣವನ್ನು ವಿವಿಧ ಆಯಾಮಗಳಿಂದ ತನಿಖೆ ನಡೆಸಲಾಗುವುದು ಎಂದು ಇನ್‌ಸ್ಪೆಕ್ಟರ್ ಮಹಾಜನ್ ತಿಳಿಸಿದ್ದಾರೆ.

ಆನೇಕಲ್ ತಾಲ್ಲೂಕಿನ ಹಳೆ ಚಂದಾಪುರದ ರೈಲ್ವೆ ಸೇತುವೆ ಬಳಿ ಅನಾಥವಾಗಿ ಬಿದ್ದಿದ್ದ ಸೂಟ್‌ಕೇಸ್ ಅನ್ನು ಪೊಲೀಸರು ಪರಿಶೀಲಿಸಿದರು

ಜನ ಸಂಪರ್ಕ ಸಭೆ ನಾಳೆ

ಬೆಂಗಳೂರು: ನಗರ ಪೊಲೀಸ್ ಇಲಾಖೆಯಿಂದ ಮೇ 24ರಂದು ಕಬ್ಬನ್‌ಪಾರ್ಕ್‌ನ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಜನಸಂಪರ್ಕ ಸಭೆ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 11ಕ್ಕೆ ಸಭೆ ಆರಂಭವಾಗಲಿದೆ. ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ಕೇಂದ್ರ ಪೊಲೀಸ್ ವಿಭಾಗದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮುನಿರತ್ನ ವಿರುದ್ಧದ ಪ್ರಕರಣ ಎಸ್‌ಐಟಿಗೆ ವರ್ಗಾವಣೆ

ಮುನಿರತ್ನ

ಬೆಂಗಳೂರು: ಮಹಿಳೆ ಮೇಲೆ ಅತ್ಯಾಚಾರ ನಡೆಸಿದ್ದ ಆರೋಪದ ಮೇಲೆ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಹಾಗೂ ಅವರ ಸಹಚರರ ವಿರುದ್ಧ ಆರ್ ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಎಸ್‌ಐಟಿಗೆ ಹಸ್ತಾಂತರ ಮಾಡಲಾಗಿದೆ.

ಮುನಿರತ್ನ ವಿರುದ್ಧದ ಪ್ರಕರಣಗಳ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿತ್ತು. ಎರಡು ಪ್ರಕರಣಗಳಲ್ಲೂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ.

'ಮೇ 20ರಂದು ಮುನಿರತ್ನ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಪ್ರಕರಣವನ್ನೂ ಎಸ್‌ಐಟಿ ವಹಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ತನ್ನ ಮೇಲೆ ಅತ್ಯಾಚಾರ ನಡೆಸಲಾಗಿದೆ ಎಂದು ಆರೋಪಿಸಿ 40 ವರ್ಷದ ಮಹಿಳೆ ನೀಡಿದ್ದ ದೂರು ಆಧರಿಸಿ ಮುನಿರತ್ನ, ವಸಂತ, ಚನ್ನಕೇಶ, ಕಮಲ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

'ಹಿಂದೆ ಬಿಜೆಪಿಯಲ್ಲಿ ಕೆಲಸ ಮಾಡುತ್ತಿದ್ದೆ. ವೇಶ್ಯಾವಾಟಿಕೆ ನಡೆಸುತ್ತಿದ್ದೇನೆ ಎಂದು ಆರೋಪ ಹೊರಿಸಿದ್ದ ಆರೋಪಿಗಳು, ನನ್ನನ್ನು ಜೈಲಿಗೆ ಕಳುಹಿಸಿದ್ದರು. ಜಾಮೀನು ಪಡೆದು ಜೈಲಿನಿಂದ ಹೊರಬಂದ ಬಳಿಕ ಮುನಿರತ್ನ ಅವರ ಬೆಂಬಲಿಗರು ಬಂದು ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವ ಆಮಿಷವೊಡ್ಡಿದ್ದರು. ನಂತರ, ಶಾಸಕರ ಕಚೇರಿಗೆ ಕರೆದೊಯ್ದು ಸಾಮೂಹಿಕ ಅತ್ಯಾಚಾರ ನಡೆಸಿದ್ದರು. ನನ್ನ ಎಡಗೈಗೆ ಇಂಜೆಕ್ಷನ್ ಚುಚ್ಚಿ, ಜೀವನಪರ್ಯಂತ ನರಳುತ್ತೀಯಾ ಎಂದು ಬೆದರಿಸಿದ್ದರು' ಎಂದು ಸಂತ್ರಸ್ತೆ ದೂರು ನೀಡಿದ್ದರು.

ತಂಗಿ ಮದುವೆಗಾಗಿ ಪಬ್‌ನಲ್ಲಿ ಕಳ್ಳತನ: ಆರೋಪಿ ಸೆರೆ

ಕದ್ದ ಹಣದಲ್ಲಿ ವಿಮಾನ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಮಣ್ಯನಗರ ಪೊಲೀಸ್ ಠಾಣಾ ವ್ಯಾಪ್ತಿಯ ಜೊಮೆಟ್ರಿ ಬ್ರಿವರಿ ಅಂಡ್ ಕಿಚನ್ ಪಬ್‌ಗೆ ನುಗ್ಗಿ ₹50 ಸಾವಿರ ಕಳ್ಳತನ ಮಾಡಿ, ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಿದ್ದಾರೆ.

ಎಂ.ದಿಲೀಪ್ ಕುಮಾರ್

ಪಬ್‌ನ ಭದ್ರತಾ ಸಿಬ್ಬಂದಿ ವಿನಯ್ ಕುಮಾರ್ ನೀಡಿದ ದೂರು ಆಧರಿಸಿ ಒಡಿಶಾ ರಾಜ್ಯದ ಎಂ. ದಿಲೀಪ್ ಕುಮಾರ್ (29) ಎಂಬಾತನನ್ನು ಬಂಧಿಸಿ ₹ 6 ಸಾವಿರ ನಗದು, ಕೃತ್ಯಕ್ಕೆ ಬಳಸಿದ ಕಟಿಂಗ್ ಪ್ಲೇಯರ್ ವಶಕ್ಕೆ ಪಡೆದುಕೊಂಡು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

2016ರಲ್ಲಿ ಉದ್ಯೋಗ ಅರಸಿ ನಗರಕ್ಕೆ ಬಂದಿದ್ದ ಆರೋಪಿ ಜಯನಗರ ಹಾಗೂ ಜೆ. ಪಿ. ನಗರದ ಹೋಟೆಲ್ ಮತ್ತು ಪಬ್‌ಗಳಲ್ಲಿ ಕೆಲಸ ಮಾಡಿಕೊಂಡಿದ್ದ. ಹಣದಾಸೆಗಾಗಿ ಮನೆಯೊಂದರಲ್ಲಿ ಕಳ್ಳತನ ಮಾಡಿ 2021ರಲ್ಲಿ ಕೋರಮಂಗಲ ಪೊಲೀಸರಿಂದ ಬಂಧಿತನಾಗಿದ್ದ. ಜಾಮೀನಿನ ಮೇಲೆ ಹೊರಬಂದ ಆರೋಪಿಯು, ಜೀವನ ನಿರ್ವಹಣೆಗಾಗಿ ಜಯನಗರ ಸುತ್ತ-ಮುತ್ತಲಿನ ರೆಸ್ಟೋರೆಂಟ್‌ಗಳಲ್ಲಿ ಕೆಲಸ ಮಾಡಿಕೊಂಡಿದ್ದ. ಕಡಿಮೆ ಸಂಬಳ ನೀಡುತ್ತಿದ್ದರಿಂದ ಕಳೆದ ವರ್ಷ ಕೆಲಸ ತೊರೆದು ಸ್ವಗ್ರಾಮಕ್ಕೆ ಹೋಗಿದ್ದ ಎಂದು ಪೊಲೀಸರು ಹೇಳಿದ್ದಾರೆ.

ನವೆಂಬರ್ ತಿಂಗಳಲ್ಲಿ ನಗರಕ್ಕೆ ಬಂದು ಜೆ. ಪಿ. ನಗರದ ಹೋಟೆಲ್‌ವೊಂದರಲ್ಲಿ ನಾಲ್ಕು ತಿಂಗಳು ಕೆಲಸ ಮಾಡಿ ಮತ್ತೆ ಕೆಲಸ ತೊರೆದಿದ್ದ. ಹಣಕಾಸಿನ ಸಮಸ್ಯೆ ನಿವಾರಿಸಿಕೊಳ್ಳಲು ಕಳ್ಳತನ ಮಾಡಲು ಸಂಚು ರೂಪಿಸಿದ್ದ. ಮೇ 12ರಂದು ಜೊಮಿಟ್ರಿ ಬ್ರಿವರಿ ಪಬ್‌ನ ಹಿಂಬಾಗಿಲಿನ ಬಾಗಿಲು ಮುರಿದು ನಗದು ದೋಚಿ ಪರಾರಿಯಾಗಿದ್ದ. ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಾವಳಿ ಹಾಗೂ ಬಾತ್ಮಿದಾರರ ಮಾಹಿತಿ ಆಧರಿಸಿ, ಒಡಿಶಾದ ಜಾಜ್‌ಪುರ್ ಗ್ರಾಮದಲ್ಲಿದ್ದ ಆರೋಪಿಯನ್ನು ಬಂಧಿಸಲಾಯಿತು ಎಂದು ತಿಳಿಸಿದ್ದಾರೆ.

ಮೇ 14ರಂದು ಆರೋಪಿಯ ಸಹೋದರಿಯ ಮದುವೆ ನಿಗದಿಯಾಗಿತ್ತು. ತಂಗಿಯ ಮದುವೆಗಾಗಿ ಹಣ ಹೊಂದಿಸಲು ಕಳ್ಳತನ ಮಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾನೆ. ಕಳ್ಳತನ ಮಾಡಿದ ಹಣದಲ್ಲಿ ಒಡಿಶಾಗೆ ವಿಮಾನದಲ್ಲಿ ತೆರಳಿದ್ದ ಎಂದು ಮಾಹಿತಿ ನೀಡಿದ್ದಾರೆ.

ಪಿಸ್ತೂಲ್ ತೋರಿಸಿ ಬೆದರಿಸಿ ಕಳ್ಳತನ ಮಾಡಿರುವುದಾಗಿ ಭದ್ರತಾ ಸಿಬ್ಬಂದಿ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಿ ತನಿಖೆ ನಡೆಸಿದ ಪೊಲೀಸರು, ಆರೋಪಿಯು ಪಿಸ್ತೂಲ್ ಬಳಸಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಪಬ್‌ನ ಹಿಂಬದಿ ಬಾಗಿಲು ತೆಗೆಯಲು ಕಟಿಂಗ್ ಪ್ಲೇಯರ್ ಬಳಸಿರುವುದನ್ನ ಆರೋಪಿ ಒಪ್ಪಿಕೊಂಡಿದ್ದಾನೆ ಎಂದು ವಿವರಿಸಿದ್ದಾರೆ.

ಹೋಟೆಲ್, ಬಾಡಿಗೆ ಮನೆಯಲ್ಲಿ ಸಹ ನಟಿ ಮೇಲೆ ಕೃತ್ಯ

ಅತ್ಯಾಚಾರ ಆರೋಪ: ನಟ ಮನು ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹ ನಟಿಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ನಟ ಮಡೆನೂರು ಮನು ಅವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಗುರುವಾರ ಸಂಜೆ ಬಂಧಿಸಿದರು.

ಮಡೆನೂರು ಮನು

33 ವರ್ಷದ ಸಹ ನಟಿ ನೀಡಿದ ದೂರಿನ ಮೇರೆಗೆ ನಟನ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 351(2), 352, 69, 89, 64(2)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಪ್ರಕರಣ ದಾಖಲಾದ ಬಳಿಕ ಮಡೆನೂರು ಮನು ಅವರು ವಿಡಿಯೊ ಮೂಲಕ ಸ್ಪಷ್ಟನೆ ನೀಡಿದ್ದರು. ಅವರು ಇರುವ ಸ್ಥಳವನ್ನು ಪತ್ತೆಹಚ್ಚಿ ಆರೋಪಿಯನ್ನು ವಶಕ್ಕೆ ಪಡೆದು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಕುಲದಲ್ಲಿ ಕೀಳ್ಯಾವುದೋ' ಚಿತ್ರದಲ್ಲಿ ಮಡೆನೂರು ಮನು ನಾಯಕನಾಗಿ ನಟಿಸಿದ್ದಾರೆ. ಈ ಚಿತ್ರವು ಶುಕ್ರವಾರ ಬಿಡುಗಡೆ ಆಗುತ್ತಿದೆ. ಕಿರುತೆರೆಯಲ್ಲಿ ಪ್ರಸಾರ ಆಗುತ್ತಿರುವ ಕಾಮಿಡಿ ಕಿಲಾಡಿ ಕಾರ್ಯಕ್ರಮದಲ್ಲೂ ಮನು ಅಭಿನಯಿಸಿದ್ದರು.

ದೂರಿನಲ್ಲಿ ಏನಿದೆ?: 'ಬೆಂಗಳೂರಿನ ಬಡಾವಣೆಯೊಂದರಲ್ಲಿ ಕಳೆದ ಐದು ವರ್ಷಗಳಿಂದ ವಾಸವಿದ್ದೇನೆ. ಮಡೆನೂರು ಮನು ಅವರೇ ಬಾಡಿಗೆ ಮನೆ ಮಾಡಿಕೊಟ್ಟಿದ್ದರು. ಕಿರುತೆರೆ ವಾಹಿನಿಯೊಂದರಲ್ಲಿ 2018ರಲ್ಲಿ ಪ್ರಸಾರವಾಗಿದ್ದ ಕಾಮಿಡಿ ಕಿಲಾಡಿಗಳು ಕಾರ್ಯಕ್ರಮದಲ್ಲಿ ಮನು ಅವರ ಪರಿಚಯವಾಗಿತ್ತು. ಇಬ್ಬರೂ ಸ್ನೇಹಿತರಾಗಿದ್ದೆವು. ಮನು ಅವರಿಗೆ ಮದುವೆ ಆಗಿ ಹೆಣ್ಣು ಮಗು ಇದೆ. 2022ರ ನವೆಂಬರ್ 29ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ನಡೆದಿದ್ದ ಕಾರ್ಯಕ್ರಮಕ್ಕೆ ಕರೆದೊಯ್ದು ಹಾಸ್ಯ ಕಾರ್ಯಕ್ರಮ ನಡೆಸಿದ್ದರು. ಕಾರ್ಯಕ್ರಮ ಮುಕ್ತಾಯವಾದ ಮೇಲೆ ಹೋಟೆಲ್‌ನ ರೂಂನಲ್ಲಿದ್ದಾಗ ನನಗೆ ಸಂಭಾವನೆ ಕೊಡುವ ನೆಪದಲ್ಲಿ ಬಂದು ಅತ್ಯಾಚಾರ ಎಸಗಿದ್ದಾನೆ' ಎಂದು ಸಂತ್ರಸ್ತೆ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದೆ.

'ಅದೇ ವರ್ಷದ ಡಿಸೆಂಬರ್ 3ರಂದು ನನ್ನ ಮನೆಗೆ ಬಂದು ವಿರೋಧದ ನಡುವೆ ತಾಳಿ ಕಟ್ಟಿದ್ದಾನೆ. ನಂತರ, ಅದೇ ಮನೆಯಲ್ಲಿ ಮನು ಹಲವು ಬಾರಿ ಅತ್ಯಾಚಾರ ಮಾಡಿದ್ದಾನೆ. ನಾನು ಗರ್ಭಿಣಿಯಾಗಿದ್ದ ವಿಷಯ ತಿಳಿದು ಗರ್ಭಪಾತ ಮಾಡಿಸಿದ್ದ' ಎಂದು ದೂರಿನಲ್ಲಿ ವಿವರಿಸಲಾಗಿದೆ.

'ಅದಾದ ಕೆಲವು ದಿನಗಳ ಬಳಿಕ ಅತ್ಯಾಚಾರ ನಡೆಸಿ ವಿಡಿಯೊ ಮಾಡಿಕೊಂಡಿದ್ದ. ಹಲ್ಲೆ ನಡೆಸಿ, ವಿಷಯವನ್ನು ಯಾರಿಗೂ ತಿಳಿಸದಂತೆ ಬೆದರಿಕೆ ಹಾಕಿದ್ದ' ಎಂದು ಸಂತ್ರಸ್ತೆ ಹೇಳಿದ್ದಾರೆ.

ಹಣ ಪಡೆದುಕೊಂಡಿದ್ದ ಆರೋಪ: 'ಮನು ಸಿನಿಮಾವೊಂದರಲ್ಲಿ ನಾಯಕನಾಗಿ ನಟಿಸಿದ್ದು, ಈ ಚಿತ್ರಕ್ಕೆ ಲಕ್ಷಾಂತರ ರೂಪಾಯಿ ನೀಡಿದ್ದೇನೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಅತ್ಯಾಚಾರ ನಡೆಸಿ, ಮದುವೆಯಾದಂತೆ ನಾಟಕವಾಡಿ, ಮೋಸ ಮಾಡಿರುವ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಹ ನಟಿ ದೂರಿನಲ್ಲಿ ಒತ್ತಾಯಿಸಿದ್ದಾರೆ.

'ಉದ್ದೇಶಪೂರ್ವಕ ದೂರು'

'ಇದು ಉದ್ದೇಶಪೂರ್ವಕ ದೂರು ಎಂದು ಗೊತ್ತಾಗುತ್ತಿದೆ. ಮೇ 23ರಂದು 'ಕುಲದಲ್ಲಿ ಕೀಳ್ಯಾವುದೋ' ಸಿನಿಮಾ ಬಿಡುಗಡೆ ಇರುವಾಗ ಎಫ್‌ಐಆರ್ ದಾಖಲಿಸುವ ಅವಶ್ಯಕತೆ ಇರಲಿಲ್ಲ. ತಾನು ಸುಮ್ಮನಿದ್ದರೂ ಬೇರೆಯವರು ಬಿಡುತ್ತಿಲ್ಲ, ಈ ರೀತಿ ಮಾಡು ಎಂದು ಹೇಳುತ್ತಿದ್ದಾರೆ ಎಂದು ಆಕೆ ಹೇಳಿದ್ದಾಳೆ. ಅವರು ಯಾರು ಎಂದು ನನ್ನ ಬಳಿ ಹೇಳಿದ್ದಾಳೆ. ಇಬ್ಬರು ಹೀರೊಗಳು ಮತ್ತು ಒಬ್ಬ ಲೇಡಿ ಡಾನ್ ಸೇರಿ ಹನ್ನೆರಡು ಜನ ನನ್ನ ಸಾವು ಬಯಸುತ್ತಿದ್ದರು. ನನ್ನ ಪಾಡಿಗೆ ನಾನು ಕೆಲಸ ಮಾಡಿಕೊಂಡಿದ್ದೇನೆ. ಎಲ್ಲ ಸಾಕ್ಷ್ಯವನ್ನು ಮುಂದಿಡುತ್ತೇನೆ. ನನ್ನ ಸಿನಿಮಾಕ್ಕೆ ಮೋಸ ಆಗಬಾರದು. ನಿರ್ಮಾಪಕರು, ನಿರ್ದೇಶಕರಿಗೆ ಮೋಸ ಆಗಬಾರದು. ಕಾನೂನು ರೀತಿ ನಾನು ಸಾಕ್ಷ್ಯಗಳನ್ನು ಬಹಿರಂಗಪಡಿಸುತ್ತೇನೆ' ಎಂದು ವಿಡಿಯೊದಲ್ಲಿ ಮಡೆನೂರು ಮನು ಹೇಳಿದ್ದಾರೆ.

'ಕೆಟ್ಟ ದೃಷ್ಟಿಯಲ್ಲಿ ನೋಡುವುದಿಲ್ಲ ಎಂಬ ನಂಬಿಕೆ ಇತ್ತು'

'ಒಂದೇ ಕಾರ್ಯಕ್ರಮ, ಒಂದೇ ವೇದಿಕೆಯಲ್ಲಿ ಇಬ್ಬರೂ ಕೆಲಸ ಮಾಡಿದ್ದೇವೆ. ಮನು ಆಪ್ತ ಸ್ನೇಹಿತ ಆಗಿದ್ದ. ಕಾರ್ಯಕ್ರಮ ಮುಗಿದ ಮೇಲೆ ಮಡೆನೂರು ಮನು ಹಲವು ದಿನ ರಾತ್ರಿ ಸಮಯದಲ್ಲಿ ಮನೆಗೆ ಬಿಟ್ಟು ಹೋಗಿದ್ದ. ಕೆಟ್ಟ ದೃಷ್ಟಿಯಲ್ಲಿ ನೋಡುವುದಿಲ್ಲ ಎಂಬ ನಂಬಿಕೆ ಇತ್ತು. ಯಾವಾಗ ತಲೆಯಲ್ಲಿ ಕೆಟ್ಟ ಆಲೋಚನೆ ಬಂತೋ ಗೊತ್ತಿಲ್ಲ' ಎಂದು ಸಂತ್ರಸ್ತೆ ಹೇಳಿದರು.

ವಾಟ್ಸ್‌ಆ್ಯಪ್ ಚಾಟ್ ಪರಿಶೀಲನೆ

'ನೀನು ಏನೇ ಕೋಪ ಮಾಡಿಕೊಂಡರೂ, ನೀನು ನಮ್ಮ ಹುಡುಗೀನೇ. ನನ್ನ ಜೀವ ಇರೋವರೆಗೂ ನಾನು ನಿನ್ನ ಕೈ ಬಿಡಲ್ಲ... ಕೈ ಬಿಡಲ್ಲ... ಪರಿಸ್ಥಿತಿ ಸ್ವಲ್ಪ ಕೆಟ್ಟಿದೆ. ನಾನು ಸ್ವಲ್ಪ ನಿಂಗೆ ಟೈಮ್ ಕೊಡೋಕೆ ಆಗ್ತಿಲ್ಲ. ಸ್ವಲ್ಪ ಎಲ್ಲ ಸರಿ ಹೋಗುತ್ತೆ. ಐ ಲವ್ ಯು.. ಮಿಸ್ ಯೂ..' ಎಂದು ಮಡೆನೂರು ಮನು ಅವರು ವಾಟ್ಸ್‌ಆ್ಯಪ್‌ನಲ್ಲಿ ಸಹ ನಟಿಗೆ ಕಳುಹಿಸಿದ್ದರು ಎನ್ನಲಾದ ಸಂದೇಶವನ್ನು ಪರಿಶೀಲನೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಶುಕ್ರವಾರ, ಮೇ 23, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 142 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಮನ್ನಾ ರಾಯಭಾರಿ

ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮದ (ಕೆಎಸ್‌ಡಿಎಲ್) ಪ್ರಚಾರ ರಾಯಭಾರಿಯಾಗಿ ನಟಿ ತಮನ್ನಾ ಭಾಟಿಯಾ ನೇಮಕ.

732 ದಿನಕ್ಕೆ **₹6.20** ಕೋಟಿ ಸಂಭಾವನೆ ನಿಗದಿ

5

ಆಳ-ಅಗಲ ಭಾರತ ನಕ್ಸಲ್ ಮುಕ್ತ?

ಸಿಂಧೂರ ಸಿಡಿಮದ್ದಿನ ಪುಡಿಯಾಗಿದೆ: ಮೋದಿ 8

ಭ್ರಷ್ಟಾಚಾರ: ವಿಚಾರಣೆಗೆ ಸರ್ಕಾರ ನಕಾರ 6

ಸೆನ್ಸೆಕ್ಸ್	ನಿಫ್ಟಿ	₹/$
80,951	24,609	85.95

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; Website: www.honda2wheelersindia.com; Customer Care: customercare@honda.hmsi.in

ವಕ್ಫ್: ಮಧ್ಯಂತರ ಆದೇಶ ಕಾಯ್ದಿರಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಸಂಸತ್ತಿನ ಅಂಗೀಕಾರ ಪಡೆದಿರುವ ವಕ್ಫ್ (ತಿದ್ದುಪಡಿ) ಕಾಯ್ದೆಯು ಸಾಂವಿಧಾನಿಕವಾಗಿ ಸರಿಯಾಗಿಯೇ ಇದೆ ಎಂದು ಭಾವಿಸಬೇಕಾಗುತ್ತದೆ ಎನ್ನುವ ಮಾತನ್ನು ಪುನರುಚ್ಚರಿಸಿರುವ ಸುಪ್ರೀಂ ಕೋರ್ಟ್, ಕಾಯ್ದೆಗೆ ಸಂಬಂಧಿಸಿದ ಮೂರು ಪ್ರಮುಖ ವಿಚಾರಗಳ ಕುರಿತ ಮಧ್ಯಂತರ ಆದೇಶವನ್ನು ಕಾಯ್ದಿರಿಸಿದೆ. ಸಂಸತ್ತು ರೂಪಿಸಿದ ಕಾನೂನು ಸಾಂವಿಧಾನಿಕವಾಗಿ ಸರಿಯಾಗಿರುತ್ತದೆ ಎಂದೇ ಭಾವಿಸಬೇಕಾಗುತ್ತದೆ ಎಂದು ಸಿಜೆಐ ಗವಾಯಿ ಹೇಳಿದರು. 8

ಚಿನಕುರುಳಿ

ಪ್ರಕಾಶ್ ಶೆಟ್ಟಿ

‘ಎಲ್ಲ ಎಲ್ಲೆ ಮೀರಿದ ಇ.ಡಿ’

ತಮಿಳುನಾಡು ಪ್ರಕರಣದಲ್ಲಿ ಒಕ್ಕೂಟ ತತ್ವ ಉಲ್ಲಂಘನೆ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯವು (ಇ.ಡಿ) ‘ಎಲ್ಲ ಮಿತಿಗಳನ್ನೂ ಮೀರುತ್ತಿದೆ’, ಆಡಳಿತ ವ್ಯವಸ್ಥೆಯಲ್ಲಿನ ಒಕ್ಕೂಟ ತತ್ವವನ್ನು ಉಲ್ಲಂಘಿಸುತ್ತಿದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ತಮಿಳುನಾಡಿನ ಸರ್ಕಾರಿ ಸ್ವಾಮ್ಯದ ಮದ್ಯದ ಚಿಲ್ಲರೆ ಮಾರಾಟ ಸಂಸ್ಥೆ ‘ಟಾಸ್ಮಾಕ್’ ವಿರುದ್ಧ ಹಣದ ಅಕ್ರಮ ವರ್ಗಾವಣೆ ಆರೋಪದ ಅಡಿ ನಡೆಯುತ್ತಿದ್ದ ತನಿಖೆಗೆ ತಡೆ ನೀಡಿದೆ. ತಮಿಳುನಾಡಿನಲ್ಲಿ ಮದ್ಯದ ಅಂಗಡಿಗಳಿಗೆ ಪರವಾನಗಿ ನೀಡುವಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಭಾಗವಾಗಿ ಈ ತನಿಖೆ ನಡೆಯುತ್ತಿತ್ತು.

ತಮಿಳುನಾಡು ಸರ್ಕಾರ ಮತ್ತು ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮ (ಟಾಸ್ಮಾಕ್) ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟಿನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಇ.ಡಿ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರಲ್ಲಿ ‘ನಿಮ್ಮ ಇ.ಡಿ. ಎಲ್ಲ ಮಿತಿಗಳನ್ನೂ ಮೀರುತ್ತಿದೆ’ ಎಂದು ಹೇಳಿತು.

ಹಣದ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯ (ಪಿಎಂಎಲ್‌ಎ) ಕಠಿಣ ಅಂಶಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಸುಪ್ರೀಂ ಕೋರ್ಟ್‌ನ ಹಲವು ಪೀಠಗಳು ಇ.ಡಿ. ಬಗ್ಗೆ ಹಿಂದೆಯೂ ವಿವಿಧ ಸಂದರ್ಭಗಳಲ್ಲಿ ಅಸಮಾಧಾನ ವ್ಯಕ್ತಪಡಿಸಿವೆ.

ಜಾರಿ ನಿರ್ದೇಶನಾಲಯವು ಈ ಕಾಯ್ದೆಯನ್ನು ಕೇಂದ್ರ ಸರ್ಕಾರದ ರಾಜಕೀಯ ವಿರೋಧಿಗಳನ್ನು ಗುರಿಯಾಗಿಸಿಕೊಂಡು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಕೂಡ ಹಲವು ಸಂದರ್ಭಗಳಲ್ಲಿ ಪ್ರತಿಭಟನೆ ದಾಖಲಿಸಿವೆ.

ಟಾಸ್ಮಾಕ್ ಮೇಲೆ ಇ.ಡಿ ಅಧಿಕಾರಿಗಳು ನಡೆಸಿದ ದಾಳಿಯನ್ನು ಪ್ರಶ್ನಿಸಿದ ಸಿಜೆಐ ಗವಾಯಿ ಅವರು, ‘ಜಾರಿ ನಿರ್ದೇಶನಾಲಯವು (ಆಡಳಿತದ) ಒಕ್ಕೂಟ ತತ್ವವನ್ನು ಉಲ್ಲಂಘನೆ ಮಾಡುತ್ತಿದೆ’ ಎಂದು ಹೇಳಿದರು.

ತಮಿಳುನಾಡು ಸರ್ಕಾರ ಮತ್ತು ಟಾಸ್ಮಾಕ್ ಪರವಾಗಿ ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ಅಮಿತ್ ಆನಂದ್ ತಿವಾರಿ ಹಾಜರಿದ್ದರು.

ವಿರೋಧ: ಟಾಸ್ಮಾಕ್ ವಿರುದ್ಧದ ತನಿಖೆಗೆ ತಡೆ ನೀಡಿದ ಪೀಠದ ಕ್ರಮವನ್ನು ವಿರೋಧಿಸಿದ ರಾಜು ಅವರು, ₹1,000 ಕೋಟಿಗೂ ಹೆಚ್ಚು ಮೊತ್ತದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ವಿಚಾರ ಇದು ಎಂದರು. ‘ಕನಿಷ್ಠ ಪಕ್ಷ ಈ ಪ್ರಕರಣದಲ್ಲಿಯಂತೂ ಇ.ಡಿ ತನ್ನ ಮಿತಿಯನ್ನು ಮೀರಿಲ್ಲ’ ಎಂದು ಅವರು ವಿವರಿಸಿದರು.

ಮದ್ಯದ ಅಂಗಡಿಗಳಿಗೆ ಪರವಾನಗಿ ನೀಡುವಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಬಗ್ಗೆ ತಮಿಳುನಾಡು ಸರ್ಕಾರ ಮತ್ತು ಟಾಸ್ಮಾಕ್ ಕ್ರಿಮಿನಲ್ ಕ್ರಮಕ್ಕೆ ಮುಂದಾಗಿವೆ ಎಂದು ಸಿಬಲ್ ತಿಳಿಸಿದರು.

5ನೇ ಪುಟ ನೋಡಿ

ಸರ್ಕಾರದ ವಾದವೇನು?

- ಮಾರ್ಚ್ 6ರಿಂದ 8ರ ನಡುವೆ ಇ.ಡಿ ನಡೆಸಿದ 60 ತಾಸುಗಳ ಶೋಧ ಮತ್ತು ಮುಟ್ಟುಗೋಲು ಪ್ರಕ್ರಿಯೆಯು ಕಾನೂನು ಸಿಂಧುತ್ವ ಹೊಂದಿದೆಯೇ?
- ಯಾವುದೇ ಎಫ್‌ಐಆರ್‌ನಲ್ಲಿ ಟಾಸ್ಮಾಕ್ ಸಂಸ್ಥೆಯನ್ನು ಆರೋಪಿ ಎಂದು ಹೆಸರಿಸಿಲ್ಲ, ಹಲವು ಪ್ರಕರಣಗಳಲ್ಲಿ ಟಾಸ್ಮಾಕ್ ದೂರುದಾರ ಎಂದು ನಮೂದಿಸಲಾಗಿದೆ
- ಟಾಸ್ಮಾಕ್ ಸಂಸ್ಥೆಯು ಯಾವುದೇ ಮೂಲ ಅಪರಾಧದಲ್ಲಿ ಭಾಗಿಯಾದ ಆರೋಪ ಹೊತ್ತಿಲ್ಲ. ಹೀಗಿರುವಾಗ, ಪಿಎಂಎಲ್‌ಎ ಅಡಿಯಲ್ಲಿ ಕ್ರಮ ಕೈಗೊಳ್ಳಲು ಇ.ಡಿ.ಗೆ ಅಧಿಕಾರ ಇಲ್ಲ
- 2021ರಲ್ಲೇ ಎಫ್‌ಐಆರ್ ದಾಖಲಿಸಲಾಗಿದೆ. ಶೋಧ ಕಾರ್ಯ ನಡೆಸಲು ಇಷ್ಟೊಂದು ಸಮಯ ತೆಗೆದುಕೊಂಡಿದ್ದು ಏಕೆ?
- ಇ.ಡಿ ನಡೆಯು ಯಾವುದೇ ನಿರ್ದಿಷ್ಟ ವಿಷಯದ ಬಗೆಗಿನ ತನಿಖೆ ಅಲ್ಲ

‘ಅಧಿಕಾರ ಕಿತ್ತುಕೊಳ್ಳಲು ಇ.ಡಿ. ಯತ್ನ’

ವ್ಯಾಪಕವಾದ ಪರಿಣಾಮವನ್ನು ಹೊಂದಿರುವ ಕಾನೂನಿನ ಪ್ರಶ್ನೆಯನ್ನು ಈ ಅರ್ಜಿಯು ಒಳಗೊಂಡಿದೆ. ತನ್ನ ವ್ಯಾಪ್ತಿಯನ್ನು ಮೀರಿ ವರ್ತಿಸಿ, ಅಪರಾಧ ಪ್ರಕರಣಗಳ ಬಗ್ಗೆ ತನಿಖೆ ನಡೆಸಲು ರಾಜ್ಯ ಸರ್ಕಾರ ಹೊಂದಿರುವ ಅಧಿಕಾರವನ್ನು ಕಿತ್ತುಕೊಳ್ಳಲು ಯತ್ನಿಸುವ ಮೂಲಕ ಇ.ಡಿ. ಒಕ್ಕೂಟ ವ್ಯವಸ್ಥೆಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನೂ ಎತ್ತಿದೆ.

ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿಯಲ್ಲಿನ ಮಾತು

ಕ್ಯಾನ್ಸರ್ ರೋಗಿಗಳಿಗಾಗಿ 16 ಜಿಲ್ಲಾಸ್ಪತ್ರೆಗಳಲ್ಲಿ ಶುರು

ಕಿಮೋ ಕೇಂದ್ರ: ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾನ್ಸರ್ ರೋಗಿಗಳ ಅನುಕೂಲಕ್ಕಾಗಿ 16 ಜಿಲ್ಲಾ ಆಸ್ಪತ್ರೆಗಳಲ್ಲಿ ‘ಡೇ ಕೇರ್ ಕಿಮೋಥೆರಪಿ’ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ‘ಡೇ ಕೇರ್ ಕಿಮೋಥೆರಪಿ ಕೇಂದ್ರ’ಕ್ಕೆ ಶುಕ್ರವಾರ (ಮೇ 23) ಚಾಲನೆ ನೀಡಲಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ (ಎಸ್‌ಎಎಸ್‌ಟಿ) ನೋಂದಾಯಿತ ತೃತೀಯ ಹಂತದ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಪ್ರಾರಂಭಿಕ ಚಿಕಿತ್ಸೆ ಪಡೆದ ನಂತರ ಮುಂದುವರಿದ ಕಿಮೋಥೆರಪಿ ಚಿಕಿತ್ಸೆಯನ್ನು ‘ಹಬ್-ಆ್ಯಂಡ್-ಸ್ಪೋಕ್’ ಮಾದರಿಯಲ್ಲಿ ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ಥಾಪಿಸುವ ‘ಡೇ ಕೇರ್ ಕಿಮೋಥೆರಪಿ ಕೇಂದ್ರ’ಗಳಲ್ಲಿ ಪಡೆಯಬಹುದು ಎಂದು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

ಜಿಲ್ಲಾ ಆಸ್ಪತ್ರೆಗಳಲ್ಲಿ ಡೇ ಕೇರ್ ಕಿಮೋಥೆರಪಿ ಕೇಂದ್ರಗಳನ್ನು ಆರಂಭಿಸಿ, ಅಲ್ಲಿನ ಸಿಬ್ಬಂದಿಗೆ ಎಸ್‌ಎಎಸ್‌ಟಿ ನೋಂದಾಯಿತ ಆಸ್ಪತ್ರೆಯ ಸಿಬ್ಬಂದಿಯಿಂದ ತರಬೇತಿ ಕೊಡಿಸಲಾಗುತ್ತದೆ. ಚಿಕಿತ್ಸೆಗೆ ಅಗತ್ಯವಿರುವ ಔಷಧವನ್ನೂ ಆ ಆಸ್ಪತ್ರೆಯೇ ಒದಗಿಸಲಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ವಾರ್ಷಿಕವಾಗಿ ಕ್ಯಾನ್ಸರ್‌ನ 70 ಸಾವಿರ ಹೊಸ ಪ್ರಕರಣಗಳು ವರದಿಯಾಗುತ್ತಿವೆ. ಬೆಂಗಳೂರು, ಹುಬ್ಬಳ್ಳಿ, ಕಲಬುರಗಿ, ಬೆಳಗಾವಿ ಮತ್ತು ಮೈಸೂರು ನಗರಗಳಿಗೆ ಕಿಮೋಥೆರಪಿ ಸೇವೆ ಪಡೆಯಲು ಶೇ 60ರಷ್ಟು ರೋಗಿಗಳು 100 ಕಿ.ಮೀಗೂ ಹೆಚ್ಚು ಪ್ರಯಾಣಿಸುತ್ತಾರೆ. ಪುನರಾವರ್ತಿತ ಭೇಟಿ ವೆಚ್ಚದಿಂದ ಹೆಚ್ಚಿನ ರೋಗಿಗಳು ಚಿಕಿತ್ಸೆಯಿಂದ ವಂಚಿತರಾಗುತ್ತಿದ್ದಾರೆ. ಇದನ್ನು ತಪ್ಪಿಸಲು ಜಿಲ್ಲಾ ಆಸ್ಪತ್ರೆಗಳಲ್ಲಿ ಡೇ ಕೇರ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದರು.

ಡೇ ಕೇರ್ ಸ್ಥಾಪನೆ ಮೂಲಕ ಕ್ಯಾನ್ಸರ್ ಆರೈಕೆಯಲ್ಲಿ ನಗರ- ಗ್ರಾಮೀಣ ಅಸಮಾನತೆ ಕಡಿಮೆ ಮಾಡಿ, ಪರಿಣಾಮಕಾರಿ ಆರೈಕೆ, ಆಸ್ಪತ್ರೆ ವೆಚ್ಚ ಕಡಿತ ಮಾಡುವ ಜೊತೆಗೆ, ಚಿಕಿತ್ಸೆ ಪಡೆಯುವುದನ್ನು ನಿಲ್ಲಿಸುವವರ ಸಂಖ್ಯೆ ಕಡಿಮೆ ಮಾಡಲಾಗುತ್ತದೆ.

ಎಲ್ಲೆಲ್ಲಿ ಡೇ ಕೇರ್ ಕಿಮೋಥೆರಪಿ’ ಕೇಂದ್ರ 13

‘ರಾಜವಂಶಸ್ಥರಿಗೆ ₹3400 ಕೋಟಿ ಕೊಡಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಬಳ್ಳಾರಿ ರಸ್ತೆ ಮತ್ತು ಜಯಮಹಲ್ ರಸ್ತೆಗಳ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡಿರುವ ಅರಮನೆ ಮೈದಾನದ 15.36 ಎಕರೆಗೆ ₹3,400 ಕೋಟಿ ಮೌಲ್ಯದ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣಪತ್ರಗಳನ್ನು ಮೈಸೂರಿನ ರಾಜವಂಶಸ್ಥರಿಗೆ ಕೂಡಲೇ ಹಸ್ತಾಂತರಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಇದರಿಂದಾಗಿ, ಟಿಡಿಆರ್ ನೀಡುವುದರಿಂದ ತಪ್ಪಿಸಿಕೊಳ್ಳಲು ನಾನಾ ಕಸರತ್ತು ನಡೆಸಿದ್ದ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದೆ.

ಈ ಸಂಬಂಧ ರಾಜ್ಯ ಸರ್ಕಾರದ ಎಲ್ಲ ವಾದಗಳನ್ನು ತಿರಸ್ಕರಿಸಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಅರವಿಂದ ಕುಮಾರ್ ಅವರ ಪೀಠವು ಗುರುವಾರ ತೀರ್ಪು ಪ್ರಕಟಿಸಿತು. ಕರ್ನಾಟಕ ಸ್ಟ್ಯಾಂಪ್ ಕಾಯ್ದೆ ಹಾಗೂ ಹಿಂದಿನ ತೀರ್ಪುಗಳ ಅಡಿಯಲ್ಲಿ ಕಾನೂನು ಬಾಧ್ಯತೆಗಳನ್ನು ಗೌರವಿಸಬೇಕು ಎಂದು ಸ್ಪಷ್ಟಪಡಿಸಿತು.

ತೀರ್ಪು ಬರೆದ ನ್ಯಾಯಮೂರ್ತಿ ಕುಮಾರ್, ‘ರಾಜ್ಯವು ಈಗಾಗಲೇ ಠೇವಣಿ ಇಟ್ಟಿರುವ ಟಿಡಿಆರ್‌ಗಳು/ಡಿಆರ್‌ಸಿಗಳನ್ನು ಆಯಾ ಅರ್ಜಿದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗೆ ಅಫಿಡವಿಟ್ ಆಧಾರದಲ್ಲಿ ತಕ್ಷಣವೇ ರಿಜಿಸ್ಟ್ರಿ ಹಸ್ತಾಂತರಿಸಲು ಆದೇಶಿಸಲಾಗಿದೆ’ ಎಂದು ನಿರ್ದೇಶಿಸಿದ್ದಾರೆ.

13ನೇ ಪುಟ ನೋಡಿ

ರಾಮನಗರವಲ್ಲ ಬೆಂಗಳೂರು ದಕ್ಷಿಣ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ರಾಮನಗರ ಜಿಲ್ಲೆಗೆ ‘ಬೆಂಗಳೂರು ದಕ್ಷಿಣ ಜಿಲ್ಲೆ’ ಎಂದು ಮರುನಾಮಕರಣ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ‘ಇನ್ನು ಮುಂದೆ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದೇ ಕರೆಯಲಾಗುತ್ತದೆ’ ಎಂದರು. ‘ರಾಮನಗರವು ಜಿಲ್ಲಾ ಕೇಂದ್ರವಾಗಿ ಮುಂದುವರಿಯುತ್ತದೆ. ಜಿಲ್ಲೆ ಹೆಸರನ್ನು ಮಾತ್ರ ಮರುನಾಮಕರಣ ಮಾಡಲಾಗುತ್ತದೆ. ಈ ಹಿಂದೆ ಇದು ಬೆಂಗಳೂರು ಜಿಲ್ಲೆಯಾಗಿತ್ತು. ಆಡಳಿತಾತ್ಮಕ ಕಾರಣಕ್ಕೆ ಬೆಂಗಳೂರು ಹೆಸರನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ’ ಎಂದು ಹೇಳಿದರು.

‘ಬೆಂಗಳೂರು ದಕ್ಷಿಣ ಜಿಲ್ಲೆ ನಾಮಕರಣಕ್ಕೆ ಸಂಬಂಧಿಸಿದಂತೆ ಶುಕ್ರವಾರವೇ (ಮೇ 23) ಅಧಿಸೂಚನೆ ಹೊರಡಿಸಲಾಗುವುದು. ಬೆಂಗಳೂರು ಹೆಸರನ್ನಿಡುವುದು ಹೆಮ್ಮೆಯ ಸಂಗತಿ. ಹಿಂದೆ ನಾನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಗೆ ಅಧ್ಯಕ್ಷನಾಗಿದ್ದೆ. ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ರಾಮನಗರ, ಕನಕಪುರ, ಮಾಗಡಿ ಇವೆಲ್ಲವೂ ಬೆಂಗಳೂರಿನ ಭಾಗವಾಗಿದ್ದವು’ ಎಂದರು.

‘ಜಿಲ್ಲೆಯ ಮರು ನಾಮಕರಣದ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಯಾವುದೇ ಅಧಿಕಾರ ಇರುವುದಿಲ್ಲ. ಆದರೆ, ಕೇಂದ್ರಕ್ಕೆ ಮಾಹಿತಿ ನೀಡುವ ಉದ್ದೇಶದಿಂದ ಪ್ರಸ್ತಾವನೆ ಕಳುಹಿಸಿದ್ದೆವು. ಅಲ್ಲಿಂದ ಒಪ್ಪಿಗೆ ಸಿಕ್ಕಿದೆ. ಕೆಲವರು ರಾಜಕೀಯ ಮಾಡುವ ಪ್ರಯತ್ನ ಮಾಡಿದರು. ಹಿಂದೆ ರಾಮನಗರ ಜಿಲ್ಲೆ ಎಂದು ನಾಮಕರಣ ಮಾಡಿದಾಗ ಕೇಂದ್ರವನ್ನು ಕೇಳಿರಲಿಲ್ಲ. ಇನ್ನು ಮುಂದೆ ಎಲ್ಲಾ ದಾಖಲೆಗಳಲ್ಲೂ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಬದಲಾವಣೆಯಾಗಲಿದೆ. ನನ್ನನ್ನು ನೀವೆಲ್ಲರೂ ಬೆಂಗಳೂರು ದಕ್ಷಿಣ ಜಿಲ್ಲೆಯವನು ಎಂದೇ ಕರೆಯಬೇಕು’ ಎಂದು ಹೇಳಿದರು.

ಮೆಟ್ರೊ ಹಂತ–2ಕ್ಕೆ ₹40,424 ಕೋಟಿ

ಮೆಟ್ರೊ ಹಂತ-2ರ ಯೋಜನೆಯ ಅಂದಾಜು ವೆಚ್ಚವನ್ನು ₹40,424 ಕೋಟಿಗೆ ಪರಿಷ್ಕರಿಸಲಾಗಿದ್ದು, ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಶಿವಕುಮಾರ್ ಹೇಳಿದರು.

ಕೇಂದ್ರದಿಂದ ಅನುಮೋದಿತ ವೆಚ್ಚ ₹26,405 ಕೋಟಿ ಆಗಿದ್ದು, ಈಗ ₹14,019 ಕೋಟಿಯಷ್ಟು ಹೆಚ್ಚಾಗಿದೆ. ಭೂಸ್ವಾಧೀನ ವೆಚ್ಚ ಮತ್ತು ವಿಸ್ತೀರ್ಣದಲ್ಲಿ ಏರಿಕೆ, ಭೂಮಿಯ ಮಾರ್ಗಸೂಚಿ ದರದಲ್ಲಿ ಏರಿಕೆ, ಸಿವಿಲ್ ಕಾಮಗಾರಿಗಳ ವೆಚ್ಚವೂ ಏರಿಕೆ ಆಗಿರುವುದರಿಂದ ಅಂದಾಜು ವೆಚ್ಚ ಪರಿಷ್ಕರಿಸಲಾಗಿದೆ ಎಂದರು. ಬೆಂಗಳೂರಿನಲ್ಲಿ ಸುರಂಗ ರಸ್ತೆಯನ್ನು ಹೈಬ್ರಿಡ್ ಮಾದರಿಯಲ್ಲಿ ಮಾಡಬೇಕೆ ಅಥವಾ ಬೇಡವೇ ಎಂಬುದನ್ನು ಮುಖ್ಯಮಂತ್ರಿ ಜತೆ ತಾಂತ್ರಿಕ ಅಂಶ ಚರ್ಚಿಸಿ ನಿರ್ಧರಿಸುತ್ತೇವೆ. ಇದಕ್ಕೆ ಜಾಗತಿಕ ಟೆಂಡರ್ ಕರೆಯಲಾಗುವುದು ಎಂದರು.

> **ರಾಮನಗರಕ್ಕೆ ಅದೇ ಹೆಸರು ಇರಲಿ. ಮೊದಲು ಅಭಿವೃದ್ಧಿ ಮಾಡಲಿ. ನಂತರ ಹೆಸರು ಬದಲಾವಣೆ ಬಗ್ಗೆ ಯೋಚಿಸಲಿ**
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

> **ಹೆಸರು ಬದಲಾವಣೆ ಮಾಡಿದಾ ಕ್ಷಣ, ಅಭಿವೃದ್ಧಿಗೆ ಹೆಚ್ಚು ಹಣ ಹರಿದು ಬರುತ್ತದೆಯೇ? ರಾಜಕೀಯ ಲಾಭಕ್ಕಾಗಿ ಹೆಸರು ಬದಲಾಯಿಸುತ್ತಿದ್ದಾರೆ**
> **ನಿಖಿಲ್ ಕುಮಾರಸ್ವಾಮಿ,** ಜೆಡಿಎಸ್ ಯುವ ಘಟಕದ ಅಧ್ಯಕ್ಷ

ಪಡಿತರ ಚೀಟಿ : ಆಡಳಿತ ಸುಧಾರಣಾ ಆಯೋಗ-2 ಶಿಫಾರಸು

ಅಕ್ರಮ ಪತ್ತೆಗೆ ದತ್ತಾಂಶ ಸಂಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನರ್ಹರು ಬಿಪಿಎಲ್ ಪಡಿತರ ಚೀಟಿ ಪಡೆಯುವುದನ್ನು ತಪ್ಪಿಸಲು ಪಹಣಿ, ವಾಹನ ನೋಂದಣಿ, ನೌಕರರ ವಿವರಗಳನ್ನು ಪಡಿತರ ಚೀಟಿ ದತ್ತಾಂಶಗಳ ಜತೆ ಬೆಸೆಯಬೇಕು’ ಎಂದು ಆಡಳಿತ ಸುಧಾರಣಾ ಆಯೋಗ-2 ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಂಟನೇ ವರದಿಯನ್ನು ಗುರುವಾರ ಸಲ್ಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಆಯೋಗ ಅಧ್ಯಕ್ಷ ಆರ್.ವಿ. ದೇಶಪಾಂಡೆ ಈ ಕುರಿತು ಮಾಹಿತಿ ನೀಡಿದರು.

‘ಮೂರು ಹೆಕ್ಟೇರ್‌ಗಿಂತ ಹೆಚ್ಚು ಕೃಷಿ ಭೂಮಿ ಹೊಂದಿದ್ದರೆ ಬಿಪಿಎಲ್ ಪಡಿತರ ಚೀಟಿ ಪಡೆಯುವಂತೆ ಇಲ್ಲ. ಕೃಷಿ ಭೂಮಿಯ ದತ್ತಾಂಶಗಳನ್ನು ಪಡಿತರ ಚೀಟಿಗಳ ದತ್ತಾಂಶಗಳ ಜತೆ ಸಮೀಕರಿಸಿದರೆ ಕೃಷಿ ಭೂಮಿ ಹೊಂದಿರುವವರ ವಿವರಗಳನ್ನು ಪರಿಶೀಲಿಸಲು ಸುಲಭವಾಗುತ್ತದೆ’ ಎಂದು ಹೇಳಿದರು.

ಎಚ್‌ಆರ್‌ಎಂಎಸ್ ತಂತ್ರಾಂಶದಿಂದ ಸರ್ಕಾರಿ ನೌಕರರ ಮಾಹಿತಿ, ವಾಹನ ನೋಂದಣಿ ದತ್ತಾಂಶ, ಆಸ್ತಿ ನೋಂದಣಿ ವಿವರಗಳನ್ನು ಆಹಾರ ಇಲಾಖೆಯ ಪಡಿತರ ವ್ಯವಸ್ಥೆಗೆ ಜೋಡಿಸಬೇಕು. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ನಿಗದಿಪಡಿಸಿದ ಮಾನದಂಡ ಮತ್ತು ವಿಧಾನವನ್ನು ಸೂಕ್ತ ಮಾರ್ಪಾಡುಗಳೊಂದಿಗೆ ಪರಿಗಣಿಸಬೇಕು. ಗ್ರಾಮೀಣ, ನಗರ ಪ್ರದೇಶಗಳ ಗ್ರಾಮ ಅಥವಾ ವಾರ್ಡ್ ಸಭೆಗಳಲ್ಲೇ ಬಿಪಿಎಲ್ ಕುಟುಂಬಗಳನ್ನು ಗುರುತಿಸಿ, ಅಂತಿಮ ಅನುಮೋದನೆ ಪಡೆಯಬೇಕು ಎಂಬ ಶಿಫಾರಸು ಮಾಡಲಾಗಿದೆ ಎಂದರು.

ಆದಾಯ ಪ್ರಮಾಣಪತ್ರ ವಿತರಣೆಗೆ ಏಕರೂಪದ ವಿಧಾನ ಅನುಸರಿಸಬೇಕು. ಒಂದು ಕುಟುಂಬದ ಎಲ್ಲ ಸದಸ್ಯರಿಗೂ ಪ್ರತ್ಯೇಕ ಆದಾಯ ಪ್ರಮಾಣಪತ್ರ ನೀಡಬಾರದು ಎಂದು ಹೇಳಿದರು.

5,228	1,506	1,950	351
ಎಂಟು ವರದಿಗಳ ಒಟ್ಟು ಶಿಫಾರಸು	ಅನುಷ್ಠಾನಗೊಂಡ ಶಿಫಾರಸು	ಪರಿಶೀಲನೆಯಲ್ಲಿರುವ ಶಿಫಾರಸು	ಅಂಗೀಕರಿಸದ ಶಿಫಾರಸುಗಳು

ಪ್ರಮುಖ ಶಿಫಾರಸುಗಳು

- ಶಿಫಾರಸು ಅನುಷ್ಠಾನಕ್ಕೆ ಮೇಲ್ವಿಚಾರಣಾ ಸಮಿತಿ
- ಧರ್ಮಾದಾಯ ಮತ್ತು ದತ್ತಿ ಆಯುಕ್ತರಿಗೆ ದೇಗುಲಗಳಲ್ಲಿ ಹೊಸ ಹುದ್ದೆ ಮಂಜೂರಾತಿ ಅಧಿಕಾರ
- ಮುದ್ರಣ ಸಾಮಗ್ರಿಗಳ ದರ ಹೆಚ್ಚಳ
- ಐಟಿಐ, ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ 15 ವರ್ಷಕ್ಕಿಂತ ಹಳೆಯ ಯಂತ್ರಗಳ ಬದಲಾವಣೆ
- ನಗರಗಳ ಅನುಮೋದಿತ ನೀಲನಕ್ಷೆ ಅನುಷ್ಠಾನಕ್ಕೆ ಎರಡು ವರ್ಷಗಳ ಮಿತಿ
- ಧಾರವಾಡದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಶಾಖೆ
- ತಾಂತ್ರಿಕ ಲೆಕ್ಕ ಪರಿಶೋಧನೆಯ ವ್ಯಾಪ್ತಿ ವಿಸ್ತಾರ

ಹುದ್ದೆಗಳ ಭರ್ತಿಗೆ ಶಿಫಾರಸು

ವಿವಿಧ 23 ಇಲಾಖೆಗಳ ಸಮರ್ಪಕ ಕಾರ್ಯ ನಿರ್ವಹಣೆಗೆ ತುರ್ತು ಅಗತ್ಯವಿರುವ 15 ಸಾವಿರ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಒಂದೇ ಹಂತದಲ್ಲಿ ನೇಮಕ ಮಾಡಿಕೊಳ್ಳಬೇಕು ಎಂದು ಆಡಳಿತ ಸುಧಾರಣಾ ಆಯೋಗ ಶಿಫಾರಸು ಮಾಡಿದೆ.

ಕೃಷಿ ಇಲಾಖೆಯಲ್ಲಿ 1,870 ಸಹಾಯಕ ಕೃಷಿ ಅಧಿಕಾರಿಗಳು, ಕೌಶಲ ಅಭಿವೃದ್ಧಿ ಇಲಾಖೆಯಲ್ಲಿ 1,521 ಕಿರಿಯ ತರಬೇತಿ ಅಧಿಕಾರಿಗಳು, ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ 1,397 ನರ್ಸಿಂಗ್ ಅಧಿಕಾರಿಗಳು ಸೇರಿ ಖಾಲಿ ಇರುವ ಎ, ಬಿ ಮತ್ತು ಸಿ ವೃಂದದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು ಎಂದು ಪಟ್ಟಿ ನೀಡಲಾಗಿದೆ.

> **ಆಯೋಗದ ಶೇ 30ರಷ್ಟು ಶಿಫಾರಸುಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ. ಶೇ 53ರಷ್ಟು ಶಿಫಾರಸುಗಳು ಅನುಷ್ಠಾನವಾಗುತ್ತಿವೆ**
> **ಆರ್.ವಿ. ದೇಶಪಾಂಡೆ,** ಅಧ್ಯಕ್ಷ, ಆಡಳಿತ ಸುಧಾರಣಾ ಆಯೋಗ–2

ನೀಲ್‌ಕಂಠ್ ಗೋಲ್ಡ್ ಅಂಡ್ ಡೈಮಂಡ್ಸ್ ಪ್ರೈವೇಟ್ ಲಿಮಿಟೆಡ್
ರಿಚ್ಮಂಡ್ ರಸ್ತೆ: 080-2227 8846 | HSR ಲೇಔಟ್: 080-4696 3800 | HRBR ಲೇಔಟ್: 080-6907 8000

ಚಿತಾಗಾರ ಸ್ಥಗಿತ

ಬೆಂಗಳೂರು: ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಚಿಮಣಿ ಮತ್ತಿತರೆ ಕಾಮಗಾರಿಯಿಂದ 2 ಫರ್ನೇಸ್‌ಗಳಲ್ಲಿ ಒಂದನ್ನು ಮೇ 26ರಿಂದ ಸೆಪ್ಟೆಂಬರ್ 2ರವರೆಗೆ ಸ್ಥಗಿತಗೊಳಿಸಲಾಗುತ್ತದೆ ಎಂದು ದಕ್ಷಿಣ ವಲಯ ವಿದ್ಯುತ್ ವಿಭಾಗದ ಎಂಜಿನಿಯರ್ ತಿಳಿಸಿದ್ದಾರೆ.

ವೃದ್ಧರಿಗೆ ₹1.13 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 71 ವರ್ಷದ ವೃದ್ಧರೊಬ್ಬರನ್ನು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿದ ಸೈಬರ್ ವಂಚಕರು ₹1.13 ಕೋಟಿ ಸುಲಿಗೆ ನಡೆಸಿದ್ದು, ದಕ್ಷಿಣ ವಿಭಾಗದ ಸೈಬರ್ ಅಪರಾಧ ಠಾಣೆಯಲ್ಲಿ ಈ ಸಂಬಂಧ ಎಫ್ಐಆರ್ ದಾಖಲಾಗಿದೆ.

ತುರಹಳ್ಳಿ ಅರಣ್ಯದ ಬಳಿಯ ಬ್ರಿಡ್ಜ್ ಒಮೆಗಾ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ನೆಲಸಿರುವ ಮೋಹನ್ ನಾಡಿಗ ಅವರಿಗೆ ಸೈಬರ್ ವಂಚಕರು ವಂಚಿಸಿದ್ದಾರೆ.

ಮೋಹನ್ ಅವರು ನೀಡಿದ ದೂರು ಆಧರಿಸಿ, ಮಾಹಿತಿ ತಂತ್ರಜ್ಞಾನ ಕಾಯ್ದೆ–2008 ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 318(4), 319(2)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸರು ಹೇಳಿದರು. ಏಪ್ರಿಲ್ 7ರಂದು ದೂರುದಾರಿಗೆ ವಾಟ್ಸ್‌ಆ್ಯಪ್ ಕರೆ ಮಾಡಿದ್ದ ಸೈಬರ್ ವಂಚಕರು, ಮಹಾರಾಷ್ಟ್ರದ ಪೊಲೀಸರು ಎಂದು ಪರಿಚಯಿಸಿ ಕೊಂಡಿದ್ದರು. ಗುರುತಿನ ಚೀಟಿ ದುರ್ಬಳಕೆ ಮಾಡಿಕೊಂಡು ವಂಚನೆ ನಡೆಸಿರುವ ಅನುಮಾನವಿದೆ ಎಂದು ದೂರುದಾರರನ್ನು ಬೆದರಿಸಿದ್ದರು. ಐ.ಡಿ ಕಾರ್ಡ್, ಬ್ಯಾಂಕ್ ದಾಖಲೆಗಳನ್ನು ಪರಿಶೀಲಿಸಬೇಕಿದೆ ಎಂಬುದಾಗಿ ಹೇಳಿದ್ದರು. ಹೆದರಿ ಮೋಹನ್ ಅವರು ಬ್ಯಾಂಕ್ ವಿವರಗಳನ್ನು ಸೈಬರ್ ವಂಚಕರಿಗೆ ನೀಡಿದ್ದರು.

ಡಿಜಿಟಲ್ ಅರೆಸ್ಟ್

ಅದಾದ ಮೇಲೆ ವಿಡಿಯೊ ಕರೆ ಮಾಡಿದ್ದ ಅಪರಿಚಿತರು, ಮೋಹನ್ ಅವರನ್ನು ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಬೆದರಿಸಿದ್ದರು. ಅಲ್ಲದೇ ಎಲ್ಲ ಬ್ಯಾಂಕ್ ಖಾತೆಗಳಿಂದ ಹಂತಹಂತವಾಗಿ ₹1.13 ಕೋಟಿಯನ್ನು ವರ್ಗಾವಣೆ ಮಾಡಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ. 'ಈ ಕುರಿತು ಕೆಲವು ದಿನಗಳ ಬಳಿಕ ಪುತ್ರಿಗೆ ವಿಷಯ ತಿಳಿಸಿದ್ದೆ. ಆಗ ವಂಚನೆಗೆ ಗೊತ್ತಾಯಿತು' ಎಂದು ಮೋಹನ್ ದೂರಿನಲ್ಲಿ ತಿಳಿಸಿದ್ದಾರೆ.

ರಂಪಾಟ: ಆಟೊ ಚಾಲಕ ಸಾವು

ಬೆಂಗಳೂರು: ಮದ್ಯದ ಅಮಲಿನಲ್ಲಿ ನಡೆದ ಜಗಳದಲ್ಲಿ ಗಾಯಗೊಂಡಿದ್ದ ಆಟೊ ಚಾಲಕ ಮೃತಪಟ್ಟಿರುವ ಘಟನೆ ರಾಜಗೋಪಾಲನಗರದ ಬಳಿ ನಡೆದಿದೆ.

ಬಸವನಕಟ್ಟೆ ನಿವಾಸಿ ಆಟೊ ಚಾಲಕ ರಂಗಸ್ವಾಮಿ (51) ಮೃತರು. ಆರೋಪಿ ವಿನಯ್ ಕುಮಾರ್ (24) ಎಂಬಾತನನ್ನು ರಾಜಗೋಪಾಲನಗರ ಪೊಲೀಸರು ಬಂಧಿಸಿದ್ದಾರೆ. 'ರಂಗಸ್ವಾಮಿ ಹಾಗೂ ವಿನಯ್ ಕುಮಾರ್ ವೃತ್ತಿಯಲ್ಲಿ ಆಟೊ ಚಾಲಕರು. ಒಂದೇ ಬಡಾವಣೆಯ ನಿವಾಸಿಗಳು. ಮೇ 18ರ ರಾತ್ರಿ ಬಸವನಕಟ್ಟೆಯ ಬಾರ್ ಬಳಿ ರಂಗಸ್ವಾಮಿ ಕುಡಿದು ರಂಪಾಟ ಮಾಡುತ್ತಾ ಅಕ್ಕಪಕ್ಕದ ಮನೆಯವರನ್ನು ನಿಂದಿಸುತ್ತಿದ್ದರು. ಇದನ್ನು ವಿನಯ್ ಪ್ರಶ್ನಿಸಿದ್ದರು. ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದು, ತಳ್ಳಾಟ, ನೂಕಾಟ ಸಂಭವಿಸಿದಾಗ ರಂಗಸ್ವಾಮಿ ಕೆಳಗೆ ಬಿದ್ದರು' ಎಂದು ಪೊಲೀಸರು ತಿಳಿಸಿದರು.

ತಲೆಗೆ ಗಂಭೀರ ಪೆಟ್ಟಾಗಿದ್ದ ರಂಗಸ್ವಾಮಿ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ನಗರದಲ್ಲಿ ಇಂದು

ಕಾಲೇಜು ದಿನಾಚರಣೆ: ಅತಿಥಿಗಳು: ಉಪಾಸನಾ ಮೋಹನ್, ವಿಷ್ಣು ಭರತ್ ಅಲಂಪಲ್ಲಿ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಎಜುಕೇಷನ್ ಆ್ಯಂಡ್ ಇನ್ಫಾರ್ಮೇಷನ್ ಟೆಕ್ನಾಲಜಿ 15ನೇ ವಾರ್ಷಿಕೋತ್ಸವ: ಅತಿಥಿ: ಪದಮ್ ಖಿಂಚಾ, ಅಧ್ಯಕ್ಷತೆ: ಸುಪ್ರಿಯಾ ಕಂದಾರಿ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ, ಸಂವಿಧಾನ ದಿನಾಚರಣೆ: ಉದ್ಘಾಟನೆ: ಕೆ.ಎಚ್. ಮುನಿಯಪ್ಪ, ಅತಿಥಿಗಳು: ಆರ್.ಬಿ. ತಿಮ್ಮಾಪುರ, ಶಿವರಾಜ ತಂಗಡಗಿ, ಪಿ.ಎಂ. ನರೇಂದ್ರಸ್ವಾಮಿ, ಎಲ್.ಎನ್. ಮುಕುಂದರಾಜ್, ಗೊಲ್ಲಹಳ್ಳಿ ಶಿವಪ್ರಸಾದ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 11

ಕಲಾ ಪ್ರದರ್ಶನದ ಉದ್ಘಾಟನೆ: ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಅತಿಥಿ: ಕೆ.ವಿ. ಸುಬ್ರಹ್ಮಣ್ಯಂ, ಅಧ್ಯಕ್ಷತೆ: ಪ.ಸ. ಕುಮಾರ್, ಆಯೋಜನೆ: ಕರ್ನಾಟಕ ಲಲಿತಕಲಾ ಅಕಾಡೆಮಿ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11



ಆಧ್ಯಾ ಬಿ.ವಿ.

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಆಧ್ಯಾ ಬಿ.ವಿ., ಅತಿಥಿಗಳು: ಆರ್.ವಿ. ರಾಘವೇಂದ್ರ, ಸತ್ಯನಾರಾಯಣ ರಾಜು, ಪದ್ಮಿನಿ ರವಿ, ಆಯೋಜನೆ: ನೂಪುರ ಧ್ವನಿ ಡಾನ್ಸ್ ಸ್ಕೂಲ್, ಸ್ಥಳ: ಎಡಿಎ ರಂಗಮಂದಿರ, ಸಂಜೆ 5.30

ಜೆ.ಡಿ. ಡಿಸೈನ್ ಸ್ಕೂಲ್ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಮಧ್ಯಾಹ್ನ 12.30

'ಸೃಷ್ಟಿ–2025' ರಾಜ್ಯಮಟ್ಟದ ತಾಂತ್ರಿಕ ಮೇಳ: ಉದ್ಘಾಟನೆ: ಗಣೇಶನ್ ಕನ್ನಬೀರನ್, ಅತಿಥಿಗಳು: ಅಭಯ್ ಜೆರೆ, ಸಂಜಯ್ ತ್ಯಾಗಿ, ವಿರೇಂದ್ರ ಸಿಂಗ್ ಸೋಲಂಕಿ, ಅಧ್ಯಕ್ಷತೆ: ಕೆ. ಬಾಲವೀರ ರೆಡ್ಡಿ, ಆಯೋಜನೆ: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಸ್ಥಳ: ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಧ್ಯಾಹ್ನ 3.30

ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರದಾನ: ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಉಪಸ್ಥಿತಿ: ತೇಜಸ್ವಿ ಸೂರ್ಯ, ಪ್ರಾಸ್ತಾವಿಕ ನುಡಿ: ಪ.ಸ. ಕುಮಾರ್, 'ಪರಿಚಯ ಪುಸ್ತಕ' ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ಎಂ.ವಿ. ವೆಂಕಟೇಶ್, ಕೆ.ಎಂ. ಗಾಯಿತ್ರಿ, ಆಯೋಜನೆ: ಕರ್ನಾಟಕ ಲಲಿತಕಲಾ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಕೂ.ಗಿ. ಗಿರಿಯಪ್ಪ, ಲಕ್ಷ್ಮೀದೇವಮ್ಮ ದತ್ತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎಸ್.ವಿ. ಸುರೇಶ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಜಿ.ಪಿ. ಕಾಡೇಗೌಡ ಗಬ್ಬಾಡಿ, ಉಪಸ್ಥಿತಿ: ಕೂ.ಗಿ. ಗಿರಿಯಪ್ಪ, ಪ್ರಶಸ್ತಿ ಸ್ವೀಕರಿಸುವವರು: ಶಿವರುದ್ರಪ್ಪ, ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ, ಕೆ.ವಿ. ರವಿಕುಮಾರ್, ಪೂರ್ಣಚಂದ್ರ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

'ಗೊರುಚ–96 ಸಾರ್ಥಕ ಬದುಕಿನ ಸುಂದರ ಹೆಜ್ಜೆ' ಉಪನ್ಯಾಸ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಗೀತಾ ಜಯಂತ್, ಉಪಸ್ಥಿತಿ: ದಿಬ್ಬೂರು ಎಸ್. ಗಿರೀಶ್, ಪ್ರಮೀಳಾ ಗರಡಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಜೆಎಸ್ಎಸ್ ಕಾಲೇಜಿನ ಸಭಾಂಗಣ, 8ನೇ ವಿಭಾಗ, ಜಯನಗರ, ಸಂಜೆ 5.30

ಉಡುಪ ಮ್ಯೂಸಿಕ್ ಫೆಸ್ಟಿವೆಲ್: ಪಿಟೀಲು: ಎಲ್. ಸುಬ್ರಮಣ್ಯಂ, ಅಂಬಿ ಸುಬ್ರಮಣ್ಯಂ, ಮೃದಂಗ: ವಿ.ವಿ. ರಮಣಮೂರ್ತಿ, ತಬಲಾ: ಫಜಲ್ ಖುರೇಷಿ, ಘಟ: ತ್ರಿಪುಣೆತುರ ಎನ್. ರಾಧಾಕೃಷ್ಣನ್, ಖಂಜೀರಾ: ಲತಾ ರಾಮಾಚಾರ್, ಆಯೋಜನೆ: ಉಡುಪ ಫೌಂಡೇಶನ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 7

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಮು.ಇಂ(ವಿ)/ಪ್ರ(ಕಾ)ವಬೆ/ಅಇಂ(ಕ)/ಸಇಂ–1/2025–26/1692–94 ದಿ: 21.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮುಖಾಂತರ)

ಕವಿಪ್ರನಿನಿಯು, ಕೆಳಕಂಡ ವಿಚಾರಣೆಗೆ ಬಿಡ್‌ಗಳನ್ನು ಆಹ್ವಾನಿಸಿದೆ:

(1) ವಿಚಾರಣೆ ಸಂಖ್ಯೆ :ಕವಿಪ್ರನಿನಿ/ಮುಇವಿ/ಪ್ರ(ಕಾ)ವ/ಬೆಂವ/01ರ ಅನ್ವಯ ಅಸ್ತಿತ್ವದಲ್ಲಿರುವ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ, ನೆಲಮಂಗಲ, ದೊಡ್ಡಬಳ್ಳಾಪುರ, ಯಲಹಂಕ ಮತ್ತು ದೇವನಹಳ್ಳಿ ತಾಲ್ಲೂಕಿನಲ್ಲಿ ಹಾದುಹೋಗುವ ಅಸ್ತಿತ್ವದಲ್ಲಿರುವ 400ಕೆ.ವಿ ನೆಲಮಂಗಲ–ದೇವನಹಳ್ಳಿ ಮತ್ತು ನೆಲಮಂಗಲ–ಸಿಂಗನಾಯಕನಹಳ್ಳಿ (ಯಲಹಂಕ)–ದೇವನಹಳ್ಳಿ ಡಿ.ಸಿ.ಲೈನ್‌ಗಳನ್ನು ಚಾಲನೆಯಲ್ಲಿರುವ 400kV DC ಟವರ್‌ಗಳ ಮೇಲೆ TWIN MOOSE ACSR ನಿಂದ HPC ಯಾಗಿ ಬಲಪಡಿಸುವುದಕ್ಕೆ ವಿವರವಾದ ಸರ್ವೆ ಕಾರ್ಯವನ್ನು ಮಾಡುವುದು

(2) ವಿಚಾರಣೆ ಸಂಖ್ಯೆ :ಕವಿಪ್ರನಿನಿ/ಮುಇವಿ/ಪ್ರ(ಕಾ)ವ/ಬೆಂವ/02ರ ಅನ್ವಯ ಅಸ್ತಿತ್ವದಲ್ಲಿರುವ ಚಿಕ್ಕಬಳ್ಳಾಪುರ ಜಿಲ್ಲೆಯ, ಚಿಂತಾಮಣಿ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿರುವ 220kV PGCIL-ಚಿಂತಾಮಣಿ ಮಾರ್ಗವನ್ನು 220kV PGCIL ನಿಂದ 220kV ಸ್ವೀಕರಣಾ ಕೇಂದ್ರ ಚಿಂತಾಮಣಿಯವರೆಗೆ DRAKE ಕಂಡಕ್ಟರ್‌ನಿಂದ HTLS ಕಂಡಕ್ಟರ್‌ಗೆ ಬಲಪಡಿಸುವುದಕ್ಕೆ ವಿವರವಾದ ಸರ್ವೆ ಕಾರ್ಯವನ್ನು ಮಾಡುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ. ಇ–ಟೆಂಡರಿಂಗ್ ಪ್ರಕ್ರಿಯೆಗೆ ಸಂಬಂಧಿಸಿದ ವಿಚಾರಣೆಯ ಸಂಪೂರ್ಣ ವಿವರಗಳನ್ನು ಸಾರ್ವಜನಿಕ ಸಂಗ್ರಹಣಾ ತಂತ್ರಾಂಶ ವೆಬ್‌ಸೈಟ್ **www.kppp.karnataka.gov.in** ನಲ್ಲಿ **ದಿನಾಂಕ: 26.05.2025ರಂದು ಅಥವಾ ತದನಂತರ** ಲಾಗಿನ್ ಆಗಿ ಪಡೆಯಬಹುದು. ಇನ್ನಿತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/–ಮುಖ್ಯ ಇಂಜಿನಿಯರ್ ವಿದ್ಯುತ್, ಪ್ರಸರಣ(ಕಾರ್ಯಾಚರಣೆಗಳು) ವಲಯ, ಕವಿಪ್ರನಿನಿ, ಆನಂದರಾವ್ ವೃತ್ತ, ಬೆಂಗಳೂರು–560009.

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ಬಿ/ಟಿಆರ್‌ಡಿ.2025–26/03
ದಿನಾಂಕ : 19–05–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ರೆಟ್ರೋ – ರಿಫ್ಲೆಕ್ಟಿವ್ ನಂಬರ್ ಪ್ಲೇಟ್‌ಗಳನ್ನು ಒದಗಿಸುವುದು.	ರೂ. 3,15,72,043.29

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09–06–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್, ಬೆಂಗಳೂರು

ಪಿಯುಬಿ/130/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/118/2025
ದಿನಾಂಕ : 19–05–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ವಿಪತ್ತು ನಿರ್ವಹಣೆಯಲ್ಲಿ ಬ್ರೇಕ್ ಡೌನ್ ಅಫಿಶಿಯಲ್ಸ್‌ರ ತರಬೇತಿಗಾಗಿ 'ಸುರಕ್ಷತಾ ಗ್ರಾಮ'ದ ಸ್ಥಾಪನೆ : ಐಆರ್‌ಐಡಿಎಂ – ಹೆಜ್ಜಾಲದಲ್ಲಿ ಉದ್ದೇಶಿತ ಹೊಸ ಮತ್ತು ಬಾಕಿ ಉಳಿದ ಕಾಮಗಾರಿಗಳು – ಆಡಳಿತ ಬ್ಲಾಕ್ / ಹಾಸ್ಟೆಲ್ ಬ್ಲಾಕ್‌ಗಳು / ಕ್ರೀಡಾ ಸಂಕೀರ್ಣ / ವಸತಿಗೃಹ ವಿಧ–2, 3, 4, 5 / ನಿಲ್ದಾಣ ಕಟ್ಟಡ / ರಸ್ತೆ ಮತ್ತು ಗಟಾರಗಳು / ಟ್ರ್ಯಾಕ್ ಕಾಮಗಾರಿಗಳು / ರಸ್ತೆ ಮೇಲ್ಸೇತುವೆ / ರಸ್ತೆ ಕೆಳಸೇತುವೆ / ಕಟ್ಟಿಂಗ್ಸ್‌ಗಳಲ್ಲಿ ಆರ್‌ಸಿಸಿ ಗಟಾರಗಳು / ಫೆನ್ಸಿಂಗ್‌ನೊಂದಿಗೆ ಆರ್‌ಆರ್‌ಎಂ ಕಾಂಪೌಂಡ್ ಗೋಡೆ / ಕೆರೆ ರಕ್ಷಣಾ ಕಾಮಗಾರಿಗಳು / ಬಾಸ್ಕೆಟ್ ಬಾಲ್ ಮತ್ತು ವಾಲಿ ಬಾಲ್ ಕೋರ್ಟ್‌ಗಳು / ತೋಟಗಾರಿಕೆ ಮತ್ತು ಲ್ಯಾಂಡ್‌ಸ್ಕೇಪ್ / ಒಳಚರಂಡಿ ವ್ಯವಸ್ಥೆಗಳು / ಮಳೆ ನೀರು ಕೊಯ್ಲು / ಎಸ್‌ಟಿಪಿ 40ಕೆಎಲ್‌ಡಿ – 2 ಸಂಖ್ಯೆಗಳು / ಎಸ್‌ಟಿಪಿ 10ಕೆಎಲ್‌ಡಿ – 2 ಸಂಖ್ಯೆಗಳು / ಟನಲ್ / ಬೃಹತ್ ಮತ್ತು ಕಿರು ಸೇತುವೆಗಳ ರಕ್ಷಣಾ ಕಾಮಗಾರಿಗಳು / ವಿವಿಧೋದ್ದೇಶ ಸಭಾಂಗಣ – ಆಡಳಿತ ಕಟ್ಟಡದ ಹೊಸ ಕಾಮಗಾರಿಗಳು – ಆರ್‌ಹೆಚ್‌ಎಸ್ ಮತ್ತು ಎಲ್‌ಹೆಚ್‌ಎಸ್ ನಲ್ಲಿನ ವಿಸ್ತರಣೆ – ಹಾಲಿ ಇರುವ ಕೊಠಡಿಗಳಲ್ಲಿ ಸೇರ್ಪಡೆಗಳು ಮತ್ತು ಮಾರ್ಪಾಡುಗಳು – ಸಭಾಂಗಣ ಎಫ್‌ಎಫ್ ಮೇಲೆ ಸ್ಟೀಲ್ ಟೆರೇಸ್ / ಹಾಸ್ಟೆಲ್ ಬ್ಲಾಕ್‌ಗಳು – ಮೇಲ್ವಿಚಾರಕರು ಮತ್ತು ಅಧಿಕಾರಿಗಳ ಬ್ಲಾಕ್‌ಗಳು ಮತ್ತು ಅಡುಗೆ ಬ್ಲಾಕ್‌ಗಳಲ್ಲಿ ಸೇರ್ಪಡೆಗಳು ಮತ್ತು ಮಾರ್ಪಾಡುಗಳು – ಅಡುಗೆ ಎಫ್‌ಎಫ್ ಮತ್ತು ರಿಸೆಪ್ಷನ್ ಮೇಲೆ ಸ್ಟೀಲ್ ಟೆರೇಸ್ / ಪ್ಲಿಂತ್ ರಕ್ಷಣಾ ಕಾಮಗಾರಿಗಳು / ಫೀಲ್ಡ್ ವ್ಯೂ ಗ್ಯಾಲರಿ 2 ಸಂಖ್ಯೆಗಳು / ಹೊಸ ಹಾಲ್ಟ್ ನಿಲ್ದಾಣ ಕಾಮಗಾರಿಗಳು : ಪಿಎಫ್ ನಿರ್ಮಾಣ 2 ಸೈಡ್‌ಗಳು – ಪಿಎಫ್ ಶೆಲ್ಟರ್ – ಕಿರು ಸೇತುವೆ ವಿಸ್ತರಣೆ / ಹೊಸ ರಸ್ತೆ ಮೂಲಸೌಕರ್ಯ ಕಾಮಗಾರಿಗಳು / ಗ್ರೌಂಡ್ ಲೆವೆಲ್ ಸಂಪ್‌ಗಳು / ಆರ್‌ಸಿಸಿ ರೀಟೇನಿಂಗ್ ಗೋಡೆಗಳು / ಮಣ್ಣು ಪರೀಕ್ಷೆ / ಅಪಘಾತದ ನಿರೂಪಣೆಗಾಗಿ 140ಟಿ ಡಿಬಿಹೆಚ್‌ಡಿ ಕ್ರೇನ್‌ನೊಂದಿಗೆ ಉದ್ದೇಶಿತ ಅಪಘಾತ ನಿರೂಪಣಾ ಓಪನ್ ಥಿಯೇಟರ್ / ವಿದ್ಯುತ್ ಕಾಮಗಾರಿಗಳೊಂದಿಗೆ ಹೆಚ್‌ಜೆಎಲ್ ಸೈಡಿಂಗ್‌ನ ಗೊಟ್ವಾಲ್ಡ್ ವಿನ್ಯಾಸ 140 ಟನ್ ಸಾಮರ್ಥ್ಯದ ಕ್ರೇನ್ ಸ್ಟೇಬಲಿಂಗ್‌ಗಾಗಿ 40.00ಮೀ x 12.00ಮೀ ಒಟ್ಟು ಅಳತೆಯ ಕವರ್ಡ್ ಶೆಡ್, ಇತ್ಯಾದಿ (ಸಂಯೋಜಿತ ಕಾಮಗಾರಿಗಳು) **(ಟೆಂಡರ್ ಉಲ್ಲೇಖ ಸಂ. ಹೆಚ್‌ಜೆಎಸ್–ಡಿಎಂಐಎಸ್‌ವಿ–07)**	ರೂ. 34,82,61,498/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11–06–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/129/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR | SWRRLY | SWRRLY

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಮಹಾತ್ಮ ಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು – 560022. ದೂರವಾಣಿ ಸಂಖ್ಯೆ: 080–23472850/23371695
ಇ–ಮೇಲ್: apmcbangalore22@gmail.com

ಸಂಖ್ಯೆ:ಕೃಉಮಾಸ(ಬೆಂ)/ಅಭಿವೃದ್ಧಿ/611/621/2025–26 ದಿನಾಂಕ: 22–05–2025

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು, 2024–25 ನೇ ಸಾಲಿಗೆ ವಾರ್ಷಿಕ ಕ್ರಿಯಾ ಯೋಜನೆಯಡಿ ಮಂಜೂರಾಗಿರುವ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಐಟಂವಾರು ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಷರತ್ತು–ವಾ–ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯತಕ್ಕದ್ದು. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09–06–2025 ರಂದು ಸಂಜೆ 5.30 ಗಂಟೆವರೆಗೆ.**

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ ವ್ಯಾಪ್ತಿಯ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಇ-ಬ್ಲಾಕ್‌ನಲ್ಲಿ ಕುಡಿಯುವ ನೀರಿನ ಘಟಕದ ದುರಸ್ತಿ, ವಿದ್ಯುತ್ ದೀಪಗಳ ದುರಸ್ತಿ (ಸೋಲಾರ್), ಚರಂಡಿ ಮತ್ತು ಪಾದಚಾರಿ ದುರಸ್ತಿ ಹಾಗೂ ಇತರೆ ಕಾಮಗಾರಿ. INDENT No: APMC/2025-26/BD/WORK_INDENT525	16,69,788.36 (ಜಿ.ಎಸ್.ಟಿ ಹೊರತುಪಡಿಸಿ)	41,800/-
2	ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಬಿಡಿಎ ಪ್ರದೇಶದ ತರಕಾರಿ ಮಾರುಕಟ್ಟೆಯಲ್ಲಿ ಗೋಡೆ ನಿರ್ಮಿಸಿ ಗೇಟ್ ಅಳವಡಿಸುವ ಕಾಮಗಾರಿ. INDENT No: APMC/2025-26/BD/WORK_INDENT524	5,92,658.00 (ಜಿ.ಎಸ್.ಟಿ ಹೊರತುಪಡಿಸಿ)	15,000/-
	ಅರ್ಹತೆ: ಕ್ರಮ ಸಂಖ್ಯೆ. 1 ಮತ್ತು 2 ಕ್ಕೆ KW-01 ರಂತೆ		

ಸಹಿ/– ಕಾರ್ಯದರ್ಶಿ
ಕೃಉಮಾಸ, ಬೆಂಗಳೂರು

ವಾಸಾಸಂಇ/ವಾ.ಪ್ರ/811/ಅಡ್ವರ್ಟೋರ್/2025–26

GOKALDAS EXPORTS LIMITED

Corporate Identity Number (CIN) : L18101KA2004PLC033475
Regd. Office: No. 25, 2nd Cross, 3rd Main, Industrial Suburb, Yeshwanthpur, Bangalore-560022.
Tel: +91 80 68951000 Fax: +91 80 68951001 E-mail: info@gokaldasexports.com Website: www.gokaldasexports.com

Statement of Consolidated & Standalone Audited Financial Results for the Quarter and Year Ended March 31, 2025

(Regulation 47(1) (b) of the SEBI (LODR) Regualtions, 2015)

(in Rs. lakh, except earnings per share)

Sl. No.	Particulars	Consolidated					Standalone				
		Quarter Ended			Year ended		Quarter Ended			Year ended	
		Mar 31, 2025	Dec 31, 2024	Mar 31, 2024	Mar 31, 2025	Mar 31, 2024	Mar 31, 2025	Dec 31, 2024	Mar 31, 2024	Mar 31, 2025	Mar 31, 2024
		(Refer note 1)	Unaudited	(Refer note 1)	Audited	Audited	(Refer note 1)	Unaudited	(Refer note 1)	Audited	Audited
1	Total Income	1,03,485.73	1,00,077.83	81,797.06	3,91,718.39	2,40,898.71	68,774.37	65,073.56	59,213.02	2,57,628.70	2,18,380.95
2	Net profit/(Loss) before tax and exceptional items	7,905.09	6,732.20	4,293.51	21,807.47	15,899.42	7,578.14	6,490.91	5,890.78	24,586.89	19,695.89
3	Net profit/(Loss) before tax and after exceptional items	7,905.09	6,732.20	4,293.51	21,807.47	15,899.42	7,578.14	6,490.91	5,890.78	24,586.89	19,695.89
4	Net Profit/(Loss) after tax and exceptional items	5,286.00	5,034.02	4,428.29	15,854.09	13,097.20	5,280.17	4,941.20	5,849.61	19,132.41	16,415.89
5	Total Comprehensive Income for the period / year	7,873.13	3,915.61	3,447.73	16,733.62	14,234.23	6,816.75	2,862.60	5,595.64	18,134.89	18,291.86
6	Paid-up equity share capital (face value Rs 5 each, fully paid up)	3,573.33	3,573.33	3,169.15	3,573.33	3,169.15	3,573.33	3,573.33	3,169.15	3,573.33	3,169.15
7	Other equity as shown in the Audited Balance Sheet of the previous year	-	-	-	2,04,494.58	1,25,964.85	-	-	-	2,10,919.21	1,30,987.61
8	Earnings per equity share (EPS)										
	Basic	7.40	7.04	7.23	22.36	21.55	7.39	6.91	9.55	26.98	27.01
	Diluted	7.09	6.75	6.88	21.45	20.51	7.09	6.62	9.09	25.88	25.70

Notes:
1. The figures for quarter ended March 31 of current and the previous years in the standalone and consolidated financial results are the balancing figures between the audited figures in respect of the full financial years and the unaudited published year-to-date figures for nine months ended December 31 for respective years.
2. The above is an extract of the detailed format of Quarterly / Half yearly /Annual Financial Results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the financial results are available on the stock exchange (websites www.bseindia.com and www.nseindia.com) and on the company's website (www.gokaldasexports.com).

Scan the code to view full results

Place: Bengaluru
Date : May 21, 2025

For Gokaldas Exports Ltd.
Sd/-
Sivaramakrishnan Ganapathi
Vice Chairman and Managing Director
DIN : 07954560

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQ IMMEDIATELY, English BA , B. Ed teacher. Lakshmi Memorial High school near Hennur depot. Contact 8904378264

Rajya Vokkaligara Sangha
Kempegowda Institute of Physiotherapy
(Affiliated to RGUHS, Karnataka)
K R Road, V V Puram, Bangalore-560004
&
Kengal Hanumanthaiah Institute of Physiotherapy
(Affiliated to RGUHS, Karnataka)
Srigandhadakavalu, Bangalore- 560 091

RVS/Admn/323/25-26 Date:22.05.2025

Applications are invited from eligible candidates as per RGUHS norms for the post of Lecturer / Assistant Professor

Required Post	Specialty	No.of post KIPT	No.of post KHIPT
Lecturer/ Assistant Professor	MPT Musculo-Skeletal & Sports (Minimum 05 years Teaching Experience)	-	01
Lecturer	MPT Musculo - Skeletal & Sports	-	02
	MPT Cardio Respiratory	01	01
	MPT Pediatric Physiotherapy	01	01
	MPT Neuro Sciences	02	-
	MPT Community Health Physiotherapy	-	01

Note:1.Selected Candidates are ready to serve in any institution run under RVS.

Candidates possessing requisite qualification may submit their application to Principal, KIPT & KHIPT or via college mail kimsphysiotherapy@gmail.com & kimskhipt@gmail.com respectively on or before 02-06-2025. Interview Date: 11-06-2025, Wednesday, Place: 2nd Floor, Sangha Meeting Hall, Rajya Vokkaligara Sangha, K.R.Road, V.V.Puram, Bangalore-04.

Sd/- President RVS | Sd/- Vice Presidents RVS | Sd/- General Secretary RVS | Sd/- Joint Secretary RVS | Sd/- Treasurer RVS | Sd/- Chairmans KIPT & KHIPT | Sd/- Principals KIPT & KHIPT

Brindavan Group of Institutions
Dwarakanagar, Bagalur Main Road, Yelahanka, Bengaluru-560063
Recognized by Government of Karnataka,
Approved by AICTE, DTE, UGC, & PU Board
Affiliated to Bengaluru City University (BCU) & Visvesvaraya Technological University (VTU) Accredited by NAAC
www.brindavancollege.edu.in Ph: +91 8028478388 / 8423, +91 9606050612

Invites Applications from Suitable Applicants for the Proposed Vacancies:

Teaching: Assistant Professor/ Associate Professor/ Professor
In CSE, ISE, AI&ML, IOT, ECE, MBA, MCA, BCA, Diploma (ECE) & Language (Kannada) Departments.
Qualification: BE / B.Tech / ME / M.Tech / MCA / MBA / MA/Ph.D and as per UGC and AICTE norms.
Experience: As per AICTE guidelines (Teaching/Research/Industry) and good administrative skill with leadership qualities.

Non-Teaching: IT, Driver & Tellecallers.
Qualification: Graduate in any discipline.
Experience: Minimum of 0-5 years in College/Institute in which 3 years shall be at the level of administrative experience with essential management.

Interested and eligible candidates with mentioned Qualifications may send the detailed resume to **hr@brindavancollege.com** and also send your detailed resume with relevant Credentials/Testimonial's to the **HR Brindavan Group of Institutions,** Dwarakanagar, Bagalur Main Road, Yelahanka, and Bangalore – 560063 on or **before 27.05.2025**
- Salary for the prescribed post as per the AICTE norms.
- The Applicants with Ph.D in relevant subject from recognized Universities are preferable
- The eligible and short-listed candidates shall be communicated for the selection process.

ADMISSION OPEN FOR 2025-2026
Contact: 9606487201 / 080-28478388 / 28478423
Sd/- CEO

Recruitment
State Board School looking for Principal with 5+ years Experience, Accountant with 2+years Experience and Supervisor with 2+ Experience.
Near Nelamangala T Begur, Bangalore Rural.
Send Resume Via mail: schoolcareers9@gmail.com

REQUIRED TEACHERS HIGH SCHOOL- SCIENCE. PRIMARY- EVS/ HINDI, NURSERY- MONT and LKG. Contact: 080-23233455/ 8951774344. Office Timing: 9.30 to 4.30

PRAGATHI PUBLIC SCHOOL Hongasandra Bangalore TEACHERS WANTED FOR PRIMARY & HIGH SCHOOL SCIENCE Subject: 9341264105

Receptionist/ Secretary

HAEID @ Rajajinagar Requires Experienced Front Office Executive with exposure to Accounts, Computers, Secretarial tasks for Immediate Placement. Minimum Salary Rs.4,00,000/- annum. Contact +919880007134 or email: anvih20@gmail.com

Graphic Designers

WANTED MALE/ Female Graphic Designer (Corel Draw Photoshop Illustrator) in Reputed Company around Rajajinagar Contact: 9108458798/ 9845579620

Hotel

WANTED IMMEDIATELY MANAGERS, COOKS, ASSISTANTS, CLEANERS, WAITERS, CASHIERS Very Good Salary. Gents/Ladies Walkin: UNCLE'S KITCHEN RESTAURANTS, UNCLE'S STAY HOMES Call: 9900001954

Accounts & Finance

WANTED FEMALE Office Assistant Any Degree Knowing Tally Fluent In English, Kannada, Hindi Around Rajajinagar Contact: 9108458798/ 9845579620

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
For more details contact:
+91 9731810277 | +91 9845114560 | +91 9900428036

BUILDERS ESSENTIAL

Contractors

WE PLAKTEL Construction Division undertake House: Repair/ Improvement/ Upgrade in Central Bengaluru only. Call:- 8884628624.

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Commercial Land

Whitefield

SALE COMMERCIAL Land suitable for IT, Hospitals, Star Hotel, 68000Sqft on 80feet Road 170ft width depth 400ft, close to Metro Station. call Verna Developers, MG Road, BLR. 9916310226/ 9353128035.

BUSINESS

Business to Business

Business

VIZAG (VISAKHAPATNAM) Biggest City of Andhra. Want to start Any Business/ Buy Apartments/ RE/ Schools Arranging Big Finances. Excellent Guidance. Radhika Projects/ Services. Dr Swamy Naidu:- 9342247637. Bangalore.

Business Offers

Finance

NRI'S Investment And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

PERSONAL

Change of Name

CHANGE OF NAME
I, **SUMA** aged about 40 years, W/o **Madhusudan Kulkarni** residing at Flat No.401, 3rd Floor, VRR Kings apartments, near Sri Harsha School, Kashinagara Main Road, Yelachenahalli, Bangalore, Karnataka- 560062 have changed my name to **SUMA KULKARNI** for all future purpose vide affidavit dated 20.05.2025 before notary L Puttaraju, Bangalore.

WE, SURESH M & Geetha Suresh, resident of C-1005, Brigade Gardenia J P Nagar, 7th Phase, Bangalore 560078, hereby declare that our minor son's name has been changed from AVANISH VAIBHAV SURESH to AVANIISH VAIBHAV SURESSH, vide affidavit dated 16 April, 2025, sworn before Notary, ARAVIND PATIL, Bangalore 560011.

CHANGE OF NAME
I, **DHARMALINGAM M** Residing at No. 118, Sagar Viswa, 3rd Main, 1st Cross, Paul Chinnappa Layout, Bangalore- 560062, have changed my daughter's name from **D. NETRA** to **NETRA DHARMALINGAM,** vide affidavit dated 22.05.2025 before notary Ravi, Bangalore. Henceforth she shall be called as **NETRA DHARMALINGAM** only.

CONNECT



RUSTIC RESORT
- Sylvan Surroundings
- Promoters Retiring

Suitible for :
- Ayurvedic Centre
- Resort
- Residential School
- Corporata Training Centre

• Rooms • Assembly Sheds • Swimming Pool • Ample Water

Brokers Excuse
Companies Call: 91106 69280

SALE
CHAMRAJPET
COMMERCIAL BUILDING
18,000 SFT,
RENTAL INCOME 7 LACS
SALE PRICE 12 CRORES
Call: 96322-37557 / 96069-07557

PUBLIC NOTICE

KARNATAKA ANTIBIOTICS & PHARMACEUTICALS LTD.
(A Govt of India Enterprise)
Regd. & Corp. Office : Arka The Business Centre, Plot No. 37, NTTF Main Road, 2nd Phase, Peenya Industrial Area, Bengaluru.

NOTICE INVITING TENDER (NIT)
Sealed Tenders are invited by **KAPL to Transport Medicines from Bangalore to All State Capitals of India and District Head Quarters of Karnataka & Bangalore Local** through surface (Road/Rail/Courier). Reputed Transporters may submit offers for Normal and also Temperature Controlled (2 to 8° C) Vehicles separately. Details of Terms & Conditions are available in **Website : "www.kaplindia.com".**
Due Date for submission of Tender is on **12-06-2025.**

I, SIRAJUL Alam Barbhuiya, son of Abdul Jalil Barbhuiya, aged about 43 years, residing at Villa no.10B Aristos-1 Sobha City Thanisandra Main Road, Bangalore- 560077 and with permanent address at House no.8 Vill: Madarpur P.O.- Rajartilla Dist: Cachar, Assam, India, PIN- 788805, have changed my name from MD Sirajul Alam Barbhuiya and Mohammed Sirajul Alam Barbhuiya to Sirajul Alam Barbhuiya vide affidavit dated 12/02/2025 and sworn before Notary Mr. Puttaramaiah at Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಪ್ರಯಾಣಿಕರಿಗೆ ಮತ್ತೊಂದು ಆಘಾತ ನೀಡಿದ ಬಿಎಂಆರ್‌ಸಿಎಲ್

ಮೆಟ್ರೊ: ಶೌಚಾಲಯಗಳಿಗೆ ಶುಲ್ಕ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸ್ವೈಪ್ ಗೇಟ್‌ನ ಹೊರಗಿನ ಶೌಚಾಲಯಕ್ಕೆ ಶುಲ್ಕ
- ಮೊದಲ ಹಂತವಾಗಿ 12 ನಿಲ್ದಾಣಗಳಲ್ಲಿ ಶುಲ್ಕ ಸಂಗ್ರಹ

ಬೆಂಗಳೂರು: ಮೆಟ್ರೊ ಪ್ರಯಾಣ ದರವನ್ನು ವಿಪರೀತವಾಗಿ ಏರಿಸಿ ಪ್ರಯಾಣಿಕರಿಗೆ ಹೊರೆ ಹೊರಿಸಿದ್ದ ಬಿ ಎಂ ಆ ರ್ ಸಿ ಎ ಲ್ ಈಗ ನಿಲ್ದಾಣಗಳಲ್ಲಿ ಇರುವ ಶೌಚಾಲಯಕ್ಕೆ ಬಳಕೆದಾರರ ಶುಲ್ಕ ವಿಧಿಸಲು ನಿರ್ಧರಿಸಿದೆ. ಮೊದಲ ಹಂತವಾಗಿ 12 ನಿಲ್ದಾಣಗಳಲ್ಲಿ ಶುಲ್ಕ ಸಂಗ್ರಹ ಆರಂಭಿಸಿದೆ.

ನ್ಯಾಷನಲ್ ಕಾಲೇಜು, ಲಾಲ್‌ಬಾಗ್, ಸೌತ್ ಎಂಡ್ ಸರ್ಕಲ್, ಜಯನಗರ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬನಶಂಕರಿ, ಜಯ ಪ್ರಕಾಶ್ ನಗರ, ಯಲಚೇನಹಳ್ಳಿ, ಸರ್ ಎಂ. ವಿಶ್ವೇಶ್ವರಯ್ಯ ನಿಲ್ದಾಣ - ಸೆಂಟ್ರಲ್ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ನಿಲ್ದಾಣ - ವಿಧಾನಸೌಧ, ಕಬ್ಬನ್ ಪಾರ್ಕ್ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೆಟ್ರೊ ನಿಲ್ದಾಣಗಳಲ್ಲಿ ಬಳಕೆದಾರರ ಶುಲ್ಕ ಸಂಗ್ರಹ ಮಾಡಲಾಗುತ್ತಿದೆ.

‘ನಾಲ್ಕು ತಿಂಗಳ ಹಿಂದೆ ಮೆಟ್ರೊ ದರವನ್ನು ಶೇಕಡ 71ರಷ್ಟು ಏರಿಕೆ ಮಾಡಿದ್ದರು. ಮೆಟ್ರೊ ಆರಂಭವಾದಾಗಿನಿಂದ ಮೆಟ್ರೊ ನಿಲ್ದಾಣಗಳಲ್ಲಿ ಶೌಚಾಲಯವನ್ನು ಉಚಿತವಾಗಿ ಬಳಕೆ ಮಾಡಬಹುದಿತ್ತು. ಈಗ ಅದಕ್ಕೂ ದರ ವಿಧಿಸಲು ಆರಂಭಿಸಿರುವುದು ಉತ್ತಮ ಬೆಳವಣಿಗೆಯಲ್ಲ. ಮೆಟ್ರೊ ನಿಲ್ದಾಣಗಳಿಗೆ ಮೆಟ್ರೊ ಪ್ರಯಾಣಿಕರಲ್ಲದೇ ಬೇರೆ ಯಾರೂ ಬರುವುದಿಲ್ಲ. ಏನೇನೋ ಕಾರಣ ನೀಡಿ ಶೌಚಾಲಯ ಬಳಕೆಗೆ ದರ ನಿಗದಿ ಮಾಡಿದ್ದಾರೆ’ ಎಂದು ಮೆಟ್ರೊ ಪ್ರಯಾಣಿಕ ರಾಕೇಶ್ ಆಕ್ರೋಶ ವ್ಯಕ್ತಪಡಿಸಿದರು.

‘ಸುಲಭ್ ಶೌಚಾಲಯ ಇಂಟರ್ ನ್ಯಾಷನಲ್ ಸಂಸ್ಥೆಗೆ ಶೌಚಾಲಯ ನಿರ್ವಹಣೆಯನ್ನು ವಹಿಸಲಾಗಿದೆ. ಅವರು ನಿರ್ವಹಣಾ ವೆಚ್ಚವನ್ನಷ್ಟೇ ಸಂಗ್ರಹಿಸುತ್ತಿದ್ದಾರೆ. ಮೂತ್ರ ವಿಸರ್ಜನೆಗೆ ₹2, ಶೌಚಾಲಯ ಬಳಕೆಗೆ ₹5 ನಿಗದಿ ಪಡಿಸಿದ್ದು, ಇದು ಎಲ್ಲ ಕಡೆ ಇರುವ ದರವೇ ಆಗಿದೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

‘ಅಲ್ಲದೇ ಎಲ್ಲ ನಿಲ್ದಾಣಗಳಲ್ಲಿ ಶೌಚಾಲಯಗಳಿಗೆ ಬಳಕೆದಾರರ ಶುಲ್ಕ ನಿಗದಿ ಮಾಡುವುದಿಲ್ಲ. ಮೆಟ್ರೊ ಸ್ವೈಪ್ ಗೇಟ್ ಒಳಗೆ ಇರುವ ಶೌಚಾಲಯಗಳ ಬಳಕೆ ಮುಂದೆಯೂ ಉಚಿತವಾಗಿಯೇ ಇರುತ್ತದೆ. ಮೆಟ್ರೊ ಸ್ವೈಪ್ ಗೇಟ್‌ಗಿಂತ ಹೊರಗೆ ಇರುವ ಶೌಚಾಲಯಗಳನ್ನು ಮೆಟ್ರೊ ಪ್ರಯಾಣಿಕರಲ್ಲದೇ ಬೇರೆ ಸಾರ್ವಜನಿಕರೂ ಬಳಸುತ್ತಾರೆ. ಅದಕ್ಕಾಗಿ ಅವುಗಳಿಗಷ್ಟೇ ಶುಲ್ಕ ನಿಗದಿ ಮಾಡಲಾಗಿದೆ’ ಎಂದು ಸ್ಪಷ್ಟಪಡಿಸಿದರು.

ದಸರಾ ನಂತರ ಜಿ.ಪಂ ಚುನಾವಣೆ

ಪ್ರಜಾವಾಣಿ ವಾರ್ತೆ

ತಿಪಟೂರು: ರಾಜ್ಯದಾದ್ಯಂತ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿ ಚುನಾವಣೆಯನ್ನು ದಸರಾ ನಂತರ ಅಕ್ಟೋಬರ್ ಇಲ್ಲವೇ ನವೆಂಬರ್‌ನಲ್ಲಿ ನಡೆಸುವ ಸಾಧ್ಯತೆ ಇದೆ ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್. ಸಂಗ್ರೇಶಿ ಸುಳಿವು ನೀಡಿದ್ದಾರೆ.

ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಗೆ ನಿಗದಿಪಡಿಸಿರುವ ಮೀಸಲಾತಿ ಪಟ್ಟಿಗಾಗಿ ಕಾಯಲಾಗುತ್ತಿದೆ ಎಂದು ಗುರುವಾರ ಇಲ್ಲಿ ತಿಳಿಸಿದರು.

ಮೇ 30ರೊಳಗೆ ಸರ್ಕಾರ ಮೀಸಲಾತಿ ಪಟ್ಟಿ ನೀಡುವುದಾಗಿ ತಿಳಿಸಿದೆ. ನಂತರ ಎರಡು, ಮೂರು ತಿಂಗಳಲ್ಲಿ ಚುನಾವಣೆಗೆ ತಯಾರಿ ನಡೆಸಲಾಗುವುದು ಎಂದರು.

ಶೌಚಾಲಯಗಳ ನವೀಕರಣ, ಒಳಚರಂಡಿ ನಿರ್ಮಾಣ

ಆಯುರ್ವೇದ ಆಸ್ಪತ್ರೆಗೆ ಮೂಲಸೌಕರ್ಯ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ‘ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಪುರುಷರ ಶೌಚಾಲಯಗಳ ನವೀಕರಣ ಹಾಗೂ ಒಳಚರಂಡಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಅನುದಾನದ ಲಭ್ಯತೆ ಅನುಸಾರ ಆಸ್ಪತ್ರೆಗೆ ಅಗತ್ಯ ಮೂಲಸೌಕರ್ಯ ಒದಗಿಸಲಾಗುವುದು’ ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ವಿದ್ಯಾಲಯದ ಪ್ರಾಂಶುಪಾಲೆ ಡಾ. ಸುರೇಖಾ ತಿಳಿಸಿದ್ದಾರೆ.

ಈ ಆಸ್ಪತ್ರೆಯು ಮೂಲಸೌಕರ್ಯದ ಕೊರತೆ ಎದುರಿಸುತ್ತಿರುವ ಬಗ್ಗೆ ಇದೇ 16ರಂದು ‘ಪ್ರಜಾವಾಣಿ’ಯಲ್ಲಿ ‘ಮುರಿದ ಬೆಂಚು, ಸೋರುವ ಚಾವಣಿ’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ಬಳಿಕ, ಆಸ್ಪತ್ರೆಯ ಚಾವಣಿ ನವೀಕರಣ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡುವಂತೆ ಆಯುಷ್ ಇಲಾಖೆ ಆಯುಕ್ತರಿಗೆ ಮನವಿ ಮಾಡಿರುವ ಅವರು, ‘ಆಸ್ಪತ್ರೆಯ ಚಾವಣಿ ಸೋರುತ್ತಿರುವುದು ಹಾಗೂ ಇಲ್ಲಿನ ಮೂಲ ಸೌಕರ್ಯಗಳ ಕೊರತೆ ಬಗ್ಗೆ ಈಗಾಗಲೇ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಈ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದಿಂದ (ಕೆಆರ್‌ಐಡಿಎಲ್) ಅಂದಾಜು ಪಟ್ಟಿ ಪಡೆದು, ಇಲಾಖೆಯ ನಿರ್ದೇಶನಾಲಯಕ್ಕೆ ಸಲ್ಲಿಸಲಾಗಿದೆ’ ಎಂದು ಹೇಳಿದ್ದಾರೆ.

‘ಪುರುಷರ ಶೌಚಾಲಯಗಳ ನವೀಕರಣ ಮತ್ತು ಒಳಚರಂಡಿ ನಿರ್ಮಾಣ ಕಾಮಗಾರಿಗೆ ₹75.30 ಲಕ್ಷ ಅನುದಾನ ಅಗತ್ಯವಿದ್ದು, ಇದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಕಾಮಗಾರಿ ಪ್ರಗತಿಯಲ್ಲಿದೆ. ಚಾವಣಿ ಕಾಮಗಾರಿಗೆ ₹ 65.20 ಲಕ್ಷ ಅಗತ್ಯವಿದ್ದು, ಪ್ರಸ್ತಾವ ನಿರ್ದೇಶನಾಲಯದ ಪರಿಶೀಲನೆಯಲ್ಲಿದೆ. ಈ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಿದಲ್ಲಿ ಆಸ್ಪತ್ರೆ ಚಾವಣಿಯ ಸೋರಿಕೆಯನ್ನು ತಡೆಗಟ್ಟಬಹುದಾಗಿದೆ’ ಎಂದು ತಿಳಿಸಿದ್ದಾರೆ.

‘ಈ ಆಸ್ಪತ್ರೆಯಲ್ಲಿ ಮೂಲಸೌಕರ್ಯ ಕೊರತೆಯಿದ್ದರೂ, ಉತ್ತಮವಾದ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. ಈಗಾಗಲೇ ಪರಿಶೀಲನೆ ಹಂತದಲ್ಲಿರುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿ, ಅನುದಾನವನ್ನು ಶೀಘ್ರ ಬಿಡುಗಡೆ ಮಾಡಬೇಕು’ ಎಂದು ಮನವಿ ಮಾಡಿದ್ದಾರೆ.

ಸಾವಯವ ಮಾವು ಹಲಸಿನ ಹಬ್ಬ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೋಟಗಾರಿಕೆ ಇಲಾಖೆ, ಜೈವಿಕ್ ಕೃಷಿಕ್ ಸೊಸೈಟಿಯ ಸಹಯೋಗದಲ್ಲಿ ಮೇ 23ರಿಂದ 25ರವರೆಗೆ ಲಾಲ್‌ಬಾಗ್‌ನ ಡಾ.ಎಂ.ಎಚ್. ಮರೀಗೌಡ ಸಭಾಂಗಣದಲ್ಲಿ ಸಾವಯವ ಮಾವು ಮತ್ತು ಹಲಸಿನ ಹಬ್ಬವನ್ನು ಆಯೋಜಿಸಲಾಗಿದೆ’ ಎಂದು ತೋಟಗಾರಿಕೆ ಇಲಾಖೆಯ ನಿರ್ದೇಶಕ ಡಿ.ಎಸ್. ರಮೇಶ್ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೇ 23ರಂದು ಮಧ್ಯಾಹ್ನ 3ಕ್ಕೆ ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ಅವರು ಈ ಹಬ್ಬವನ್ನು ಉದ್ಘಾಟಿಸಲಿದ್ದಾರೆ. ಪ್ರತಿದಿನ ಬೆಳಿಗ್ಗೆ 7ರಿಂದ ಸಂಜೆ 6ಗಂಟೆಯವರೆಗೆ ವಿವಿಧ ತಳಿಯ ಮಾವು ಮತ್ತು ಹಲಸಿನ ಹಣ್ಣುಗಳು ಹಾಗೂ ಅವುಗಳ ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ, ಪ್ರದರ್ಶನ ಇರಲಿದೆ’ ಎಂದು ತಿಳಿಸಿದರು.

‘ಮಿಯಾಜಾಕಿ ಮಾವಿನ ಹಣ್ಣಿನ ಪ್ರದರ್ಶನ, ಅಪ್ಪೆ ಮಿಡಿ, ಸೇರಿದಂತೆ ವಿವಿಧ ತಳಿಯ ಮಾವಿನ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟವಿದೆ. ಕೆಂಪು, ಹಳದಿ ಮತ್ತು ಬಿಳಿ ಹಲಸಿನ ತಳಿಯ ಹಣ್ಣುಗಳ ಮಾರಾಟವೂ ಇರಲಿದೆ’ ಎಂದರು. ಮಾಹಿತಿಗೆ: 81055 79839, 97426 96577.

‘ಉದ್ಯಾನಗಳ ಪ್ರವೇಶ ನಿರಾಕರಿಸಿದರೆ ದೂರು ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿನ ಉದ್ಯಾನಗಳಿಗೆ ಬೆಳಿಗ್ಗೆ 5ರಿಂದ ರಾತ್ರಿ 10ರ ಅವಧಿಯಲ್ಲಿ ಸಾರ್ವಜನಿಕರಿಗೆ ಪ್ರವೇಶವನ್ನು ನಿರಾಕರಿಸಿದರೆ ಸಹಾಯವಾಣಿ ಸಂಖ್ಯೆ 1533ಕ್ಕೆ ಕರೆ ಮಾಡಿ ದೂರು ನೀಡಬೇಕು ಎಂದು ಅರಣ್ಯ, ಪರಿಸರ ಮತ್ತು ಹವಾಮಾನ ವೈಪರಿತ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ 1,287 ಉದ್ಯಾನಗಳಿದ್ದು, ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗಬೇಕೆಂಬ ಉದ್ದೇಶದಿಂದ 2024ರ ಜೂನ್ 12ರಿಂದ ಸಮಯ ನಿಗದಿಮಾಡಲಾಗಿದೆ. ಈ ಸಮಯದಲ್ಲಿ ಯಾವುದೇ ಉದ್ಯಾನಗಳಲ್ಲಾಗಲಿ ಸಾರ್ವಜನಿಕರ ಪ್ರವೇಶವನ್ನು ನಿರಾಕರಿಸುವಂತಿಲ್ಲ ಎಂದರು.

ಉದ್ಯಾನಗಳ ಮುಚ್ಚಿದ್ದರೆ ಅಥವಾ ಪ್ರವೇಶ ನಿರಾಕರಿಸಿದರೆ ಅಂಥ ಉದ್ಯಾನದ ಛಾಯಾಚಿತ್ರದೊಂದಿಗೆ ವ್ಯಾಟ್ಸ್ ಆ್ಯಪ್ ಸಂಖ್ಯೆ 9480685700, ಸಹಾಯ 2.0 ತಂತ್ರಾಂಶ, ಇಮೇಲ್- scfeccm2024@gmail.com ಮೂಲಕ ದೂರು ನೀಡಬಹುದಾಗಿದೆ ಎಂದರು.

ಸಿನಿಮಾ ಪುರವಣಿ

ಮಿಶಾ ನಾರಂಗ್

2025ರ ಅರ್ಧವರ್ಷ ಮುಗಿಯುತ್ತ ಬಂದರೂ ಕನ್ನಡ ಚಿತ್ರರಂಗವಿನ್ನೂ ಹಿಟ್‌ನ ರುಚಿ ಕಂಡಿಲ್ಲ. ಚಿತ್ರಮಂದಿರಗಳತ್ತ ಜನ ಸುಳಿದಾಡದೇ ಚಿತ್ರಮಂದಿರಗಳ ಮಾಲೀಕರು ಆತಂಕಕ್ಕೆ ಒಳಗಾಗಿದ್ದಾರೆ. ಚಿತ್ರಗಳ ಬಿಡುಗಡೆ ಪ್ರಮಾಣವೂ ಗಣನೀಯವಾಗಿ ಕುಸಿದಿದೆ...

ನೂರರಲ್ಲೊಂದೂ ಹಿಟ್ ಇಲ್ಲ!

ವಿನಾಯಕ ಕೆ.ಎಸ್

2024ರ ಅಂತ್ಯದಲ್ಲಿ ಸುದೀಪ್ ಅಭಿನಯದ 'ಮ್ಯಾಕ್ಸ್' ಚಿತ್ರದ ಯಶಸ್ಸಿನಿಂದ ಖುಷಿಯಲ್ಲಿದ್ದ ಕನ್ನಡ ಚಿತ್ರರಂಗಕ್ಕೆ ಈ ವರ್ಷ ಅತ್ಯಂತ ಕಳಪೆ ವರ್ಷವಾಗಿ ಪರಿಣಮಿಸಿದೆ. 2025ರ ಜನವರಿಯಿಂದ ಈತನಕ 100ಕ್ಕೂ ಹೆಚ್ಚು ಸಿನಿಮಾಗಳು ತೆರೆಕಂಡಿವೆ. ಆದರೆ ಗಳಿಕೆಯಲ್ಲಿ ಯಾವ ಚಿತ್ರವೂ ಹೇಳಿಕೊಳ್ಳುವಂತಹ ಸಾಧನೆ ಮಾಡಿಲ್ಲ.

'ಚಿತ್ರಮಂದಿರಗಳಿಗೆ ಜನ ಬರುವುದು ಅಕ್ಷರಶಃ ನಿಂತು ಹೋಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ತುಂಬ ನಿರಾಶಾದಾಯಕ. ಪ್ರೇಕ್ಷಕರು ಚಿತ್ರಮಂದಿರಗಳತ್ತ ಮುಖ ಮಾಡುತ್ತಿಲ್ಲ. ಜನರಿಗೆ ನೋಡಲೇ ಬೇಕು ಎನಿಸುವಂಥ ಚಿತ್ರಗಳು ಬರದೇ ಇರುವುದು ಇದಕ್ಕೆ ಕಾರಣವಿರಬಹುದು. ಮೊದಲಾರ್ಧದಲ್ಲಿ ನಿರೀಕ್ಷೆ ಮೂಡಿಸಿದ, ಕುತೂಹಲ ಹುಟ್ಟಿಸಿದ ಸಿನಿಮಾಗಳೂ ಕೂಡ ಕಡಿಮೆ. ಪ್ರಚಾರದ ಹಂತದಿಂದಲೇ ಜನರನ್ನು ಸೆಳೆಯಬೇಕು. ಚಿತ್ರದ ಕಂಟೆಂಟ್‌ಗಳ ಮೂಲಕ ಈ ಚಿತ್ರ ನೋಡಬೇಕೆಂದು ಜನರಲ್ಲಿ ಕುತೂಹಲ ಮೂಡಿಸಬೇಕು. 'ಯುದ್ಧಕಾಂಡ' ಮತ್ತು 'ನೋಡಿದವರು ಏನಂತಾರೆ' ಚಿತ್ರಗಳಿಗೆ ಸ್ವಲ್ಪ ಮಟ್ಟಿಗೆ ಜನ ಬಂದಿದ್ದಾರೆ. ಆದಾಗ್ಯೂ ಈ ಚಿತ್ರಗಳು ಹಿಟ್ ಎನ್ನಲು ಸಾಧ್ಯವಿಲ್ಲ' ಎನ್ನುತ್ತಾರೆ ಚಿತ್ರ ನಿರ್ಮಾಪಕ, ವಿತರಕ ರವಿಚಂದ್ರ ಎ.ಜೆ.

'ಮ್ಯಾಕ್ಸ್' ಯಶಸ್ಸಿನ ಬೆನ್ನಲ್ಲೇ ಜನವರಿ, ಫೆಬ್ರುವರಿ ಎರಡು ತಿಂಗಳಲ್ಲೇ ಸುಮಾರು 60 ಸಿನಿಮಾಗಳು ತೆರೆಕಂಡವು. ಈ ಅವಧಿಯಲ್ಲಿ ವಾರಕ್ಕೆ ಹನ್ನೆರಡು ಸಿನಿಮಾಗಳು ತೆರೆಗೆ ಬಂದಿದ್ದೂ ಇದೆ. ಆದರೆ ಯಾವ ಸಿನಿಮಾಗಳು ಯಶಸ್ಸು ಕಾಣದೆ ನಂತರದ ತಿಂಗಳಲ್ಲಿ ಚಿತ್ರ ಬಿಡುಗಡೆ ಪ್ರಮಾಣ ಕುಸಿಯುತ್ತ ಹೋಯಿತು. ಮಾರ್ಚ್ ಕೊನೆಯ ವಾರದಿಂದ ಸಿನಿಮಾ ಬಿಡುಗಡೆ ಪ್ರಮಾಣ ಗಣನೀಯವಾಗಿ ಇಳಿಕೆ ಕಂಡು, ಚಿತ್ರಮಂದಿರ ಕೊರತೆ ಸಮಸ್ಯೆ ಪರಿಹಾರವಾಯಿತು. ಆದಾಗ್ಯೂ, ವಾರಕ್ಕೆ ಎರಡೇ ಚಿತ್ರ ಬಿಡುಗಡೆಗೊಂಡರೂ ಜನ ಮಾತ್ರ ಚಿತ್ರಮಂದಿರಗಳತ್ತ ಬರುವುದಿಲ್ಲ ಎಂಬುದು ಸಾಬೀತಾಯಿತು.

'ಒಳ್ಳೆಯ ಸಿನಿಮಾಗಳಿಗೆ ಯಾರೂ ಬೆಂಬಲಕ್ಕೆ ಬರುವುದಿಲ್ಲ. ಸಾಧಾರಣ ಸಿನಿಮಾಗಳನ್ನು ಕೆಲವು ಸ್ಟಾರ್‌ಗಳು ಚಿತ್ರ ನೋಡದೆಯೇ ಪ್ರಚಾರ ಮಾಡುತ್ತಾರೆ ಅನ್ನಿಸುತ್ತದೆ. ನೂರು ದಿನ ಯಶಸ್ವಿ ಪ್ರದರ್ಶನ ಎಂಬ ಹುಸಿ ಪ್ರಚಾರದಿಂದ ಜನ ಬೇಸತ್ತಿದ್ದಾರೆ. ಇತರೆ ಭಾಷೆಯ ಸಿನಿಮಾಗಳು ಕನ್ನಡಕ್ಕೆ ಡಬ್ ಆಗಿ ಮೊಬೈಲ್‌ನಲ್ಲಿ ಸುಲಭವಾಗಿ ಸಿಗುತ್ತಿದೆ. ಹೀಗಾಗಿ ಜನ ಸುಲಭವಾಗಿ ಚಿತ್ರಮಂದಿರಗಳಿಗೆ ಬರುವುದಿಲ್ಲ. ಎಲ್ಲರೂ ಅವರವರ ಸಿನಿಮಾ ಬಂದಾಗ ಎದ್ದು ಕೂರುತ್ತಾರೆ. ಬೇರೆ ಉತ್ತಮ ಸಿನಿಮಾ ಬಂದಾಗ ಸುಮ್ಮನಾಗಿ ಬಿಡುತ್ತಾರೆ. ಇದರಿಂದಾಗಿ ಚಿತ್ರೋದ್ಯಮ ಸಂಕಷ್ಟದಲ್ಲಿದೆ' ಎಂದು ಅಭಿಪ್ರಾಯಪಡುತ್ತಾರೆ ನಿರ್ದೇಶಕ ಹಯವದನ.

ಸ್ಟಾರ್‌ಗಳ ಸಿನಿಮಾವಿಲ್ಲ: ಸ್ಟಾರ್‌ಗಳು ಹೆಚ್ಚು ಸಿನಿಮಾಗಳನ್ನು ಮಾಡಬೇಕೆಂಬ ಚಿತ್ರರಂಗದ ಕೂಗಿನ ನಡೆವೆಯೂ, ಈ ಆರು ತಿಂಗಳಲ್ಲಿ 'ಎ' ಶ್ರೇಣಿಯ ಯಾವ ಸ್ಟಾರ್ ನಟರ ಸಿನಿಮಾವೂ ತೆರೆಕಂಡಿಲ್ಲ. ಶರಣ್ ಅಭಿನಯದ 'ಛೂ ಮಂತರ್' ಮಾತ್ರ ತೆರೆಕಂಡಿದ್ದು. ಆದರೆ ಈ ಸಿನಿಮಾ ಪ್ರೇಕ್ಷಕರಲ್ಲಿ ಭರವಸೆ ಮೂಡಿಸಿ ಚಿತ್ರೋದ್ಯಮಕ್ಕೆ ಹೊಸ ಹುರುಪು ನೀಡುವಲ್ಲಿ ಯಶಸ್ವಿಯಾಗಲಿಲ್ಲ. ಶ್ರೀನಗರ ಕಿಟ್ಟಿ, ರಚಿತಾ ರಾಮ್ ಅಭಿನಯದ 'ಸಂಜು ವೆಡ್ಸ್ ಗೀತಾ–2' ಪ್ರೇಕ್ಷಕರಿಂದ ವ್ಯಾಪಕ ಟೀಕೆ ಎದುರಿಸಿತು. ಚಿಕ್ಕಣ್ಣ, ರಂಗಾಯಣ ರಘು ಮೊದಲಾದವರಿರುವ 'ಫಾರೆಸ್ಟ್' ಚಿತ್ರ ನೋಡಿದವರಿಂದ ಉತ್ತಮ ಪ್ರತಿಕ್ರಿಯೆ ಗಳಿಸಿದರೂ ಹೆಚ್ಚು ಪ್ರೇಕ್ಷಕರನ್ನು ಸೆಳೆಯಲಿಲ್ಲ. ಜನಪ್ರಿಯ ನಟರನ್ನು ಹೊಂದಿರುವ 'ರುದ್ರ ಗರುಡ ಪುರಾಣ', 'ಭುವನಂ ಗಗನಂ', 'ಸಿದ್ಲಿಂಗು–2', 'ರಾಕ್ಷಸ', ಯೋಗರಾಜ್ ಭಟ್ಟರ 'ಮನದ ಕಡಲು' ಚಿತ್ರಗಳು ವ್ಯಾಪಕ ಪ್ರಚಾರದ ನಡುವೆಯೂ ಗಳಿಕೆಯಲ್ಲಿ ಯಶಸ್ಸು ಕಾಣಲಿಲ್ಲ.

ಗಮನ ಸೆಳೆದವರು

ಈ ಆರು ತಿಂಗಳಲ್ಲಿ ತೆರೆಕಂಡ ಚಿತ್ರಗಳಲ್ಲಿ ಶೇಕಡಾ 70ರಷ್ಟು ಹೊಸಬರದ್ದು. 'ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು', 'ಅನಾಮಧೇಯ ಅಶೋಕ ಕುಮಾರ್' 'ಭಾವ ತೀರ ಯಾನ', 'ಅಪಾಯವಿದೆ ಎಚ್ಚರಿಕೆ', 'ಎಲ್ಲೋ ಜೋಗಪ್ಪ ನಿನ್ನರಮನೆ', 'ಅಜ್ಞಾತವಾಸಿ', 'ಪಪ್ಪಿ' ಚಿತ್ರಗಳು ಸ್ವಲ್ಪ ಸದ್ದು ಮಾಡಿದವು. ನವೀನ್ ಶಂಕರ್ ಅಭಿನಯದ 'ನೋಡಿದವರು ಏನಂತಾರೆ?' ಚಿತ್ರ 25 ದಿನಗಳನ್ನು ಪೂರೈಸಿ ಗಳಿಕೆಯಲ್ಲಿಯೂ ತಕ್ಕಮಟ್ಟಿನ ಯಶಸ್ಸು ಸಾಧಿಸಿತು. ಅಜಯ್ ರಾವ್ ನಟನೆಯ 'ಯುದ್ಧಕಾಂಡ' ವಿಭಿನ್ನವಾದ ಕಥೆಯೊಂದಿಗೆ ಒಂದಷ್ಟು ಪ್ರೇಕ್ಷಕರನ್ನು ಚಿತ್ರಮಂದಿರದತ್ತ ಕರೆತಂದಿತು.





ನಿರೀಕ್ಷಿತ ಸಿನಿಮಾಗಳು

ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸಿರುವ 'ಕಾಂತಾರ–1' ಅಕ್ಟೋಬರ್ 2ರಂದು ತೆರೆ ಕಾಣಲಿದೆ. ಧ್ರುವ ಸರ್ಜಾ ಅಭಿನಯದ 'ಕೆಡಿ', ಶಿವರಾಜ್‌ಕುಮಾರ್, ಉಪೇಂದ್ರ ನಟನೆಯ '45', ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ', ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಮುಂದಿನ ಆರು ತಿಂಗಳಲ್ಲಿ ತೆರೆ ಕಾಣಲಿರುವ ಚಿತ್ರಗಳು.

ಇವರು 'ಸರಳ ಸುಬ್ಬರಾವ್'

1970ರ ದಶಕದ ಕೌಟುಂಬಿಕ ಕಥಾಹಂದರ ಹೊಂದಿರುವ 'ಸರಳ ಸುಬ್ಬರಾವ್' ಚಿತ್ರದ 'ರಂಗೋಲಿ ಅಂಗಾಲಿನಲ್ಲಿ...' ಹಾಡು ಇತ್ತೀಚೆಗೆ ಬಿಡುಗಡೆಗೊಂಡಿದೆ. ಮಂಜು ಸ್ವರಾಜ್ ನಿರ್ದೇಶನದ ಚಿತ್ರವಿದು. ಅಜನೀಶ್ ಲೋಕನಾಥ್ ಸಂಗೀತ ನೀಡಿರುವ ಈ ಪ್ರೇಮಗೀತೆಗೆ ಕವಿರಾಜ್ ಸಾಹಿತ್ಯವಿದ್ದು, ಸಂಜಿತ್ ಹೆಗಡೆ ಹಾಡಿದ್ದಾರೆ. ರಿಯಾನ್ ಕ್ರಿಯೇಷನ್ಸ್ ಲಾಂಛನದಲ್ಲಿ ಲೋಹಿತ್ ನಂಜುಂಡಯ್ಯ ಚಿತ್ರವನ್ನು ನಿರ್ಮಿಸಿದ್ದಾರೆ.

'ಯುದ್ಧಕಾಂಡ' ಚಿತ್ರದ ಯಶಸ್ಸಿನ ಖುಷಿಯಲ್ಲಿರುವ ಅಜಯ್ ರಾವ್ ಮತ್ತೊಂದು ಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರೆಟ್ರೊ ಶೈಲಿಯ ನಾಯಕನಾಗಿ ಅವರು ಈ ಪ್ರೇಮಗೀತೆಯಲ್ಲಿ ಹೆಜ್ಜೆ ಹಾಕಿದ್ದಾರೆ. ಅಜಯ್ ರಾವ್‌ಗೆ ಮಿಶಾ ನಾರಂಗ್ ಜೋಡಿಯಾಗಿದ್ದಾರೆ.

'ಸರಳ ಮತ್ತು ಸುಬ್ಬರಾವ್ ನಮ್ಮ ಚಿತ್ರದ ನಾಯಕ, ನಾಯಕಿಯ ಹೆಸರು. ಇದು 1971ರಲ್ಲಿ ನಡೆಯುವ ಕಥೆ. ರೆಟ್ರೊ ಶೈಲಿಯ ಕಥೆ ಕೂಡ. ಈ ಕಥೆಗೆ ಅಜಯ್ ರಾವ್ ಅವರೇ ಸೂಕ್ತ ನಾಯಕ ಎನಿಸಿತು. ಇನ್ನು ನಮ್ಮ ಚಿತ್ರದ ನಾಯಕಿ ಪಂಜಾಬಿನವರು. ಕನ್ನಡ ಅರ್ಥ ಮಾಡಿಕೊಂಡು ಅಭಿನಯಿಸಿದ್ದು ನಿಜಕ್ಕೂ ಖುಷಿಯ ವಿಚಾರ. ಒಂದು ಸುಂದರ ಸಾಂಸಾರಿಕ ಚಿತ್ರ. ಜತೆಗೆ ಮನರಂಜನೆಯಿದೆ' ಎಂದರು ನಿರ್ದೇಶಕರು.

ಹಾಡಿನಲ್ಲಿ ಸರಳ ಮತ್ತು ಸುಬ್ಬರಾವ್ ಜೋಡಿಯ ಪ್ರೇಮಕಥೆಯನ್ನು ಹೇಳಲಾಗಿದೆ. ಹಾಡಿನ ದೃಶ್ಯಗಳು ನವಿರಾದ ಪ್ರೇಮಕಥೆಯ ಸುಳಿವು ನೀಡುತ್ತಿವೆ. ಜೋಡಿ ಭಿನ್ನ ಗೆಟಪ್‌ಗಳಲ್ಲಿ ಕಾಣಿಸಿಕೊಂಡಿದ್ದು ಹಳೆ ಕನ್ನಡ ಸಿನಿಮಾಗಳ ಜನಪ್ರಿಯ ಜೋಡಿಗಳನ್ನು ನೆನಪಿಸುತ್ತಿವೆ.

'ಈ ಚಿತ್ರದಲ್ಲಿ ನಟಿಸಿರುವುದು ನನ್ನ ವೈಯಕ್ತಿಕ ಹಾಗೂ ವೃತ್ತಿಜೀವನದ ಹೆಮ್ಮೆ. ನಾನು ಚಿಕ್ಕವಯಸ್ಸಿನಲ್ಲಿ ಸೂಪರ್ ಮ್ಯಾನ್ ರೀತಿಯ ಚಿತ್ರಗಳನ್ನು ಹೆಚ್ಚು ನೋಡುತ್ತಿದ್ದೆ. ನಾನೇ ಸೂಪರ್ ಹೀರೊ ಅಂದುಕೊಳ್ಳುತ್ತಿದೆ. ಈ ಚಿತ್ರದಲ್ಲೂ ನಾನು ಸೂಪರ್ ಹೀರೊ. ರೆಟ್ರೊ ಶೈಲಿಯ ಉಡುಗೆಗಳನ್ನು ಹಾಕಿದಾಗ ನಾನು ನನ್ನ ಪಾತ್ರದಲ್ಲಿ ರಾಜಕುಮಾರ್, ವಿಷ್ಣುವರ್ಧನ್, ಅಂಬರೀಶ್, ಅನಂತನಾಗ್ ಅವರನ್ನು ನೋಡಿದೆ' ಎಂದರು ಅಜಯ್ ರಾವ್.

'ಚಿತ್ರದಲ್ಲಿ ಈ ಗೀತೆ ಸೇರಿದಂತೆ ಐದು ಹಾಡುಗಳಿದವೆ. ಒಂದಕ್ಕಿಂತ ಒಂದು ಭಿನ್ನವಾಗಿವೆ. 1970–80ರ ದಶಕದ ಚಿತ್ರರಂಗವನ್ನು ಮತ್ತೆ ನೆನಪಿಸುವಂಥ ಸಂಗೀತ ನೀಡಿರುವುದು ಖುಷಿ ತಂದಿದೆ' ಎಂದರು ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್.

ರಂಗಾಯಣ ರಘು, ವೀಣಾ ಸುಂದರ್, ರಘು ರಾಮನಕೊಪ್ಪ, ವಿಜಯ್ ಚಂಡೂರ್ ಮುಂತಾದವರು ಚಿತ್ರದಲ್ಲಿದ್ದಾರೆ. ಪ್ರದೀಪ್ ಪದ್ಮಕುಮಾರ್ ಛಾಯಾಚಿತ್ರಗ್ರಹಣ, ಬಸವರಾಜ್ ಅರಸ್ ಸಂಕಲನವಿದೆ.

ಮೂರು ಚಿತ್ರಗಳು ತೆರೆಗೆ

ಮೌನ ಗುಡ್ಡೆಮನೆ

ಕುಲದಲ್ಲಿ ಕೀಳ್ಯಾವುದೋ

ಮಡೆನೂರ್ ಮನು ಅಭಿನಯದ 'ಕುಲದಲ್ಲಿ ಕೀಳ್ಯಾವುದೋ' ಚಿತ್ರ ಇಂದು(ಮೇ 23) ತೆರೆ ಕಾಣುತ್ತಿದೆ. ಯೋಗರಾಜ್ ಸಿನಿಮಾಸ್ ಹಾಗೂ ಪರ್ಲ್ ಸಿನಿ ಕ್ರಿಯೇಷನ್ಸ್ ನಿರ್ಮಾಣದ ಈ ಚಿತ್ರಕ್ಕೆ ಕೆ.ರಾಮನಾರಾಯಣ್ ನಿರ್ದೇಶನವಿದೆ. ಧಾರಾವಾಹಿ ನಟಿ ಮೌನ ಗುಡ್ಡೆಮನೆ ಚಿತ್ರದ ನಾಯಕಿ.

'ಒಂದೊಳ್ಳೆ ಸಿನಿಮಾ. ಪ್ರಚಾರವಿಲ್ಲದೆ ಸೋಲಬಾರದು. ಹೀಗಾಗಿ ವಿಭಿನ್ನ ರೀತಿಯಲ್ಲಿ ಸಾಕಷ್ಟು ಪ್ರಚಾರ ಮಾಡಿದ್ದೇವೆ. ಪ್ರೇಮಕಥೆಯ ಚಿತ್ರವಿದು. ನಮ್ಮವರಿಗಾಗಿ ನಾವು ಹೋರಾಡುತ್ತೇವೆ ಎಂದು ತೋರಿಸಿದ್ದೇವೆ. ಇಲ್ಲಿನ ಪಾತ್ರಗಳು ಮನಸಿಗೆ ಹತ್ತಿರವಾಗುತ್ತವೆ' ಎಂದಿದ್ದಾರೆ ಮಡೆನೂರ್ ಮನು.

ಯೋಗರಾಜ್ ಭಟ್ ಹಾಗೂ ಇಸ್ಲಾಮುದ್ದೀನ್ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಮನೋಮೂರ್ತಿ ಸಂಗೀತವಿದ್ದು, ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ ಹಾಗೂ ರಾಮ್ ನಾರಾಯಣ್ ಸಾಹಿತ್ಯವಿದೆ. ಮನು ಛಾಯಾಚಿತ್ರಗ್ರಹಣ, ದೀಪಕ್ ಸಂಕಲನ ಈ ಚಿತ್ರಕ್ಕಿದೆ.

ರಂಗಾಯಣ ರಘು, ಶರತ್ ಲೋಹಿತಾಶ್ವ, ಸೋನಲ್ ಮೊಂತೆರೊ, ತಬಲ ನಾಣಿ, ಹರೀಶ್ ರಾಜ್, ಕರಿ ಸುಬ್ಬು ಡ್ರ್ಯಾಗನ್ ಮಂಜು ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಕಿರಿಕ್

ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರವಿದು. ನಾಗತಿಹಳ್ಳಿ ಗಂಗಾಧರ ಗೌಡ ನಿರ್ದೇಶನದ ಚಿತ್ರ ಪ್ರೇಮಕಥೆಯನ್ನು ಹೊಂದಿದೆ.

'ಗ್ಯಾರೇಜಿನಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುವ ನಾಯಕ ಸದಾ ಕಿರಿಕ್ ಮಾಡುವ ಇಬ್ಬರು ನಾಯಕಿಯರ ನಡುವೆ ಸಿಲುಕಿಕೊಳ್ಳುತ್ತಾನೆ. ಆಗ ಚೇಷ್ಟೆಗಳಿಂದ ಹುಟ್ಟಿದ ನಾಯಕ ಮತ್ತು ನಾಯಕಿ ನಡುವಿನ ಪ್ರೀತಿ ಯಾವ ಹಂತ ತಲುಪುತ್ತದೆ ಎಂಬುದೇ ಚಿತ್ರಕಥೆ' ಎನ್ನುತ್ತಾರೆ ಗಂಗಾಧರ ಗೌಡ.

ರವಿ ಶೆಟ್ಟಿ, ಪೂಜಾ ರಾಮಚಂದ್ರ ಪ್ರಮುಖ ಪಾತ್ರಗಳಲ್ಲಿದ್ದಾರೆ. ಈ ಚಿತ್ರವನ್ನು ನಾಗರಾಜ್ ಎಸ್. ನಿರ್ಮಿಸಿದ್ದಾರೆ. ಆರ್.ಬಿ. ಭರತ್ ಸಂಗೀತ ಸಂಯೋಜನೆ, ಎಸ್.ಕೀರ್ತಿವರ್ಧನ್ ಛಾಯಾಚಿತ್ರಗ್ರಹಣ, ಭಾರ್ಗವ್ ಕೆ.ಎಂ. ಸಂಕಲನ ಚಿತ್ರಕ್ಕಿದೆ. ಬಲ ರಾಜವಾಡಿ, ಹೊನ್ನವಳ್ಳಿ ಕೃಷ್ಣ, ಕುರಿ ರಂಗ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಮಂಕುತಿಮ್ಮನ ಕಗ್ಗ

ಹೆಸರಾಂತ ಸಾಹಿತಿ ಡಿ.ವಿ.ಗುಂಡಪ್ಪ ಅವರ ಜನಪ್ರಿಯ ಕೃತಿ 'ಮಂಕುತಿಮ್ಮನ ಕಗ್ಗ'ವನ್ನೇ ಶೀರ್ಷಿಕೆಯಾಗಿಸಿಕೊಂಡಿರುವ ಚಿತ್ರವಿದು. ಡಿಜಿವಿಯವರ ಬಾಲ್ಯದ ಕಥೆಯೇ ಚಿತ್ರವಾಗಿದೆ. ರಾಜ ರವಿಶಂಕರ್ ಚಿತ್ರದ ನಿರ್ದೇಶಕರು. ಅವರು ಈ ಹಿಂದೆ ಉಪೇಂದ್ರ ನಟನೆಯ 'ಶ್ರೀಮತಿ' ಸೇರಿದಂತೆ ಸಾಕಷ್ಟು ಚಿತ್ರಗಳನ್ನು ನಿರ್ದೇಶಿಸಿದ್ದಾರೆ.

'ಈ ಚಿತ್ರದಲ್ಲಿ ಡಿವಿಜಿ ಅವರ ಬಾಲ್ಯದ ದಿನಗಳ ಬಗ್ಗೆ ತೋರಿಸಲಾಗಿದೆ. ಡಿವಿಜಿ ಅವರಿಗೆ ಮೂಡಲೂರಿನ ಶಾಲೆಯ ಮೇಷ್ಟ್ರು ತಿಮ್ಮಗುರು ಹೇಗೆ ಸ್ಫೂರ್ತಿಯಾಗುತ್ತಾರೆ? ಮಂಕುತಿಮ್ಮನ ಕಗ್ಗ ಹೇಗೆ ರಚನೆಯಾಗುತ್ತದೆ? ಎಂಬಿತ್ಯಾದಿ ವಿಷಯಗಳನ್ನು ಹೇಳಿದ್ದೇವೆ. ತಿಮ್ಮಣ್ಣ ಮೇಷ್ಟ್ರು ಪಾತ್ರದಲ್ಲಿ ಹಿರಿಯ ನಟ ರಾಮಕೃಷ್ಣ ಕಾಣಿಸಿಕೊಂಡಿದ್ದಾರೆ' ಎಂದಿದ್ದಾರೆ ನಿರ್ದೇಶಕರು.

ಎನ್.ಎ. ಶಿವಕುಮಾರ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಮಾಸ್ಟರ್ ರಣವೀರ್, ಭವ್ಯಶ್ರೀ ರೈ, ರವಿನಾರಾಯಣ್, ಲಕ್ಷ್ಮೀ ನಾಡಗೌಡ, ಸಾಯಿಪ್ರಕಾಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಎ.ಟಿ.ರವೀಶ್ ಸಂಗೀತ ನಿರ್ದೇಶನ, ಸಿ.ನಾರಾಯಣ್ ಛಾಯಾಚಿತ್ರಗ್ರಹಣ ಹಾಗೂ ಆರ್. ಡಿ.ರವಿ ಸಂಕಲನ ಈ ಚಿತ್ರಕ್ಕಿದೆ.

ರಾಮಕೃಷ್ಣ

ಗೋಪಾಲಕೃಷ್ಣ ದೇಶಪಾಂಡೆ, ಪೃಥ್ವಿ ಅಂಬರ್, ರಾಜೇಶ್ ನಟರಂಗ

'ಕೊತ್ತಲವಾಡಿ'ಗೆ ಶರಣ್ ಸಾಥ್

ನಟ ಯಶ್ ಅವರ ತಾಯಿ ಪುಷ್ಪ ಅರುಣ್ ಕುಮಾರ್ ನಿರ್ಮಿಸಿರುವ 'ಕೊತ್ತಲವಾಡಿ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶರಣ್ ಟೀಸರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಚಿತ್ರಕ್ಕೆ ಶ್ರೀರಾಜ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಒಂದು ಹೊಸ ಪಯಣದ ವೈಬ್ ಇಲ್ಲಿ ಕಾಣಿಸುತ್ತಿದೆ. ಈ ಚಿತ್ರಕ್ಕೆ ಕೆಲಸ ಮಾಡಿರುವವರಲ್ಲಿ ಕುತೂಹಲ, ಸಕಾರಾತ್ಮಕ ಶಕ್ತಿ, ಭಕ್ತಿ, ಆತ್ಮೀಯತೆ, ಪ್ರೀತಿ ಕಾಣುತ್ತಿದೆ. ಇಂಥ ತಂಡವಿದ್ದಲ್ಲಿ ಯಶಸ್ಸು ತಾನಾಗಿಯೇ ಬರುತ್ತದೆ' ಎಂದರು ಶರಣ್.

ನಟ ಪೃಥ್ವಿ ಅಂಬರ್‌ಗೆ ನಟಿ ಕಾವ್ಯ ಜೋಡಿಯಾಗಿದ್ದಾರೆ. 'ಕೆಲಸ ಮಾತನಾಡಬೇಕು. ನಾವು ಮಾತನಾಡಬಾರದು. ಯಶ್ ಮನೆ ಸಿನಿಮಾ ಎಂದರೆ ಇಡೀ ದೇಶ ನೋಡುತ್ತದೆ. ಹೀಗಾಗಿ ಅದಕ್ಕೆ ತಕ್ಕ ರೀತಿ ಮಾಡಿ ಎಂದು ನಿರ್ದೇಶಕರಿಗೆ ಸ್ವತಂತ್ರ ನೀಡಿರುವೆ' ಎಂದರು ನಿರ್ಮಾಪಕರು.

'ಕೆವಿ ರಾಜು, ರವಿಶ್ರೀವತ್ಸ ಜತೆ ಕೆಲಸ ಮಾಡಿರುವೆ. ಸ್ವತಂತ್ರ ನಿರ್ದೇಶಕನಾಗಿ ಮೊದಲ ಸಿನಿಮಾ. ಹಳ್ಳಿಯ ಸೊಗಡಿರುವ ಕಥೆ. ನಾಯಕ ಹಳ್ಳಿಯ ಮುಗ್ಧ ಹುಡುಗ. ಆದರೆ ತುಂಬ ಬಲಶಾಲಿ. ಒಂದು ಊರಿನಲ್ಲಿ ನಡೆಯುವ ಹೋರಾಟದ ಕಥೆ. ಚಿತ್ರೀಕರಣ ಮುಗಿದು ಪೋಸ್ಟ್‌ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ' ಎಂದರು ನಿರ್ದೇಶಕರು.

ಗೋಪಾಲಕೃಷ್ಣ ದೇಶಪಾಂಡೆ, ರಾಜೇಶ್ ನಟರಂಗ ಮುಂತಾದವರು ಚಿತ್ರದಲ್ಲಿದ್ದಾರೆ. ವಿಕಾಸ್ ವಸಿಷ್ಠ ಸಂಗೀತ, ಅಭಿನಂದನ್ ಕಶ್ಯಪ್ ಹಿನ್ನೆಲೆ ಸಂಗೀತ, ಕಾರ್ತಿಕ್ ಎಸ್ ಛಾಯಾಚಿತ್ರಗ್ರಹಣ, ರಾಮಿಸೆಟ್ಟಿ ಪವನ್ ಸಂಕಲನ, ರಘು ನಿಡುವಳ್ಳಿ ಸಂಭಾಷಣೆ ಈ ಚಿತ್ರಕ್ಕಿದೆ.

ಸೀಟ್ ಎಡ್ಜ್‌ನ ಹಾಡು

ಸಿದ್ದು ಮೂಲಿಮನಿ ಅಭಿನಯದ 'ಸೀಟ್ ಎಡ್ಜ್' ಚಿತ್ರದ 'ಅಂಗೋ ಇಂಗೋ...' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಯುವ ನಿರ್ದೇಶಕ ಚೇತನ್ ಶೆಟ್ಟಿ ನಿರ್ದೇಶನವಿದೆ. ಇವರು ಈ ಹಿಂದೆ ಕೆಲ ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದರು.

ಲಕ್ಷ್ಮಿ ರಮೇಶ್ ಸಾಹಿತ್ಯವಿರುವ ಈ ಹಾಡಿಗೆ ಗಾಯಕ ಟಿಪ್ಪು ದನಿಯಾಗಿದ್ದಾರೆ. 'ಡಾರ್ಕ್ ಕಾಮಿಡಿ ಜತೆಗೆ ಹಾರರ್-ಥ್ರಿಲ್ಲರ್ ಶೈಲಿಯಲ್ಲಿ ಸಿನಿಮಾ. ಯೂಟ್ಯೂಬ್ ವ್ಲಾಗರ್ ಆಗಿರುವ ಹುಡುಗನೊಬ್ಬನ ಘೋಸ್ಟ್ ಹಂಟಿಂಗ್ ಸಾಹಸ ಮಾಡುತ್ತಾನೆ. ಅದರಲ್ಲಿ ಆತ ಏನೇನು ಸಮಸ್ಯೆಗಳನ್ನು ಎದುರಿಸುತ್ತಾನೆ ಎಂಬುದೇ ಚಿತ್ರಕಥೆ. ಬೆಂಗಳೂರು, ಮೈಸೂರು, ಶಿವಮೊಗ್ಗ ಸುತ್ತಮುತ್ತ 45 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ' ಎಂದಿದೆ ಚಿತ್ರತಂಡ.

ಎನ್.ಆರ್.ಸಿನಿಮಾ ಪ್ರೊಡಕ್ಷನ್ಸ್ ಬ್ಯಾನರಿನಲ್ಲಿ ಗಿರಿಧರ ಟಿ. ವಸಂತಪುರ ಮತ್ತು ಸುಜಾತ ಗಿರಿಧರ ಬಂಡವಾಳ ಹೂಡಿದ್ದಾರೆ. 'ಅಜ್ಞಾತವಾಸಿ' ಚಿತ್ರದಲ್ಲಿ ಗಮನ ಸೆಳೆದಿದ್ದ ಸಿದ್ದು ಮೂಲಿಮನಿ ಪೂರ್ಣಪ್ರಮಾಣದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಯುವ ನಟಿ ರವೀಕ್ಷಾ ಶೆಟ್ಟಿ ನಾಯಕಿಯಾಗಿ ಇವರಿಗೆ ಜೋಡಿಯಾಗಿದ್ದಾರೆ. ಉಳಿದಂತೆ ರಾಘು ರಾಮನಕೊಪ್ಪ, ಗಿರೀಶ್ ಶಿವಣ್ಣ, ಮಿಮಿಕ್ರಿ ಗೋಪಿ, ಲಕ್ಷ್ಮಿ ಸಿದ್ದಯ್ಯ ಮುಂತಾದವರು ಇತರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಹಾಡುಗಳಿಗೆ ಆಕಾಶ್ ಪರ್ವ ಸಂಗೀತ ಸಂಯೋಜಿಸಿದ್ದು, ಕೆಲದಿನಗಳ ಹಿಂದಷ್ಟೇ ಈ ಚಿತ್ರದ ಮೊದಲ ಹಾಡು 'ಸಾರಿ ಹೇಳುವೆ ಜಗಕ್ಕೆ...' ಬಿಡುಗಡೆಯಾಗಿತ್ತು. ಸಿದ್ದು ಕೊಡಿಪುರ ಸಾಹಿತ್ಯದ ರೋಮ್ಯಾಂಟಿಕ್ ಗೀತೆಯನ್ನು ಅರ್ಮನ್ ಮಲ್ಲಿಕ್ ಹಾಡಿದ್ದರು.

ಚಿತ್ರಕ್ಕೆ ದೀಪಕ್ ಕುಮಾರ್ ಜೆ.ಕೆ ಛಾಯಾಚಿತ್ರಗ್ರಹಣ, ನಾಗೇಂದ್ರ ಉಜ್ಜನಿ ಸಂಕಲನವಿದೆ.

ರಾಘು ರಾಮನಕೊಪ್ಪ, ಸಿದ್ದು ಮೂಲಿಮನಿ, ರವೀಕ್ಷಾ ಶೆಟ್ಟಿ

'ಹಲೋ ಸರ್' ಎಂದ ನಾರಾಯಣ್

ನಿರ್ದೇಶಕ ಎಸ್.ನಾರಾಯಣ್ ಮತ್ತೆ ನಟನೆಗಿಳಿದಿದ್ದಾರೆ. ಅವರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ 'ಹಲೋ ಸರ್' ಚಿತ್ರ ಬಿಡುಗಡೆ ಸಿದ್ಧವಿದೆ. ನಾರಾಯಣ್ ಈ ಹಿಂದೆ 'ಕುರಿಗಳು ಸಾರ್ ಕುರಿಗಳು' ಸೇರಿದಂತೆ ಕೆಲ ಚಿತ್ರಗಳಲ್ಲಿ ಅವರು ಬಣ್ಣ ಹಚ್ಚಿದ್ದರು. ಕೆ. ಶಂಕರ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಸಮಾಜದಲ್ಲಿ ಅಪರಾಧ ಕೃತ್ಯ ಎಸಗಿ, ಹಣ ಬಲ, ಅಧಿಕಾರ ಬಳಸಿಕೊಳ್ಳುವವರ ವಿರುದ್ಧ ಹೋರಾಡುವ ಕಥೆ. ಪ್ರಾಮಾಣಿಕರು ಹಾಗೂ ರಾಜಕಾರಣಿಗಳ ನಡುವಿನ ಸಮರವಿದು. ಸಮಾಜದ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿರುವವರ ವಿರುದ್ಧ ಯುವಕನೊಬ್ಬ ಹೋರಾಡುತ್ತಾನೆ. ಯಾಕೆ ಆ ಹೋರಾಟ? ಅದು ಎಲ್ಲಿಗೆ ತಲುಪತ್ತದೆ ಎಂಬುದೇ ಚಿತ್ರಕಥೆ. ಮಂಗಳೂರು, ಮಂಡ್ಯ, ಬೆಂಗಳೂರು ಮತ್ತು ಹೈದರಾಬಾದ್ ಸುತ್ತಮುತ್ತ ಸುಮಾರು 40 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಚಿತ್ರವೀಗ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಆಗಸ್ಟ್ ತಿಂಗಳಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಯೋಜನೆಯಿದೆ' ಎನ್ನುತ್ತಾರೆ ನಿರ್ದೇಶಕರು.

ಎಸ್.ನಾರಾಯಣ್, ಪ್ರಶಾಂತ್, ರಾಜಬಾಲ

ಕನ್ನಡ, ತೆಲುಗು, ತಮಿಳಿನಲ್ಲಿ ಚಿತ್ರ ಸಿದ್ಧಗೊಳ್ಳುತ್ತಿದೆ. ಚಿತ್ರದ ನಾಯಕನಾಗಿ ರಾಜಬಾಲ ನಟಿಸಿದ್ದಾರೆ. ಸ್ವಾತಿ ಲಿಂಗರಾಜ್ ನಾಯಕಿ. ಎಲ್. ಮಂಜುನಾಥ್, ಎಚ್.ಪಿ.ಮಹೇಶ್ ಮತ್ತು ವೆಂಕಟೇಶ್ ಬಂಡವಾಳ ಹೂಡಿದ್ದಾರೆ. ಎಂ.ಎನ್. ಕೃಪಾಕರ್ ಸಂಗೀತ, ಚಂದ್ರು ಸೊಂಡೇಕೊಪ್ಪ, ಸೂರ್ಯೋದಯ ಅವರ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ. ಕೆ.ಶಿವಣ್ಣ, ಕಿಲ್ಲರ್ ವೆಂಕಟೇಶ್, ರಮಾನಂದ್, ಬೇಬಿ ಎಸ್ ಪವಿತ್ರ ತಾರಾಗಣದಲ್ಲಿದ್ದಾರೆ.

ಯುಎಪಿಎ: ಮಾಜಿ ನಕ್ಸಲರ ಖುಲಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಕ್ಕೆ ಈಚೆಗೆ ಶರಣಾಗಿದ್ದ ನಕ್ಸಲ್ ಮುಖಂಡರಾದ ಮುಂಡಗಾರು ಲತಾ, ಕೋಟೆಹೊಂಡ ರವೀಂದ್ರ, ವನಜಾಕ್ಷಿ ಮತ್ತು ಸಾವಿತ್ರಿ ಅವರ ವಿರುದ್ಧ ದಾಖಲಾಗಿದ್ದ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಪ್ರಕರಣಗಳಲ್ಲಿ, ಅವರನ್ನು ಖುಲಾಸೆ ಮಾಡಿ ಬೆಂಗಳೂರಿನ ವಿಶೇಷ ನ್ಯಾಯಾಲಯವು ಗುರುವಾರ ತೀರ್ಪು ನೀಡಿದೆ.

ಶೃಂಗೇರಿಯ ಬುಕ್ಕಡಿಬೈಲು ಬಸ್ ನಿಲ್ದಾಣದ ಅಂಗಡಿಯೊಂದರ ಗೋಡೆ ಮೇಲೆ ಲತಾ, ರವೀಂದ್ರ ಮತ್ತು ಸಾವಿತ್ರಿ ಅವರು ಕರಪತ್ರಗಳನ್ನು ಅಂಟಿಸಿ, ಸರ್ಕಾರಿ ವಿರೋಧಿ ಘೋಷಣೆ ಕೂಗಿದ್ದರು ಎಂದು ಶೃಂಗೇರಿ ಪೊಲೀಸ್ ಠಾಣೆಯಲ್ಲಿ, 2009ರಲ್ಲಿ ಯುಎಪಿಎ ಪ್ರಕರಣ ದಾಖಲಿಸಲಾಗಿತ್ತು.

2005ರಲ್ಲಿ ಲತಾ, ರವೀಂದ್ರ ಮತ್ತು ವನಜಾಕ್ಷಿ ಅವರು ಶೃಂಗೇರಿ ತಾಲ್ಲೂಕಿನ ನೆಮ್ಮಾರಿನಲ್ಲಿ ಲೇವಾದೇವಿ ವ್ಯವಹಾರ ನಡೆಸುತ್ತಿದ್ದ ಗಂಗಾಧರ ಶೆಟ್ಟಿ ಎಂಬುವವರ ಬೈಕ್ ಸುಟ್ಟಿದ್ದರು ಮತ್ತು ಮಾವೋವಾದಿ ಪರ ಘೋಷಣೆ ಕೂಗಿದ್ದರು ಎಂಬ ಆರೋಪದಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಮುಂಡಗಾರು ಲತಾ ಮತ್ತು ಇತರರು 2018ರಲ್ಲಿ ಥಣಿಕೋಡು ಅರಣ್ಯ ಚೆಕ್‌ಪೋಸ್ಟ್‌ನಲ್ಲಿ ಸ್ಫೋಟಕ ಎಸೆದು ದಾಖಲೆಗಳನ್ನು ಸುಟ್ಟಿದ್ದರು. ₹34,000 ನಷ್ಟ ಉಂಟು ಮಾಡಿದ್ದರು ಎಂದು ಮತ್ತೊಂದು ಯುಎಪಿಎ ಪ್ರಕರಣ ದಾಖಲಿಸಲಾಗಿತ್ತು.

ಬೆಂಗಳೂರಿನ, ಯುಎಪಿಎ ಪ್ರಕರಣ ವಿಶೇಷ ನ್ಯಾಯಾಲಯವು ಈ ಪ್ರಕರಣಗಳ ವಿಚಾರಣೆ ನಡೆಸಿತ್ತು. 'ಈ ಎಲ್ಲ ಪ್ರಕರಣಗಳಲ್ಲಿ, ಈ ನಾಲ್ವರೇ ಕೃತ್ಯ ಎಸಗಿದ್ದಾರೆ ಎಂಬುದನ್ನು ಸಾಬೀತು ಮಾಡುವಲ್ಲಿ ತನಿಖಾಧಿಕಾರಿಗಳು ವಿಫಲರಾಗಿದ್ದಾರೆ. ಹೀಗಾಗಿ ಇವರ ವಿರುದ್ಧ ಯುಎಪಿಎ ಮತ್ತು ಭಾರತೀಯ ದಂಡ ಸಂಹಿತೆಯ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳನ್ನು ವಜಾ ಮಾಡಬಹುದಾಗಿದೆ' ಎಂದು ನ್ಯಾಯಾಧೀಶ ಸಿ.ಎಂ. ಗಂಗಾಧರ ಅವರು ತೀರ್ಪು ನೀಡಿದ್ದಾರೆ.

ಪ್ರಿಯಾಂಕ್ ಖರ್ಗೆ ಕುಮ್ಮಕ್ಕಿನಿಂದಲೇ ದಾಳಿ: ಛಲವಾದಿ

ಬೆಂಗಳೂರು: 'ಚಿತ್ತಾಪುರದ ಸರ್ಕಾರಿ ಅತಿಥಿ ಗೃಹದಲ್ಲಿ ನನ್ನನ್ನು ಅಕ್ರಮವಾಗಿ ಬಂಧನದಲ್ಲಿ ಇರಿಸಿದ ಕೃತ್ಯದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ನೇರ ಭಾಗಿಯಾಗಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ರಾಜ್ಯಪಾಲರಿಗೆ ದೂರು ನೀಡಿದ್ದಾರೆ.

ಘಟನೆ ಕುರಿತು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮೂರು ಪ್ರತ್ಯೇಕ ಪತ್ರ ಬರೆದಿರುವ ಅವರು, 'ಈ ಬಗ್ಗೆ ಉನ್ನತಮಟ್ಟದ ಮತ್ತು ಸ್ವತಂತ್ರ್ಯ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

'ಗೂಂಡಾಗಿರಿ ನಡೆಸಿದವರ ವಿರುದ್ಧ ಕ್ರಮ ತೆಗೆದು ಕೊಳ್ಳಬೇಕು. ಕರ್ತವ್ಯಲೋಪ ಎಸಗಿದ ಅಧಿಕಾರಿ, ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು. ನನಗೆ ನೀಡಿರುವ ಭದ್ರತೆಯನ್ನು ಕೂಡಲೇ ಹೆಚ್ಚಿಸಬೇಕು. ಈ ಸಂಬಂಧ ಗೃಹ ಇಲಾಖೆಗೆ ನಿರ್ದೇಶನ ನೀಡಿ' ಎಂದು ಕೋರಿದ್ದಾರೆ.

ಎಲ್ಲ ಎಲ್ಲೆ ಮೀರಿದ ಇ.ಡಿ: ಸುಪ್ರೀಂ ಕೋರ್ಟ್

ಒಂದನೇ ಪುಟದಿಂದ...

2014ರ ನಂತರದಲ್ಲಿ ಮದ್ಯದ ಅಂಗಡಿಗೆ ಪರವಾನಗಿ ನೀಡುವಲ್ಲಿ ತಪ್ಪು ಮಾಡಿರುವ ಆರೋಪ ಹೊತ್ತವರ ವಿರುದ್ಧ ಒಟ್ಟು 41 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಆದರೆ ಈಗ ಮಧ್ಯಪ್ರವೇಶ ಮಾಡಿರುವ ಇ.ಡಿ., ಟಾಸ್ಮಾಕ್ ಅನ್ನು ಗುರಿಯಾಗಿಸಿ ದಾಳಿ ನಡೆಸಿದೆ ಎಂದು ಸಿಬಲ್ ದೂರಿದರು.

'ಸರ್ಕಾರವು ನಡೆಸುತ್ತಿರುವ ಟಾಸ್ಮಾಕ್ ಮೇಲೆ ನೀವು ದಾಳಿ ನಡೆಸಿದ್ದು ಹೇಗೆ' ಎಂದು ಪೀಠವು ಪ್ರಶ್ನಿಸಿತು.

ಟಾಸ್ಮಾಕ್‌ಗೆ ಸೇರಿದ ಸ್ಥಳಗಳಲ್ಲಿ ಇ.ಡಿ ದಾಳಿ ನಡೆಸಿರುವುದನ್ನು ಪ್ರಶ್ನಿಸಿ ತಮಿಳುನಾಡಿನ ಡಿಎಂಕೆ ನೇತೃತ್ವದ ಸರ್ಕಾರ ಹಾಗೂ ಟಾಸ್ಮಾಕ್ ಸಂಸ್ಥೆ ಅರ್ಜಿ ಸಲ್ಲಿಸಿವೆ. ಇ.ಡಿ. ಕ್ರಮವನ್ನು ಎತ್ತಿಹಿಡಿದು ಮದ್ರಾಸ್ ಹೈಕೋರ್ಟ್ ಏಪ್ರಿಲ್ 23ರಂದು ನೀಡಿದ ಆದೇಶವನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ. ಆದೇಶದಿಂದಾಗಿ ಸಾಂವಿಧಾನಿಕ ಹಕ್ಕುಗಳು ಮತ್ತು ಒಕ್ಕೂಟ ವ್ಯವಸ್ಥೆಯನ್ನು ಉಲ್ಲಂಘಿಸಿದಂತಾಗಿದೆ ಎಂದು ಅರ್ಜಿಯು ದೂರಿದೆ.

ನಟಿ ತಮನ್ನಾ ಕೆಎಸ್‌ಡಿಎಲ್ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ತಮನ್ನಾ ಭಾಟಿಯಾ ಅವರಿಗೆ ಎರಡು ವರ್ಷ ಎರಡು ದಿನಕ್ಕೆ ₹6.20 ಕೋಟಿ ಸಂಭಾವನೆ ನೀಡಲು ನಿರ್ಧರಿಸಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮವು (ಕೆಎಸ್‌ಡಿಎಲ್) ತನ್ನ ಉತ್ಪನ್ನಗಳ ಪ್ರಚಾರ ರಾಯಭಾರಿಯಾಗಿ ನೇಮಿಸಿದೆ.

ಈ ಕುರಿತು ಮಾತನಾಡಿದ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, 'ಮೈಸೂರು ಸ್ಯಾಂಡಲ್ ಸೋಪ್ ಸೇರಿ ನಿಗಮದ ಉತ್ಪನ್ನಗಳು ಕರ್ನಾಟಕದ ಮನೆಮಾತಾಗಿವೆ. ಇವುಗಳನ್ನು ಜಾಗತಿಕ ಮಟ್ಟಕ್ಕೆ ಪರಿಚಯಿಸಲು ತಮನ್ನಾ ಅವರನ್ನು ಪ್ರಚಾರ ರಾಯಭಾರಿಯಾಗಿ ನೇಮಿಸಲಾಗುತ್ತಿದೆ. ಅವರ ವರ್ಚಸ್ಸು, ಡಿಜಿಟಲ್ ಪ್ರಸ್ತುತಿ ಮತ್ತು ಯುವಜನರ ಜತೆಗಿನ ಸಂಪರ್ಕ ಪರಿಗಣಿಸಿ ಆಯ್ಕೆ ಮಾಡಲಾಗಿದೆ' ಎಂದಿದ್ದಾರೆ.

'ತಮನ್ನಾ ಆಯ್ಕೆಗೆ ಕೆಲವರು ಅಪಸ್ವರ ಎತ್ತಿದ್ದಾರೆ. 2024–25ನೇ ಸಾಲಿನಲ್ಲಿ ಕೆಎಸ್‌ಡಿಎಲ್ ₹1,785 ಕೋಟಿ ವಹಿವಾಟು ನಡೆಸಿದೆ. ಇದರಲ್ಲಿ ಕರ್ನಾಟಕದ ಪಾಲು ಶೇ 18. ಉಳಿದದ್ದು ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರದಲ್ಲಿನ ಮಾರಾಟದಿಂದ ಬಂದಿದೆ. 2030ರ ವೇಳೆಗೆ ವಹಿವಾಟು ₹5,000 ಕೋಟಿ ತಲುಪುವ ಗುರಿ ಇದೆ. ಯೂರೋಪ್ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲೂ ಮಾರುಕಟ್ಟೆ ವಿಸ್ತರಣೆಗೆ ಮಾರುಕಟ್ಟೆಯ ತಂತ್ರಗಾರಿಕೆ ಭಾಗವಾಗಿ ಮಾರುಕಟ್ಟೆ ಪರಿಣತರ ಸಮಿತಿ ಈ ಆಯ್ಕೆ ಮಾಡಿಕೊಂಡಿದೆ' ಎಂದು ಹೇಳಿದ್ದಾರೆ.

> **ಶತಮಾನದ ಇತಿಹಾಸವುಳ್ಳ ಕೆಎಸ್‌ಡಿಎಲ್‌ಗೆ ನವೀನ ಸ್ಪರ್ಶ ನೀಡಲಾಗುತ್ತಿದೆ. ಉತ್ತರ ಭಾರತ ಮತ್ತು ವಿದೇಶಿ ಮಾರುಕಟ್ಟೆ ವಿಸ್ತರಣೆಗೆ ನಟಿ ತಮನ್ನಾ ನೆರವಾಗಲಿದ್ದಾರೆ**
> **ಅಪ್ಪಾಜಿ ನಾಡಗೌಡ**
> ಅಧ್ಯಕ್ಷ, ಕೆಎಸ್‌ಡಿಎಲ್

ದೀಪಿಕಾ ಪಡುಕೋಣೆ, ರಶ್ಮಿಕಾ ಮಂದಣ್ಣ, ಪೂಜಾ ಹೆಗಡೆ, ಕಿಯಾರಾ ಅಡ್ವಾಣಿ ಅವರೂ ಆಯ್ಕೆಪಟ್ಟಿಯಲ್ಲಿ ಇದ್ದರು. ಜಾಲತಾಣದಲ್ಲಿ ತಮನ್ನಾ ಅವರಿಗೆ 2.8 ಕೋಟಿ ಬೆಂಬಲಿಗರಿದ್ದಾರೆ. ಈ ಅಂಶಗಳ ಆಧಾರದಲ್ಲಿ ಅವರ ಆಯ್ಕೆ ಮಾಡಲಾಗಿದೆ ಎಂದು ಪಾಟೀಲರು ವಿವರ ನೀಡಿದ್ದಾರೆ.

बी ई एम एल BEML LIMITED
(CIN: L35202KA1964GOI001530)
(A Govt. of India Mini Ratna Company under Ministry of Defence)
BANGALORE COMPLEX, POST BOX: 7501,
NEW THIPPASANDRA POST, BANGALORE-560075

NOTICE INVITING TENDER
e tender through BEML SRM Portal

BEML LIMITED, BANGALORE COMPLEX invites Public Tender-E mode (TWO Bid System)

Civil works tender ref: **6300039502**

Work Description : Construction of Main Storage Shed, Bonded ware House, Office Building, Toilet Block and Electrical works & Crane installation & commissioning.

work at Eastern side of Production Hangars at Bangalore Complex, BEML Limited, Bangalore.

Approx. estimated value : Rs. 9,90,**00,000**/- inclusive of GST

EMD amount : Rs. 19,80,000/-.

Period of contract: 12 Months.

Last date & time for submission of bids : 09.06.2025 at 14.00 Hrs.

Further details of tender can be obtained from following website: **https://www.bemlindia.in/tenders/active-tenders/ Bangalore complex SRM Portal : https://bemlindia.in/eprocurement/ index.php**

Bidders are advised to visit above websites frequently for any corrigendum, extension, etc.

The management has the right to accept or reject any or all the tenders without assigning any reasons thereon.

Sd/- Asst. General Manager

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನೆಮ್ಮದಿಯ ಜೀವನಕ್ಕಾಗಿ ವಿಶಾಲವಾದ ಮತ್ತು ಕೈಗೆಟಕುವ ಬೆಲೆಯಲ್ಲಿ ಪ್ಲಾಟ್‌ಗಳು ಲಭ್ಯ

ಧಾರವಾಡ ನಗರದಲ್ಲಿ ವಸತಿ ಸಮುಚ್ಚಯಗಳ ಇ-ಆಕ್ಷನ್

ಕ್ರ. ಸಂ.	ವಸತಿ ಸಮುಚ್ಚಯದ ವಿಧ	ಮಹಡಿ	ಯುನಿಟ್‌ಗಳ ಸಂಖ್ಯೆ	ಒಟ್ಟು
1	1 BHK	ನೆಲಮಹಡಿ	30	100
2		ಒಂದನೇ ಮಹಡಿ	34	
3		ಎರಡನೇ ಮಹಡಿ	36	
4	2 BHK	ನೆಲಮಹಡಿ	3	35
5		ಒಂದನೇ ಮಹಡಿ	11	
6		ಎರಡನೇ ಮಹಡಿ	21	

Prime Location



ನೋಂದಣಿ
ಪ್ರಾರಂಭದ ದಿನಾಂಕ : 6ನೇ ಜೂನ್ 2025
ಕೊನೆಯ ದಿನಾಂಕ : 9ನೇ ಜುಲೈ 2025

ಲೈವ್ ಬಿಡ್ಡಿಂಗ್
ಪ್ರಾರಂಭದ ದಿನಾಂಕ : 11ನೇ ಜುಲೈ 2025
ಕೊನೆಯ ದಿನಾಂಕ : 14ನೇ ಜುಲೈ 2025

ಪ್ರಮುಖ ಸಂಪರ್ಕ • ಹೆದ್ದಾರಿಗೆ ಸಮೀಪ • ವಿಶಾಲ ರಸ್ತೆಗಳು • ವಿದ್ಯುತ್ ಸಂಪರ್ಕ • 24/7 ಭದ್ರತೆ • ನೀರು ಸರಬರಾಜು • ಗೇಟೆಡ್ ಕಮ್ಯೂನಿಟಿ

ಸಹಾಯವಾಣಿ
ನೋಂದಣಿಗಾಗಿ ಮಾತ್ರ
ಶ್ರೀ ಚೇತನ್, ಸಿ.ಒ: 7892716607
ಶ್ರೀಮತಿ ಕವಿತ, ಸಿ.ಒ: 8904912981

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಶ್ರೀ ಬಸವನಗೌಡ ಪಾಟೀಲ್, ಇ.ಇ : 9845806948, ಶ್ರೀ ವಿಶ್ವನಾಥ ಬಿರಾದರ್, ಎ.ಇ.ಇ : 9449572253, ಶ್ರೀ ಬಸವರಾಜು, ಎ.ಇ : 9743359515
ಧಾರವಾಡ - ಕೆಐಎಡಿಬಿ ವಲಯ ಕಛೇರಿ,
ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪೂನಾ-ಬೆಂಗಳೂರು ರಸ್ತೆ,
ಧಾರವಾಡ-580004

ನಿಮ್ಮ ಕನಸಿನ ಮನೆಗಾಗಿ ಬಿಡ್ ಮಾಡಲು ಸಿದ್ಧರಾಗಿ!

ನೋಂದಣಿ ಮತ್ತು ಬಿಡ್ಡಿಂಗ್‌ಗಾಗಿ ದಯವಿಟ್ಟು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಗೆ ಭೇಟಿ ನೀಡಿ : **https://kppp.karnataka.gov.in**

TEXMO® — AQUA GROUP — AQUATEX®

ನಿಮ್ಮ ವಿಶ್ವಸನೀಯ ಪಂಪ್‌ಗಳು

• ಅಕ್ವಾಟೆಕ್ಸ್ ಕೇಬಲ್ • ಅಕ್ವಾಟೆಕ್ಸ್ ಪ್ಯಾನೆಲ್‌ಬೋರ್ಡ್ • ಅಕ್ವಾಟೆಕ್ಸ್ ಹೆಚ್‌ಡಿಪಿಇ ಪೈಪ್ಸ್ • ಅಕ್ವಾಟೆಕ್ಸ್ ಕಾಲಮ್ ಪೈಪ್ಸ್

ಆಕ್ವಾಸಬ್ ಇಂಜಿನಿಯರಿಂಗ್ ಮತ್ತು ಅಕ್ವಾಪಂಪ್ ಇಂಡಸ್ಟ್ರೀಸ್

For Aquasub Engineering TÜV SÜD ISO 9001-2008

ಪ್ರಧಾನ ಕಛೇರಿ : ಕೊಯಮತ್ತೂರು ಬೆಂಗಳೂರು ✆:080–23381891 ಹುಬ್ಬಳ್ಳಿ✆:8217863378

More Stars More Savings Energy Savings Guide

ಅಧಿಕೃತ ಡೀಲರ್ಸ್: ಬೆಂಗಳೂರು: ಶಾಂತಲಕ್ಷ್ಮಿ ಎಲೆಕ್ಟ್ರಿಕಲ್ಸ್ ✆9845505597 | ಗುರು ಅಸೋಸಿಯೇಟ್ಸ್ 9480826460 | ಜೆ.ವಿ.ಬಿ. ಫ್ಲೋಟೆಕ್ 9845446176 | ಎ.ಎಸ್. ಎಂಟರ್‌ಪ್ರೈಸಸ್ ✆9901163007 | ಸಿಂಟ್ರಾನ್‌ಸೇಲ್ಸ್ ಕಾರ್ಪೋರೇಷನ್ ✆9844425588 | ತಿರುಮಲ ಎಂಟರ್‌ಪ್ರೈಸಸ್ ✆9886091121 | ಶ್ರೀ ಮಂಜುನಾಥ ಏಜೆನ್ಸಿಸ್ ✆7411551876 | ಇ.ಎಸ್.ಪಿ.ಆರ್. ಎಲೆಕ್ಟ್ರಿಕಲ್ ಸರ್ವೀಸ್ಸ್ ✆9845469172 | ವಿನಾಯಕ ಮಾರ್ಕೆಟಿಂಗ್ ✆9448379398 | ವಿಎಸ್‌ಪಿ ಪಂಪ್ಸ್ ✆9880165527 | ಎಎಸ್ ಆಗ್ರೋಟೆಕ್ ✆9740166606 | ಮಂಜುನಾಥ್ ಎಂಟರ್ ಪ್ರೈಸಸ್ ✆9880871679 | ರಾಮನಗರ : ಮಂಜುಶ್ರೀ ಎಲೆಕ್ಟ್ರಿಕಲ್ಸ್ ✆9242220554 | ರಾಜಾನಕುಂಟೆ : ಮಂಜುನಾಥ ಟ್ರೇಡರ್ಸ್ ✆9343736456 | ದೇವನಹಳ್ಳಿ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ವಿಜಯಪುರ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ಹೊಸಕೋಟೆ : ಪ್ರಭು ಎಲೆಕ್ಟ್ರಿಕಲ್ಸ್ ✆9448081876 | ಕನಕಪುರ : ಶ್ರೀ ಮಂಜುನಾಥೇಶ್ವರ ಎಂಟರ್‌ಪ್ರೈಸಸ್ ✆9972049822 | ಕೆಂಗೇರಿ: ಎಸ್.ಎಲ್.ವಿ. ಪಂಪ್ಸ್ ✆9448513248 | ಪೀಣ್ಯ: ವಿನಾಯಕ ಎಂಟರ್‌ಪ್ರೈಸಸ್ ✆9741414592 | ನೆಲಮಂಗಲ : ಗುರು ಅಸೋಸಿಯೆಟ್ಸ್ ✆9448373404 | ಕೋಲಾರ : ಉಮಾ ಎಲೆಕ್ಟ್ರಿಕಲ್ಸ್ ✆9902808605 | ಓಂಕಾರ ಏಜೆನ್ಸಿಸ್ ✆9880190749 | ಶ್ರೀನಿವಾಸಪುರ : ವಿಜಯಲಕ್ಷ್ಮಿ ಏಜೆನ್ಸಿಸ್ ✆9845141512 | ಬಂಗಾರಪೇಟೆ : ವರದರಾಜ ಏಜೆನ್ಸಿಸ್ ✆9743354145 | ಬಾಗೇಪಲ್ಲಿ : ಮಾರುತಿ ಎಂಟರ್‌ಪ್ರೈಸಸ್ ✆9844406508 | ಚಿಕ್ಕಬಳ್ಳಾಪುರ : ಮಂಜುನಾಥ ಎಲೆಕ್ಟ್ರಿಕಲ್ಸ್ ✆9448886619 | ಚಿಂತಾಮಣಿ : ರಾಜೇಶ್ವರಿ ಟ್ರೇಡರ್ಸ್ ✆9880156246 | ಶಿಡ್ಲಘಟ್ಟ : ರಾಜೇಶ್ವರಿ ಎಂಟರ್‌ಪ್ರೈಸಸ್ ✆9880856246 | ಗುಡಿಬಂಡೆ : ನಾಗರಾಜ ಎಂಟರ್‌ಪ್ರೈಸಸ್ ✆9880104195 | ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ಸ್ಟೋರ್ಸ್ ✆9448664483 | ಹೆಚ್.ಕ್ರಾಸ್ : ಉಮಾ ಇಂಜಿನಿಯರಿಂಗ್ ವರ್ಕ್ಸ್ ✆9448165195 | ಗೌರಿಬಿದನೂರು : ಶ್ರೀನಿವಾಸ ಎಲೆಕ್ಟ್ರಿಕ್ ಸ್ಟೋರ್ಸ್ ✆9448314982 | ಮಾಲೂರು : ಶ್ರೀದೇವಿ ಎಲೆಕ್ಟ್ರಿಕಲ್ಸ್ ✆9961320501 | ಚೇಳೂರು : ಮಾರುತಿ ಎಲೆಕ್ಟ್ರಿಕಲ್ಸ್ ✆9448950429 | ತುಮಕೂರು : ಗುರು ಏಜೆನ್ಸಿಸ್ ✆8095242587 | ಸಿರಾ : ಗುರು ಎಂಟರ್ ಪ್ರೈಸಸ್ ✆9448093767 | ಮಧುಗಿರಿ : ಪ್ರಸಾದ ಎಂಟರ್‌ಪ್ರೈಸಸ್ ✆9448250601 | ತಿಪಟೂರು : ಶ್ರೀನಿವಾಸ ಎಂಟರ್‌ಪ್ರೈಸಸ್ ✆9448106005 | ಚಿಕ್ಕನಾಯಕನಹಳ್ಳಿ : ಸಿದ್ಧಶ್ರೀ ಟ್ರೇಡರ್ ✆7624844129 | ಪೇರಸಂದ್ರಾ : ಶ್ರೀ ನಂಜುಡೇಶ್ವರ ಎಂಟರ್‌ಪ್ರೈಸಸ್ ✆9886534395 | ದೊಡ್ಡಬಳ್ಳಾಪುರ : ಕಾಪರ್ತಿ ಏಜೆನ್ಸಿಸ್ ✆9880165527 | ವಿ.ಎಸ್.ಪಿ ಪಂಪ್ಸ್ ✆9448379398 | ಮುಳಬಾಗಿಲು : ರೆಡ್ಡಿ ಎಲೆಕ್ಟ್ರಿಕಲ್ಸ್ ✆9986995862 |

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ National Health Mission

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಡಿ.ಕೆ ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕೀಮೋಥೆರಪಿ ಸೌಲಭ್ಯ - ಜಿಲ್ಲಾಸ್ಪತ್ರೆಗಳಲ್ಲಿ ಲಭ್ಯ

ಸರ್ಕಾರಿ ಜಿಲ್ಲಾಸ್ಪತ್ರೆಗಳಲ್ಲಿ ಡೇ ಕೇರ್ ಕೀಮೋಥೆರಪಿ ಕೇಂದ್ರಗಳ ಲೋಕಾರ್ಪಣೆ

ಉದ್ಘಾಟನೆ : ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸ್ಥಳ: ಜಿಲ್ಲಾ ಆಸ್ಪತ್ರೆ, ಮೇಟಗಳ್ಳಿ, ಮೈಸೂರು **ದಿನಾಂಕ: 23-05-2025, ಸಂಜೆ 5.00 ಗಂಟೆಗೆ**

ಡೇ ಕೇರ್ ಕೀಮೋಥೆರಪಿ ಕೇಂದ್ರದಲ್ಲಿ ನೀಡಲಾಗುವ ಸೇವೆಗಳು

- ಈಗಾಗಲೇ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಮುಂದುವರಿಕೆ ಕೀಮೋಥೆರಪಿ ಚಿಕಿತ್ಸೆ
- ನೋವು ನಿವಾರಣೆ ಚಿಕಿತ್ಸೆ
- ಸಮಾಲೋಚನಾ ಸೇವೆಗಳು
- ಜಿಲ್ಲಾ ಆಸ್ಪತ್ರೆಗಳಿಂದ ತೃತೀಯ ಹಂತದ ಆಸ್ಪತ್ರೆಗಳ ಮೂಲಕ ಟೆಲಿಮೆಡಿಸಿನ್ ಸೇವೆ
- ಅಗತ್ಯ ತಜ್ಞರ ಸೇವೆಗಳು



ಡೇ ಕೇರ್ ಕೀಮೋಥೆರಪಿ ಕೇಂದ್ರದ ಉಪಯೋಗಗಳು

- ಆಸ್ಪತ್ರೆ ಮತ್ತು ಪ್ರಯಾಣ ವೆಚ್ಚದ ಉಳಿಕೆ
- ಚಿಕಿತ್ಸೆಯಿಂದ ವಂಚಿತರಾಗುವ ಪ್ರಕರಣಗಳ ಇಳಿಕೆ
- ತಪಾಸಣೆ ಹಾಗೂ ಆರಂಭಿಕ ಹಂತದಲ್ಲಿಯೇ ಚಿಕಿತ್ಸೆ
- ಕ್ಯಾನ್ಸರ್ ಚಿಕಿತ್ಸೆಯಲ್ಲಿ ನಗರ – ಗ್ರಾಮೀಣ ಅಸಮಾನತೆಯನ್ನು ಕಡಿಮೆಗೊಳಿಸುವುದು

ಹಬ್ & ಸ್ಪೋಕ್ ಮಾದರಿ

ಹಬ್ ಆಸ್ಪತ್ರೆಗಳ ಪಾತ್ರ
(SAST ನೊಂದಾಯಿತ ತೃತೀಯ ಹಂತದ ಕ್ಯಾನ್ಸರ್ ಕೇಂದ್ರಗಳು)

* **ಕ್ಲಿನಿಕಲ್ ಸೇವೆಗಳು** (ಸಂಕೀರ್ಣ ಚಿಕಿತ್ಸಾ ವಿತರಣೆ, ಕೀಮೋಥೆರಪಿಯನ್ನು ನಿರ್ವಹಣೆ , ಸುಧಾರಿತ ಬಯಾಪ್ಸಿಗಳನ್ನು ನಡೆಸುವುದು. ಸ್ಪೋಕ್ ಕೇಂದ್ರಗಳಿಗೆ ರೋಗಶಾಸ್ತ್ರ ಮತ್ತು ವಿಕಿರಣಶಾಸ್ತ್ರ ಬೆಂಬಲವನ್ನು ಒದಗಿಸುವುದು).
* **ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ**
* **ರೆಫರಲ್, ಟೆಲಿಮೆಡಿಸಿನ್ ಮತ್ತು ಸ್ಪೋಕ್ ಕೇಂದ್ರಗಳಿಗೆ ಔಷಧ ರವಾನೆ**
* **ಗುಣಮಟ್ಟದ ಭರವಸೆ ಮತ್ತು ಮೇಲ್ವಿಚಾರಣೆ**

ಸ್ಪೋಕ್ ಕೇಂದ್ರಗಳ ಪಾತ್ರ
(ಜಿಲ್ಲಾ ಡೇ ಕೇರ್ ಕೀಮೋಥೆರಪಿ ಘಟಕಗಳು)

* **ಹಬ್‌ನೊಂದಿಗೆ ಸಮನ್ವಯ** (ರೆಫರಲ್ ವ್ಯವಸ್ಥೆ, ವಿಕಿರಣ/ ಶಸ್ತ್ರಚಿಕಿತ್ಸೆ ಅಗತ್ಯವಿರುವ ರೋಗಿಗಳನ್ನು ಗುರುತಿಸಿ ಮತ್ತು ಕೇಂದ್ರಗಳಿಗೆ ವರ್ಗಾಯಿಸಿ, ನೈಜ-ಸಮಯದ- ರೆಫರಲ್ ಮಾಡಲಾಗುವುದು)
* **ರೋಗಿಯ ಆರೈಕೆ**(ಕೀಮೋಥೆರಪಿ ಆಡಳಿತ, ಸಹಾಯಕ/ ಉಪಶಮನಕಾರಿ ಕೀಮೋ, ಪೂರ್ವ-ಕೀಮೋ ವರ್ಕಪ್, ಮೂಲಭೂತ ಪ್ರಯೋಗಾಲಯ ಪರೀಕ್ಷೆಗಳು (CBC, LFT, RFT) ಮತ್ತು ECG ಮೇಲ್ವಿಚಾರಣೆಯನ್ನು ಒದಗಿಸುವುದು.
* **ಬೆಂಬಲ ಸೇವೆಗಳು, ಉಪಶಮನಕಾರಿ ಆರೈಕೆ ಹಾಗೂ ಔಷಧ ವಿತರಣೆ**

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ರವರು ಮತ್ತು ಮಾನ್ಯ ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಹೆಚ್.ಸಿ.ಮಹದೇವಪ್ಪರವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿರುವುದು.



ಭಾರತದ ಸಾರ್ವಭೌಮತ್ವ , ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು - ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಕರ್ತವ್ಯ

ನಿಮ್ಮ ಆರೋಗ್ಯ, ನಮ್ಮ ಆದ್ಯತೆ

2011ರ ಕೆಪಿಎಸ್‌ಸಿ ನೇಮಕಾತಿ ಅಕ್ರಮ: ಕ್ರಮ ಕೈಬಿಡಲು ನಿರ್ಧಾರ • ಲೋಕಾಯುಕ್ತ ಶಿಫಾರಸುಗಳ ತಿರಸ್ಕಾರ

ಭ್ರಷ್ಟಾಚಾರ: ವಿಚಾರಣೆಗೆ ಸರ್ಕಾರ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಲ್ಲಿ ಭಾಗಿಯಾದ ಆರೋಪಕ್ಕೆ ಸಂಬಂಧಿಸಿದ, ಕರ್ನಾಟಕ ಲೋಕಸೇವಾ ಆಯೋಗದ ಹಿಂದಿನ ಅಧ್ಯಕ್ಷರು ಮತ್ತು ಎಂಟು ಸದಸ್ಯರ ವಿರುದ್ಧದ ವಿಚಾರಣೆಯ ಪ್ರಸ್ತಾವ ಕೈಬಿಡಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೆಲವು ಅಧಿಕಾರಿಗಳ ವಿರುದ್ಧ ವಿಚಾರಣೆ ಹಾಗೂ ಮತ್ತೆ ಕೆಲವರ ವಿರುದ್ಧ ಆರೋಪ ಸಾಬೀತಾಗಿಲ್ಲ ಎಂದು ಲೋಕಾಯುಕ್ತ ಹೇಳಿತ್ತು. ವಿಚಾರಣೆ ನಡೆಸುವಂತೆ ಲೋಕಾಯುಕ್ತ ಮಾಡಿದ್ದ ಶಿಫಾರಸುಗಳನ್ನು ಸರ್ಕಾರ ಕೈಬಿಟ್ಟಿದೆ.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಈ ವಿಷಯ ತಿಳಿಸಿದರು.

ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ಆಯ್ಕೆ ಪ್ರಕಿಯೆಯಲ್ಲಿ ಅವ್ಯವಹಾರ ನಡೆದಿರುವ ತನಿಖೆ ನಡೆಸಿದ್ದ ಸಿಐಡಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು.

2011ರ ನೇಮಕಾತಿ ವೇಳೆ ಕೆಪಿಎಸ್‌ಸಿಯ ಅಧ್ಯಕ್ಷರಾಗಿದ್ದ ಗೋನಾಳ್ ಭೀಮಪ್ಪ, ಸದಸ್ಯರಾಗಿದ್ದ ಮಂಗಳಾ ಶ್ರೀಧರ್, ಎಸ್‌.ಆರ್‌.ರಂಗಮೂರ್ತಿ, ಬಿ.ಎಸ್‌.ಕೃಷ್ಣಪ್ರಸಾದ್, ಎನ್‌. ಮಹದೇವ್, ಎಚ್‌.ವಿ. ಪಾರ್ಶ್ವನಾಥ್, ಎಸ್‌.ದಯಾಶಂಕರ್, ಎಚ್‌.ಡಿ. ಪಾಟೀಲ, ಎನ್‌.ರಾಮಕೃಷ್ಣ ಹಾಗೂ ಬಿ.ಟಿ. ಕನಿರಾಮ್ ಅವರ ವಿರುದ್ಧದ ವಿಚಾರಣೆಗೆ ರಾಷ್ಟ್ರಪತಿಯವರಿಂದ ಅನುಮತಿ ಪಡೆಯಲು ಸಿಐಡಿ ಶಿಫಾರಸು ಮಾಡಿತ್ತು. ಈ ಪ್ರಸ್ತಾಪ ಕೈಬಿಡಲು ತೀರ್ಮಾನಿಸಲಾಯಿತು ಎಂದು ಪಾಟೀಲ ತಿಳಿಸಿದರು.

ಇತರ ಪ್ರಕರಣಗಳು:

- ಅರಣ್ಯ ಇಲಾಖೆಯ ಹಿಂದಿನ ವಲಯ ಅರಣ್ಯಾಧಿಕಾರಿ (ಈಗ ನಿವೃತ್ತ) ಆರ್‌. ಸುರೇಶ್ ಮತ್ತು ಹಾಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸೈಯ್ಯದ್ ನಿಜಾಮುದ್ದೀನ್ ವಿರುದ್ಧ 2015–16 ನೇ ಸಾಲಿನಲ್ಲಿ ಕಳಪೆ ಕಾಮಗಾರಿ ಕೈಗೊಂಡಿದ್ದಾರೆ ಎಂಬ ಕಾರಣಕ್ಕೆ ದೂರು ದಾಖಲಾಗಿತ್ತು. ಇವರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದು ಲೋಕಾಯುಕ್ತ ಸಂಸ್ಥೆ ಹೇಳಿದೆ. ಆದ್ದರಿಂದ ಪ್ರಕರಣ ಕೈ ಬಿಡಲಾಗಿದೆ.
- ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕಿ ವಿಜಯಲಕ್ಷ್ಮಿ ಸಂಗನಾಳ ವಿರುದ್ಧದ ಆರೋಪವನ್ನು ದೋಷಮುಕ್ತಗೊಳಿಸಿ ಲೋಕಾಯುಕ್ತ ಪ್ರಕರಣ ಮುಕ್ತಾಯಗೊಳಿಸಿದೆ. ನ್ಯಾಯಾಲಯವೂ ಪ್ರಕರಣ ಖುಲಾಸೆಗೊಳಿಸಿ, ದೋಷ ಮುಕ್ತಗೊಳಿಸಿದೆ.
- ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಎಂಜಿನಿಯರ್ ಅನಿಲ್‌ಕುಮಾರ್ ವೈ.ಡಿ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಹಾದೇವ ಬಿ.ಕೆ ವಿರುದ್ಧ ಇಲಾಖೆ ವಿಚಾರಣೆ ನಡೆಸಲು ಮಾಡಿರುವ ಶಿಫಾರಸು ಕೈಬಿಡಲಾಗಿದೆ.
- ಕರ್ನಾಟಕ ನೀರಾವರಿ ನಿಗಮದ ನಿವೃತ್ತ ಕಾರ್ಯ ನಿರ್ವಾಹಕ ಎಂಜಿನಿಯರ್‌ಗಳಾದ ವೀರಭದ್ರಸ್ವಾಮಿ ಮತ್ತು ಕಲ್ಲಪ್ಪ ಅವರು ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾಡಿದ್ದ ಶಿಫಾರಸು ಕೈಬಿಡಲಾಗಿದೆ.

ಸೇವೆಗೆ ಮರುಸ್ಥಾಪನೆ: ವಿಜಯಪುರ ವೈದ್ಯಾಧಿಕಾರಿ ಡಾ.ಶಿವಯೋಗಿ ಮಲ್ಲೇಶಪ್ಪ ಅವರ ಮೇಲ್ಮನವಿ ಪುರಸ್ಕರಿಸಿ ದಂಡನಾ ಆದೇಶ ರದ್ದುಗೊಳಿಸಿರುವ ಹೈಕೋರ್ಟ್‌ನ ಧಾರವಾಡ ಪೀಠ ಅವರ ಅವರಿಗೆ ಮತ್ತೆ ಹುದ್ದೆ ನೀಡುವಂತೆ ಸೂಚಿಸಿದೆ. ಆದೇಶವನ್ನು ಪಾಲಿಸುವುದರ ಜತೆಗೆ ಸುಪ್ರೀಂಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಸಲ್ಲಿಸಲು ಸರ್ಕಾರ ನಿರ್ಧರಿಸಿದೆ.

ಈ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಈಗಾಗಲೇ ನೇಮಕಾತಿ ಆಗಿದೆ. ಕರ್ನಾಟಕ ಲೋಕಸೇವಾ ಆಯೋಗ ಸಾಂವಿಧಾನಿಕ ಸಂಸ್ಥೆಯಾಗಿದ್ದು, ನಾವು ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಒಂದು ವೇಳೆ ಆರೋಪ ಹೊತ್ತವರು ಅಧಿಕಾರದಲ್ಲಿ ಇದ್ದಿದ್ದರೆ, ಅಲ್ಲಿಂದ ಇಳಿಸುವುದಕ್ಕೆ ಮಾತ್ರ ಸಾಧ್ಯವಿತ್ತು. ಈಗ ಯಾರೂ ಅಧಿಕಾರದಲ್ಲಿ ಇಲ್ಲ. ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲು ನಿರ್ಧರಿಸಲಾಯಿತು

ಎಚ್‌.ಕೆ.ಪಾಟೀಲ, ಕಾನೂನು ಸಚಿವ

ಮೀನಾ, ರಾಮಮೂರ್ತಿ ವಿರುದ್ಧ ಕ್ರಮ ಇಲ್ಲ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಹಿಂದಿನ ಅಧ್ಯಕ್ಷರಾಗಿದ್ದ ನಿವೃತ್ತ ಐಎಎಸ್ ಅಧಿಕಾರಿಗಳಾದ ಭರತ್ ಲಾಲ್ ಮೀನಾ ಮತ್ತು ಪಿ.ಬಿ.ರಾಮಮೂರ್ತಿ ವಿರುದ್ಧ ಕರ್ನಾಟಕ ಲೋಕಾಯುಕ್ತ ಸಲ್ಲಿಸಿದ್ದ ವರದಿಯ ಶಿಫಾರಸುಗಳನ್ನು ಕೈಬಿಡಲು ಸಚಿವ ಸಂಪುಟ ತೀರ್ಮಾನಿಸಿದೆ.

ಇವರು ಬಹುಮಹಡಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವ ಸಂದರ್ಭದಲ್ಲಿ ಕಟ್ಟಡಗಳ ಮಾಲೀಕರಿಗೆ ಅನುಕೂಲ ಮಾಡಿ, ತಿರುಚಿ ಅಭಿಪ್ರಾಯ ನೀಡಿದ್ದರು ಎಂದು ಆರೋಪಿಸಲಾಗಿತ್ತು. ಈ ಆರೋಪವನ್ನು ತಳ್ಳಿ ಹಾಕಿ ಸಚಿವ ಸಂಪುಟ ಉಪಸಮಿತಿಯು, ಕಟ್ಟಡ ನಕ್ಷೆ ಅನುಮೋದನೆಯು ಚಾಲ್ತಿಯಲ್ಲಿರುವ ಕಟ್ಟಡ ಬೈ–ಲಾ ಅನುಸಾರವಾಗಿಯೇ ಇದೆ. ಆದ್ದರಿಂದ ಶಿಸ್ತು ವಿಚಾರಣೆ ನಡೆಸಬೇಕು ಎನ್ನುವ ಲೋಕಾಯುಕ್ತದ ಶಿಫಾರಸು ಕೈಬಿಡಲು ಶಿಫಾರಸು ಮಾಡಿತ್ತು ಎಂದು ಎಚ್‌.ಕೆ.ಪಾಟೀಲ ತಿಳಿಸಿದರು.

21 ತಾಲ್ಲೂಕುಗಳಲ್ಲಿ ‘ಪ್ರಜಾಸೌಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸದಾಗಿ ರಚನೆಯಾದ 21 ತಾಲ್ಲೂಕು ಕೇಂದ್ರಗಳಲ್ಲಿ ತಲಾ ₹8.60 ಕೋಟಿ ವೆಚ್ಚದಲ್ಲಿ ‘ಪ್ರಜಾಸೌಧ’ ಆಡಳಿತ ಸಂಕೀರ್ಣಗಳನ್ನು ನಿರ್ಮಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಸಭೆಯ ಬಳಿಕ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಹೊಸ ತಾಲ್ಲೂಕುಗಳಾದ ಚೇಳೂರು, ಮಂಚೇನಹಳ್ಳಿ, ನ್ಯಾಮತಿ, ಹನೂರು, ಅಜ್ಜಂಪುರ, ಉಳ್ಳಾಲ, ಸಾಲಿಗ್ರಾಮ, ಅರಕೇರಾ, ಮೂಡಲಗಿ,ಯರಗಟ್ಟಿ, ನಿಪ್ಪಾಣಿ, ಗುಳೇದಗುಡ್ಡ, ರಬಕವಿ–ಬನಹಟ್ಟಿ, ತೇರದಾಳ, ನಿಡಗುಂದಿ, ದೇವರ ಹಿಪ್ಪರಗಿ, ಚಡಚಣ, ಆಲಮೇಲ, ಅಣ್ಣಿಗೇರಿ, ಹುಬ್ಬಳ್ಳಿ ನಗರ, ಲಕ್ಷ್ಮೇಶ್ವರಗಳಲ್ಲಿ ‘ಎ’ ದರ್ಜೆಯ ಸುಸಜ್ಜಿತ ತಾಲ್ಲೂಕು ಪ್ರಜಾಸೌಧ ಕಟ್ಟಡಗಳನ್ನು ನಿರ್ಮಿಸಲಾಗುವುದು ಎಂದರು.

ಪ್ರಮುಖ ತೀರ್ಮಾನಗಳು:

- ಕೋಲಾರ ಜಿಲ್ಲೆ ಮಾಲೂರು ಹಾಗೂ ಮಂಡ್ಯ ಜಿಲ್ಲೆ ಮದ್ದೂರು ನಗರಸಭೆಗಳಾಗಿ ಮೇಲ್ದರ್ಜೆಗೇರಿಸಲು ತೀರ್ಮಾನ
- ಗದಗ–ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ ಅಧಿನಿಯಮ ಶುಕ್ರವಾರದಿಂದ ಜಾರಿ
- ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ಮಸೂದೆ 2025 ಅನ್ನು ಸುಗ್ರಿವಾಜ್ಞೆ ಹೊರಡಿಸಲಾಗುವುದು.

ಎಂಡಿಎ ಕಾಯ್ದೆ ಇಂದಿನಿಂದ ಜಾರಿ



ಎಚ್‌.ಕೆ.ಪಾಟೀಲ

ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಕಾಯ್ದೆ 2024 ಶುಕ್ರವಾರದಿಂದ ಜಾರಿಗೆ ಬರಲಿದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಈ ಕಾಯ್ದೆ ಜಾರಿಯಾದ ಬಳಿಕ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವಿಘಟನೆಗೊಳ್ಳಲಿದೆ ಎಂದರು.

ಶ್ರೀಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ ವ್ಯಾಪ್ತಿಗೆ ಬರುವ ಪ್ರದೇಶವನ್ನು, ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರತುಪಡಿಸಲು ಅಗತ್ಯವಿದ್ದಲ್ಲಿ ಕಾಯ್ದೆಗೆ ತಿದ್ದುಪಡಿ ತರಲು ಮುಂದಿನ ಅಧಿವೇಶನದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯಪಾಲರ ಅವಗಾಹನೆಗೆ ತರಲಾಗಿದೆ ಎಂದರು.

ರಥೋತ್ಸವ

ವಿಜಯನಗರ ಜಿಲ್ಲೆ ಕೂಡ್ಲಿಗಿಯಲ್ಲಿ 15 ವರ್ಷಗಳ ಬಳಿಕ ನಡೆದ ಗ್ರಾಮ ದೇವತೆ ಊರಮ್ಮ ದೇವಿಯ ಮಹಾರಥೋತ್ಸವದಲ್ಲಿ ಅಪಾರ ಸಂಖ್ಯೆ ಭಕ್ತರು ಪಾಲ್ಗೊಂಡಿದ್ದರು.

ಚಿತ್ರ: ಎ.ಎಂ.ಸೋಮಶೇಖರಯ್ಯ

ಸುದ್ದಿ 2 ನಿಮಿಷ

ಇ.ಡಿ ದಾಳಿಗೆ ಕಾಂಗ್ರೆಸ್‌ನ ಒಂದು ಗುಂಪು ಕಾರಣ: ಪ್ರಲ್ಹಾದ ಜೋಶಿ

ಗದಗ: ‘ಗೃಹ ಸಚಿವ ಜಿ.ಪರಮೇಶ್ವರ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕಾಂಗ್ರೆಸ್‌ನ ಒಂದು ಗುಂಪು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಎಲ್ಲ ಮಾಹಿತಿ ಕಳಿಸುತ್ತದೆ. ಬಳಿಕ ಇದು ರಾಜಕೀಯ ಪ್ರೇರಿತ ದಾಳಿ ಎಂದು ಅವರೇ ನಾಟಕವಾಡುತ್ತಾರೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

‘ಜಿ.ಪರಮೇಶ್ವರ ಬಗ್ಗೆ ನಮಗೆ ಗೌರವ ಇದೆ. ಅವರು ಸಭ್ಯ ರಾಜಕಾರಣಿ. ಇ.ಡಿಗೆ ಮಾಹಿತಿಗಳನ್ನು ಕಳಿಸಿದ್ದು ಯಾರು ಎಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಗೊತ್ತಿದೆ. ಗುಪ್ತಚರ ಇಲಾಖೆ ಅವರ ಬಳಿಯೇ ಇದೆ’ ಎಂದು ಗುರುವಾರ ತಿಳಿಸಿದರು.

‘ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ತೊಂದರೆ ಕೊಡಬೇಕು ಎಂಬ ಯಾವ ಉದ್ದೇಶವೂ ಕೇಂದ್ರ ಸರ್ಕಾರಕ್ಕಿಲ್ಲ. ತಪ್ಪು ಮಾಡಿದಾಗ, ಯಾರೇ ಆದರೂ ಕಾನೂನು ಕ್ರಮ ಆಗುತ್ತದೆ. ಎಲ್ಲದಕ್ಕೂ ರಾಜಕಾರಣ ಬೆರೆಸುವುದು ಸರಿಯಲ್ಲ’ ಎಂದರು.

‘ವಿಧಾನ ಪರಿಷತ್ತು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ದಿಗ್ಬಂಧನ ಪ್ರಕರಣಕ್ಕೆ ಸಂಬಂಧಿಸಿದಂತೆ ಎಷ್ಟು ಜನರ ಮೇಲೆ ಎಫ್‌ಐಆರ್ ಆಗಿದೆ? ಒಬ್ಬ ದಲಿತ, ಹಿಂದುಳಿದ ವರ್ಗದ ಸಮಾಜಕ್ಕೆ ಸೇರಿದವರನ್ನು ಕೂಡಿ ಹಾಕಿ, ಗೂಂಡಾಗಿರಿ ಮಾಡಲು ನಾಚಿಕೆ ಆಗುವುದಿಲ್ಲವೇ? ಪೊಲೀಸರು ಕಾನೂನು ಪ್ರಕಾರ ಕೆಲಸ ಮಾಡಬೇಕು’ ಎಂದು ಅವರು ಒತ್ತಾಯಿಸಿದರು.

‘180 ಜನೌಷಧ ಕೇಂದ್ರಗಳು ತೆರವು’

ಬೆಂಗಳೂರು: ‘ರಾಜ್ಯದಲ್ಲಿ ಎಲ್ಲ ಜನೌಷಧ ಕೇಂದ್ರಗಳನ್ನ ಸ್ಥಗಿತಗೊಳಿಸಿಲ್ಲ. 1,400 ಜನೌಷಧ ಕೇಂದ್ರಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿರುವ 180 ಕೇಂದ್ರಗಳನ್ನು ಮಾತ್ರ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಮಾರಾಟ ಮಾಡುವುದು ಸರಿಯಲ್ಲ. ಜನೌಷಧ ಕೇಂದ್ರಗಳ ಸ್ಥಗಿತದ ಹಿಂದೆ ರಾಜಕೀಯ ಉದ್ದೇಶವಿಲ್ಲ. ಸರ್ಕಾರವೇ ಉಚಿತವಾಗಿ ಔಷಧಗಳನ್ನ ನೀಡುವಾಗ, ಆಸ್ಪತ್ರೆಗಳಲ್ಲಿ ಔಷಧಗಳನ್ನು ಮಾರಾಟ ಮಾಡುವ ಮಳಿಗೆಗಳು ಏಕೆ ಬೇಕು? ಜನೌಷಧ ಕೇಂದ್ರಗಳ ವಿಚಾರದಲ್ಲಿ ಬಿಜೆಪಿ ನಾಯಕರು ರಾಜಕೀಯ ಬೆರೆಸುವುದು ಸರಿಯಲ್ಲ’ ಎಂದರು.

‘ಸರ್ಕಾರಿ ಆಸ್ಪತ್ರೆಗಳಲ್ಲಿರುವ 180 ಕೇಂದ್ರಗಳ ಹೊರತಾಗಿ, ರಾಜ್ಯದಲ್ಲಿ ಇನ್ನೂ 1,220 ಜನೌಷಧ ಕೇಂದ್ರಗಳಿವೆ. ಅಲ್ಲದೇ, ತಕ್ಷಣಕ್ಕೆ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಎಲ್ಲ ಜನೌಷಧ ಕೇಂದ್ರಗಳನ್ನ ಮುಚ್ಚಿಸುವಂತೆ ಸೂಚಿಸಿಲ್ಲ. ಹೊಸದಾಗಿ ಸಲ್ಲಿಕೆಯಾಗಿದ್ದ 31 ಅರ್ಜಿಗಳನ್ನು ತಿರಸ್ಕರಿಸಲಾಗಿದೆ’ ಎಂದು ಹೇಳಿದರು.

ರನ್ಯಾರಾವ್‌ಗೆ ₹25 ಲಕ್ಷ ಕೊಟ್ಟಿರಬಹುದು: ಡಿಕೆಶಿ

ಪ್ರಜಾವಾಣಿ ವಾರ್ತೆ

ರನ್ಯಾ ರಾವ್

ಬೆಂಗಳೂರು: ‘ರನ್ಯಾ ರಾವ್‌ಗೆ ಮದುವೆ ಉಡುಗೊರೆಯಾಗಿ ಪರಮೇಶ್ವರ ಅವರು ₹25 ಲಕ್ಷ – ₹15 ಲಕ್ಷ ಕೊಟ್ಟಿರಬಹುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಗೃಹ ಸಚಿವ ಪರಮೇಶ್ವರ ಅವರು ಮುಖ್ಯಸ್ಥರಾಗಿರುವ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳ ಕಚೇರಿಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶೋಧ ನಡೆಸಿದ್ದಾರೆ. ರಾಜ್ಯದ ಜವಾಬ್ದಾರಿಯುತ ಗೃಹ ಸಚಿವರು. ರನ್ಯಾ ಅವರಿಗೆ ಹಣ ನೀಡಿದ ಮಾತ್ರಕ್ಕೆ ಚಿನ್ನ ಕಳ್ಳಸಾಗಣೆ ಮಾಡಲು ಹೇಳುತ್ತಾರೆಯೇ? ಆ ರೀತಿ ಯಾವ ರಾಜಕಾರಣಿಯೂ ಹೇಳಿರಲು ಸಾಧ್ಯವಿಲ್ಲ’ ಎಂದರು.

‘ಸಾರ್ವಜನಿಕ ಜೀವನದಲ್ಲಿರುವ ಬಹಳಷ್ಟು ಜನರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಮದುವೆ ಶುಭ ಸಮಾರಂಭದಲ್ಲಿ ಅನೇಕ ಉಡುಗೊರೆ ಕೊಟ್ಟಿರಬಹುದು. ಆಕೆ ತಪ್ಪು ಮಾಡಿದ್ದರೆ ಅದು ಆಕೆಯ ವೈಯಕ್ತಿಕ ವಿಚಾರ. ತಪ್ಪು ಸಾಬೀತಾದರೆ ಆಕೆಗೆ ಕಾನೂನು ಪ್ರಕಾರ ಶಿಕ್ಷೆಯಾಗುತ್ತದೆ. ಅದಕ್ಕೆ ಅಭ್ಯಂತರವಿಲ್ಲ. ಆದರೆ, ಪರಮೇಶ್ವರ ಅವರು ಕಾನೂನಿಗೆ ತಲೆಬಾಗುವ ವ್ಯಕ್ತಿ. ಅವರ ಬಗ್ಗೆ ಹೆಮ್ಮೆಯಿದೆ. ಅವರು ಸಜ್ಜನ ಹಾಗೂ ಪ್ರಾಮಾಣಿಕ ರಾಜಕಾರಣಿ. ಯಾವುದೇ ತಪ್ಪು ಮಾಡಿಲ್ಲ. ಇ.ಡಿಗೂ ಶೋಧನೆಗೂ, ರನ್ಯಾ ರಾವ್ ಪ್ರಕರಣಕ್ಕೂ ಸಂಬಂಧ ಇಲ್ಲ’ ಎಂದರು.

ಪರಮೇಶ್ವರ ಶಿಕ್ಷಣ ಸಂಸ್ಥೆಗಳಲ್ಲಿ ಶೋಧ ಮುಕ್ತಾಯ

ಬೆಂಗಳೂರು/ತುಮಕೂರು: ಗೃಹ ಸಚಿವ ಜಿ.ಪರಮೇಶ್ವರ ಮುಖ್ಯಸ್ಥರಾಗಿರುವ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ವಿವಿಧ ಕಾಲೇಜು ಮತ್ತು ಕಚೇರಿಗಳಲ್ಲಿ ಬುಧವಾರದಿಂದ ನಡೆಸುತ್ತಿದ್ದ ಶೋಧ ಕಾರ್ಯವನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಗುರುವಾರ ಮಧ್ಯಾಹ್ನ ಕೊನೆಗೊಳಿಸಿದ್ದಾರೆ.

ಇದೇ ವೇಳೆ ಕೊಪ್ಪಳದ ಕೋಳಿ ಫಾರ್ಮ್ ಒಂದರಲ್ಲಿ ನಡೆಸುತ್ತಿದ್ದ ಶೋಧವನ್ನೂ ಇ.ಡಿ ಅಧಿಕಾರಿಗಳು ಪೂರ್ಣಗೊಳಿಸಿದ್ದಾರೆ.

30ಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಅಧಿಕಾರಿಗಳು ಬುಧವಾರ ಬೆಳಿಗ್ಗೆ ಶೋಧಕಾರ್ಯ ಆರಂಭಿಸಿದ್ದರು. ತಮಕೂರಿನ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಧ್ಯಾಹ್ನ 1.30ಕ್ಕೆ, ಹೆಗ್ಗೆರೆಯ ಸಿದ್ಧಾರ್ಥ ವೈದ್ಯಕೀಯ ಕಾಲೇಜು ಮತ್ತು ನೆಲಮಂಗಲದ ಟಿ.ಬೇಗೂರಿನಲ್ಲಿರುವ ವೈದ್ಯಕೀಯ ಕಾಲೇಜಿನಲ್ಲಿ ಮಧ್ಯಾಹ್ನ 3.30ರ ವೇಳೆಗೆ ಶೋಧಕಾರ್ಯ ಮುಗಿಸಿದರು.

‘ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳ ಬ್ಯಾಂಕ್ ವಹಿವಾಟು, ಹಣಕಾಸಿಗೆ ಸಂಬಂಧಿಸಿದ ಲೆಕ್ಕಪತ್ರ, ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸಿದರು. ಇ.ಡಿಯ ಕೇಂದ್ರ ಕಚೇರಿಯಿಂದ ಬರುತ್ತಿದ್ದ ಸೂಚನೆಯ ಅನುಸಾರ ಅಧಿಕಾರಿಗಳು ದಾಖಲೆ ಪತ್ರಗಳನ್ನು ಕೇಳಿ ಪಡೆದುಕೊಂಡರು. ದಾಖಲೆಗಳ ಪರಿಶೀಲನೆ ವೇಳೆ ಸಿಬ್ಬಂದಿಯಿಂದ ವಿವರಣೆ, ಸ್ಪಷ್ಟನೆ ಕೇಳಿದರು’ ಎಂದು ಮೂಲಗಳು ತಿಳಿಸಿವೆ.

‘ಇ.ಡಿ ಅಧಿಕಾರಿಗಳು ಕೆಲ ದಾಖಲೆಗಳು, ಹಾರ್ಡ್‌ ಡಿಸ್ಕ್‌ಗಳನ್ನು ವಶಕ್ಕೆ ಪಡೆದಿದ್ದಾರೆ. 2019ರಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನಡೆಸಿದ ಶೋಧ ಕಾರ್ಯದ ಬಗ್ಗೆಯೂ ಮಾಹಿತಿ ಕೇಳಿದರು’ ಎಂದು ಮೂಲಗಳು ಹೇಳಿವೆ.

‘ಶಿಕ್ಷಣ ಸಂಸ್ಥೆಯ ಬ್ಯಾಂಕ್ ಖಾತೆಗಳಿಂದ ಭದ್ರತಾ ಏಜೆನ್ಸಿ, ಕಟ್ಟಡ ಒಳಾಂಗಣ ವಿನ್ಯಾಸ ಕಂಪನಿಯ ಖಾತೆಗೆ ಹಣ ವರ್ಗಾವಣೆ ಆಗಿದೆ. ಆದರೆ ಆ ಹಣವನ್ನು ಏಕೆ ವರ್ಗಾವಣೆ ಮಾಡಲಾಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳುವ ದಾಖಲೆಗಳು ಲೆಕ್ಕಪತ್ರಗಳಲ್ಲಿ ಇಲ್ಲ. ಈ ಬಗ್ಗೆ ಹೆಚ್ಚಿನ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಇ.ಡಿ ಮೂಲಗಳು ಮಾಹಿತಿ ನೀಡಿವೆ.

ಡಿಕೆಶಿ ಅವರನ್ನೇ ಕೇಳಿ: ಪರಮೇಶ್ವರ

‘ರನ್ಯಾ ರಾವ್‌ಗೆ ಉಡುಗೊರೆ ಯಾಗಿ ಹಣ ಕೊಟ್ಟಿರಬಹುದು’ ಎಂಬ ಶಿವಕುಮಾರ್ ಅವರ ಮಾತಿಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಪರಮೇಶ್ವರ ಈ ಕುರಿತು ಮಾಹಿತಿ ಇಲ್ಲ. ಅವರನ್ನೇ ಕೇಳಿ ಎಂದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದ ಕಾರಣಕ್ಕಾಗಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯಲ್ಲಿ ಇ.ಡಿ. ಅಧಿಕಾರಿಗಳು ತಪಾಸಣೆ ನಡೆಸಿದ್ದಾರೆ ಎಂದು ಯಾರು ಹೇಳಿದ್ದಾರೆ’ ಎಂದು ಪ್ರಶ್ನಿಸಿದರು. ‘ಯಾರೋ ಹೇಳಿದ ತಕ್ಷಣ ಉತ್ತರ ಕೊಡಲು ಸಾಧ್ಯವಿಲ್ಲ. ಮೊದಲು ತನಿಖೆ ನಡೆದು, ವರದಿ ಬರಲಿ ನೋಡೋಣ’ ಎಂದರು.

ದಾಖಲೆ ಎಲ್ಲಿದೆ: ಗೃಹ ಸಚಿವ ಪ್ರಶ್ನೆ

‘ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲೇ ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಶೋಧ ನಡೆಸಲಾಗಿದೆ ಎಂದು ನಿಮಗೆ ಹೇಳಿದವರು ಯಾರು’ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಸುದ್ದಿಗಾರರನ್ನು ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ಬಗ್ಗೆ ಅಧಿಕೃತ ದಾಖಲೆ ಅಥವಾ ವರದಿ ಇದೆಯೇ? ಅಧಿಕೃತವಾಗಿ ಇಲ್ಲದೇ ಇರುವ ಯಾವ ವಿಚಾರದ ಬಗ್ಗೆಯೂ ನಾನು ಉತ್ತರಿಸುವುದಿಲ್ಲ. ಇ.ಡಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ತನಿಖೆ ನಡೆಸಿ, ವರದಿ ನೀಡಲಿ. ಆನಂತರ ಮಾತನಾಡುತ್ತೇನೆ’ ಎಂದರು.

ರನ್ಯಾ ರಾವ್ ಅವರ ಕ್ರೆಡಿಟ್ ಕಾರ್ಡ್‌ಗೆ ನಿಮ್ಮ ಶಿಕ್ಷಣ ಸಂಸ್ಥೆಯಿಂದ ₹40 ಲಕ್ಷ ವರ್ಗಾವಣೆ ಆಗಿದೆ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ‘ಇದಕ್ಕೆ ಸಂಬಂಧಿಸಿದ ದಾಖಲೆ ನಿಮ್ಮ ಬಳಿ ಇದೆಯೇ? ಇದ್ದರೆ ತೋರಿಸಿ’ ಎಂದರು.

‘ಇ.ಡಿ ಅಧಿಕಾರಿಗಳು ಕೇಳಿದ ಎಲ್ಲ ದಾಖಲೆ ಕೊಡಲು ಸಂಸ್ಥೆಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಎರಡನೇ ದಿನವೂ ಪರಿಶೀಲನಾ ಕಾರ್ಯ ಮುಂದುವರಿದಿದೆ. ಅವರ ಉದ್ದೇಶ ಗೊತ್ತಿಲ್ಲ. ಮೊದಲಿನಿಂದಲೂ ಕಾನೂನಿಗೆ ಗೌರವಕೊಟ್ಟು ಕೊಂಡು ಬಂದಿದ್ದೇನೆ. ಕಾನೂನು ಎಲ್ಲರಿಗೂ ಒಂದೇ. ತನಿಖೆಗೆ ಸಹಕಾರ ನೀಡುತ್ತೇನೆ’ ಎಂದರು.

‘ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ 68 ವರ್ಷಗಳಾಗಿವೆ. ಎರಡು ವೈದ್ಯಕೀಯ ಕಾಲೇಜು, ಎಂಜಿನಿಯರಿಂಗ್ ಕಾಲೇಜುಗಳಿವೆ. ಇದುವರೆಗೆ 40 ಸಾವಿರ ಎಂಜಿನಿಯರ್‌ಗಳು, 10 ಸಾವಿರ ವೈದ್ಯರನ್ನು ರೂಪಿಸಲಾಗಿದೆ. ಮಾಜಿ ಶಾಸಕ ಶಫಿ ಅಹಮದ್ ಅವರಿಗೆ ಸೇರಿದ ಎಚ್‌ಎಂಎಸ್ ಎಂಜಿನಿಯರಿಂಗ್ ಕಾಲೇಜು ನಷ್ಟದಲ್ಲಿದ್ದ ಕಾರಣ ನಮ್ಮ ಸಂಸ್ಥೆಗೆ ನೀಡಿದ್ದಾರೆ. ನಮ್ಮ ತಂದೆ ಸೇರಿದಂತೆ ಹಿರಿಯರು ಕಟ್ಟಿದ ಸಂಸ್ಥೆಯನ್ನು ಬೆಳೆಸುವುದೇ ತಪ್ಪಾ’ ಎಂದು ಪ್ರಶ್ನಿಸಿದರು.

‘ಬಾನು, ದೀಪಾಗೆ ಸಂಪುಟ ಅಭಿನಂದನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿ ಅವರಿಗೆ ರಾಜ್ಯ ಸಚಿವ ಸಂಪುಟ ಅಭಿನಂದನೆ ಸಲ್ಲಿಸಿದೆ.

‘ಬಾನು ಮುಷ್ತಾಕ್ ಅವರು ಸಮ್ಮತಿಸಿದರೆ ಬೆಂಗಳೂರಿನಲ್ಲಿ ಬಿಡಿಎಯಿಂದ ಜಿ ಕೆಟಗರಿ ನಿವೇಶನ ನೀಡಲು ಸಂಪುಟ ತೀರ್ಮಾನಿಸಿತು’ ಎಂದು ಸಭೆಯ ಬಳಿಕ ಸಚಿವ ಎಚ್‌.ಕೆ.ಪಾಟೀಲ್ ತಿಳಿಸಿದರು.

‘ಬೂಕರ್ ಪ್ರಶಸ್ತಿ’ ಸಾಹಿತಿಗಳ ಸಂತಸ

‘ಕನ್ನಡ ಸಾಹಿತ್ಯಕ್ಕೆ ಹೆಮ್ಮೆ’

ಬಾನು ಮುಷ್ತಾಕ್ ಅವರ ಕೃತಿಗೆ ‘ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ’ ಬಂದದ್ದು ಕರ್ನಾಟಕಕ್ಕೆ ಮತ್ತು ಕನ್ನಡ ಸಾಹಿತ್ಯಕ್ಕೆ ಹೆಮ್ಮೆಯ ಸಂಗತಿ. ಪ್ರಗತಿಪರ ಚಳವಳಿಗಳ ಸಂಗಾತಿಗೆ ಈ ಪ್ರಶಸ್ತಿ ಬಂದದ್ದು, ಮನಸ್ಸು ತುಂಬಿ ಬಂದಿದೆ. ಬಾನು ಮುಷ್ತಾಕ್ ಅವರು ಬಂಡಾಯ ಸಾಹಿತ್ಯ ಚಳವಳಿಯ ಮೂಲಕ ಬದ್ಧತೆಯಿಂದ ಬೆಳೆದು ಬಂದ ಲೇಖಕಿ ಎಂಬುದು ಮತ್ತಷ್ಟು ಹೆಮ್ಮೆಯ ಸಂಗತಿ. ಅವರ ಕಥನ ಸಾಹಿತ್ಯವು ಕನ್ನಡಕ್ಕೆ ಹೊಸ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿನ್ಯಾಸಗಳನ್ನು ಪರಿಚಯಿಸಿದೆ. ಬಹು ಸಂಸ್ಕೃತಿಗಳ ಭಾರತದ ಪ್ರತಿಪಾದಕರಾದ ಅವರು ನಮಗೆಲ್ಲ ಹೆಮ್ಮೆ ತಂದಿದ್ದಾರೆ.

ಬರಗೂರು ರಾಮಚಂದ್ರಪ್ಪ, ಸಾಹಿತಿ

‘ವಿಶ್ವಶಾಂತಿ, ಸೌಹಾರ್ದಕ್ಕೆ ಸಂದ ಜಯ’

ಹತ್ತು ಹಲವು ಸವಾಲುಗಳನ್ನು ಧೈರ್ಯದಿಂದ ಎದುರಿಸಿ, ಕನ್ನಡ ಸಾಹಿತ್ಯಕ್ಕೆ, ಕನ್ನಡ ಭಾಷೆಯ ಪ್ರಾಯೋಗಿಕತೆಗೆ ಮತ್ತು ಮಹಿಳಾ ಅಸ್ಮಿತೆಗೆ ಅವರು ನೀಡಿದ ಕೊಡುಗೆಗಳಿಗೆ ಸಂದ ಪುರಸ್ಕಾರವಿದು. ಸೋಲರಿಯದೆ, ದಿಟ್ಟತನದಿಂದ, ಛಲದಿಂದ ಮುಂದುವರಿದ ಅವರ ನಡೆ ನಾಡಿನ ಹಲವರಿಗೆ, ಅದರಲ್ಲೂ ಮಹಿಳೆಯರಿಗೆ ಮಾದರಿಯಾಗಿದೆ. ಧರ್ಮಾಂಧತೆ, ಮತಾಂಧತೆಗಳ ವಿಷ ಬಿತ್ತುತ್ತಿರುವ ಈ ಹೊತ್ತಿನಲ್ಲಿ ಈ ಪ್ರಶಸ್ತಿಯ ಗರಿಯನ್ನು ಮುಡಿಗೇರಿಸಿಕೊಂಡ ಬಾನು ಅವರು ನಮ್ಮ ಹೆಮ್ಮೆ. ಇದೊಂದು ಐತಿಹಾಸಿಕ ನಡೆ ಮಾತ್ರವಲ್ಲ, ವಿಶ್ವಶಾಂತಿ ಮತ್ತು ಸೌಹಾರ್ದಕ್ಕೆ ಸಂದ ಜಯ.

ಮೀನಾಕ್ಷಿ ಬಾಳಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಅಧ್ಯಕ್ಷೆ

‘ಮನಸ್ಸು, ದೇಹ ಪುಳಕಗೊಂಡಿದೆ’

ಕನ್ನಡ ಬಾನಿನಲ್ಲಿ ದೀಪ ಹಚ್ಚಿದ ಕನ್ನಡತಿಯರಾದ ನಿಮಗೆ ಸಾವಿರದ ಶರಣು. ಕನ್ನಡದ ಕೀರ್ತಿಯನ್ನು ದೂರದ ದೇಶದಲ್ಲಿ ಹಾಡಿ ಕೊಂಡಾಡಿದ್ದೀರಿ. ಹೀಗಳೆಯುವವರ ಮೂಗು ಮುರಿದಿದ್ದೀರಿ. ನಿಮ್ಮ ಈ ಸಾಧನೆಯಿಂದ ಮನಸ್ಸು, ದೇಹ ಪುಳಕಗೊಂಡಿದೆ. ಕಣ್ಣಾಲಿಗಳು ಒದ್ದೆಯಾಗಿವೆ. ಹೀಗೆ ಇನ್ನೂ ಉನ್ನತ ಶಿಖರವೇರುತ್ತಾ ಕೀರ್ತಿ ಪತಾಕೆ ಹಾರಿಸುತ್ತಿರಿ.

ಬಿ.ಜಯಶ್ರೀ, ರಂಗಕರ್ಮಿ

ಸಂಕ್ಷಿಪ್ತ ಸುದ್ದಿ

ಜೂನ್ 13ರಿಂದ ಶಾಲೆ ತೊರೆದು ಪ್ರತಿಭಟನೆ

ಬೆಂಗಳೂರು: ‘ಅತಿಥಿ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜೂನ್ 13 ರಿಂದ ಶಾಲೆ ತೊರೆದು ಪ್ರತಿಭಟಿಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಗೌರವ ಅಧ್ಯಕ್ಷ ಎನ್. ಅನಂತನಾಯ್ಕ್, ಅಧ್ಯಕ್ಷ ಹನುಮಂತ ಎಚ್‌.ಎಸ್‌., ‘ಅತಿಥಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಮೆರಿಟ್ ಪದ್ಧತಿಯನ್ನು ಕೈಬಿಟ್ಟು, ಸೇವಾ ಹಿರಿತನವನ್ನು ಪರಿಗಣಿಸಬೇಕು’ ಎಂದು ಒತ್ತಾಯಿಸಿದರು.

‘ಈಗ ವರ್ಷದಲ್ಲಿ ಕೇವಲ 10 ತಿಂಗಳು ಮಾತ್ರ ಕೆಲಸವಿದ್ದು, ತಿಂಗಳಿಗೆ ₹12 ಸಾವಿರ ವೇತನ ನೀಡಲಾಗುತ್ತದೆ. ಇದರಿಂದ, ಜೀವನ ನಿರ್ವಹಣೆ ಕಷ್ಟವಾಗಿದೆ. ಆದ್ದರಿಂದ ಗೌರವ ಧನದ ಮೊತ್ತವನ್ನು ತಿಂಗಳಿಗೆ ₹25 ಸಾವಿರಕ್ಕೆ ಹೆಚ್ಚಿಸಬೇಕು’ ಎಂದು ಒತ್ತಾಯಿಸಿದರು.

‘ನೇಮಕಾತಿ ಸಂದರ್ಭದಲ್ಲಿ 5 ಕೃಪಾಂಕಗಳನ್ನು ನೀಡಬೇಕು. ಸುಪ್ರೀಂ ಕೋರ್ಟ್‌ನ ಆದೇಶದಂತೆ ಈ ವರ್ಷದಿಂದ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೊಳಿಸಬೇಕು. ಅತಿಥಿ ಶಿಕ್ಷಕರ ಸೇವೆಯನ್ನು ಕಾಯಂಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಅತ್ಯಾಚಾರ: ಅಪರಾಧಿಗೆ 20 ವರ್ಷ ಜೈಲು

ಕೊಪ್ಪಳ: ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿ, ಅಪಹರಿಸಿದ ಆರೋಪ ಸಾಬೀತಾಗಿದ್ದರಿಂದ ಅಪರಾಧಿ ಮಹಾಂತೇಶ ಭೀಮಪ್ಪ ಟಕ್ಕಳಕಿ ಎಂಬಾತನಿಗೆ ಇಲ್ಲಿನ ಪೋಕ್ಸೊ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕುಮಾರ ಡಿ.ಕೆ ಅವರು 20 ವರ್ಷ ಜೈಲು ಹಾಗೂ ₹20 ಸಾವಿರ ದಂಡ ವಿಧಿಸಿದ್ದಾರೆ.

ಕುಷ್ಟಗಿ ತಾಲ್ಲೂಕಿನ ತೋಪಲಕಟ್ಟಿ ಗ್ರಾಮದ ಮಹಾಂತೇಶ ಪ್ರೀತಿಸಿ ವಿವಾಹವಾಗುವುದಾಗಿ ಬಾಲಕಿಯನ್ನು ನಂಬಿಸಿದ್ದಾನೆ. ಮನೆಯಲ್ಲಿ ಒಬ್ಬಳೇ ಇದ್ದಾಗ ಮನೆಯ ಹಿಂದಿನ ಶೆಡ್ಡಿಗೆ ಕರೆದೊಯ್ದು ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದ. ಹೊಲಕ್ಕೆ ಕರೆದುಕೊಂಡು ಹೋಗಿ ಇದೇ ಕೃತ್ಯ ಎಸಗಿದ್ದ. ಬಳಿಕ ಅಪಹರಿಸಿ ಬಾಲ್ಯ ವಿವಾಹವಾಗಿದ್ದ ಎಂದು 2023ರಲ್ಲಿ ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪ್ರಕರಣದ ತನಿಖೆ ನಡೆಸಿದ ಸಿಪಿಐ ನಿಂಗಪ್ಪ ಎನ್‌.ಆರ್‌. ಅವರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಗೌರಮ್ಮ ದೇಸಾಯಿ ವಾದ ಮಂಡಿಸಿದ್ದರು.

ಮೋದಿ ಅವಹೇಳನ ಪ್ರಕರಣ ದಾಖಲು

ಶಿವಮೊಗ್ಗ: ಪ್ರಧಾನಿ ನರೇಂದ್ರ ಮೋದಿ ಅವರನ್ನು ಅವಹೇಳನಕಾರಿಯಾಗಿ ಬಿಂಬಿಸಿರುವ ಗ್ರಾಫಿಕ್ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಇಲ್ಲಿನ ಆರ್‌ಎಂಎಲ್ ನಗರದ ನಿವಾಸಿ ಮುಜಮಿಲ್ ಮುಜ್ (38) ವಿರುದ್ಧ ದೊಡ್ಡಪೇಟೆ ಠಾಣೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಧಾನಿ ಮೋದಿ ಅವರನ್ನು ಪಾಕಿಸ್ತಾನದ ರಾವಲ್ಪಿಂಡಿಯ ಜೈಲಿನೆದುರು ನಿಲ್ಲಿಸಿರುವಂತೆ, ರಕ್ತಸಿಕ್ತ ಉಡುಗೆಯಲ್ಲಿರುವ ಮೋದಿ ಕೈಗಳಿಗೆ ಇಬ್ಬರು ಸೈನಿಕರು ಕೋಳ ತೊಡಿಸಿರುವಂತೆ ಚಿತ್ರಿಸಿ, ಪಾಕ್ ಮತ್ತು ಭಾರತದ ನಡುವೆ ಯುದ್ಧದ ವಾತಾವರಣ ನಿರ್ಮಾಣಗೊಂಡಾಗ ಫೇಸ್‌ಬುಕ್ ಖಾತೆಯಲ್ಲಿ ಹರಿಬಿಟ್ಟಿದ್ದ.

ಪ್ರಸ್ತುತ ಉದ್ಯೋಗ ನಿಮಿತ್ತ ದುಬೈನಲ್ಲಿ ನೆಲೆಸಿರುವ ಮುಜಮಿಲ್ ವಿರುದ್ಧ ರಾಷ್ಟ್ರ ವಿರೋಧಿ ಮತ್ತು ಸಾರ್ವಜನಿಕರ ಭಾವನೆ ಕೆರಳಿಸಿರುವ ಆರೋಪದ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಮೃತ ರೈಲು ನಿಲ್ದಾಣಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಚಿವ ಸೋಮಣ್ಣ

ರಾಜ್ಯದ 61 ರೈಲು ನಿಲ್ದಾಣಗಳು ವಿಶ್ವದರ್ಜೆಗೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಅಮೃತ ನಿಲ್ದಾಣಗಳ ಯೋಜನೆಯಡಿ ದೇಶದ 103 ರೈಲು ನಿಲ್ದಾಣಗಳು ಪುನರಾಭಿವೃದ್ಧಿಯಾಗಿದ್ದು, ಅವುಗಳಲ್ಲಿ ರಾಜ್ಯದ ಧಾರವಾಡ, ಗದಗ, ಬಾಗಲಕೋಟೆ, ಗೋಕಾಕ ರೋಡ ರೈಲು ಮತ್ತು ಮುನಿರಾಬಾದ್ ನಿಲ್ದಾಣ ಕೂಡ ಸೇರಿದೆ. ಎಲ್ಲಾ ನಿಲ್ದಾಣಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು.

ಬಾಗಲಕೋಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರೈಲ್ವೆ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ ಮಾತನಾಡಿ, ಬಾರತ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಸಂಸ್ಥೆಯಲ್ಲಿ 50 ವಂದೇ ಭಾರತ್ ರೈಲುಗಳನ್ನು ನಿರ್ಮಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬಾಗಲಕೋಟೆಗೂ ವಂದೇ ಭಾರತ್ ರೈಲು ಸಂಚಾರ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘₹1,110 ಕೋಟಿ ವೆಚ್ಚದಲ್ಲಿ 103 ರೈಲ್ವೆ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ₹7.50 ಲಕ್ಷ ಕೋಟಿ ವೆಚ್ಚದಲ್ಲಿ ರೈಲ್ವೆ ಮಾರ್ಗ ಹಾಗೂ ದೇಶದಲ್ಲಿ 670 ಕೆಳಸೇತುವೆ, 161 ಮೇಲ್ಸೇತುವೆ ನಿರ್ಮಿಸಲಾಗುತ್ತಿದೆ. ₹2,000 ಕೋಟಿ ವೆಚ್ಚದಲ್ಲಿ ವಿದ್ಯುದ್ದೀಕರಣ ಪ್ರಕ್ರಿಯೆ ಪ್ರಗತಿಯಲ್ಲಿದೆ’ ಎಂದರು.

ಧಾರವಾಡದಲ್ಲಿ ಅಮೃತ ರೈಲು ನಿಲ್ದಾಣ ಉದ್ಘಾಟನಾ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿದರು. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಮೇಯರ್ ರಾಮಪ್ಪ ಬಡಿಗೇರ, ಸಭಾಪತಿ ಬಸವರಾಜ ಹೊರಟ್ಟಿ, ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಮುಕುಲ್ ಸರಣ್ ಮಾತೂರ್, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಾಕಿರ್ ಸನದಿ ಹಾಗೂ ರೈಲ್ವೆ ಐಜಿಪಿ ಆರ್‌.ಎಸ್‌.ಪಿ.ಸಿಂಗ್ ಉಪಸ್ಥಿತರಿದ್ದರು

ಧಾರವಾಡದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ‘ರಾಜ್ಯದಲ್ಲಿ ಪ್ರಸ್ತುತ ₹ 50,792 ಕೋಟಿ ವೆಚ್ಚದ ರೈಲ್ವೆ ಕಾಮಗಾರಿಗಳು ನಡೆದಿವೆ. 2025–26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ₹ 7,564 ಕೋಟಿ ಅನುದಾನ ಹಂಚಿಕೆಯಾಗಿದೆ, 61 ನಿಲ್ದಾಣಗಳನ್ನು ವಿಶ್ವದರ್ಜೆಗೆ ಏರಿಸಲಾಗುವುದು’ ಎಂದರು.

‘ಅಹಮದಾಬಾದ್ – ಮುಂಬೈ ಮಾರ್ಗದಲ್ಲಿ ಬುಲೆಟ್ ರೈಲು ಸಂಚಾರಕ್ಕೆ ಕಾಮಗಾರಿ ತ್ವರಿತವಾಗಿ ನಡೆದಿದೆ. ಜರ್ಮನ್, ಜಪಾನ್‌ನಲ್ಲಿ ಇರುವ ವೇಗದ ರೈಲು ವ್ಯವಸ್ಥೆಯನ್ನು ಭಾರತದಲ್ಲೂ ಪರಿಚಯಿಸುವ ಗುರಿಯಿದೆ’ ಎಂದರು.

ಗದಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ‘ರಾಜ್ಯದ ವಿವಿಧೆಡೆ ಈವರೆಗೆ ₹51 ಸಾವಿರ ಕೋಟಿಯಷ್ಟು ವೆಚ್ಚದ ರೈಲ್ವೆ ಕೆಲಸಗಳು ನಡೆದಿದೆ. 2025–26ನೇ ಸಾಲಿಗೆ ಕೇಂದ್ರ ಸರ್ಕಾರ ರಾಜ್ಯಕ್ಕೆ ₹7,500 ಕೋಟಿ ಹಣ ಬಿಡುಗಡೆ ಮಾಡಿದೆ’ ಎಂದರು.

‘50 ವರ್ಷ ಅಧಿಕಾರದಲ್ಲಿದ್ದ ಕಾಂಗ್ರೆಸ್ ಅವಧಿಯಲ್ಲಿ 20 ಸಾವಿರ ಕಿ.ಮೀ. ರೈಲ್ವೆ ಮಾರ್ಗ ವಿದ್ಯುದೀಕರಣಗೊಂಡಿದ್ದರೆ; ಬಿಜೆಪಿ ಅಧಿಕಾರಕ್ಕೆ ಬಂದ 10 ವರ್ಷಗಳಲ್ಲಿ 40 ಕಿ.ಮೀ. ರೈಲ್ವೆ ಮಾರ್ಗ ವಿದ್ಯುದೀಕರಣಗೊಂಡಿದೆ. ಇನ್ನೂ 68 ಸಾವಿರ ಕಿ.ಮೀ. ರೈಲು ಮಾರ್ಗ ವಿದ್ಯುದೀಕರಣಗೊಳಿಸುವ ಗುರಿಯಿದೆ’ ಎಂದರು.

ಮುನಿರಾಬಾದ್ ನವೀಕೃತ ರೈಲು ನಿಲ್ದಾಣ ಲೋಕಾರ್ಪಣೆ

ಕೊಪ್ಪಳ: ತಾಲ್ಲೂಕಿನ ಹುಲಿಗಿ ಗ್ರಾಮದಲ್ಲಿರುವ ಮುನಿರಾಬಾದ್ ರೈಲು ನಿಲ್ದಾಣವನ್ನು ಕೇಂದ್ರ ಸರ್ಕಾರದ ‘ಅಮೃತ್ ಭಾರತ್’ ಯೋಜನೆಯಡಿ ₹18.40 ಕೋಟಿ ವೆಚ್ಚದಲ್ಲಿ ಪುನರ್ ನವೀಕರಣ ಮಾಡಲಾಗಿದ್ದು, ಪ್ರಧಾನಿ ನರೇಂದ್ರ ಮೋದಿ ವರ್ಚುವಲ್ ಮೂಲಕ ಗುರುವಾರ ಉದ್ಘಾಟಿಸಿದರು. ಸ್ಥಳೀಯವಾಗಿ ನಡೆದ ಕಾರ್ಯಕ್ರಮವನ್ನು ಸಂಸದ ರಾಜಶೇಖರ ಹಿಟ್ನಾಳ ಉದ್ಘಾಟನೆ ಮಾಡಿದರು.

ಜಟಾಪಟಿ: ಕೇಂದ್ರ ಸರ್ಕಾರದ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳ ಜೊತೆಗೆ ಕಾಂಗ್ರೆಸ್ ನಾಯಕರನ್ನೂ ವೇದಿಕೆ ಮೇಲೆ ಕೂಡಿಸಿದ್ದಕ್ಕೆ ಬಿಜೆಪಿ ಕಾರ್ಯಕರ್ತರು ಆಕ್ಷೇಪ ವ್ಯಕ್ತಪಡಿಸಿದರು. ‘ಸರ್ಕಾರದ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಪಾಲಿಸಬೇಕು. ರಾಜಕಾರಣ ಮಾಡುವುದು ಸರಿಯಲ್ಲ’ ಎಂದು ಬಿಜೆಪಿ ಮುಖಂಡರು ರೈಲ್ವೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಬಳಿಕ ನಿಲ್ದಾಣ ಮುಂಭಾಗದಲ್ಲಿ ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿದರು.

ರಭಸದ ಮಳೆ: ಕೊಚ್ಚಿ ಹೋದ ಸೇತುವೆ

ಅಂಕೋಲಾದಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಯುವಕ ಸಾವು • ಹೊಸಪೇಟೆ – 50 ಎಕರೆ ಬೆಳೆ ನಾಶ

ಪ್ರಜಾವಾಣಿ ವಾರ್ತೆ

ಕಲಬುರ್ಗಿ/ಹುಬ್ಬಳ್ಳಿ: ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮುಂಗಾರು ಪೂರ್ವ ಮಳೆಯ ಅಬ್ಬರ ಮುಂದುವರಿದಿದೆ. ವಿಜಯನಗರ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಯ ವಿವಿಧೆಡೆ ಗುರುವಾರ ಉತ್ತಮ ಮಳೆಯಾಯಿತು.

ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಮಳೆ ಮತ್ತು ರಭಸದ ಗಾಳಿಗೆ ಮರಗಳು ಉರುಳಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ರಸ್ತೆಯ ಮೇಲೆ ಬಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಅಂಕೋಲಾ ತಾಲ್ಲೂಕಿನ ದಂಡೇಭಾಗದಲ್ಲಿ ಮಹಾಂತೇಶ ದೇವೇಂದ್ರ ಬಾನಾವಳೇಕರ (25) ಎಂಬುವವರು ಮೃತಪಟ್ಟಿದ್ದಾರೆ.

ಹೊಸಪೇಟೆ ತಾಲ್ಲೂಕಿನ ವಡ್ಡರಹಳ್ಳಿ, ಪಿ.ಕೆ.ಹಳ್ಳಿ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಅವೈಜ್ಞಾನಿಕ ಕಾಮಗಾರಿಯಿಂದ ಮಳೆ ನೀರು ನಿಂತು, 50 ಎಕರೆ ಬೆಳೆ ನಾಶವಾಗಿದೆ. ಮರಿಯಮ್ಮನಹಳ್ಳಿ ಸಮೀಪದ ತಾಳೆಬಸಾಪುರ ತಾಂಡಾದಲ್ಲಿ ಮನೆಯರ ಚಾವಣಿ ಹಾರಿಹೋಗಿದೆ. ಹೊಸಪೇಟೆ-ಬಳ್ಳಾರಿ ನಡುವಿನ ರಾಷ್ಟ್ರೀಯ ಹೆದ್ದಾರಿ-67 ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿ ಇದ್ದು, ಕಮಲಾಪುರ ಕೆರೆಗೆ ಸಂಪರ್ಕ ಕಲ್ಪಿಸುವ ಹಳ್ಳ ಮುಚ್ಚಿಹೋಗಿದೆ. ಕೊಟ್ಟೂರು ತಾಲ್ಲೂಕಿನಲ್ಲಿ ಎರಡು ಮನೆಗಳು, ಹರಪನಹಳ್ಳಿ ತಾಲ್ಲೂಕಿನ ಮೈದೂರು ಗ್ರಾಮದಲ್ಲಿ ಒಂದು ಮನೆ ಹಾನಿಗೊಂಡಿದೆ.

ಬೀದರ್ ಜಿಲ್ಲೆಯಾದ್ಯಂತ ಬುಧವಾರ ರಾತ್ರಿಯಿಂದ ಗುರುವಾರ ಬೆಳಗಿನವರೆಗೆ ಧಾರಾಕಾರ ಮಳೆಯಾಗಿದೆ. ಸತತ ಮಳೆಗೆ ಬಸವಕಲ್ಯಾಣ ತಾಲ್ಲೂಕಿನ ಗೌರ ಗ್ರಾಮದಲ್ಲಿ ಸೇತುವೆ ಕೊಚ್ಚಿ ಹೋಗಿದ್ದು, ವಾಹನ ಸಂಚಾರ ಸ್ಥಗಿತಗೊಂಡಿದೆ. ಈ ರಸ್ತೆಯು ಬಸವಕಲ್ಯಾಣ, ಹುಲಸೂರ ಹಾಗೂ ಮಹಾರಾಷ್ಟ್ರದ ಶಹಾಜಹಾನಿ, ಔರಾದ್‌ಗೆ ಸಂಪರ್ಕ ಕಲ್ಪಿಸುತ್ತದೆ.

ಬಿರುಸಿನ ಮಳೆಗೆ ಔರಾದ್ ತಾಲ್ಲೂಕಿನ ಸುಂದಾಳ ಗ್ರಾಮದ ಬಸವರಾಜ ಅವರ ಅರ್ಧ ಎಕರೆಯಲ್ಲಿನ ನಿಂಬೆ ಗಿಡಗಳು ಹಾಳಾಗಿವೆ.

ಜಿಲ್ಲೆಯ ಹುಮನಾಬಾದ್, ಭಾಲ್ಕಿ ಹಾಗೂ ಔರಾದ್‌ನಲ್ಲಿ ಮಳೆ ಸುರಿದಿದೆ. ಬೀದರ್ ನಗರ ಹಾಗೂ ಸುತ್ತಲಿನ ಭಾಗಗಳಲ್ಲಿ ದಿನವಿಡೀ ಮಳೆ ಬಿಡುವು ಕೊಟ್ಟಿತು. ಸಂಜೆ ಪುನಃ ದಟ್ಟ ಕಾರ್ಮೋಡ ಕವಿದು ಮಳೆಯಾಗಿದೆ. ಗುರುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಬೀದರ್ ಜಿಲ್ಲೆಯ ಬಸವಕಲ್ಯಾಣದ ಹರಕಾಪುರದಲ್ಲಿ 16.4 ಸೆಂ.ಮೀ ಮಳೆಯಾದ ಬಗ್ಗೆ ಹವಾಮಾನ ಇಲಾಖೆಯ ವರದಿ ಹೇಳಿದೆ.

ಕಲಬುರಗಿಯ ವಿವಿಧೆಡೆ ಗುರುವಾರ ಮಳೆ ಸುರಿದಿದೆ. ಚಿಂಚೋಳಿ, ಕಾಳಗಿಯಲ್ಲಿ ಕೆಲಕಾಲ ಮಳೆಯಾಗಿದೆ. ಕಮಲಾಪುರದಲ್ಲಿ ತಾಲ್ಲೂಕಿನ ಶ್ರೀಚಂದ ಗ್ರಾಮದ ರೈತ ಸುಭಾಷ ಹಣಮಂತಪ್ಪ ಮೇತ್ರಿ (61) ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಅರ್ಧ ತಾಸು ಜಿಟಿಜಿಟಿಯಾಗಿ ಮಳೆಯಾಗಿದೆ.

ಬೀದರ್ ಜಿಲ್ಲೆಯ ಬಸವಕಲ್ಯಾಣ ಮತ್ತು ಗೌರ ಗ್ರಾಮದ ನಡುವಿನ ಸೇತುವೆ ಮಳೆಗೆ ಕೊಚ್ಚಿ ಹೋಗಿದೆ

‘ಆಲಮಟ್ಟಿ ಅಣೆಕಟ್ಟೆ ಒಂದು ಮೀಟರ್ ಎತ್ತರಿಸಿ’

ವಿಜಯಪುರ: ‘ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 519 ರಿಂದ 520 ಮೀಟರ್ ಏರಿಸಲು ರಾಜ್ಯ ಸರ್ಕಾರವು ತಕ್ಷಣವೇ ಕ್ರಮ ಕೈಗೊಳ್ಳಬೇಕು. ಇದಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿ ಕಾನೂನು ತೊಡಕು ಆಗುವುದಿಲ್ಲವೆಂದು ನೀರಾವರಿ ತಜ್ಞ, ವಕೀಲ ಮೋಹನ್ ಕಾತರಕಿ ಸ್ಪಷ್ಟಪಡಿಸಿದ್ದಾರೆ’ ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಹೇಳಿದರು.

‘ಅಣೆಕಟ್ಟೆಯನ್ನು ಒಂದು ಮೀಟರ್ ಎತ್ತರಿಸುವುದರಿಂದ 25 ಸಾವಿರ ಎಕರೆ ಭೂಮಿ ಮುಳುಗಡೆ ಆಗಲಿದೆ. ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಮುಗಿದಿದೆ. ಭೂಮಿ ಕಳೆದುಕೊಳ್ಳುವ ಸಂತ್ರಸ್ತರಿಗೆ ಪರಿಹಾರ ನೀಡಲಾಗಿದೆ. ರಾಜ್ಯಕ್ಕೆ 30 ಟಿಎಂಸಿ ಅಡಿ ನೀರು ಬಳಕೆಗೆ ಲಭಿಸಲಿದೆ. 1 ಲಕ್ಷ ಎಕರೆಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದು ಮತ್ತು ವಿಜಯಪುರಕ್ಕೆ ಕುಡಿಯುವ ನೀರು ಪೂರೈಸಬಹುದು’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಅಣೆಕಟ್ಟೆಯ ಉದ್ದೇಶಿತ 524 ಮೀಟರ್‌ಗೆ ಎತ್ತರಿಸುವ ಕಾರ್ಯ ಒಮ್ಮೆಲೇ ಆಗದು. ಇದಕ್ಕೆ ₹1 ಲಕ್ಷ ಕೋಟಿ ಅನುದಾನ ಬೇಕು. ಸದ್ಯದ ಸ್ಥಿತಿಯಲ್ಲಿ ಹಂತಹಂತವಾಗಿ ಎತ್ತರಿಸುವುದೇ ಉತ್ತಮ ಪರಿಹಾರ’ ಎಂದರು.

ಡಿಟಿಎಚ್ ಸೇವೆಗೆ ಸೇವಾ, ಮನರಂಜನಾ ತೆರಿಗೆ

ನವದೆಹಲಿ (ಪಿಟಿಐ): ಡಿಟಿಎಚ್ ಸೇವೆಗಳ ಮೇಲೆ ರಾಜ್ಯ ಶಾಸನ ಸಭೆಗಳು ಹಾಗೂ ಸಂಸತ್ತು ಮನರಂಜನಾ ತೆರಿಗೆ ಹಾಗೂ ಸೇವಾ ತೆರಿಗೆ ವಿಧಿಸುವ ಅಧಿಕಾರ ಹೊಂದಿವೆ ಎಂದು ಸುಪ್ರೀಂ ಕೋರ್ಟ್ ಗುರುವಾರ ತೀರ್ಪು ನೀಡಿದೆ.

ಮನರಂಜನೆಯನ್ನು ಒದಗಿಸುವ ಡಿಟಿಎಚ್ ಸೇವೆ ನೀಡುವ ಕೆಲಸದಲ್ಲಿ ಇರುವವರು ತಾವು ಪ್ರಸಾರ ಮಾಡಿದ್ದಕ್ಕೆ ಸೇವಾ ತೆರಿಗೆ ನೀಡಬೇಕು ಹಾಗೂ ಮನರಂಜನಾ ತೆರಿಗೆ ಪಾವತಿಸಬೇಕು ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ಪೀಠವು ಹೇಳಿದೆ.

ಮನರಂಜನಾ ತೆರಿಗೆಯನ್ನು ವಿಧಿಸುವುದು ಅಸಾಂವಿಧಾನಿಕ ಎಂದು ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಪೀಠವು ಈ ತೀರ್ಪು ಪ್ರಕಟಿಸಿದೆ.

ವಾಯುಪಡೆ ಅಧಿಕಾರಿ ಸೇವೆಯಿಂದ ಬಿಡುಗಡೆ ಮಾಡದಿರಲು ಸೂಚನೆ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯಲ್ಲಿ ಪೂರ್ಣಾವಧಿ ನೇಮಕಾತಿಯ ಅವಕಾಶದಿಂದ ವಂಚಿತರಾಗಿದ್ದ ಮಹಿಳಾ ಅಧಿಕಾರಿ ನಿಕಿತಾ ಪಾಂಡೆ ಅವರನ್ನು ಸೇವೆಯಿಂದ ಬಿಡುಗಡೆ ಮಾಡಬಾರದು ಎಂದು ಕೇಂದ್ರ ಸರ್ಕಾರ ಮತ್ತು ವಾಯುಪಡೆಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚನೆ ನೀಡಿದೆ.

ಈ ಅಧಿಕಾರಿಯು ಬಾಲಾಕೋಟ್ ಕಾರ್ಯಾಚರಣೆ ಹಾಗೂ ಸಿಂಧೂರ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ನಡೆಸಿತು. ತಾರತಮ್ಯದ ಕಾರಣದಿಂದಾಗಿ ತಮಗೆ ಪೂರ್ಣಾವಧಿ ನೇಮಕಾತಿ ನೇಮಕಾತಿ ಸಿಕ್ಕಿಲ್ಲ ಎಂದು ಪಾಂಡೆ ಅವರು ದೂರಿದ್ದಾರೆ. ನ್ಯಾಯಪೀಠವು ವಿಚಾರಣೆಯನ್ನು ಆಗಸ್ಟ್ 6ಕ್ಕೆ ಮುಂದೂಡಿದೆ.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ರಾಯಚೂರು ಜಿಲ್ಲೆ, ರಾಯಚೂರು–584101

OFFICE OF THE DEPUTY COMMISSIONER, RAICHUR DISTRICT, RAICHUR-584101

District Administration Building, Eklaspur, Raichur

Telephone No:08532-229011, Fax:08532-229012, eMail ID:dcrevrcr@gmail.com

ಸಂಖ್ಯೆ:ಜಿಕಾರಾ::Jurala-Surplus Fund/01/2024–25 ದಿನಾಂಕ 13–05–2025

ಟೆಂಡರ್ ಪ್ರಕಟಣೆ.

1)ಸಂಗ್ರಹಣೆ ಮಾಡಬೇಕಾದ ವಿವರ:**Placing Surplus Fund in the Fixed Deposit.** ಮೊತ್ತ:ರೂ.4800–00ಲಕ್ಷಗಳು. **Card Rates quotetion** ಸಲ್ಲಿಸಲು ಕೊನೆಯ ದಿನಾಂಕ: **31.05.2025 @ 17.30 pm.**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ ಮತ್ತು ಪ್ರಿಬಿಡ್ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: **The Regional / Zonal/ Head Offices of Banks only shall participate and no individual bank branch shall participate in Card Rates/Quotation.**

ಸಹಿ/– ಜಿಲ್ಲಾಧಿಕಾರಿಗಳು
ರಾಯಚೂರು.

DIP/RCR/126/KSMC&A/126/2025-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–14/343/2025–26 ದಿನಾಂಕ: 21.05.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : (1) ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಬದನಗುಪ್ಪೆ–ಕೆಲ್ಲಂಬಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಪೀಠೋಪಕರಣಗಳನ್ನು ಒದಗಿಸುವುದು ಮತ್ತು ಜಂಗಲ್ ಕ್ಲಿಯರೆನ್ಸ್ ಮಾಡುವ ಕಾಮಗಾರಿ. (ರಸ್ತೆ ಸಂ. 3,5,6,7,9,9ಬಿ & 10). ವರ್ಗ–ಪರಿಶಿಷ್ಟ ಜಾತಿ. (3ನೇ ಕರೆ). (2) ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಬದನಗುಪ್ಪೆ–ಕೆಲ್ಲಂಬಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಪೀಠೋಪಕರಣಗಳನ್ನು ಒದಗಿಸುವುದು ಮತ್ತು ಜಂಗಲ್ ಕ್ಲಿಯರೆನ್ಸ್ ಮಾಡುವ ಕಾಮಗಾರಿ. (ರಸ್ತೆ ಸಂ. 8,1,2,&14). ವರ್ಗ–ಪರಿಶಿಷ್ಟ ಜಾತಿ. (3ನೇ ಕರೆ).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 02.06.2025 ಸಂಜೆ 4.30 ಗಂಟೆಯವರೆಗೆ

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/807/Zen/2025-26

ಕರ್ನಾಟಕ ಸರ್ಕಾರ GOVERNMENT OF KARNATAKA

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ

KOPPAL INSTITUTE OF MEDICAL SCIENCES (R), KOPPAL

ನೊಂದಣಿ ಸಂಖ್ಯೆ:KOL-S243–2012–13 ದಿನಾಂಕ:15–03–2013

(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)

Website : www.kimskoppal.com

email :directorkimskoppal@gmail.com

Office : 08539 225522 Office : 08539-225523

No:KIMS/KOPPAL/TND/DEO/PARAMEDICAL/GROP-D/DRIVERS/2025-26. DATE: 19.05.2025

ಇ–ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಮತ್ತು ಬೋಧಕ ಆಸ್ಪತ್ರೆಗೆ ಹೊರ ಗುತ್ತಿಗೆ ಏಜೆನ್ಸಿ ಮುಖಾಂತರ ವಿವಿಧ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಕೆಟಿಪಿಪಿ ಕಾಯ್ದೆ 1999–2000ರ ಅನ್ವಯ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣ ಕೋಶದ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

1. ಟೆಂಡರ್‌ಗಳನ್ನು ದಿನಾಂಕ : **26–05–2025** ರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು.
2. ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **24–06–2025 ಸಾಯಂಕಾಲ 5.30 ಗಂಟೆವರೆಗೆ.**
3. ತಾಂತ್ರಿಕ ಲಕೋಟೆ (ಮೊದಲನೆಯ ಕವರ್) ತೆರೆಯುವ ದಿನಾಂಕ : **26–06–2025 ಬೆಳಿಗ್ಗೆ 11.30 ಗಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ : **03–07–2025 ಬೆಳಿಗ್ಗೆ 11.30 ಗಂಟೆಗೆ.**
5. ಇ.ಎಮ್.ಡಿ. ಮೊತ್ತ **ರೂ. 13,75,500/–** ಮತ್ತು ಟೆಂಡರ್ ಅಂದಾಜು ಮೊತ್ತ **ರೂ. 917.00 ಲಕ್ಷಗಳು.**

ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://kpp.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http//www.kimskoppal.nic.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು,
ವಾ.ಸಾ.ಇ./ಕೊಪ್ಪಳ/112/2025–26/ದೇಶಪಾಂಡೆ ಪಬ್ಲಿಸಿಟಿ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಕಾರ್ಯಾಲಯ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560100

ಫೋನ್: 080–22111177, e-Mail:ka.doddathoguru.tp@gmail.com

ಸಂ.ದೊಪಂಪ/ತಾ.ಶಾ/ಟೆಂ/ಸಿ.ಆರ್5/2025–26 ದಿನಾಂಕ:21.05.2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬೆಟ್ಟದಾಸನಪುರದಲ್ಲಿ ಹೊಸದಾಗಿ ಒಳಚರಂಡಿ ನಿರ್ಮಾಣ ಕಾಮಗಾರಿ ಮತ್ತು ಸಿ.ಸಿ ರಸ್ತೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in** ಮೂಲಕ ಟೆಂಡರ್ ಫಾರಂಗಳನ್ನು ಸಲ್ಲಿಸುವುದು. ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಕಾಮಗಾರಿ ವಿವರ	ಇಂಡೆಂಟ್ ನಂ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	Amount Put to Tender (in Rs.)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	Providing UGD line & Construction (Restoration) of C C Road from CH540.00M to CH1250.00M (Near Storm Water drain) in Bettadasanapura of Doddathoguru Town Panchayath	DMA/2025-26 /WS/ WORK _INDENT 40478	88.30	74,56,939/-	1,49,138/-
2	Providing UGD line & Construction (Restoration) of C C Road from CH 0.00M to 4th Cross Road from CH.540.00M in Bettadasanapura of Doddathoguru Town Panchayath	DMA/2025-26 /WS/ WORK _INDENT 40477	99.30	84,09,990/-	1,68,199/-

1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸುವ ಅಂತಿಮ **ದಿನಾಂಕ: 31.05.2025ಸಂಜೆ 5:00 ಘಂಟೆಯವರೆಗೆ.** 2) ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 02.06.2025 ಸಂಜೆ 5:00 ಘಂಟೆಗೆ.** 3) ಹೆಚ್ಚಿನ ವಿವರಗಳಿಗೆ ಪಟ್ಟಣ ಪಂಚಾಯಿತಿಯ ತಾಂತ್ರಿಕ ಶಾಖೆಯಲ್ಲಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/–
ಆಡಳಿತಾಧಿಕಾರಿಗಳು
ದೊಡ್ಡತೋಗೂರು ಪಟ್ಟಣ ಪಂಚಾಯತಿ

ವಾಸಾಸಂಇ/ವಾಪ್ರ/ಜಿಎ/799/2025–26

ಸಹಿ/–
ಮುಖ್ಯಾಧಿಕಾರಿ
ದೊಡ್ಡತೋಗೂರು ಪಟ್ಟಣ ಪಂಚಾಯತಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರರವರ ಕಚೇರಿ ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ–591302

Office (ಕಛೇರಿ):08336–222163 e-mail :eekpdkhanapur@gmail.com

ಸಂ: ಕನೀನಿನಿ/ಕಯೋವಿ/ಖಾನಾಪೂರ/ಯೋ–ಶಾ/2025–26/261 ದಿನಾಂಕ: 21.05.2025

–: ಪ್ರಕಟಣೆ :–

ಬೆಳಗಾವಿ ತಾಲ್ಲೂಕಿನ ಉಚಗಾಂವ ಕೆರೆ ತುಂಬಿಸುವ ಯೋಜನೆಗೆ ತುರಮರಿ ಗ್ರಾಮದ ಹತ್ತಿರ ಮಾರ್ಕಂಡೇಯ ನದಿಗೆ ಜಾಕವೆಲ್ ಕಂ ಪಂಪ್ ಹೌಸ್ ನಿರ್ಮಿಸಲು ಹಾಗೂ ಬೆಳಗಾವಿ ತಾಲೂಕಿನ ಬಸುರ್ತಾ (ಉಚಗಾಂವ) ಗ್ರಾಮದ ಹದ್ದಿಯಲ್ಲಿ ಕುಡಿಯುವ ನೀರಿನ ಸಲುವಾಗಿ ಜಲಸಂಗ್ರಹಗಾರವನ್ನು ನಿರ್ಮಿಸಲು ಮತ್ತು ಸಂತಿಬಸ್ತವಾಡ ಕೆರೆ ತುಂಬಿಸುವ ಯೋಜನೆಗೆ ಖಾನಾಪೂರ ತಾಲೂಕಿನ ಕುಸಮಳ್ಳಿ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಜಾಕವೆಲ್ ಕಂ ಪಂಪ್ ಹೌಸ್ ನಿರ್ಮಿಸಲು ಖಾಸಗಿ ಜಮೀನುಗಳನ್ನು ನೇರ ಖರೀದಿ ಸಲುವಾಗಿ ದಿನಾಂಕ: 19.05.2025ರಂದು ಮಾನ್ಯ ಅಧ್ಯಕ್ಷರು, ಜಿಲ್ಲಾ ಮಟ್ಟದ ಭೂ ಖರೀದಿ ಮೌಲ್ಯ ನಿರ್ಧರಣಾ ಸಲಹಾ ಸಮಿತಿ ಹಾಗೂ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಭೂ ಖರೀದಿ ಮೌಲ್ಯ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಗಿನಂತೆ ದರಗಳನ್ನು ನಿಗಧಿಪಡಿಸಲಾಗಿರುತ್ತದೆ.

ಕ್ರ.ಸಂ	ತಾಲೂಕ	ಗ್ರಾಮ	ಕ್ಷೇತ್ರ	ರಿ.ಸಂ.ನಂ.	ದರ ನಿರ್ಧರಣಾ ಸಲಹಾ ಸಮಿತಿಯಲ್ಲಿ ನಿಗಧಿಪಡಿಸಿದ ದರಗಳು
1	ಬೆಳಗಾವಿ	ಬಸುರ್ತಾ (ಉಚಗಾಂವ)	77ಎ–22 ಗುಂ–00ಆಣೆ	253/1 ರಿಂದ 3, 254/*, 255/* ರಿಂದ 255/ಪರಡೆ 256/1 ರಿಂದ 5, 201/* ರಿಂದ 201/ಪರಡೆ, 202/ಪೈಕಿ, 189/* ರಿಂದ 189/ಪರಡೆ, 199/* ರಿಂದ 199/ಪರಡೆ, 191/* ರಿಂದ 191/ಪರಡೆ, 200/* ರಿಂದ 1ಪೈಕಿ ಮತ್ತು 1, 190/*, 206/*	ಪ್ರತಿ ಎಕರೆಗೆ ರೂ 88,00,000/– (ರೂ. ಎಂಭತ್ತೆಂಟು ಲಕ್ಷಗಳು ಮಾತ್ರ)
2	ಬೆಳಗಾವಿ	ತುರಮುರಿ	03ಎ–28 ಗುಂ–00ಆಣೆ	126, 127, 128 ಮತ್ತು 129	ಪ್ರತಿ ಎಕರೆಗೆ ರೂ 50,00,000/– (ರೂ. ಐವತ್ತು ಲಕ್ಷ ಮಾತ್ರ)
3	ಖಾನಾಪೂರ	ಕುಸಮಳ್ಳಿ	01ಎ–22 ಗುಂ–00ಆಣೆ	108/1 ರಿಂದ 108/4	ಪ್ರತಿ ಎಕರೆಗೆ ರೂ 50,00,000/– (ರೂ. ಐವತ್ತು ಲಕ್ಷ ಮಾತ್ರ)

ಜಿಲ್ಲಾಧಿಕಾರಿಗಳ ದರ ನಿರ್ಧರಣಾ ಸಲಹಾ ಸಮಿತಿ ನಿರ್ಧರಿಸಿರುವ ದರದಂತೆ ಜಮೀನು ಖರೀದಿ ಮಾಡಲು ಆಕ್ಷೇಪಣೆಗಳಿದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು 30 ದಿನಗಳ ಒಳಗಾಗಿ ಅಂದರೆ 22.06.2025ರ ಒಳಗಾಗಿ ಲಿಖಿತ ರೂಪದಲ್ಲಿ ಈ ಕಛೇರಿಗೆ ಸಲ್ಲಿಸಲು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ–591302

DIPR/BGM/RO-NO-299/KSMCA/2025-26

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029

ಫೋನ್: 080–26096839 / 26096855 ಇಮೇಲ್: purchase@kmf.coop

ಸಂಖ್ಯೆ: IFT No.KMF/PUR/CFRM-639A/2025-26 ದಿನಾಂಕ: 21–05–2025

ಅಲ್ಪಾವಧಿ ಟೆಂಡರ್ ಪ್ರಕಟಣೆ (KPPP Tender No. KMF/2025-26/IND1418)

ಕರ್ನಾಟಕ ಹಾಲು ಮಹಾಮಂಡಳವು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಘಟಕವಾರು ವಿವಿಧ ಪಶು ಆಹಾರ ಕಚ್ಚಾಮಾಲುಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಕ್ರ. ಸಂ.	ಕಚ್ಚಾಮಾಲುಗಳು	ಘಟಕವಾರು ಪರಿಮಾಣ ಮೆಟ್ರಿಕ್ ಟನ್‌ಗಳಲ್ಲಿ (MTs)				
		ರಾಜಾನುಕುಂಟೆ	ಗುಬ್ಬಿ	ಧಾರವಾಡ	ಹಾಸನ	ಶಿಕಾರಿಪುರ
1	ಅಕ್ಕಿ ತೌಡು	400	1000	1000	1000	1000
2	ಎಣ್ಣೆ ರಹಿತ ಸಾಸಿವೆ ಹಿಂಡಿ	150	0	100	1250	300
3	ಡಿ.ಒ.ಆರ್.ಬಿ	2500	0	2500	4000	2000
4	ಎಣ್ಣೆ ರಹಿತ ಕೊಬ್ಬರಿ ಹಿಂಡಿ	250	250	250	250	300
5	ಎಣ್ಣೆರಹಿತ ಹತ್ತಿಕಾಳು ಹಿಂಡಿ (ಫ್ಲೇಕ್ಸ್)	150	250	400	200	0
6	ಸಾಮಾನ್ಯ ಉಪ್ಪು	200	0	100	200	200
7	ಸುಣ್ಣದ ಪುಡಿ	300	0	200	200	200
8	ರೈಸ್ ಡಿ.ಡಿ.ಜಿ.ಎಸ್	0	0	0	0	150
9	ಮೈಜ್ ಡಿ.ಡಿ.ಜಿ.ಎಸ್	150	350	200	250	200
10	ಎಣ್ಣೆ ರಹಿತ ಮೈಜ್ ಡಿ.ಡಿ.ಜಿ.ಎಸ್	100	350	100	200	0
11	ಕಾರ್ನ್ ಪ್ರೋಟೀನ್ ಫೀಡ್	0	0	75	0	0
12	ಎಣ್ಣೆ ರಹಿತ ಸೋಯಾ ಹಿಂಡಿ	75	150	50	0	500
13	ಎಣ್ಣೆರಹಿತ ಸೂರ್ಯಕಾಂತಿ ಹಿಂಡಿ ಗ್ರೇಡ್–1 (ಪೆಲೆಟ್ಸ್)	200	250	100	150	250
14	ಅಫ್ಲಾಟಾಕ್ಸಿನ್ ಬೈಂಡರ್	0	60	7.5	50	60

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ: 21-05-2025; ಪೂರ್ವಭಾವಿ ಸಭೆಯ ದಿನಾಂಕ: 26-05-2025 at 11.30 AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 28-05-2025 at 05:00 PM; ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 30-05-2025 at 10.15 AM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 30-05-2025 at 11.00 AM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

THE FEDERAL BANK LIMITED
Regd. Office: Aluva, Kerala.

ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2025-26 NOTICE FOR PRIVATE SALE OF GOLD 22/05/2025

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-06-2025 as shown below:

Br. Belthangadi: Suvarna Arcade, Belthangadi, Dakshina Kannada, Karnataka- 574 214, Ph no. 08256-232404 :- 19016400094210, 19016400093162,19016400070707,19016400103128,19016400080540,19016400103649,19016400105172,19016400103656,19016400094012,19016100009260.

Br. Bhatkal: Misbah Chambers, Ranginkatta, NH 17, Bhatkal, Uttar Kannada, Karnataka- 581 320 :-
19866400085000,19866400062538,19866400110063,19866400103712,19866100012296,19866400074343,19866400110451,19866400109040,19866400104777, 19866400110576,19866400107671,19866400115765,19866400111905,19866400113281,19866400108208,19866400099852,19866400112325,19866400118264, 19866400114933,19866400120047,19866400111970,19866400113430,19866400098284,19866400092493,19866400094572,19866400116102,19866400109024, 19866400093194,19866400112200,19866400120435,19866400115021,19866400115997,19866400116805,19866400094382,19866400111087,19866400116011, 19866400112440,19866400102284,19866400115260,19866100012858,19866400112473,19866400107796,19866400121771,19866400104876,19866400096692, 19866400113968,19865500005637,19866400116342,19866400112630,19866400106087,19866400115146,19866400120807,19866400116995,19866400113950, 19866100013401,19866400121615,19866400112689,19866400113927,19866100014441,19866400116334,19866400120492,19866400120120,19866100014458, 19866400093517,19866400112705,19866400102235,19866400114230,19866400107994,19866400112903,19866400100338,19866400115112,19866400092030, 19866400113539,19866400102458,19866400115245,19866400116698,19866100013468,19866400103266,19866400115344,19866400078377,19866400113026, 19866400114735,19866400115385,19866400088681,19866400077734,19866400114750,19866400115401,19866400104728,19866400078062,19866400061795, 19866400115443,19866400116706,19866400069459,19866400102771,19867600001250,19866400104967,19866400090794,19866400119486,19866400104579, 19866400116946,19866400094135,19866400114859,19866400099860,19866400116953,19866400097708,19866400114875,19866400102045,19866400116953, 19866400113158,19866100012502,19866400102052,19866400098912,19866400100817,19866400103563.

Br. Chikmagalur: P B No 157, BM Buildings, Thogarihenkal Circle, K M Road, Chikmagaluru, Karnataka- 577 101, Ph no. 08262-233024 :-
13566100436588,13566400242199,13566400245606,13566400252982,13566100437131,13566400232414,13566400241696,13566100438626,13566400250069, 13566100437685,13566400240995,13566400185224,13566400245424,13566400246927,13566400226705,13566400200320,13566400245432,13566400201773, 13566400244690,13566400212721,13566400243411,13566400193889,13566400254863,13566400230459,13566400239948,13566400207325,13566400246984, 13566400234758,13566100438147,13566400248295,13566400230467,13566400234907,13566400227372,13566400193954,13566400240441,13566400236159, 13566400250648,13566400230004,13566400250150,13566400244013,13566400250655,13566400211103,13566400251430,13566400245291,13566400252271, 13566400230285,13566400229097,13566400246554,13566400242298,13566400243486,13566400242801,13566400243510,13566400242306,13566400248725, 13566400225525,13566400243189,13566400251380,13566400248832,13566400225533,13566400240979,13566400257130,13566400190976,13566400232265, 13566400244328,13566400243007,13566400191206,13566400256900,13566400243023,13566400181611,13566400227547,13566400203787,13566400243577, 13566400184813,13566400228420,13566400241589,13566100435978,13566400225566,13566400249129,13566400246075,13566400255365,13566400250499, 13566400249137,13566400220658,13566400220930.

Br. Channarayapatna: Ground Floor, Madhu Complex, Mysore Road, Channarayapatna, Hassan, Karnataka-573 116, Ph. No. 08176-252438:-
19876400137800,19876400143261,19876400121747,19876400145159,19876400141109.

Br. Gonikopal: Sudharma Building, Near Masjid, Ponnampet Road Jn, Main Road, Gonikoppal, Kodagu, Karnataka- 571 213 :-
19616400139533,19616400140093,19616400135176,19616400148419,19616400138675,19616400142842,19616400125946,19616400129526.

Br. Hebri: Spatika Plaza, Kuchoor Road, Hebri, Karkala Taluk, Udupi, Karnataka- 576 112, Ph No. 08253-250045 :-
18966400032241,18966400025559,18966400026516,18966400024933,18966400030609,18966400026508,18966400024925,18966400031045,18966100006610, 18966400021822,18966400032076,18966100006859,18966400021889,18966400032084,18966400023042,18966400025245,18966400032902,18966400023307, 18966400033256,18966400033314,18966400032928,18966400030997,18966400019420,18966400032936,18966400031177,18966400030930,18966400030971, 18966100006867,18966400031961,18966400032209,18966400033058,18966400029650,18966100006941,18966400015519,18966400033264,18966400032019, 18966400028512,18966100006412,18966400032969.

Br. Hassan: Ground Floor, St. Antony's Church Complex, NR Circle, HN Pura Road, Hassan, Karnataka- 573 201 :-
13546400277080,13546400326218,13546400317381,13546400332869,13546400341399,13546400269996,13546400328271,13546400302938,13546400341449, 13546400338445,13546400302557,13546400301864,13546400226111,13546400341431,13546400337769,13546400324775,13546400328644,13546400226103, 13546400326200,13546400295736,13546400321896,13546400303092,13546400296643,13546400326689,13546400328453,13546400327448,13546400299399, 13546400302854,13546400334022,13546400325251,13546400322365,13546400298672,13546400298847,13546400311418,13546400252042,13546400323660, 13546400319882,13546400305576,13546400314941,13546400326812,13546400264328,13546400302201,13546400271596,13546400293897,13546400300114, 13546400325202,13546400326598,13546400288848,13546400332471,13546400302391,13546400302045,13546400301617,13546400271323,13546400333263, 13546400321649,13546400327000,13546400278369,13546400272818,13546400326838,13546400321995,13546400326960,13546400325103,13546400327059, 13546400263783,13546400328123,13546400333826,13546400330236,13546400322613,13546400322266,13546400327851,13546400324163.

Br. Kadur: Dr Vishwanath Building, Maravanji Circle, BH Road, Kadur, Chikmagalur- 577 548 Karnataka, Ph no. 08267-221244 :-
18936400059890,18936400061359,18936400063843,18936400056326,18936400040510,18936400062480,18936400039777,18936400043217,18936400059718, 18936400059676,18936400050006,18936400032038,18936400043217,18936400062654,18936400057407,18936400063280,18936400045998,18936400063926, 18936400056326,18936400040312,18935500007809,18936400063934,18936400043217,18936400040320,18936400062092,18936400064007,18936400032038, 18936400063843,18936400032210,18936400064015,18936400056904,18936400056904,18936400034844,18936400064171,18936400059254,18936400059254, 18936400053653,18936400057423,18936400058371,18936100026579,18936400058553,18936100027791,18936400058470,18936700001881,18936400062753, 18936400049123,18936400059536,18936400058553,18936700001816,18936400053927,18936400049883,18936400032210,18936700001857,18936400063355, 18935500007676,18936400059676,18936700001881,18936400042805,18936400066010,22976400062001,18936400057837,18936400056326,18936400059577, 18936400043217,18936400057431,18936100024988,18936400057894,18936400056326,18936400059908,18936100026579,18936400057902,18936400032038, 18936400063140,18936400061045,18936400059296,18936400063280,18936400059874,18936400040312,18936600001288,18936400056904,18936400063132, 18936400040320,18936400040999,18936400059254,18935500004194,18936400052465,18936400059452,18936400059676,22976400062001.

Bangalore 22-05-2025 Vice President & Zonal Head

ಸಂಕ್ಷಿಪ್ತ ಸುದ್ದಿ

ಯೂಟ್ಯೂಬರ್ ಜ್ಯೋತಿ ಕಸ್ಟಡಿ ಅವಧಿ ವಿಸ್ತರಣೆ

ಜ್ಯೋತಿ ಮಲ್ಹೋತ್ರಾ

ಹಿಸಾರ್ (ಪಿಟಿಐ): ಬೇಹುಗಾರಿಕೆ ಪ್ರಕರಣದಲ್ಲಿ ಬಂಧಿತರಾಗಿರುವ ಹರಿಯಾಣದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಅವರ ಪೊಲೀಸ್ ಕಸ್ಟಡಿ ಅವಧಿಯನ್ನು ನಾಲ್ಕು ದಿನಗಳವರೆಗೆ ವಿಸ್ತರಿಸಿ ಇಲ್ಲಿನ ನ್ಯಾಯಾಲಯ ಆದೇಶ ಹೊರಡಿಸಿದೆ.

5 ದಿನಗಳ ಪೊಲೀಸ್ ಕಸ್ಟಡಿ ಮುಕ್ತಾಯವಾದ ಕಾರಣ ಜ್ಯೋತಿ ಅವರನ್ನು ಗುರುವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು.

ಬೇಹುಗಾರಿಕೆ ಆರೋಪಕ್ಕೆ ಸಂಬಂಧಿಸಿ ಕಳೆದ ಎರಡು ವಾರಗಳಲ್ಲಿ ಜ್ಯೋತಿ ಸೇರಿದಂತೆ ಪಂಜಾಬ್, ಉತ್ತರ ಪ್ರದೇಶ ಮತ್ತು ಹರಿಯಾಣದಲ್ಲಿ ಒಟ್ಟು 12 ಜನರನ್ನು ಬಂಧಿಸಲಾಗಿದೆ.

ಜುಬೈರ್ ವಿರುದ್ಧದ ಎಫ್‌ಐಆರ್ ರದ್ದತಿಗೆ ಹೈಕೋರ್ಟ್ ನಕಾರ

ಪ್ರಯಾಗ್‌ರಾಜ್ (ಪಿಟಿಐ): ಕೋಮು ಸಂಘರ್ಷಕ್ಕೆ ಪ್ರಚೋದನೆ ನೀಡಿದ ಆರೋಪದ ಮೇರೆಗೆ ಆಲ್ಟ್ ನ್ಯೂಸ್ ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರ ವಿರುದ್ಧ ದಾಖಲಿಸಿರುವ ಎಫ್‌ಐಆರ್ ಅನ್ನು ರದ್ದುಗೊಳಿಸಲು ಅಲಹಾಬಾದ್ ಹೈಕೋರ್ಟ್ ಗುರುವಾರ ನಿರಾಕರಿಸಿದೆ.


ಜುಬೈರ್

ನ್ಯಾಯಮೂರ್ತಿ ಸಿದ್ಧಾರ್ಥ ವರ್ಮಾ ಹಾಗೂ ನ್ಯಾ. ಡಾ.ವೈ.ಕೆ. ಶ್ರೀವಾಸ್ತವ ಅವರನ್ನೊಳಗೊಂಡ ಪೀಠವು ಜುಬೈರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ತಿರಸ್ಕರಿಸಿದೆ. ಜತೆಗೆ ಎಫ್‌ಐಆರ್‌ನ ಅನುಸಾರ ತನಿಖೆ ನಡೆಯಲಿದೆ, ತನಿಖೆ ವೇಳೆ ಜುಬೈರ್ ಅವರನ್ನು ಬಂಧಿಸುವ ಸಾಧ್ಯತೆಗಳಿಲ್ಲ ಎಂದೂ ನ್ಯಾಯಪೀಠ ಹೇಳಿದೆ.

ಯತಿ ನರಸಿಂಹಾನಂದ ಅವರ ಕಾರ್ಯಕ್ರಮದ ಎಡಿಟ್ ಆಗಿರುವ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಜುಬೈರ್ ಪೋಸ್ಟ್ ಮಾಡಿದ್ದಾರೆ. ಈ ಮೂಲಕ ಮುಸ್ಲಿಂ ಸಮುದಾಯವನ್ನು ಯತಿಗಳ ವಿರುದ್ಧ ಪ್ರಚೋದಿಸಲು ಪ್ರಯತ್ನಿಸಿದ್ದಾರೆ ಎಂದು ಆರೋಪಿಸಿ ಯತಿ ನರಸಿಂಹಾನಂದ ಸರಸ್ವತಿ ಟ್ರಸ್ಟ್‌ನ ಕಾರ್ಯದರ್ಶಿ ಉದಿತಾ ತ್ಯಾಗಿ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಕೌನ್ಸೆಲಿಂಗ್ ಮೊದಲು ಶುಲ್ಕ ವಿವರ ಬಹಿರಂಗಕ್ಕೆ ಸೂಚನೆ

ನವದೆಹಲಿ (ಪಿಟಿಐ): ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶ ಪ್ರಕ್ರಿಯೆಯಲ್ಲಿ ಸೀಟ್ ಬ್ಲಾಕಿಂಗ್ ದಂಧೆಯು ವ್ಯಾಪಕವಾಗಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಎಲ್ಲ ಖಾಸಗಿ ಕಾಲೇಜುಗಳು ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳು ನೀಟ್–ಪಿಜಿ ಪರೀಕ್ಷೆ ಸಂದರ್ಭದಲ್ಲಿ ಕೌನ್ಸೆಲಿಂಗ್‌ಗೂ ಮೊದಲು ಶುಲ್ಕ ವಿವರ ಬಹಿರಂಗಪಡಿಸುವುದು ಕಡ್ಡಾಯ ಎಂದು ಹೇಳಿದೆ.

ವಾಸ್ತವದಲ್ಲಿ ಲಭ್ಯವಿರುವ ಸೀಟುಗಳ ಸಂಖ್ಯೆಯು ಸೀಟು ಬ್ಲಾಕಿಂಗ್ ಅಕ್ರಮದ ಕಾರಣದಿಂದಾಗಿ ಸರಿಯಾಗಿ ತಿಳಿಯುವುದಿಲ್ಲ. ಇದು ಅಭ್ಯರ್ಥಿಗಳ ನಡುವೆ ಅಸಮಾನತೆ ಸೃಷ್ಟಿಯಾಗಲು ಕಾರಣವಾಗುತ್ತದೆ ಮತ್ತು ಪ್ರವೇಶ ಪ್ರಕ್ರಿಯೆಯು ಅರ್ಹತೆಗಿಂತಲೂ ಹೆಚ್ಚಾಗಿ ಅದೃಷ್ಟವನ್ನು ಆಧರಿಸುವಂತೆ ಮಾಡುತ್ತದೆ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ಪೀಠವು ಹೇಳಿದೆ.

‘ಸೀಟು ಬ್ಲಾಕಿಂಗ್ ಎಂಬುದು ಯಾವುದರ ಜೊತೆಯೂ ನಂಟು ಹೊಂದಿಲ್ಲದ ಅಕ್ರಮ ಅಲ್ಲ. ಅದು ವ್ಯವಸ್ಥೆಯಲ್ಲಿನ ಬಹಳ ಆಳವಾದ ಲೋಪಗಳನ್ನು, ಪಾರದರ್ಶಕತೆಯ ಕೊರತೆಯನ್ನು ಮತ್ತು ನೀತಿಗಳ ಅನುಷ್ಠಾನ ಪರಿಣಾಮಕಾರಿಯಾಗಿ ಇಲ್ಲದಿರುವುದನ್ನು ತೋರಿಸುತ್ತದೆ’ ಎಂದು ಪೀಠವು ಏಪ್ರಿಲ್ 29ರಂದು ನೀಡಿರುವ ಆದೇಶದಲ್ಲಿ ಹೇಳಿದೆ.

ಅಖಿಲ ಭಾರತ ಕೋಟಾ ಮತ್ತು ರಾಜ್ಯ ಮಟ್ಟದ ಸುತ್ತುಗಳ ಜೊತೆ ಹೊಂದಿಕೊಳ್ಳುವಂತೆ ರಾಷ್ಟ್ರ ಮಟ್ಟದಲ್ಲಿ ಒಂದಕ್ಕೊಂದು ಪೂರಕವಾಗುವ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಅನುಷ್ಠಾನಕ್ಕೆ ತರಬೇಕು ಎಂದು ಪೀಠವು ಸೂಚನೆ ನೀಡಿದೆ.

ಕೌನ್ಸೆಲಿಂಗ್ ನಡೆಯುವ ಮೊದಲೇ ಶುಲ್ಕ ವಿವರವನ್ನು ಪ್ರಕಟಿಸುವಾಗ ಬೋಧನಾ ಶುಲ್ಕ, ವಿದ್ಯಾರ್ಥಿ ನಿಲಯದ ಶುಲ್ಕ, ಠೇವಣಿಗಳು ಮತ್ತು ಇತರ ಶುಲ್ಕಗಳ ಬಗ್ಗೆ ವಿವರ ಒದಗಿಸಬೇಕು. ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧೀನದಲ್ಲಿ ಕೇಂದ್ರೀಕೃತ ಶುಲ್ಕ ನಿಯಂತ್ರಣ ಚೌಕಟ್ಟು ರೂಪಿಸಬೇಕು ಎಂದು ಕೋರ್ಟ್ ಹೇಳಿದೆ.

ಸೀಟು ಬ್ಲಾಕಿಂಗ್‌ನಲ್ಲಿ ಭಾಗಿ ಆದವರ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಬೇಕು, ಭವಿಷ್ಯದ ನೀಟ್–ಪಿಜಿ ಪರೀಕ್ಷೆಗಳಿಂದ ಅನರ್ಹಗೊಳಿಸಬೇಕು ಹಾಗೂ ಅಕ್ರಮದಲ್ಲಿ ಭಾಗಿಯಾದ ಕಾಲೇಜುಗಳನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಸೂಚನೆ ನೀಡಿದೆ.

ರಾಜಸ್ಥಾನದಲ್ಲಿ ಪ್ರಧಾನಿ ಮೋದಿ ಭಾಷಣ • ಪಾಕಿಸ್ತಾನದ ವಿರುದ್ಧ ವಾಗ್ದಾಳಿ

‘ಸಿಂಧೂರ ಸಿಡಿಮದ್ದಿನ ಪುಡಿಯಾಗಿದೆ’

ಬೀಕಾನೆರ್ (ಪಿಟಿಐ): ‘ಸಿಂಧೂರವು ‘ಸಿಡಿಮದ್ದಿನ ಪುಡಿ’ಯಾದರೆ ಏನಾಗುತ್ತದೆ ಎಂದು ಇಡೀ ಜಗತ್ತು ಮತ್ತು ನಮ್ಮ ಶತ್ರುಗಳು ನೋಡಿದ್ದಾರೆ. ಈಗ ಮೋದಿಯ ನರಗಳಲ್ಲಿ ರಕ್ತವಲ್ಲ ಬಿಸಿ ಸಿಂಧೂರ ಹರಿಯುತ್ತಿದೆ. ಭಯೋತ್ಪಾದನೆಯ ಪ್ರತಿಯೊಂದು ದಾಳಿಗೂ ಪಾಕಿಸ್ತಾನವು ಭಾರಿ ಬೆಲೆ ತೆರಬೇಕಾಗುತ್ತದೆ’ ಎಂದು ಪ್ರಧಾನಿ ಮೋದಿ ಹೇಳಿದರು.

ಪ್ರಧಾನಿ ಮೋದಿ ಅವರು ರಾಜಸ್ಥಾನದಲ್ಲಿ ಗುರುವಾರ ನಡೆದ ರ‍್ಯಾಲಿವೊಂದರಲ್ಲಿ ಮಾತನಾಡಿದರು. ‘ಆಪರೇಷನ್ ಸಿಂಧೂರ’ ನಡೆದ ಬಳಿಕ ಇದೇ ಮೊದಲ ಬಾರಿ ಅವರು ಸಾರ್ವಜನಿಕ ರ‍್ಯಾಲಿವೊಂದರಲ್ಲಿ ಮಾತನಾಡಿದ್ದಾರೆ.

‘ಮುಗ್ಧ ಜನರನ್ನು ಹತ್ಯೆ ಮಾಡಿ, ಭಾರತದಲ್ಲಿ ಭಯದ ವಾತಾವರಣ ಸೃಷ್ಟಿಸುವ ಕೆಲಸವನ್ನು ಪಾಕಿಸ್ತಾನ ಮಾಡುತ್ತಿತ್ತು. ಆದರೆ, ‘ಭಾರತ ಮಾತೆಯ ಸೇವಕ’ನಾಗಿ ಮೋದಿ ಇಲ್ಲಿ ಧೈರ್ಯದಿಂದ ನಿಂತಿದ್ದಾನೆ. ನನ್ನ ಮನಸ್ಸು ಶಾಂತವಾಗಿರಬಹುದು. ಆದರೆ, ನನ್ನ ರಕ್ತ ಕುದಿಯುತ್ತಿದೆ’ ಎಂದರು.

‘ಭಯೋತ್ಪಾದನಾ ದಾಳಿಗೆ ನಾವು ಪ್ರತೀಕಾರ ತೀರಿಸಿಕೊಂಡಿಲ್ಲ. ಇದೊಂದು ‘ಹೊಸ ಸ್ವರೂಪದ ನ್ಯಾಯದಾನ’. ಇದರಲ್ಲಿ ಪಾಕಿಸ್ತಾನದೊಂದಿಗೆ ವ್ಯಾಪಾರ ಅಥವಾ ಮಾತುಕತೆಗಳು ಇರುವುದಿಲ್ಲ. ಹಾಗೇನಾದರೂ ಮಾತುಕತೆ ನಡೆದರೆ ಅದು ಪಾಕ್ ಆಕ್ರಮಿತ ಕಾಶ್ಮೀರದ ಬಗ್ಗೆ ಮಾತ್ರ’ ಎಂದರು.

‘ಬೀಕಾನೆರ್‌ನ ನಾಲ್ ವಾಯು ನೆಲೆಯನ್ನು ಗುರಿಯಾಗಿಸಿ ಪಾಕಿಸ್ತಾನವು ದಾಳಿ ಮಾಡಿತು. ಆದರೆ, ಯಾವುದೇ ಹಾನಿ ಮಾಡಲು ಸಾಧ್ಯವಾಗಲಿಲ್ಲ. ಪಾಕಿಸ್ತಾನದ ರಹೀಮ್ ಯಾರ್ ಖಾನ್ ವಾಯು ನೆಲೆಯು ಕಾರ್ಯನಿರ್ವಹಿಸಲು ಯಾವಾಗ ಆರಂಭಿಸುತ್ತದೊ ಗೊತ್ತಿಲ್ಲ. ಅದು ಈಗ ತೀವ್ರ ನಿಗಾ ಘಟಕದಲ್ಲಿದೆ. ನಮ್ಮ ದಾಳಿಯಿಂದ ಅದು ನಾಶವಾಗಿದೆ’ ಎಂದರು.

‘ಭಾರತದೊಂದಿಗೆ ನೇರ ಯುದ್ಧ ಮಾಡಿ ಗೆಲ್ಲಲ್ಲು ಪಾಕಿಸ್ತಾನಕ್ಕೆ ಸಾಧ್ಯವಿಲ್ಲ. ಯಾವಾಗೆಲ್ಲಾ ನಮ್ಮೊಂದಿಗೆ ನೇರ ಯುದ್ಧ ಮಾಡಿದ್ದಾರೊ ಆವಾಗೆಲ್ಲ ಅದು ಸೋಲುಂಡಿದೆ. ಈ ಕಾರಣಕ್ಕಾಗಿಯೇ ಪಾಕಿಸ್ತಾನವು ಭಾರತದ ವಿರುದ್ಧ ಭಯೋತ್ಪಾದನೆಯನ್ನು ಅಸ್ತ್ರವಾಗಿ ಬಳಸುತ್ತದೆ’ ಎಂದರು.



- ಮೂರೂ ಸೇನಾ ಪಡೆಗಳಿಗೆ ನಮ್ಮ ಸರ್ಕಾರ ಸ್ವಾತಂತ್ರ್ಯ ನೀಡಿತ್ತು. ಮೂರು ಪಡೆಗಳು ಒಟ್ಟಿಗೆ ಕೆಲಸ ಮಾಡಿ ಪಾಕಿಸ್ತಾನವನ್ನು ಮಂಡಿಯೂರಿಸಿದರು
- ಪಾಕಿಸ್ತಾನವು ಭಯೋತ್ಪಾದಕರನ್ನು ಭಾರತಕ್ಕೆ ಕಳುಹಿಸಿದರೆ, ಅದು ಒಂದೊಂದು ರೂಪಾಯಿಗೂ ಭಿಕ್ಷೆ ಬೇಡಬೇಕಾಗುತ್ತದೆ. ಪಾಕಿಸ್ತಾನಕ್ಕೆ ಅದರ ಪಾಲಿನ ನೀರು ಸಿಗುವುದಿಲ್ಲ. ಭಾರತೀಯರ ರಕ್ತದ ಜೊತೆ ಆಟವಾಡಿದರೆ ಪಾಕಿಸ್ತಾನವು ತೀವ್ರ ಬೆಲೆ ತೆರಬೇಕು. ಇದು ಭಾರತದ ನಿರ್ಧಾರ. ಈ ನಿರ್ಧಾರದಿಂದ ನಮ್ಮನ್ನು ಹಿಂದೆ ಸರಿಸಲು ಜಗತ್ತಿನ ಯಾವ ಶಕ್ತಿಗೂ ಸಾಧ್ಯವಿಲ್ಲ
- ಜಗತ್ತಿನ ಎದುರು ಸತ್ಯವನ್ನು ತಿಳಿಸಲು, ಸರ್ವ ಪಕ್ಷಗಳ ನಿಯೋಗವನ್ನು ಕಳುಹಿಸಲಾಗಿದೆ. ಪಾಕಿಸ್ತಾನದ ನಿಜ ಮುಖವನ್ನು ಜಗತ್ತಿನಲ್ಲಿ ತೆರೆದಿಡಲಾಗುವುದು

ನರೇಂದ್ರ ಮೋದಿ, ಪ್ರಧಾನಿ

ಟೊಳ್ಳು ಭಾಷಣ ನಿಲ್ಲಿಸಿ: ರಾಹುಲ್

ಮೋದಿ ಅವರೇ ಟೊಳ್ಳು ಭಾಷಣ ಮಾಡುವುದನ್ನು ನಿಲ್ಲಿಸಿ. ಇಷ್ಟು ಹೇಳಿ:

1. ಭಯೋತ್ಪಾದನೆ ವಿಚಾರದಲ್ಲಿ ಪಾಕಿಸ್ತಾನದ ಮಾತುಗಳನ್ನು ನೀವು ಯಾಕೆ ನಂಬಿದಿರಿ?
2. ಟ್ರಂಪ್ ಅವರ ಮುಂದೆ ಭಾರತದ ಜನರ ಹಿತಾಸಕ್ತಿಗಳನ್ನು ಯಾಕೆ ಬಲಿ ಕೊಟ್ಟಿರಿ?
3. ಕ್ಯಾಮೆರಾಗಳ ಮುಂದೆ ಮಾತ್ರವೇ ಯಾಕೆ ನಿಮ್ಮ ರಕ್ತ ಕುದಿಯುತ್ತದೆ?

ಭಾರತದ ಘನತೆಯೊಂದಿಗೆ ರಾಜಿ ಮಾಡಿಕೊಂಡು ಬಿಟ್ಟಿರಿ!

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ (ಎಕ್ಸ್ ಪೋಸ್ಟ್)

‘ಆಪರೇಷನ್ ಸಿಂಧೂರ’ಕ್ಕಿತ್ತು 3 ಸೂತ್ರ

‘ಅಣ್ವಸ್ತ್ರ ಬೆದರಿಕೆಗೆ ಭಾರತವು ಹೆದರುವುದಿಲ್ಲ. ನಮ್ಮ ದೇಶದಲ್ಲಿ ಭಯೋತ್ಪಾದನಾ ದಾಳಿ ನಡೆದರೆ, ಅದಕ್ಕೆ ತಕ್ಕ ಉತ್ತರ ನೀಡಲಾಗುತ್ತದೆ. ಯಾವ ರೀತಿ ಯುದ್ಧ ಮಾಡಬೇಕು, ಯಾವ ಜಾಗ ಎಂದೆಲ್ಲಾ ಸೇನೆ ನಿರ್ಧರಿಸುತ್ತದೆ. ಕರಾರುಗಳೂ ನಮ್ಮದೇ ಆಗಿರುತ್ತವೆ. ಭಯೋತ್ಪಾದಕರನ್ನು ಮತ್ತು ಭಯೋತ್ಪಾದನೆಗೆ ಸರ್ಕಾರದ ಬೆಂಬಲವನ್ನು ನಾವು ಪ್ರತ್ಯೇಕವಾಗಿ ನೋಡುವುದಿಲ್ಲ. ಈ ಎರಡೂ ಒಂದೇ ಆಗಿವೆ. ಇದು ‘ಆಪರೇಷನ್ ಸಿಂಧೂರ’ಕ್ಕೆ ಇವೇ ಮೂರು ಸೂತ್ರಗಳಾಗಿದ್ದವು’ ಎಂದು ಪ್ರಧಾನಿ ಮೋದಿ ವಿವರಿಸಿದರು.

ಹಳೇ ಭಾಷಣ ನೆನಪಿಸಿಕೊಂಡ ಪ್ರಧಾನಿ

‘ದೇಶ ಮಂಡಿಯೂರಲು ಬಿಡುವುದಿಲ್ಲ ಎಂದು ನಾನು ಶಪಥ ಮಾಡಿದ್ದೇನೆ’ ಎಂದು 2019ರಲ್ಲಿ ಪಾಕಿಸ್ತಾನದ ವಿರುದ್ಧ ಬಾಲಾಕೋಟ್ ದಾಳಿ ನಡೆಸಿದಾಗ ತಾವು ರಾಜಸ್ಥಾನದ ಚುರೂ ಪ್ರದೇಶದಲ್ಲಿ ನಡೆದ ರ‍್ಯಾಲಿವೊಂದರಲ್ಲಿ ಮಾಡಿದ ಭಾಷಣವನ್ನು ಪ್ರಧಾನಿ ಮೋದಿ ಅವರು ಇದೇ ವೇಳೆ ನೆನಪಿಸಿಕೊಂಡರು.

‘ರಾಜಸ್ಥಾನದ ನೆಲದಿಂದ ಇಂದು ನಾನು ದೇಶವಾಸಿಗಳಿಗೆ ಹೇಳುವುದೇನೆಂದರೆ, ಯಾರು ಸಿಂಧೂರವನ್ನು ಅಳಿಸಿದರೊ ಅವರನ್ನು ನಾಶ ಮಾಡಿದ್ದೇವೆ. ಹಿಂದೂಸ್ಥಾನದ ರಕ್ತ ಚೆಲ್ಲಾಡಿದವರು ಪ್ರತೀ ಹನಿ ರಕ್ತದ ಬೆಲೆಯನ್ನೂ ತೆತ್ತಿದ್ದಾರೆ. ತಮ್ಮ ಶಸ್ತ್ರಗಳ ಬಗ್ಗೆ ಯಾರಿಗೆ ಅಹಂಕಾರವಿತ್ತೊ ಅವರು ಈಗ ಅವಶೇಷಗಳ ಅಡಿಯಲ್ಲಿ ಹೂತು ಹೋಗಿದ್ದಾರೆ’ ಎಂದರು.

2016ರಲ್ಲಿ ನಡೆದ ಸರ್ಜಿಕಲ್ ಸ್ಟ್ರೈಕ್ ಮತ್ತು ಬಾಲಾಕೋಟ್ ದಾಳಿಗಳನ್ನು ಪ್ರಸ್ತಾಪಿಸಿದ ಮೋದಿ, ‘ಹಿಂದೆ ಅವರ ಮನೆಗಳಿಗೆ ನುಗ್ಗಿ ದಾಳಿ ನಡೆಸಿದ್ದೆವು. ಈಗ ನೇರ ಅವರ ಹೃದಯದ ಮೇಲೆಯೇ ದಾಳಿ ನಡೆಸಿದ್ದೇವೆ’ ಎಂದರು.

‘ಭಾರತ–ಪಾಕ್ ಚರ್ಚೆ ಬಳಿಕವೇ ಸಂಘರ್ಷ ಅಂತ್ಯ’

ನವದೆಹಲಿ: ‘ಅಮೆರಿಕವು ಅಮೆರಿಕದಲ್ಲಿ ಇತ್ತು. ಸಂಘರ್ಷವನ್ನು ಅಂತ್ಯಗೊಳಿಸುವ ಕುರಿತು ಪಾಕಿಸ್ತಾನವು ನಮ್ಮನ್ನು ಸಂಪರ್ಕಿಸಿತು. ಭಾರತ ಮತ್ತು ಪಾಕಿಸ್ತಾನ– ಎರಡೂ ದೇಶಗಳು ನೇರವಾಗಿ ಮಾತುಕತೆ ನಡೆಸಿದ ಮೇಲೆಯೇ ಸಂಘರ್ಷ ಶಮನವಾಯಿತು’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದರು.

ನೆದರ್ಲೆಂಡ್ಸ್, ಡೆನ್ಮಾರ್ಕ್ ಮತ್ತು ಜರ್ಮನಿ- ದೇಶಗಳ ಪ್ರವಾಸವನ್ನು ಜೈಶಂಕರ್ ಕೈಗೊಂಡಿದ್ದು, ಈ ವೇಳೆ ಡೆನ್ಮಾರ್ಕ್‌ನ ‘ಎನ್‌ಒಎಸ್’ ಸುದ್ದಿ ವಾಹಿನಿಗೆ ಅವರು ಸಂದರ್ಶನ ನೀಡಿದರು. ಈ ವೇಳೆ ‘ತಾವು ಸಂಘರ್ಷ ಶಮನದಲ್ಲಿ ಮಧ್ಯಸ್ಥಿಕೆ ವಹಿಸಿದ್ದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿಕೆ ನೀಡುತ್ತಿದ್ದಾರೆ’ ಎನ್ನುವ ಪ್ರಶ್ನೆಗೆ ಜೈಶಂಕರ್ ಉತ್ತರಿಸಿದರು.

‘ಎರಡು ದೇಶಗಳು ಸಂಘರ್ಷದಲ್ಲಿ ತೊಡಗಿಕೊಂಡಿದ್ದರೆ, ಜಗತ್ತಿನ ಇತರೆ ಎಲ್ಲ ದೇಶಗಳು ಕರೆ ಮಾಡುತ್ತವೆ. ತಮ್ಮ ಕಳವಳ ವ್ಯಕ್ತಪಡಿಸುತ್ತವೆ. ಇದರಂತೆ, ಅಮೆರಿಕದ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ನನಗೆ ಕರೆ ಮಾಡಿದ್ದರು. ಅಧ್ಯಕ್ಷ ಟ್ರಂಪ್ ಅವರು ಪ್ರಧಾನಿ ಮೋದಿ ಅವರಿಗೆ ಕರೆ ಮಾಡಿದ್ದರು’ ಎಂದರು.

‘ನಮ್ಮ ಬಳಿ ಅಮೆರಿಕ ಮಾತ್ರವಲ್ಲ ಯಾರು ಯಾರು ಮಾತನಾಡಿದ್ದಾರೊ ಅವರಿಗೆ ಒಂದು ವಿಚಾರವನ್ನು ಸ್ಪಷ್ಟಪಡಿಸಿದ್ದೇವೆ. ಸಂಘರ್ಷ ಅಂತ್ಯವಾಗಬೇಕು ಎಂದು ಪಾಕಿಸ್ತಾನ ಬಯಸಿದರೆ ಅವರು ನಮ್ಮೊಂದಿಗೆ ಮಾತನಾಡಬೇಕು. ಸಂಘರ್ಷ ಅಂತ್ಯಗೊಳಿಸಿ ಎಂದು ಪಾಕ್ ಹೇಳುವುದನ್ನು ನಾವೇ ಕೇಳಿಸಿಕೊಳ್ಳಬೇಕು. ಅವರ ಜನರಲ್ ನಮ್ಮ ಜನರಲ್ ಅವರೊಂದಿಗೆ ಮಾತನಾಡಬೇಕು. ಇದೇ ನಡೆದಿದ್ದು’ ಎಂದರು.

‘ಪಾಕ್ ಸಂಕಥನ ನಂಬಬಾರದು’


ಜೈಶಂಕರ್

‘ಭಾರತದಲ್ಲಿ ನಡೆಯುವ ಭಯೋತ್ಪಾದನಾ ಕೃತ್ಯಗಳಲ್ಲಿ ಪಾಕ್ ಸರ್ಕಾರದ ಸಂಸ್ಥೆಗಳು ಭಾಗಿ ಆಗಿಲ್ಲ ಎನ್ನುವ ಪಾಕಿಸ್ತಾನದ ಸಂಕಥನವನ್ನು ನಾವು ನಂಬಬಾರದು’ ಎಂದು ಜೈಶಂಕರ್ ಹೇಳಿದರು.

‘ವಿಶ್ವಸಂಸ್ಥೆ ಪಟ್ಟಿ ಮಾಡಿರುವ ಭಯೋತ್ಪಾದಕರಲ್ಲಿ ಹಲವರು ಪಾಕಿಸ್ತಾನದಲ್ಲಿ ಇದ್ದಾರೆ. ಆ ದೇಶದ ದೊಡ್ಡ ದೊಡ್ಡ ನಗರಗಳಲ್ಲಿ ಕೂತು ಅವರು ಬಹಿರಂಗವಾಗಿಯೇ ಕಾರ್ಯನಿರ್ವಹಿಸುತ್ತಾರೆ. ಅವರ ವಿಳಾಸ ಎಲ್ಲರಿಗೂ ತಿಳಿದಿದೆ. ಅವರ ಮತ್ತು ಸರ್ಕಾರದ ಸಂಪರ್ಕಗಳ ಬಗ್ಗೆಯೂ ಗೊತ್ತಿದೆ. ಹಾಗಾಗಿ, ಪಾಕಿಸ್ತಾನ ಈ ಎಲ್ಲದರಲ್ಲಿ ಭಾಗಿಯಾಗಿಲ್ಲ ಎನ್ನುವುದನ್ನು ನಂಬುವುದು ಬೇಡ. ಪಾಕ್ ಸೇನೆ ಕೂಡ ಉಗ್ರರೊಂದಿಗೆ ಶಾಮೀಲಾಗಿದೆ’ ಎಂದರು.

ಸುದ್ದಿ 2 ನಿಮಿಷ

ಟರ್ಬ್ಯುಲೆನ್ಸ್: ಇಂಡಿಗೊ ಪೈಲಟ್ ಮನವಿ ತಿರಸ್ಕರಿಸಿದ ಪಾಕ್

ನವದೆಹಲಿ/ಮುಂಬೈ (ಪಿಟಿಐ): ದೆಹಲಿಯಿಂದ ಶ್ರೀನಗರಕ್ಕೆ ಬುಧವಾರ ತೆರಳುತ್ತಿದ್ದ ಇಂಡಿಗೊ ವಿಮಾನಕ್ಕೆ ದಿಢೀರನೇ ಎದುರಾದ ‘ಟರ್ಬ್ಯುಲೆನ್ಸ್’ (ಗಾಳಿಯ ತೀವ್ರ ಏರಿಳಿತದಿಂದ ಆಗುವ ಪ್ರಕ್ಷುಬ್ಧತೆ) ಸ್ಥಿತಿಯನ್ನು ತಪ್ಪಿಸಲು ಪೈಲಟ್, ಪಾಕಿಸ್ತಾನದ ವಾಯುಪ್ರದೇಶವನ್ನು ಅಲ್ಪಾವಧಿಗೆ ಬಳಸಲು ಲಾಹೋರ್‌ನ ವಾಯು ಸಂಚಾರ ನಿಯಂತ್ರಣದ ಅನುಮತಿ ಕೋರಿದ್ದರು. ಆದರೆ ಪೈಲಟ್‌ನ ಮನವಿಯನ್ನು ಪಾಕಿಸ್ತಾನ ತಿರಸ್ಕರಿಸಿತು ಎಂದು ಮೂಲಗಳು ಗುರುವಾರ ತಿಳಿಸಿವೆ.

227 ಮಂದಿ ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು. ದಿಢೀರನೇ ಆಲಿಕಲ್ಲು ಮಳೆ ಎದುರಾಗಿದ್ದರಿಂದ ‘ಟರ್ಬ್ಯುಲೆನ್ಸ್’ಗೆ ಸಿಲುಕಿದ ವಿಮಾನವು ಅಲುಗಾಡಿತ್ತು. ಬಳಿಕ ಪೈಲಟ್, ಶ್ರೀನಗರ ವಿಮಾನ ನಿಲ್ದಾಣದ ವಾಯು ಸಂಚಾರ ನಿಯಂತ್ರಣಕ್ಕೆ ತುರ್ತು ಪರಿಸ್ಥಿತಿಯ ವರದಿ ಮಾಡಿ, ಸುರಕ್ಷಿತವಾಗಿ ವಿಮಾನವನ್ನು ಇಳಿಸಿದ್ದರು.

‘ವಿಮಾನವು ಅಮೃತಸರದ ಮೇಲೆ ಹಾರುತ್ತಿದ್ದಾಗ ಪೈಲಟ್ ಟರ್ಬ್ಯುಲೆನ್ಸ್ ಅನ್ನು ಗಮನಿಸಿ, ಪಾಕಿಸ್ತಾನದ ವಾಯು ಪ್ರದೇಶದ ಮೂಲಕ ಚಲಿಸಲು ಲಾಹೋರ್ ವಾಯು ಸಂಚಾರ ನಿಯಂತ್ರಣದ (ಎಟಿಸಿ) ಅನುಮತಿ ಕೋರಿದ್ದರು. ಆದರೆ ಲಾಹೋರ್ ಎಟಿಸಿ ಈ ಮನವಿಯನ್ನು ತಿರಸ್ಕರಿಸಿತು. ಇದರ ಪರಿಣಾಮ ವಿಮಾನವು ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿಯೇ ಮೂಲ ಹಾರಾಟದ ಮಾರ್ಗದಲ್ಲಿ ಸಂಚರಿಸಿತು’ ಎಂದು ಮೂಲಗಳು ಹೇಳಿವೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಪಾಕಿಸ್ತಾನ ಮತ್ತು ಭಾರತ ದೇಶಗಳು ಪರಸ್ಪರರ ವಿಮಾನಯಾನ ಸಂಸ್ಥೆಗಳಿಗೆ ತನ್ನ ವಾಯು ಪ್ರದೇಶವನ್ನು ಮುಚ್ಚಿವೆ.

ಟಿಎಂಸಿ ಸದಸ್ಯರಾದ ಡೆರೆಕ್ ಒಬ್ರಯಾನ್, ನದಿಮುಲ್ ಹಕ್, ಸಾಗರಿಕಾ ಘೋಷ್, ಮನಸ್ ಭುನಿಯಾ, ಮಮತಾ ಠಾಕೂರ್ ಅವರನ್ನು ಒಳಗೊಂಡ ಐವರು ಸದಸ್ಯರ ನಿಯೋಗವೂ ವಿಮಾನದಲ್ಲಿತ್ತು.

‘ಸಾವಿನ ಸಮೀಪಕ್ಕೆ ಹೋದ ಅನುಭವ ನಮಗಾಗಿತ್ತು. ವಿಮಾನದಲ್ಲಿದ್ದ ಜನರು ಕಿರುಚುತ್ತಿದ್ದರು, ನಮ್ಮನ್ನು ಸುರಕ್ಷಿತವಾಗಿ ಧರೆಗಿಳಿಸಿದ ಪೈಲಟ್‌ಗೆ ಧನ್ಯವಾದಗಳು’ ಎಂದು ಸಾಗರಿಕ ಘೋಷ್ ಪ್ರತಿಕ್ರಿಯಿಸಿದ್ದಾರೆ.

ಪಾಕಿಸ್ತಾನಕ್ಕೆ ಮತ್ತಷ್ಟು ಪಾಠ ಕಲಿಸಬೇಕಿತ್ತು: ಸುಬ್ರಮಣಿಯನ್

ಪಟ್ನಾ (ಪಿಟಿಐ): ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಪಾಕಿಸ್ತಾನಕ್ಕೆ ಮತ್ತಷ್ಟು ಪಾಠ ಕಲಿಸಬೇಕಿತ್ತು ಎಂದು ಕೇಂದ್ರದ ಮಾಜಿ ಸಚಿವ ಸುಬ್ರಮಣಿಯನ್ ಸ್ವಾಮಿ ಗುರುವಾರ ಹೇಳಿದ್ದಾರೆ.

‘ಸಿಂಧೂರ ಕಾರ್ಯಾಚರಣೆ’ಗೆ ಸಂಬಂಧಿಸಿದಂತೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ‘ನಾಗರಿಕತೆಯ ಇತಿಹಾಸದಲ್ಲೇ ಅತ್ಯಂತ ಭೀಕರವಾದ ಪಹಲ್ಗಾಮ್ ದಾಳಿಗೆ ಸಂಚುರೂಪಿಸುವ ಮೂಲಕ ಪಾಕಿಸ್ತಾನ ಸಂಘರ್ಷ ಆರಂಭಿಸಿತು. ಆ ರಾಷ್ಟ್ರಕ್ಕೆ ಇನ್ನಷ್ಟು ಪಾಠ ಕಲಿಸಬೇಕಿತ್ತು’ ಎಂದರು.

ಇದೇ ವೇಳೆ ವಿಶ್ವದ ವಿವಿಧ ರಾಷ್ಟ್ರಗಳಿಗೆ ಸರ್ವಪಕ್ಷಗಳ ನಿಯೋಗ ಭೇಟಿ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, ‘ಇದರಿಂದ ಯಾವುದೇ ಪರಿಣಾಮ ಆಗುವುದಿಲ್ಲ. ನಿಯೋಗದ ಸದಸ್ಯರು ಪ್ರವಾಸವನ್ನು ಆನಂದಿಸುತ್ತಾರೆ ಅಷ್ಟೇ. ಇದು ಎಲ್ಲರಿಗೂ ಗೊತ್ತು’ ಎಂದರು.

ಕೀರ್ತಿ ಚಕ್ರ ನವದೆಹಲಿಯಲ್ಲಿರುವ ರಾಷ್ಟ್ರಪತಿ ಭವನದಲ್ಲಿ ನಡೆದ ಯೋಧರಿಗೆ ಗೌರವ ಸಮರ್ಪಣೆ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕರ್ನಲ್ ಮನ್‌ಪ್ರೀತ್ ಸಿಂಗ್ ಅವರಿಗೆ (ಮರಣೋತ್ತರ) ‘ಕೀರ್ತಿ ಚಕ್ರ’ವನ್ನು ಗುರುವಾರ ಪ್ರದಾನ ಮಾಡಿದರು. ಮನ್‌ಪ್ರೀತ್ ಕುಟುಂಬಸ್ಥರು ಗೌರವ ಸ್ವೀಕರಿಸಿದರು –ಪಿಟಿಐ ಚಿತ್ರ

ಮಧ್ಯಂತರ ಆದೇಶ ಕಾಯ್ದಿರಿಸಿದ ‘ಸುಪ್ರೀಂ’

ವಕ್ಫ್ ಕಾಯ್ದೆ

ನವದೆಹಲಿ (ಪಿಟಿಐ): ಸಂಸತ್ತಿನ ಅಂಗೀಕಾರ ಪಡೆದಿರುವ ವಕ್ಫ್ (ತಿದ್ದುಪಡಿ) ಕಾಯ್ದೆಯು ಸಾಂವಿಧಾನಿಕವಾಗಿ ಸರಿಯಾಗಿಯೇ ಇದೆ ಎಂದು ಭಾವಿಸಬೇಕಾಗುತ್ತದೆ ಎನ್ನುವ ಮಾತನ್ನು ಪುನರುಚ್ಚರಿಸಿರುವ ಸುಪ್ರೀಂ ಕೋರ್ಟ್, ಕಾಯ್ದೆಗೆ ಸಂಬಂಧಿಸಿದ ಮೂರು ಪ್ರಮುಖ ವಿಚಾರಗಳ ಕುರಿತ ಮಧ್ಯಂತರ ಆದೇಶವನ್ನು ಗುರುವಾರ ಕಾಯ್ದಿರಿಸಿದೆ.

ಕೋರ್ಟ್‌ಗಳು ವಕ್ಫ್ ಎಂದು ಘೋಷಿಸಿರುವ, ಬಳಕೆಯ ಕಾರಣದಿಂದಾಗಿ ವಕ್ಫ್ ಆಗಿರುವ ಮತ್ತು ಕ್ರಯಪತ್ರದ ಮೂಲಕ ವಕ್ಫ್ ಆಗಿರುವ ಆಸ್ತಿಗಳನ್ನು ಅಧಿಸೂಚನೆಯಿಂದ ಕೈಬಿಡುವ (ಡಿನೋಟಿಫೈ) ಅಧಿಕಾರವು ಈ ಮೂರು ವಿಚಾರಗಳ ಪೈಕಿ ಒಂದಾಗಿದೆ. ಡಿನೋಟಿಫೈ ಮಾಡುವ ಅಧಿಕಾರವನ್ನು ತಿದ್ದುಪಡಿ ಕಾಯ್ದೆಯಲ್ಲಿ ಉಲ್ಲೇಖಿಸಲಾಗಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ಪೀಠವು ಮಧ್ಯಂತರ ಆದೇಶವನ್ನು ಕಾಯ್ದಿರಿಸುವುದಕ್ಕೂ ಮೊದಲು, ಅರ್ಜಿದಾರರು ಹಾಗೂ ಕೇಂದ್ರದ ಪರ ವಕೀಲರ ವಾದವನ್ನು ಸತತ ಮೂರು ದಿನ ಆಲಿಸಿದೆ.

ಸಂಸತ್ತು ರೂಪಿಸಿದ ಕಾನೂನು ಸಾಂವಿಧಾನಿಕವಾಗಿ ಸರಿಯಾಗಿರುತ್ತದೆ ಎಂದೇ ಭಾವಿಸಬೇಕಾಗುತ್ತದೆ ಎನ್ನುವ ಮಾತನ್ನು ಸಿಜೆಐ ಗವಾಯಿ ಅವರು ಗುರುವಾರ ಕೂಡ ಹೇಳಿದರು.

‘ಮಧ್ಯಂತರ ತಡೆ ಬೇಕು ಎಂದಾದರೆ ನೀವು ಬಲವಾದ ವಾದವನ್ನು ಮಂಡಿಸಬೇಕಾಗುತ್ತದೆ. ಇಲ್ಲದಿದ್ದರೆ, ಕಾಯ್ದೆಯು ಸಾಂವಿಧಾನಿಕವಾಗಿ ಸರಿಯಾಗಿ ಇದೆ ಎಂಬುದಾಗಿ ಭಾವಿಸಬೇಕಾಗುತ್ತದೆ’ ಎಂದು ಸಿಜೆಐ ಅವರು ಮೇ 20ರಂದು ಹೇಳಿದ್ದರು.

ವಕ್ಫ್ ಆಸ್ತಿಗಳ ಡಿನೋಟಿಫಿಕೇಷನ್ ಮಾತ್ರವೇ ಅಲ್ಲದೆ, ರಾಜ್ಯ ವಕ್ಫ್ ಮಂಡಳಿಗಳು ಹಾಗೂ ಕೇಂದ್ರ ವಕ್ಫ್ ಪರಿಷತ್ತಿನ ಸ್ವರೂಪದ ಬಗ್ಗೆಯೂ ಅರ್ಜಿದಾರರು ಆಕ್ಷೇಪ ಎತ್ತಿದ್ದಾರೆ. ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿದರೆ, ಮುಸ್ಲಿಮರು ಮಾತ್ರವೇ ಪರಿಷತ್ತು ಮತ್ತು ಮಂಡಳಿಗಳ ಸದಸ್ಯರಾಗಿರಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಆಸ್ತಿಯೊಂದು ಸರ್ಕಾರಕ್ಕೆ ಸೇರಿರುವುದೇ ಎಂಬ ಬಗ್ಗೆ ಜಿಲ್ಲಾಧಿಕಾರಿಯು ವಿಚಾರಣೆ ನಡೆಸಿದಾಗ ಅಂತಹ ಆಸ್ತಿಯನ್ನು ವಕ್ಫ್ ಎಂದು ಪರಿಗಣಿಸಲಾಗುವುದಿಲ್ಲ ಎನ್ನುವ ಅಂಶದ ಬಗ್ಗೆಯೂ ಆಕ್ಷೇಪ ದಾಖಲಿಸಿದ್ದಾರೆ.

ಕೇಂದ್ರ ಸರ್ಕಾರದ ಪರವಾಗಿ ಗುರುವಾರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಇಸ್ಲಾಂ ಧರ್ಮವನ್ನು ಕನಿಷ್ಠ ಐದು ವರ್ಷಗಳಿಂದ ಪಾಲಿಸುತ್ತಿರುವ ವ್ಯಕ್ತಿ ಮಾತ್ರವೇ ವಕ್ಫ್‌ಗೆ ಆಸ್ತಿ ನೀಡಬಹುದು ಎಂದು ಕಾನೂನಿನಲ್ಲಿ ಹೇಳಿರುವುದನ್ನು ಸಮರ್ಥಿಸಿಕೊಂಡರು.

ವಕ್ಫ್‌ಗೆ ವಂಚನೆಯ ಮೂಲಕ ಆಸ್ತಿ ವರ್ಗಾಯಿಸುವುದನ್ನು ತಡೆಯುವ ಉದ್ದೇಶದಿಂದ ಈ ಅಂಶ ಸೇರಿಸಲಾಗಿದೆ ಎಂದು ಹೇಳಿದರು.

ಅಮೃತಸರ ಮಂದಿರ ದಾಳಿ: ಉಗ್ರರ ಸಹಚರನ ಸೆರೆ

ನವದೆಹಲಿ (ಪಿಟಿಐ): ನಿಷೇಧಿತ ಉಗ್ರ ಸಂಘಟನೆ ಖಲಿಸ್ತಾನ ಲಿಬರೇಷನ್ ಫೋರ್ಸ್‌ನ (ಕೆಎಲ್‌ಎಫ್) ಉಗ್ರರ ಆಪ್ತ ಸಹಚರನಾಗಿದ್ದ ಭಗವಂತ್ ಸಿಂಗ್ ಅಲಿಯಾಸ್ ಮನ್ನ ಭಟ್ಟಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ಬಂಧಿಸಿದ್ದಾರೆ.

ಮಾರ್ಚ್‌ನಲ್ಲಿ ಅಮೃತಸರದ ದೇಗುಲವೊಂದರ ಮೇಲೆ ನಡೆಸಿದ ಗ್ರೆನೇಡ್ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಆತನನ್ನು ಬಂಧಿಸಿದ್ದಾಗಿ ಮಾಹಿತಿ ನೀಡಿದ್ದಾರೆ. ಇದರೊಂದಿಗೆ ಗ್ರೆನೇಡ್ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೀಡಾದವರ ಸಂಖ್ಯೆ 4ಕ್ಕೆ ತಲುಪಿದೆ.

ಅಮೃತಸರದ ಠಾಕೂರ್ ದ್ವಾರ ಸನಾತನ ಮಂದಿರದ ಮೇಲೆ ಕೆಎಲ್‌ಎಫ್ ಉಗ್ರರಾದ ಗುರ್ಸಿದಾಕ್ ಸಿಂಗ್ ಹಾಗೂ ವಿಶಾಲ್ ಗ್ರೆನೇಡ್ ದಾಳಿ ನಡೆಸಿದ್ದರು. ಈ ಇಬ್ಬರಿಗೂ ಭಗವಂತ್ ಆಶ್ರಯ ನೀಡಿದ್ದನಲ್ಲದೇ, ದಾಳಿಯ ಪಿತೂರಿಯಲ್ಲೂ ಭಾಗಿಯಾಗಿದ್ದ ಎನ್ನಲಾಗಿದೆ.

ಉಗ್ರರೊಂದಿಗೆ ಗುಂಡಿನ ಚಕಮಕಿ: ಯೋಧ ಹುತಾತ್ಮ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಿಶ್ತವಾಡ ಜಿಲ್ಲೆಯಲ್ಲಿ ಭದ್ರತಾ ಪಡೆ ಮತ್ತು ಉಗ್ರರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಯೋಧರೊಬ್ಬರು ಗುರುವಾರ ಹುತಾತ್ಮರಾಗಿದ್ದಾರೆ.

ಶಿಂಗ್ಪೊರಾ ಹಾಗೂ ಛತ್ರು ಪ್ರದೇಶಗಳಲ್ಲಿ ಉಗ್ರರು ಇರುವ ಖಚಿತ ಮಾಹಿತಿ ಮೇಲೆ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಗುಂಡಿನ ಚಕಮಕಿ ನಡೆದಿದೆ.

‘ಛತ್ರುನಲ್ಲಿ ಪೊಲೀಸರೊಂದಿಗೆ ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಗುರುವಾರ ಬೆಳಿಗ್ಗೆ ಉಗ್ರರು ಎದುರಾದರು. ಸ್ಥಳದಲ್ಲಿ ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗಿದ್ದು, ಕಾರ್ಯಾಚರಣೆ ಮುಂದುವರಿದಿದೆ. ಗಾಯಗೊಂಡ ನಮ್ಮ ಯೋಧರೊಬ್ಬರು ಹುತಾತ್ಮರಾದರು’ ಎಂದು ಸೇನೆಯ ವೈಟ್ ನೈಟ್ ಕೋರ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಪಾಕಿಸ್ತಾನ ಮೂಲದ ಜೈಷ್–ಎ–ಮಹಮ್ಮದ್ ಉಗ್ರ ಸಂಘಟನೆಯ ನಾಲ್ವರು ಈ ಸ್ಥಳದಲ್ಲಿ ಅವಿತಿದ್ದಾರೆ ಎನ್ನಲಾಗಿದೆ. ಸೇನೆ, ಜಮ್ಮು–ಕಾಶ್ಮೀರ ಪೊಲೀಸರು ಹಾಗೂ ಅರೆಸೇನಾ ಪಡೆಗಳು ಸ್ಥಳದಲ್ಲಿ ಜಂಟಿ ಕಾರ್ಯಾಚರಣೆ ಮುಂದುವರಿಸಿವೆ. ಉಗ್ರರು ಪರಾರಿಯಾಗದಂತೆ ವೈಮಾನಿಕ ಕಣ್ಗಾವಲು ನಿಯೋಜಿಸಲಾಗಿದೆ. ಹಿರಿಯ ಅಧಿಕಾರಿಗಳು ಪರಿಸ್ಥಿತಿ ಮೇಲೆ ನಿಗಾ ವಹಿಸಿದ್ದಾರೆ. ಭದ್ರತಾ ಪಡೆಗಳು ಕಳೆದ ವಾರ ನಡೆಸಿದ ಕಾರ್ಯಾಚರಣೆಯಲ್ಲಿ ಜೈಷ್ ಸಂಘಟನೆಯ ಮೂವರು ಉಗ್ರರು ಹತರಾದರು.

ಕೇಶವ್ ರಾವ್ ಬಳಿಕ ಮುಂಚೂಣಿಯಲ್ಲಿ ಇಬ್ಬರು? • ಸೂಕ್ಷ್ಮವಾಗಿ ಗಮನಿಸುತ್ತಿರುವ ಭದ್ರತಾ ಪಡೆ

ನಕ್ಸಲ್ ಹೊಸ ಕಮಾಂಡರ್‌ನತ್ತ ಚಿತ್ತ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಛತ್ತೀಸಗಢದ ಬಸ್ತಾರ್ ಪ್ರದೇಶದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಸಿಪಿಐ (ಮಾವೋವಾದಿ) ಪಕ್ಷದ ಪ್ರಧಾನ ಕಾರ್ಯದರ್ಶಿ ನಂಬಾಲಾ ಕೇಶವ್ ರಾವ್ ಅಲಿಯಾಸ್ ಬಸವರಾಜು (70) ಮೃತಪಟ್ಟ ಬಳಿಕ, ಅವರ ಉತ್ತರಾಧಿಕಾರಿ ಯಾರಾಗುತ್ತಾರೆ ಎಂಬುದನ್ನು ಭದ್ರತಾ ಪಡೆಗಳು ಸೂಕ್ಷ್ಮವಾಗಿ ಗಮನಿಸುತ್ತಿವೆ.

ಕೇಶವ್ ರಾವ್ ಅವರ ಹತ್ಯೆಯು ನಕ್ಸಲ್ ಚಳವಳಿಗೆ ಆದ ದೊಡ್ಡ ಹಿನ್ನಡೆ ಎಂದೂ ಮತ್ತು ದೇಶದಲ್ಲಿ ನಕ್ಸಲ್ ಚಟುವಟಿಕೆಯನ್ನು ನಿರ್ಮೂಲನೆ ಮಾಡಲು ಕೇಂದ್ರ ಸರ್ಕಾರ 2024ರ ಜನವರಿಯಿಂದ ಕೈಗೊಂಡಿರುವ ‘ಆಪರೇಷನ್ ಕಾಗರ್’ಗೆ ದೊರೆತ ಅತಿ ದೊಡ್ಡ ಯಶಸ್ಸು ಎಂದೂ ವಿಶ್ಲೇಷಿಸಲಾಗುತ್ತಿದೆ.

ದಶಕಗಳಿಂದ ನಡೆಯುತ್ತಿರುವ ಸಶಸ್ತ್ರ ಸಂಘರ್ಷದಲ್ಲಿ ಮಾವೋವಾದಿಗಳು ಮೊದಲ ಬಾರಿಗೆ ನಾಯಕನಿಲ್ಲದ ಪರಿಸ್ಥಿತಿಗೆ ತಲುಪಿದ್ದಾರೆ. ಅಲ್ಲದೆ, ಭದ್ರತಾ ಪಡೆಗಳೂ ಇದೇ ಮೊದಲ ಬಾರಿಗೆ ನಕ್ಸಲರ ಉನ್ನತ ಶ್ರೇಣಿಯ ನಾಯಕನನ್ನು ಹತ್ಯೆಮಾಡಿವೆ ಎಂದು ಮೂಲಗಳು ತಿಳಿಸಿವೆ.

ಮುಂಚೂಣಿಯಲ್ಲಿ ಇಬ್ಬರ ಹೆಸರು: ಕೇಶವ ರಾವ್ ನಂತರ ಆ ಸ್ಥಾನಕ್ಕೆ ಇಬ್ಬರ ಹೆಸರು ಮುಂಚೂಣಿಯಲ್ಲಿದೆ ಎಂದು ಗುಪ್ತಚರದ ಉನ್ನತ ಮೂಲಗಳು ತಿಳಿಸಿವೆ. ಅದರ ಪ್ರಕಾರ, ತಿಪ್ಪಿರಿ ತಿರುಪತಿ (60) ಮತ್ತು ಮಲ್ಲೋಜುಲ ವೇಣುಗೋಪಾಲ್ ರಾವ್ (70) ಹೆಸರುಗಳು ಕೇಳಿ ಬರುತ್ತಿವೆ.

ತಿಪ್ಪಿರಿ ತಿರುಪತಿ ಅವರು ಮಾವೋವಾದಿ ಪಕ್ಷದ ಸಶಸ್ತ್ರ ವಿಭಾಗದ ಕೇಂದ್ರ ಮಿಲಿಟರಿ ಆಯೋಗದ (ಸಿಎಂಸಿ) ಮುಖ್ಯಸ್ಥರಾಗಿದ್ದರೆ ವೇಣುಗೋಪಾಲ್ ರಾವ್ ಅವರು ಸದ್ಯ ಪಕ್ಷದ ಸೈದ್ಧಾಂತಿಕ ಮುಖ್ಯಸ್ಥರಾಗಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

ಈ ಇಬ್ಬರೂ ತೆಲುಗು ಭಾಷಿಕರಾಗಿದ್ದಾರೆ. ತಿರುಪತಿ ಅಲಿಯಾಸ್ ದೇವುಜಿ ಅವರು ದಲಿತ ಸಮುದಾಯದವರಾಗಿದ್ದು, ತೆಲಂಗಾಣದ ಜಗ್ತಿಯಾಲ್ ಮೂಲದವರು. ವೇಣುಗೋಪಾಲ್ ಅಲಿಯಾಸ್ ಸೋನು ಅವರು ಪೆದ್ದಪಲ್ಲಿ ಪ್ರದೇಶದವರು. ಇಬ್ಬರೂ ಅವಿಭಜಿತ ಆಂಧ್ರ ಪ್ರದೇಶದವರು.

‘ಮಾವೋವಾದಿಗಳಿಗೆ ಬುಧವಾರದ ಎನ್‌ಕೌಂಟರ್‌ನಿಂದ ದೊಡ್ಡ ಆಘಾತ ಮತ್ತು ಹಿನ್ನಡೆಯಾಗಿದೆ. ಅವರು ಪುನಃ ಒಗ್ಗೂಡಲು ಸಮಯ ಬೇಕಾಗಬಹುದು. ಇಂಥ ಸಂದರ್ಭದಲ್ಲಿ ಅವರು ಶೀಘ್ರದಲ್ಲಿಯೇ ಹೊಸ ಕಮಾಂಡರ್ ಅನ್ನು ಘೋಷಿಸುವ ಸಾಧ್ಯತೆ ಕಡಿಮೆ. ಒಂದು ವೇಳೆ ಅವರು ಕಮಾಂಡರ್ ಹೆಸರನ್ನು ಸದ್ಯದಲ್ಲಿಯೇ ಘೋಷಿಸಿದರೆ, ಅವರು ಇನ್ನೂ ಬಲಿಷ್ಠರಾಗಿದ್ದಾರೆ ಎಂಬ ಸಂದೇಶ ರವಾನೆ ಆಗುತ್ತದೆ’ ಎಂದು ಭದ್ರತಾ ಪಡೆಗಳ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ನಕ್ಸಲರ ಹತ್ಯೆಗೆ ಎಡಪಕ್ಷಗಳ ಖಂಡನೆ

ನವದೆಹಲಿ: ಛತ್ತೀಸಗಢ ಪೊಲೀಸರು ಸಿಪಿಐ (ಮಾವೋವಾದಿ) ಪ್ರಧಾನ ಕಾರ್ಯದರ್ಶಿ ನಂಬಾಲಾ ಕೇಶವ್ ರಾವ್ ಮತ್ತು ಇತರ 26 ಮಂದಿಯನ್ನು ಹತ್ಯೆಗೈದಿದ್ದಕ್ಕೆ ಎಡಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ.

ನಕ್ಸಲರು ಪದೇ ಪದೇ ಮಾತುಕತೆಗೆ ಆಹ್ವಾನಿಸುತ್ತಿದ್ದರೂ ಸರ್ಕಾರ ಅದನ್ನು ಕಡೆಗಣಿಸಿ ‘ನ್ಯಾಯಾಂಗದ ವ್ಯಾಪ್ತಿಗೆ ತಾರದೆ ಹತ್ಯೆ ಮಾಡುವ ಅಭಿಯಾನ’ವನ್ನು ಆರಂಭಿಸಿದೆ’ ಎಂದು ಎಡಪಕ್ಷಗಳು ಕಿಡಿಕಾರಿವೆ. ‘ಈ ಹತ್ಯೆಯನ್ನು ಪಕ್ಷವು ಖಂಡಿಸುತ್ತದೆ’ ಎಂದು ಸಿಪಿಎಂ ಹೇಳಿಕೆಯಲ್ಲಿ ತಿಳಿಸಿದೆ.

‘ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಕ್ಸಲ್ ಸಮಸ್ಯೆ ಅಂತ್ಯಕ್ಕೆ 2026ರ ಮಾರ್ಚ್ 31 ಕೊನೆಯ ದಿನ ಎಂದು ಗಡುವು ನಿಗದಿ ಮಾಡಿದ್ದು ಮತ್ತು ಛತ್ತೀಸಗಢ ಮುಖ್ಯಮಂತ್ರಿ ವಿಷ್ಣುದೇವ್ ಸಾಯಿ ಅವರು ‘ನಕ್ಸಲರೊಂದಿಗೆ ಮಾತುಕತೆಯ ಅಗತ್ಯವಿಲ್ಲ’ ಎಂದಿರುವುದು ಅವರ ‘ಫ್ಯಾಸಿಸ್ಟ್ ಮನಸ್ಥಿತಿ’ಯನ್ನು ಬಿಂಬಿಸುತ್ತದೆ. ಈ ನಡೆಯು ಮನುಷ್ಯರ ಹತ್ಯೆಯನ್ನು ಸಂಭ್ರಮಿಸುವಂತಿದೆ. ಇಂಥ ಹೇಳಿಕೆಗಳು ಪ್ರಜಾಪ್ರಭುತ್ವ ವಿರೋಧಿ’ ಎಂದು ಅದು ಹರಿಹಾಯ್ದಿದೆ.

‘ನಕ್ಸಲರ ಪುನರಾವರ್ತಿತ ಮನವಿಯನ್ನು ತಿರಸ್ಕರಿಸುವ ಮೂಲಕ ಕೇಂದ್ರ ಸರ್ಕಾರ ಮತ್ತು ಬಿಜೆಪಿ ನೇತೃತ್ವದ ಛತ್ತೀಸಗಢ ರಾಜ್ಯ ಸರ್ಕಾರವು, ಮಾತುಕತೆ ಮೂಲಕ ಸಮಸ್ಯೆಯನ್ನು ಇತ್ಯರ್ಥ ಮಾಡಿಕೊಳ್ಳುವ ಆಯ್ಕೆಯನ್ನು ತಳ್ಳಿಹಾಕಿವೆ. ಬದಲಾಗಿ ಹತ್ಯೆಗೈಯುವ ಅಮಾನವೀಯ ಹಾದಿಯನ್ನು ಅನುಸರಿಸುತ್ತಿವೆ’ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಸಿಪಿಐ ನ್ಯಾಷನಲ್ ಸೆಕ್ರೆಟರಿಯೇಟ್, ‘ನಕ್ಸಲ್ ವಿರೋಧಿ ಕಾರ್ಯಾಚರಣೆ ಸೋಗಿನಲ್ಲಿ ‘ನ್ಯಾಯಾಂಗದ ವ್ಯಾಪ್ತಿಗೆ ತಾರದೆ ಹತ್ಯೆ ಮಾಡುವ ಅಭಿಯಾನ’ ಆರಂಭಿಸಿರುವುಕ್ಕೆ ಇದು ಮತ್ತೊಂದು ನಿದರ್ಶನ. ನಕ್ಸಲ್ ನಾಯಕನ ಇರುವಿಕೆ ಬಗ್ಗೆ ಅಧಿಕಾರಿಗಳಿಗೆ ನಿಖರ ಗುಪ್ತಚರ ಮಾಹಿತಿ ಲಭ್ಯವಾಗಿದ್ದರೆ ಏಕೆ ಅವರನ್ನು ಕಾನೂನಾತ್ಮಕವಾಗಿ ಬಂಧಿಸಲಿಲ್ಲ. ಸಂವಿಧಾನಾತ್ಮಕ ಪ್ರಕ್ರಿಯೆಯನ್ನು ನಿರ್ಲಕ್ಷಿಸಿದ್ದು ಏಕೆ’ ಎಂದು ಪ್ರಶ್ನಿಸಿದೆ.

ಪ್ರಜಾಸತ್ತಾತ್ಮಕ ಸಮಾಜವು ರಾಜ್ಯವು ನ್ಯಾಯಾಧೀಶನಾಗಲು, ನಿರ್ಣಾಯಕನಾಗಲು ಮತ್ತು ಗಲ್ಲಿಗೇರಿಸುವ ವ್ಯಕ್ತಿಯಾಗಲು ಅವಕಾಶ ನೀಡುವುದಿಲ್ಲ. ಎಲ್ಲರಿಗೂ ನ್ಯಾಯ ಒದಗಿಸಬೇಕು. ಆದಿವಾಸಿಗಳ ಘನತೆ ಮತ್ತು ಹಕ್ಕುಗಳನ್ನು ಎತ್ತಿಹಿಡಿಯಬೇಕು ಎಂದು ಅದು ಹೇಳಿದೆ.

ಛತ್ತೀಸಗಢ: ನಕ್ಸಲ್ ಹತ, ಕೋಬ್ರಾ ಕಮಾಂಡೊ ಹುತಾತ್ಮ

ರಾಯಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ನಡೆದ ನಕ್ಸಲರ ವಿರುದ್ಧದ ಕಾರ್ಯಾಚರಣೆಯಲ್ಲಿ ಸಿಆರ್‌ಪಿಎಫ್‌ನ ಕೋಬ್ರಾ ಕಮಾಂಡೊ ಮೆಹುಲ್ ಸೋಲಂಕಿ ಹುತಾತ್ಮರಾಗಿದ್ದು, ಒಬ್ಬ ನಕ್ಸಲ್ ಹತನಾಗಿದ್ದಾನೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

ಸಿಆರ್‌ಪಿಎಫ್‌ನ ಕೋಬ್ರಾ ಪಡೆಯ 210ನೇ ತುಕಡಿ ಹಾಗೂ ಛತ್ತೀಸಗಢ ಪೊಲೀಸ್ ಪಡೆಗಳು, ತುಮ್ರೆಲ್ ಪ್ರದೇಶದಲ್ಲಿ ಜಂಟಿ ಕಾರ್ಯಾಚರಣೆ ನಡೆಸಿದ್ದು, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಘಟನೆಯಲ್ಲಿ ಇನ್ನೊಬ್ಬ ಕೋಬ್ರಾ ಕಮಾಂಡೊ ಗಾಯಗೊಂಡಿದ್ದಾರೆ.

ಐಇಡಿ ಸ್ಫೋಟ: ಡಿಆರ್‌ಜಿ ಸಿಬ್ಬಂದಿ ಸಾವು

ನಾರಾಯಣಪುರ (ಪಿಟಿಐ): ನಕ್ಸಲರು ಹೂತಿಟ್ಟಿದ್ದ ಕಚ್ಚಾಬಾಂಬ್ (ಐಇಡಿ) ಸ್ಫೋಟಗೊಂಡ ಪರಿಣಾಮ ಜಿಲ್ಲಾ ಮೀಸಲು ಪಡೆಯ (ಡಿಆರ್‌ಜಿ) ಸಿಬ್ಬಂದಿ ಯೊಬ್ಬರು ಮೃತಪಟ್ಟಿದ್ದಾರೆ. ಅಬೂಜಮಾಢದಲ್ಲಿ ಬುಧವಾರ ನಡೆದ ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ಭಾಗಿಯಾಗಿ, ಸಂಜೆ ಹಿಂದಿರುಗುತ್ತಿದ್ದ ವೇಳೆ ಈ ಘಟನೆ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬುಧವಾರ ನಡೆದ ಕಾರ್ಯಾಚರಣೆಯಲ್ಲಿ ಮಾವೋವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ಬಸವರಾಜು ಸೇರಿದಂತೆ 27 ಮಂದಿ ನಕ್ಸಲರನ್ನು ಎನ್‌ಕೌಂಟರ್ ಮಾಡಲಾಗಿತ್ತು. ಕಾರ್ಯಾಚರಣೆ ಮುಗಿಸಿ ಹಿಂದಿರುಗುವಾಗ ನಕ್ಸಲರು ಹೂತಿಟ್ಟಿದ್ದ ಐಇಡಿ ಮೇಲೆ ರಮೇಶ್ ಹೇಮ್ಲಾ ಕಾಲಿಟ್ಟ ಪರಿಣಾಮ ಅದು ಸ್ಫೋಟಗೊಂಡಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಕಾರ್ಯಾಚರಣೆ ವೇಳೆ ಖೋತ್ಲುರಾಮ್ ಕೊರ್ರಮ್ ಎಂಬ ಮತ್ತೊಬ್ಬ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐಎನ್‌ಸಿ ಅಲ್ಲ, ಪಿಎನ್‌ಸಿ: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಐಎನ್‌ಸಿ) ವರ್ತನೆಯು ಪಾಕಿಸ್ತಾನ್ ನ್ಯಾಷನಲ್ ಕಾಂಗ್ರೆಸ್ (ಪಿ.ಎನ್.ಸಿ) ರೀತಿ ಇದೆ. ಪಾಕಿಸ್ತಾನವು ವಿಶ್ವಸಂಸ್ಥೆಯಲ್ಲಿ ರಾಹುಲ್ ಗಾಂಧಿ, ಸಿದ್ದರಾಮಯ್ಯ ಅವರ ಹೇಳಿಕೆಗಳನ್ನೇ ಭಾರತದ ವಿರುದ್ಧ ಬಳಸಿಕೊಳ್ಳುತ್ತಿದೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ದೂರಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಪಾಕಿಸ್ತಾನಿಯರಿಗೆ ಅವರ ನಾಯಕರ ಮೇಲೆ ವಿಶ್ವಾಸವಿಲ್ಲ. ಅವರಿಗೆ ಇರುವ ಏಕೈಕ ಭರವಸೆ ರಾಹುಲ್ ಗಾಂಧಿ. ಸಿದ್ದರಾಮಯ್ಯ ಕೂಡ ಈಗೀಗ ಪಾಕಿಸ್ತಾನದಲ್ಲಿ ಜನಪ್ರಿಯರಾಗುತ್ತಿದ್ದಾರೆ' ಎಂದು ಟೀಕಿಸಿದರು.

'ರಾಹುಲ್ ಗಾಂಧಿಗೆ ಕರ್ನಾಟಕ ಎಟಿಎಂ. ಅಸಹಾಯಕ ಪರಿಸ್ಥಿತಿಯಲ್ಲಿರುವ ಕಾಂಗ್ರೆಸ್ ವರಿಷ್ಠರು ಸಿದ್ದರಾಮಯ್ಯ ಸರ್ಕಾರವನ್ನು ಹೊಗಳಲೇ ಬೇಕು. ಸಿದ್ದು ಕುರ್ಚಿ ಉಳಿಸಿಕೊಳ್ಳಲು ಹಣ ಕೊಟ್ಟರೆ, ಡಿ.ಕೆ. ಶಿವಕುಮಾರ್ ಕುರ್ಚಿ ಗಳಿಸಲು ಕೊಡುತ್ತಿದ್ದಾರೆ' ಎಂದು ಆರೋಪಿಸಿದರು.

'ಕಾಂಗ್ರೆಸ್ ಅಧಿಕಾರಕ್ಕೆ ಬಂದ ಎರಡು ವರ್ಷವೂ ರಾಜ್ಯದ ಪಾಲಿಗೆ ಕರಾಳ ದಿನ. ಈ ಅವಧಿಯಲ್ಲಿ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ 736 ಬಾಣಂತಿಯರು, 1,100ಕ್ಕೂ ನವಜಾತ ಶಿಶುಗಳು ಮೃತಪಟ್ಟಿದ್ದಾರೆ. 3 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದೆಲ್ಲ ಸಿದ್ದರಾಮಯ್ಯ ಸರ್ಕಾರದ ಸಾಧನೆ' ಎಂದು ವ್ಯಂಗ್ಯವಾಡಿದರು.

ಕರ್ನಾಟಕದ ಇತಿಹಾಸದಲ್ಲಿ ಅತಿ ಹೆಚ್ಚು ಸಾಲ ಮಾಡಿದ ಕೀರ್ತಿ ಸಿದ್ದರಾಮಯ್ಯ ಸರ್ಕಾರದ್ದು, ಅವರ ಮನೆತನದ ಆದಾಯ ಹೆಚ್ಚಾಗಿದೆ ಎಂದು ಅವರು ಟೀಕಿಸಿದರು.

'ಸರ್ಕಾರದ ಸಾಲವೂ ಜಾಸ್ತಿಯಾಗುತ್ತಿದೆ. ರಾಜ್ಯದ ₹7.64 ಲಕ್ಷ ಕೋಟಿ ಸಾಲದ ಪೈಕಿ ಸಿದ್ದರಾಮಯ್ಯ ಒಬ್ಬರೇ ₹4 ಲಕ್ಷ ಕೋಟಿ ಸಾಲ ಮಾಡಿದ್ದಾರೆ' ಎಂದು ದೂರಿದರು.

ಲಂಚ: ಇಬ್ಬರ ಬಂಧನ

ಬೆಳಗಾವಿ: ಅಂಗನವಾಡಿ ಸಹಾಯಕಿಯ ವರ್ಗಾವಣೆಗೆ ₹15 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿಯ ಸೂಪರಿಂಟೆಂಡೆಂಟ್ ಅಬ್ದುಲ್ ವಲಿ ಮತ್ತು ಕಂಪ್ಯೂಟರ್ ಆಪರೇಟರ್ ಸೌಮ್ಯಾ ಬಡಿಗೇರ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಹುಕ್ಕೇರಿಯ ಅಂಗನವಾಡಿ ಸಹಾಯಕಿ ಶಕುಂತಲಾ ಎಂಬುವರು ವರ್ಗಾವಣೆ ಕೋರಿದ್ದರು. ಅದಕ್ಕೆ ಇಬ್ಬರು ಆರೋಪಿಗಳು ₹30 ಸಾವಿರ ಲಂಚ ಕೇಳಿದ್ದರು. ಶಕುಂತಲಾ ಅವರಿಂದ ₹15 ಸಾವಿರ ಲಂಚ ಪಡೆಯುವಾಗ ಬಂಧಿಸಲಾಯಿತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಪಶು ಆಸ್ಪತ್ರೆಗೆ ಬಂದ ಮಂಗಕ್ಕೆ ಚಿಕಿತ್ಸೆ

ಬಾಗಲಕೋಟೆ: ಗಾಯಗೊಂಡಿದ್ದ ಮಂಗವೊಂದು ಜಿಲ್ಲೆಯ ಗುಡೂರು ಪಶು ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದುಕೊಂಡ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಗಾಯಗೊಂಡಿದ್ದ ಮಂಗವು ಗುಡೂರಿನ ಪಶು ಆಸ್ಪತ್ರೆ ಮುಂದೆ ಡಾ.ಜಿ.ಜಿ. ಬಿಲ್ಲೋರ ಅವರು ನಿಲ್ಲಿಸಿದ್ದ ದ್ವಿಚಕ್ರ ವಾಹನದ ಮೇಲೆ ಬಂದು ಕುಳಿತಿತು.

ಆಗ ಅಲ್ಲಿಗೆ ಬಂದ ಡಾ.ಬಿಲ್ಲೋರ ಅವರಿಗೆ ಗಾಯವಾಗಿದ್ದ ಸ್ಥಳವನ್ನು ತೋರಿಸಿತು. ಏನಾಗಿದೆ ಎಂದು ನೋಡಿದಾಗ ಗಾಯವಾಗಿರುವುದು ಕಂಡು ಬಂದಿತು.

ಗಾಯಕ್ಕೆ ಡಾ.ಬಿಲ್ಲೋರ ಚಿಕಿತ್ಸೆ ನೀಡಿದ ನಂತರ ಮಂಗ ಮರಳಿದೆ. 'ನನ್ನ ದ್ವಿಚಕ್ರ ವಾಹನದ ಮೇಲೆ ಕೂತಿದ್ದ ಮಂಗವು ಗಾಯ ಆಗಿರುವುದನ್ನು ತೋರಿಸಿತು. ಚಿಕಿತ್ಸೆ ನೀಡಿದ ನಂತರ ಮರಳಿದೆ. ಯಾವುದೇ ಸಮಸ್ಯೆ ಮಾಡಲಿಲ್ಲ' ಎಂದು ಡಾ.ಬಿಲ್ಲೋರ ತಿಳಿಸಿದರು.

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ

ಆಯುಕ್ತರ ಕಛೇರಿ, ಪಶುಪಾಲನಾ ಭವನ, ಹೆಬ್ಬಾಳ, ಬೆಂಗಳೂರು-560024

ಇ-ಮೇಲ್: commissionerahvs@gmail.com ದೂರವಾಣಿ : 080-23412767

ಸಂಖ್ಯೆ: ಆಪಸೇಇ/LHDCP/ASCAD/Syringe & Needle/TENDER/2025-26 ದಿನಾಂಕ: 21.05.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2025-26ನೇ ಸಾಲಿನಲ್ಲಿ LHDCP ಕಾರ್ಯಕ್ರಮದ ASCAD ಯೋಜನೆಯಡಿಯಲ್ಲಿ ಲಸಿಕಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಿವಿಧ ವಿಶಿಷ್ಟತೆಯುಳ್ಳ Syringe ಮತ್ತು Needles ಗಳನ್ನು ಖರೀದಿಸಿ, ಸರಬರಾಜು ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಸಂಬಂಧ ಟೆಂಡರ್ KPP Portal ಮೂಲಕ ಒಂದು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿಸಿದ ಮೊತ್ತ ರೂ. 935.58 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಯನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 21.05.2025 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು KPP Portalನಲ್ಲಿ ದಿನಾಂಕ: 21.05.2025 ರಿಂದ 22.06.2025ರ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ KPP Portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–
ಮುಖ್ಯ ಪಶುವೈದ್ಯಾಧಿಕಾರಿಗಳು
ಜಾನುವಾರು ಆರೋಗ್ಯ (ಎಡಿಎಸ್‌ಎಸ್)

DIPR/CP/SA/806/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಬೆಂಗಳೂರು ದಕ್ಷಿಣ ವಿಭಾಗ,
ಅಮೃತ್ ನಗರ, ಕೋಣನಕುಂಟೆ ಮುಖ್ಯರಸ್ತೆ, ಸೌದಾಮಿನಿ ಲೇಔಟ್, ಬೆಂಗಳೂರು-62.

ಸಂಖ್ಯೆ: ಕಾಅ/ಬೆಂದವಿ/ಟೆಂಡರ್(ತಿದ್ದುಪಡಿ)/04/2025-26 ದಿನಾಂಕ: 21.05.2025

ತಿದ್ದುಪಡಿ ಟೆಂಡರ್ ಪ್ರಕಟಣೆ

ಉಲ್ಲೇಖ: ಟೆಂಡರ್ ನೋಟಿಫಿಕೇಷನ್ ಸಂಖ್ಯೆ: ಬೃಬೆಂಮಪಾ/ಕಾಪಾಅ/ಬೆಂದವಿ/ಟೆಂಡರ್/04/2025-26 ದಿನಾಂಕ: 16.05.2025.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೊಮ್ಮನಹಳ್ಳಿ ವಲಯದ ಬೆಂಗಳೂರು ದಕ್ಷಿಣ ವಿಭಾಗ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಆಯವ್ಯಯ ಸಂಕೇತ 05-330502 ಅಡಿಯ ಕಾಮಗಾರಿಗಳಿಗೆ ಉಲ್ಲೇಖದಂತೆ ಕೆಪಿಪಿಪಿ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, **ತಾಂತ್ರಿಕ ಕಾರಣದಿಂದ ಸದರಿ ಟೆಂಡರ್‌ನ ದಿನಾಂಕವನ್ನು ಬದಲಾವಣೆ ಮಾಡಲಾಗಿರುತ್ತದೆ.** ವಿವರ ಈ ಕೆಳಕಂಡಂತಿರುತ್ತದೆ.

ನಿಗದಿಪಡಿಸಿರುವ ಟೆಂಡರ್ ದಿನಾಂಕಗಳು : (1) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **30.05.2025 ರ ಸಂಜೆ 4.00 ಗಂಟೆಯವರೆಗೆ.** (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **02.06.2025ರಂದು ಸಂಜೆ 4.30 ಗಂಟೆಗೆ. ಉಳಿದಂತೆ ಟೆಂಡರ್‌ನಲ್ಲಿ ಯಾವುದೇ** ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ, ಬಿಬಿಎಂಪಿ

ಕರ್ನಾಟಕ ಸರ್ಕಾರ

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾಧಿಕಾರಿಗಳ ಕಾರ್ಯಾಲಯ

ಕೊಠಡಿ ಸಂಖ್ಯೆ-001, ಕಾರವಾರ, ಉತ್ತರ ಕನ್ನಡ, ಫೋನ್: 08382-226588, 226589

ಇ-ಮೇಲ್: dobcmuttarakannada@gmail.com & dobcw-karwar@kar.gov.in

ಸಂ: ಬಿಸಿಡಬ್ಲ್ಯೂಡಿ/ಸೇ.ತ.ಶಾ/ಸಿಆರ್–/2025-26 ದಿನಾಂಕ: 21-05-2025

ಅಲ್ಪಾವಧಿ ಇ ಟೆಂಡರ್ ಪ್ರಕಟಣೆ

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉತ್ತರ ಕನ್ನಡ ಜಿಲ್ಲೆಯಿಂದ ಭಾರತೀಯ ಸೇನೆ / ಇತರೆ ಯೂನಿಫಾರ್ಮ ಸೇವೆಗಳಿಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ದತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿ ನೀಡುವ ವೀರ ಬಹಾದ್ದೂರ್ ಹೆಂಜಾ ನಾಯ್ಕ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆ, ಮಾಜಾಳಿ, ಕಾರವಾರದ ಅಭ್ಯರ್ಥಿಗಳಿಗೆ ಸಿದ್ದಪಡಿಸಿದ ಆಹಾರ ಪೂರೈಕೆಗಾಗಿ ಕೆಪಿಪಿ ಪೋರ್ಟಲ್ ಮುಖಾಂತರ ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆರಂಭಿಕ ದಿನಾಂಕ: 21-05-2025 ಹಾಗೂ ಕೊನೆಯ ದಿನಾಂಕ: 29-05-2025 ರ ಮಧ್ಯಾಹ್ನ 12.00 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ KPP Portalನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉತ್ತರ ಕನ್ನಡ

DIPR/ADK/KSMCA/123/25-26 Dt. 22.05.2025

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017, ದೂರವಾಣಿ ಸಂಖ್ಯೆ: 9448994705

ಇ–ಮೇಲ್: gmpurc@cescmysore.org, ವೆಬ್‌ಸೈಟ್: www.cescmysore.org

ಸಂಖ್ಯೆ: ಚಾವಿಸನಿನಿ/ಪ್ರವ್ಯ/ಉ.ಪ್ರವ್ಯ(ಖ)/ಸ.ಪ್ರವ್ಯ(ಖ)–2/2025–26/4976 ದಿನಾಂಕ: 22.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಟಿ&ಪಿ ಸಾಮಾಗ್ರಿಗಳನ್ನು ಸರಬರಾಜುಮಾಡಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರಸಂ.	ಸಾಮಗ್ರಿಗಳು ಮತ್ತು ಸೇವೆಗಳು	ವಿಚಾರಣೆ ಸಂಖ್ಯೆ/ದಿನಾಂಕ
1	ಚಾವಿಸನಿನಿಗೆ ಟೆಲಿಸ್ಕೋಪಿಕ್ ಟ್ರೀ ಪ್ರೂನರ್‌ಗಳನ್ನು ಸರಬರಾಜು ಮಾಡುವ ಬಗ್ಗೆ.	ಸಿ2–6232/ 22–05–2025

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ದಿನಾಂಕ:28–05–2025ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ **support@eprochelpdesk.com** ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/–
ಪ್ರಧಾನ ವ್ಯವಸ್ಥಾಪಕರು(ಖರೀದಿ)
ಚಾ.ವಿ.ಸಾ.ನಿ.ನಿ, ಮೈಸೂರು

DIPR/MYS/KAVITA/241/2025-26

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಜೆಇ1:ಟೆಂಡರ್–09:2025–26 ದಿನಾಂಕ: 21.05.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:– ಕೆಪಿಪಿಪಿ ಪೋರ್ಟಲ್ ಮೂಲಕ– ಏಕ ಲಕೋಟೆ ಪದ್ಧತಿ:– ಸಾಮಾನ್ಯ:– ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ (ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ):– (1) ಹಿರಿಯೂರು ತಾಲ್ಲೂಕು ಪಟ್ರೆಹಳ್ಳಿ–ಪಿಲಾಲಿ–ದಸೂಡಿ ರಸ್ತೆಯ ಕಿ.ಮೀ. 0.45 ರಲ್ಲಿ ನೀರಾವರಿ ಕಾಲುವೆಗೆ ಬಾಕ್ಸ್ ಕಲ್ವರ್ಟ್ ಹಾಗೂ ಅಪ್ರೋಚ್ ರಸ್ತೆ ನಿರ್ಮಾಣ (ವ.ಇಂ. 21814) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–55.00
(2) ಚಿತ್ರದುರ್ಗ ನಗರದ ತಹಶೀಲ್ದಾರ್‌ರವರ ಕಛೇರಿ ಕಟ್ಟಡ ದುರಸ್ಥಿ ಕಾಮಗಾರಿ (ವ.ಇಂ. 21745) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–10.00

ಕಾಮಗಾರಿಗಳ ಟೆಂಡರ್ ದಿನಾಂಕಗಳು:– ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 28–05–2025 ಸಮಯ 17–30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:–29–05–2025 ಸಮಯ 16–00
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 30–05–2025 ಸಮಯ 16–15

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/93/2025-26

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ.ಪೂರಕ ಕಟ್ಟಡ,
ಕೆ.ಆರ್.ವೃತ್ತ, ಬೆಂಗಳೂರು–560 001 ದೂ:080–22133370

ತಿದ್ದುಪಡಿ ಪ್ರಕಟಣೆ ಸಂಖ್ಯೆ:.02–02/2025–26
ದಿನಾಂಕ:21.05.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000 ರನ್ವಯ ಉಲ್ಲೇಖಿತ ಪತ್ರದಲ್ಲಿ ಕರೆಯಲಾಗಿದ್ದ ಕಾಮಗಾರಿಯ **Tenders for the work of Selection of Consultant for Providing Transaction Advisory services for Development of Land Parcels (6 Sites, 2 Properties) Located at Bengaluru Division on PPP Mode. Tender Reference: PWD/2024-25/SE0306**ಗೆ ಈ ಕೆಳಕಂಡಂತೆ ತಿದ್ದುಪಡಿ ಹೊರಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ. (1) **ಷರತ್ತುಗಳು ಈಗಾಗಲೇ ನಮೂದಾಗಿರುವುದು:** Last date for Submission of Technical Bid+Financial Quote: **23.05.2025 at 16.00 Hrs. ಪ್ರಸ್ತುತ ತಿದ್ದುಪಡಿ ಮಾಡಲಾದ ಷರತ್ತುಗಳು (Ref.KPP Portal):** The Last date for Submission of the proposals shall be extended till: **03.06.2025 at 16.00 Hrs.** (2) **ಷರತ್ತುಗಳು ಈಗಾಗಲೇ ನಮೂದಾಗಿರುವುದು:** Date of opening of Technical Bid: **26.05.2025 at 16.00 Hrs. ಪ್ರಸ್ತುತ ತಿದ್ದುಪಡಿ ಮಾಡಲಾದ ಷರತ್ತುಗಳು (Ref.KPP Portal):** Date of opening of Technical Bid: **04.06.2025 at 16.30 Hrs.** ವಿಶೇಷ ಸೂಚನೆ: ಇನ್ನುಳಿದ ಯಾವುದೇ ಷರತ್ತುಗಳಲ್ಲಿ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋ.ಇ. ಬೆಂಗಳೂರು ವಿಭಾಗ

ವಾಸಾಸಂಇ/ಉನಿ–ಸಿ.ಪಿ/800/ಕೆಎಸ್‌ಎಂಸಿಎ/2025–26

ಭಾರತ ಸರ್ಕಾರ

ಅಪರ ನಿರ್ದೇಶಕರ ಕಚೇರಿ, ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ

3ನೇ ಮಹಡಿ, ಇ–ವಿಂಗ್, ಕೇಂದ್ರೀಯ ಸದನ್, ಕೋರಮಂಗಲ, ಬೆಂಗಳೂರು-34.

ಜಯನಗರ ಮತ್ತು ಶೇಷಾದ್ರಿಪುರ ಸಿ.ಜಿ.ಹೆಚ್.ಎಸ್. ವೆಲ್‌ನೆಸ್ ಸೆಂಟರ್‌ಗಳನ್ನು ಸುತ್ತಮುತ್ತಲಿನ ಕೇಂದ್ರ ಸ್ಥಳಗಳಲ್ಲಿರುವ ವಸತಿ/ವಾಣಿಜ್ಯ ಪ್ರದೇಶದಲ್ಲಿ ಪುನರ್‌ನೆಲೆಗೊಳಿಸಲು ಸ್ಥಳಾವಕಾಶ ಬೇಕಾಗಿದೆ

ಸಿಜಿಹೆಚ್‌ಎಸ್, ಬೆಂಗಳೂರು, ಇವರು ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್ **ಜಯನಗರ ಮತ್ತು ಶೇಷಾದ್ರಿಪುರ** ಸುತ್ತಮುತ್ತಲಿನ ಕೇಂದ್ರ ಸ್ಥಳದಲ್ಲಿ ಪುನರ್‌ನೆಲೆಗೊಳಿಸಲು ಆದ್ಯನೀಯವಾಗಿ ನೆಲ ಮಹಡಿಯಲ್ಲಿ (ಅಥವಾ) ಲಿಫ್ಟ್ ಸೌಲಭ್ಯವುಳ್ಳ 1ನೇ ಮಹಡಿಯಲ್ಲಿನ ಸೂಕ್ತವಾದ ಸ್ಥಳಾವಕಾಶಕ್ಕಾಗಿ ಆಸಕ್ತಿಯುಳ್ಳ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಆಸಕ್ತಿಯುಳ್ಳ ವ್ಯಕ್ತಿಗಳು ಕಟ್ಟಡದ ನಕ್ಷೆಯ ಜೊತೆಗೆ ತಮ್ಮ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು "ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಇ–ವಿಂಗ್, 3ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು-560034" ಇವರಿಗೆ **ದಿನಾಂಕ: 10.06.2025ರ ಒಳಗೆ** ಸಲ್ಲಿಸತಕ್ಕದ್ದು. ಸ್ಥಳಾವಕಾಶಕ್ಕಾಗಿ ನೀಡಿರುವ ಈ ಜಾಹೀರಾತನ್ನು ಯಾವುದೇ ಸಮಯದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಹಕ್ಕನ್ನು ಸಿಜಿಹೆಚ್‌ಎಸ್ ಕಾಯ್ದಿರಿಸಿಕೊಂಡಿದೆ. ಯಾವುದೇ ಸ್ಪಷ್ಟನೆಗಳಿಗಾಗಿ ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಇ–ವಿಂಗ್, 3ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು – 560034 ಇವರನ್ನು ದೂರವಾಣಿ ಸಂಖ್ಯೆ 080–25538300 ಮೂಲಕ ಮತ್ತು ಇ–ಮೇಲ್ ಐಡಿ **cghsbng-ka@nic.in** ಮೂಲಕ ಸಂಪರ್ಕಿಸಬಹುದು.

ಪೂರ್ಣ ವಿವರಗಳಿಗಾಗಿ ಸಿಜಿಹೆಚ್‌ಎಸ್ ವೆಬ್‌ಸೈಟ್: **cghs.mohfw.gov.in** ಗೆ ಭೇಟಿ ನೀಡಿ

ಸಹಿ/– (ಡಾ. ವಿಜಯಲಕ್ಷ್ಮಿ ಮೋಹನ್), ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಬೆಂಗಳೂರು

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

(CIN : U31401KA2002SGC030437)

ಅಧೀಕ್ಷಕ ಇಂಜಿನಿಯರರು (ವಿ), ಪಿ.ಎಂ.ಸಿ. ನಿಗಮ ಕಚೇರಿ,
ನವನಗರ, ಪಿ.ಬಿ. ರಸ್ತೆ, ಹುಬ್ಬಳ್ಳಿ – 580 025, ದೂ. : 94490 57833.
ಮಿಂಚಂಚೆ : seepmc.hescom@gmail.com

ಸಂಖ್ಯೆ : ಹು.ವಿ.ಸ.ಕಂ.ನಿ./ಎಸ್.ಇ.ಇ.(ಪಿ.ಎಂ.ಸಿ.)/ಇ.ಇ.–ಪಿ2/ಎ.ಇ.ಇ.–2/2025–26/ಸಿ.ವೈ.ಎಸ್.–1634 ದಿನಾಂಕ : 22–05–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನಿಯರ್ (ವಿ), ಪಿ.ಎಂ.ಸಿ. ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಪಿಎಂ–ಕುಸುಮ್–ಸಿ ಅಡಿಯಲ್ಲಿ ಹೆಸ್ಕಾಂ ವ್ಯಾಪ್ತಿಯಲ್ಲಿ ಸೌರೀಕರಣಕ್ಕಾಗಿ **(Project - 32, 33, 34, 35, 36, 41, 42, 68, 69, 70, 72, 74, 76, 78, 85, 93, 96, 97, 98, 99 & 100) - 21 Nos Project** ಗ್ರಿಡ್ ಸಂಪರ್ಕಿತ ವಿತರಣೆ ಸೌರ ವಿದ್ಯುತ್ ಸ್ಥಾವರಗಳ ವಿನ್ಯಾಸ, ಸಮೀಕ್ಷೆ, ಪೂರೈಕೆ, ಸ್ಥಾಪನೆ, ಪರೀಕ್ಷೆ, ಕಾರ್ಯಾರಂಭ, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸ್ವಂತವಾಗಿ ನಿರ್ಮಿಸಿ ಮತ್ತು ನಿರ್ವಹಿಸುವ ಆಧಾರದ ಮೇಲೆ ಸೌರ ವಿದ್ಯುತ್ ಉತ್ಪಾದಕಗಳ **(SPGs)** ಆಯ್ಕೆ ಹೆಸ್ಕಾಂ ಕಾರ್ಯಾ ವ್ಯಾಪ್ತಿಯಲ್ಲಿನ ಉಪಕೇಂದ್ರ ಮಟ್ಟದಲ್ಲಿ ಅಂದಾಜು **10,740 IP** ಸೆಟ್‌ಗಳನ್ನು ಆಯ್ಕೆಯಾದ ಕೃಷಿ ಫೀಡರ್‌ಗಳ ಮತ್ತು ಸಂಬಂಧಿತ 11 ಕೆವಿ ಫೀಡರ್ ನಿರ್ಮಾಣ ಅಡಿಯಲ್ಲಿ 25 ವರ್ಷಗಳವರೆಗೆ ರೆಸ್ಕೋ ಮೋಡ್ ಮೂಲಕ ಸೌರ ವಿದ್ಯುತ್ ಸ್ಥಾವರಗಳ ಸಂಬಂಧಿತ ಮತ್ತು ರಿಮೋಟ್ ಮಾನಿಟರಿಂಗ್ ಸಿಸ್ಟಮ್‌ನೊಂದಿಗೆ ಸ್ಥಾವರವನ್ನು ಸೌರೀಕರಣ ಘಟಕ ನಿರ್ಮಾಣಕ್ಕಾಗಿ ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇಂಡೆಂಟ್ ಸಂಖ್ಯೆ : HESCOM/2025-26/SE0404

ಸದರಿ ಟೆಂಡರ್‌ಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್ : https://kppp.karnataka.gov.in ರಲ್ಲಿ ದಿನಾಂಕ : 22–05–2025 ರಂದು ಅಥವಾ ನಂತರ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರರು(ವಿ)
ಪಿ.ಎಂ.ಸಿ. ನಿಗಮ ಕಚೇರಿ ಹೆಸ್ಕಾಂ, ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/206/ಮಣಿಪಾಲ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಬೊಮ್ಮನಹಳ್ಳಿ ವಿಭಾಗ,
ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು–560 068.

ಸಂ: ಬಿಬಿಎಂಪಿ/ಕಾಪಾಅ/ಬೊವಿ/ಟೆಂಡ್–02/2025–26 ದಿನಾಂಕ:22.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ಏಕ & ದ್ವಿ–ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕೆಳಕಂಡ ವಿವಿಧ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಾರ್ಡ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂಗಳಲ್ಲಿ.)	ಕಾಮಗಾರಿಗಳ ಸಂಖ್ಯೆ
ಸಾಮಾನ್ಯ ಪ್ರವರ್ಗಕ್ಕೆ :				
ಚರಂಡಿಗಳ ಹೂಳು ತೆಗೆಯುವುದು ಮತ್ತು ವಾರ್ಡ್ ನಿರ್ವಹಣೆಗಾಗಿ ಕಾರ್ಮಿಕರು ಮತ್ತು ಟಿಪ್ಪರ್‌ಗಳನ್ನು ಒದಗಿಸುವುದು.				
1	214, 216, 217, 221, 223, 224	30.00 ತಲಾ	60,000 ತಲಾ	6
ರಸ್ತೆ ಗುಂಡಿಗಳನ್ನು ಮುಚ್ಚುವುದು ಮತ್ತು ನಿರ್ವಹಣಾ ಕಾಮಗಾರಿಗಳು				
2	213, 214, 216, 217, 218, 222, 223, 224	20.00 ತಲಾ	40,000 ತಲಾ	8
ಆಯ್ದ ರಸ್ತೆಗಳು ಮತ್ತು ಆರ್‌ಸಿಸಿ ಚರಂಡಿಗಳ ನಿರ್ಮಾಣ ಮತ್ತು ಸುಧಾರಣಾ ಕಾಮಗಾರಿಗಳು.				
3	213, 214, 215, 216, 217, 218, 219, 220, 221, 222, 223, 224	30.00 ರಿಂದ 75.00	60,000 ರಿಂದ 1,50,000	33
ರಸ್ತೆಗಳು ಮತ್ತು ಚರಂಡಿಗಳ ಸುಧಾರಣಾ ಕಾಮಗಾರಿಗಳು.				
4	213, 216, 217, 220	30.00 ರಿಂದ 50.00	60,000 ರಿಂದ 1,00,000	4
ಚರಂಡಿ ನಿರ್ಮಾಣ ಮತ್ತು ಸಿಡಿ ಕಾಮಗಾರಿಗಳು				
5	221, 223	25.00 ತಲಾ	50,000 ತಲಾ	2
3ನೇ ಕರೆ				
ಆಯ್ದ ರಸ್ತೆಗಳು ಮತ್ತು ಚರಂಡಿಗಳ ಸುಧಾರಣಾ ಕಾಮಗಾರಿಗಳು.				
6	5ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್,ಜರಗನಹಳ್ಳಿ ಸುತ್ತ ಮುತ್ತಲಿನ ಪ್ರದೇಶಗಳು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ	50.00 ರಿಂದ 100.00	1,00,000 ರಿಂದ 2,00,000	3
ಪರಿಶಿಷ್ಟ ಜಾತಿ ಪ್ರವರ್ಗಕ್ಕೆ :				
ಚರಂಡಿಗಳ ಹೂಳು ತೆಗೆಯುವುದು ಮತ್ತು ವಾರ್ಡ್ ನಿರ್ವಹಣೆಗಾಗಿ ಕಾರ್ಮಿಕರು ಮತ್ತು ಟಿಪ್ಪರ್‌ಗಳನ್ನು ಒದಗಿಸುವುದು.				
7	213	30.00	30,000	3
ರಸ್ತೆ ಗುಂಡಿಗಳನ್ನು ಮುಚ್ಚುವುದು ಮತ್ತು ನಿರ್ವಹಣಾ ಕಾಮಗಾರಿಗಳು				
8	215, 219, 220	20.00 ತಲಾ	20,000 ತಲಾ	3
ಆಯ್ದ ರಸ್ತೆಗಳು ಮತ್ತು ಆರ್‌ಸಿಸಿ ಚರಂಡಿಗಳ ನಿರ್ಮಾಣ ಮತ್ತು ಸುಧಾರಣಾ ಕಾಮಗಾರಿಗಳು.				
9	213, 215, 216, 218, 219, 220, 222, 223, 224	50.00 ರಿಂದ 80.00	50,000 ರಿಂದ 80,000	8
ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ :				
ಚರಂಡಿಗಳ ಹೂಳು ತೆಗೆಯುವುದು ಮತ್ತು ವಾರ್ಡ್ ನಿರ್ವಹಣೆಗಾಗಿ ಕಾರ್ಮಿಕರು ಮತ್ತು ಟಿಪ್ಪರ್‌ಗಳನ್ನು ಒದಗಿಸುವುದು.				
10	219, 222	30.00 ತಲಾ	30,000 ತಲಾ	2
ಆಯ್ದ ರಸ್ತೆಗಳು ಮತ್ತು ಆರ್‌ಸಿಸಿ ಚರಂಡಿಗಳ ನಿರ್ಮಾಣ ಮತ್ತು ಸುಧಾರಣಾ ಕಾಮಗಾರಿಗಳು.				
11	214, 215, 217, 221	30.00 ರಿಂದ 50.00	30,000 ರಿಂದ 50,000	5
CAT-IIA ಪ್ರವರ್ಗಕ್ಕೆ :				
ಚರಂಡಿಗಳ ಹೂಳು ತೆಗೆಯುವುದು ಮತ್ತು ವಾರ್ಡ್ ನಿರ್ವಹಣೆಗಾಗಿ ಕಾರ್ಮಿಕರು ಮತ್ತು ಟಿಪ್ಪರ್‌ಗಳನ್ನು ಒದಗಿಸುವುದು.				
12	215, 220	30.00 ತಲಾ	60,000 ತಲಾ	2
ರಸ್ತೆ ಗುಂಡಿಗಳನ್ನು ಮುಚ್ಚುವುದು ಮತ್ತು ನಿರ್ವಹಣಾ ಕಾಮಗಾರಿಗಳು				
13	221	20.00	40,000	1
ಆಯ್ದ ರಸ್ತೆಗಳು ಮತ್ತು ಆರ್‌ಸಿಸಿ ಚರಂಡಿಗಳ ನಿರ್ಮಾಣ ಮತ್ತು ಸುಧಾರಣಾ ಕಾಮಗಾರಿಗಳು.				
14	213, 214, 217, 218, 219, 221, 224	40.00 ರಿಂದ 75.00	80,000 ರಿಂದ 1,50,000	9
ರಸ್ತೆಗಳು ಮತ್ತು ಚರಂಡಿಗಳ ಸುಧಾರಣಾ ಕಾಮಗಾರಿಗಳು.				
15	215, 218	30.00 ತಲಾ	60,000 ತಲಾ	2
CAT-I ಪ್ರವರ್ಗಕ್ಕೆ :				
ಚರಂಡಿಗಳ ಹೂಳು ತೆಗೆಯುವುದು ಮತ್ತು ವಾರ್ಡ್ ನಿರ್ವಹಣೆಗಾಗಿ ಕಾರ್ಮಿಕರು ಮತ್ತು ಟಿಪ್ಪರ್‌ಗಳನ್ನು ಒದಗಿಸುವುದು.				
16	218	30.00	60,000	1
ರಸ್ತೆಗಳು ಮತ್ತು ಚರಂಡಿಗಳ ಸುಧಾರಣಾ ಕಾಮಗಾರಿಗಳು.				
17	214, 219	30.00 & 50.00	60,000 & 1,00,000	2
ಆಯ್ದ ರಸ್ತೆಗಳು ಮತ್ತು ಆರ್‌ಸಿಸಿ ಚರಂಡಿಗಳ ನಿರ್ಮಾಣ ಮತ್ತು ಸುಧಾರಣಾ ಕಾಮಗಾರಿಗಳು.				
18	222	60.00	1,20,000	1

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್‌ನಿಂದ ದಿನಾಂಕ : **31.05.2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **03.06.2025 ರ ಅಪರಾಹ್ನ 2.30 ಗಂಟೆಗೆ.** 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **26.06.2025 ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ / ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **27.06.2025 ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಹಾಗೂ ವೆಬ್‌ಸೈಟ್: **www.kppp.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ1.ಇ.ಟೆಂಡರ್:10:2025–26 ದಿನಾಂಕ:20–05–2025

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

2022–23 ನೇ ಸಾಲಿನ ಎಸ್.ಸಿ.ಎ.ಪಿ ನಿಧಿ ಉಳಿಕೆ./ ಪಾಲಿಕೆ ಸಾಮಾನ್ಯ ನಿಧಿ.–03 ಕಾಮಗಾರಿ, 2024–25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ.–01 ಕಾಮಗಾರಿ : ಒಟ್ಟು 04 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಕ್ರಮ ಸಂ.1 ರಿಂದ 02ರ ಅಲ್ಪಾವಧಿ ಕಾಮಗಾರಿಗೆ : ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 23–05–2025 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 31–05–2025 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 31–05–2025 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 02–06–2025 ಸಮಯ : 11.00

ಕ್ರಮ ಸಂ.04 ರ ಕಾಮಗಾರಿಗೆ: ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 23–05–2025 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 06–06–2025 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 06–06–2025 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 09–06–2025 ಸಮಯ : 11.00

ವಾಸಾಇ/ದಾವಣಗೆರೆ/83/ಕೆಎಸ್‌ಎಂಸಿಎ/2025–26

ಸಹಿ/–ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ದಾವಣಗೆರೆ

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ನಿರ್ಮಾಣ ಮತ್ತು ನಿರ್ವಹಣೆ ವಿಭಾಗ

ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ,
ಬೆಂಗಳೂರು–560 008. ದೂ.: 080–25037203/080–25037214

ದಿನಾಂಕ: 22.05.2025

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ, ಈ ಕೆಳಕಂಡ ಕಾಮಗಾರಿಗೆ ಐಟಂ ದರದ ಟೆಂಡರ್ ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು	ಬೆಂಗಳೂರಿನ ಎಲ್‌ಪಿಎಸ್‌ಸಿ(ಬಿ) ಕ್ಯಾಂಪಸ್‌ನಲ್ಲಿ ಇಂಟಿಗ್ರೇಟೆಡ್ ಇನ್‌ಫರ್ಮೇಷನ್ ಟೆಕ್ನಾಲಜಿ(ಐಟಿ) ಅನೆಕ್ಸ್ ಬಿಲ್ಡಿಂಗ್ ನಿರ್ಮಾಣ (ವರ್ಟಿಕಲ್ ಎಕ್ಸ್‌ಟೆನ್ಷನ್, 3ನೇ ಮಹಡಿ, ಬ್ಲಾಕ್–ಬಿ, ಮುಖ್ಯ ಕಟ್ಟಡ) –ಸಿವಿಲ್ ಮತ್ತು ಪಿಹೆಚ್ ಕಾಮಗಾರಿಗಳು
ಟೆಂಡರ್ ಪ್ರಕಟಣೆ ಸಂಖ್ಯೆ	ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/01/1002/ಸಿ/ಎಂಜೆ/001/2025–26 ದಿನಾಂಕ: 20.05.2025
ಟೆಂಡರ್‌ಗಿಟ್ಟ ಅಂದಾಜು ಮೊತ್ತ	₹ 135.14ಲಕ್ಷಗಳು
ಪೂರ್ಣಗೊಳಿಸುವ ಅವಧಿ	07 (ಏಳು) ತಿಂಗಳುಗಳು
ಮಾರಾಟದ ಅವಧಿ	22.05.2025 ರಿಂದ 03.06.2025
ಇಎಂಡಿ	₹ 2,70,280/–

ಆಸಕ್ತ ಟೆಂಡರ್‌ದಾರರು ದಯವಿಟ್ಟು **www.tenderwizard.com/ISRO** ಸಂಪರ್ಕಿಸಿ. ಅರ್ಹತಾ ಮಾನದಂಡ ಹಾಗೂ ಇತರೆ ಮಾಹಿತಿಗಳನ್ನೊಳಗೊಂಡ ವಿವರವಾದ ಇ–ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ), ವೆಬ್‌ಸೈಟ್ **www.isro.gov.in, www.lpsc.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ (ಬಿ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

#49, ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು–560 001
ಫೋನ್: 080–2558 6520/2558 9112 ಫ್ಯಾಕ್ಸ್: 080–2588 6321
e-mail: ho@kspcb.gov.in | Website: kspcb.karnataka.gov.in

ಸಂಖ್ಯೆ: ಮಾನಿಮಂ/137/17ನೇ ಪ್ರವರ್ಗ/ಹೆಚ್‌ಪಿಐ/ಇ.ಪಿ.ಎಚ್/2025/738 ದಿನಾಂಕ:21./05.2025

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ॥ ಟ್ರುಅಲ್ಟ್ ಬಯೋಎನರ್ಜಿ ಲಿಮಿಟೆಡ್, ಘಟಕ–3 ಇವರು, ಸರ್ವೇ ನಂ.72, 54/3, 54/8 ಮತ್ತು 54/9, ಕಲ್ಲಾಪುರ (ಎಸ್‌ಕೆ) ಗ್ರಾಮ, ಕುಳಗೇರಿ ಹೋಬಳಿ, ಬಾದಮಿ ತಾಲ್ಲೂಕು ಬಾಗಲಕೋಟೆ ಜಿಲ್ಲೆ ಇಲ್ಲಿ ಹಾಲಿ ಇರುವ ಡಿಸ್ಟಿಲರಿ ಘಟಕದಲ್ಲಿ ಮಲ್ಟಿ ಫೀಡ್‌ಸ್ಟಾಕ್ (ಬಿ/ಸಿ ಹೆವಿ ಮೊಲಾಸಸ್/ಶುಗರ್ ಸಿರಪ್/ಧಾನ್ಯ) ಉಪಯೋಗಿಸಿ ಪ್ರಸ್ತುತ ತಯಾರಿಸುತ್ತಿರುವ 400 ಕೆಎಲ್‌ಪಿಡಿ ಎಥನಾಲ್ ಅಥವಾ 65 ಕೆಎಲ್‌ಪಿಡಿಆರ್‌ಎಸ್/ಇಎನ್‌ಎ ಮತ್ತು 335 ಕೆಎಲ್‌ಪಿಡಿಎಥನಾಲ್ ಬದಲಾಗಿ ಮಲ್ಟಿ ಫೀಡ್‌ಸ್ಟಾಕ್ (ಬಿ/ಸಿ ಹೆವಿ ಮೊಲಾಸಸ್/ಶುಗರ್ ಸಿರಪ್/ಧಾನ್ಯ) ಉಪಯೋಗಿಸಿ 400 ಕೆಎಲ್‌ಪಿಡಿಆರ್‌ಎಸ್/ ಇಎನ್‌ಎ/ಎಥನಾಲ್ ತಯಾರಿಸಲು ಉದ್ದೇಶಿಸಿದ್ದು, ಈ ಬಗ್ಗೆ ಪರಿಸರ ಸಾರ್ವಜನಿಕ ಸಭೆ ನಡೆಸಲು ಉದ್ದೇಶಿಸಲಾಗಿದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.9.2006ರ (ತಿದ್ದುಪಡಿ ದಿನಾಂಕ: 09.05.2022) ಪ್ರಕಾರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಭಾರತ ಸರ್ಕಾರ, ಇವರಿಂದ ಪೂರ್ವ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರಇವರ Terms of Reference ಪತ್ರ ಸಂಖ್ಯೆ: IA-J-11011/62/2024-IA-II(I) ದಿನಾಂಕ: 15.03.2024 ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ಮಂಡಳಿಯಲ್ಲಿ ಸ್ವೀಕೃತಿ ದಿನಾಂಕ: 27.02.2025ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

1	**ಸಂಸ್ಥೆಯ ಹೆಸರು ಮತ್ತು ವಿಳಾಸ :** ಮೆ॥ ಟ್ರುಅಲ್ಟ್ ಬಯೋಎನರ್ಜಿ ಲಿಮಿಟೆಡ್, ಘಟಕ–3, ಕಲ್ಲಾಪುರ ಎಸ್‌ಕೆ ಗ್ರಾಮ, ಕುಳಗೇರಿ ಹೋಬಳಿ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
2	**ಉದ್ದೇಶಿತ ಯೋಜನೆಯ ಸ್ಥಳ:** ಸರ್ವೇ ನಂ.72, 54/3, 54/8 ಮತ್ತು 54/9, ಕಲ್ಲಾಪುರ ಎಸ್‌ಕೆ ಗ್ರಾಮ, ಕುಳಗೇರಿ ಹೋಬಳಿ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಕರ್ನಾಟಕ.
3	**ಉದ್ದೇಶಿತ ಕಾರ್ಖಾನೆಯ ಯೋಜನೆ:** ಹಾಲಿ ಇರುವ ಡಿಸ್ಟಿಲರಿ ಘಟಕದಲ್ಲಿಮಲ್ಟಿ ಫೀಡ್‌ಸ್ಟಾಕ್ (ಬಿ/ಸಿ ಹೆವಿ ಮೊಲಾಸಸ್/ಶುಗರ್ ಸಿರಪ್/ಧಾನ್ಯ) ಉಪಯೋಗಿಸಿ ಪ್ರಸ್ತುತ ತಯಾರಿಸುತ್ತಿರುವ 400 ಕೆಎಲ್‌ಪಿಡಿ ಎಥನಾಲ್ ಅಥವಾ 65 ಕೆಎಲ್‌ಪಿಡಿ ಆರ್‌ಎಸ್ / ಇಎನ್‌ಎ ಮತ್ತು 335 ಕೆಎಲ್‌ಪಿಡಿ ಎಥನಾಲ್ ಬದಲಾಗಿ ಮಲ್ಟಿ ಫೀಡ್‌ಸ್ಟಾಕ್ (ಬಿ/ಸಿ ಹೆವಿ ಮೊಲಾಸಸ್/ಶುಗರ್ ಸಿರಪ್/ಧಾನ್ಯ) ಉಪಯೋಗಿಸಿ 400 ಕೆಎಲ್‌ಪಿಡಿ ಆರ್‌ಎಸ್ / ಇಎನ್‌ಎ/ಎಥನಾಲ್ ತಯಾರಿಸಲು ಉದ್ದೇಶಿಸಿರುತ್ತಾರೆ.
4	**ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ: 24.06.2025 (ಮಂಗಳವಾರ) ಸಮಯ: ಬೆಳಿಗ್ಗೆ 11:00 ಗಂಟೆ, ಸ್ಥಳ: ಯೋಜನಾ ಸ್ಥಳ,ಮೆ॥ ಟ್ರುಅಲ್ಟ್ ಬಯೋಎನರ್ಜಿ ಲಿಮಿಟೆಡ್, ಘಟಕ–3, ಕಲ್ಲಾಪುರ (ಎಸ್‌ಕೆ) ಗ್ರಾಮ, ಕುಳಗೇರಿ ಹೋಬಳಿ, ಬಾದಾಮಿ ತಾಲ್ಲೂಕು ಬಾಗಲಕೋಟೆ ಜಿಲ್ಲೆ.**
5	**ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಷೆಗೆ ಲಭ್ಯವಿರುವ ಸ್ಥಳ:** ಅ) ಜಿಲ್ಲಾಧಿಕಾರಿಗಳ ಕಛೇರಿ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ. ಆ) ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ. **ಈ**) ಮಮತಗೇರಿ ಗ್ರಾಮ ಪಂಚಾಯತ್, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. **ಉ**) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸೆಕ್ಟರ್ ನಂ.07, ಬೈಪಾಸ್‌ರಸ್ತೆ, ನವನಗರ, ಬಾಗಲಕೋಟೆ ಜಿಲ್ಲೆ. **ಊ**) ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. **ಋ**) ಸಹಾಯಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರುತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **kspcb.karnataka.gov.in** ನಲ್ಲಿಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ, ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

ಆಯುಕ್ತರು ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕಾರ್ಯಾಲಯ ಕೂಡಲಸಂಗಮ

ತಾ॥ ಹುನಗುಂದ ಜಿಲ್ಲಾ: ಬಾಗಲಕೋಟ
ದೂರವಾಣಿ: 08351–268060 Email.:commksdbsangam@gmail.com

ಸಂ ಕಿಅ/ಕೂಸಅಮ/ವಿ/ಕೆ.ಪಿ.ಪಿ.ಪಿ/ಟೆಂಡರ/ಸಿಆರ್–17/2025–26/70 ದಿನಾಂಕ: 20–05–2025

ಅಲ್ಪಾವಧಿ ಟೆಂಡರ ಪ್ರಕಟಣೆ

ಕೆ.ಪಿ.ಪಿ ಪೋರ್ಟಲ್ ಮುಖಾಂತರ (ಏಕಲಕೋಟೆ ಪದ್ದತಿಯ ಮೇಲೆ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕೆಳ ಕಾಣಿಸಿದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಂತೆ ನೊಂದಾಯಿತ ಎಲೆಕ್ಟ್ರಿಕಲ್ ಸಿ.ಆಯ್.ಇ.ಜಿ 1ನೇ ದರ್ಜೆ ಕೆ.ಡಬ್ಲ್ಯೂ.2ರ ಮೂಲಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ನಿಯಾಮಾವಳಿಯಂತೆ ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರನ್ನು ಕೆಳಗೆ ಸಹಿ ಮಾಡಿದವರಿಂದ ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ ದಾಖಲೆಗಳನ್ನು https://kppp.karnataka.gov.in ವೆಬಸೈಟ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರಗಳನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ಸಲ್ಲಿಸುವದು.

Name of work:- Estimate for arranging power supply to 70KW Commercial installation for Kalyan Mantap of Commissioner KSDB Kudalasangam at B.Bagewadi Town in B.Bagewadi Section of Basavan Bagewadi Sub Division. Under Self Executive Scheme. (4th Call) Amount put to Tender Rs. 7.51 Lakhs EMD Amount Rs.0.19 Lakhs.

ವೆಬಸೈಟ್ ಮೂಲಕ ಟೆಂಡರ ಮಾಹಿತಿಯ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: 26–05–2025 ಬೆಳಿಗ್ಗೆ: 11.30 ಗಂಟೆಯವರೆಗೆ. ಟೆಂಡರಗಳಿಗೆ ಕೆ.ಪಿ.ಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವುದು ಹಾಗೂ ಟೆಂಡರನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 06–06–2025 ಸಾಯಂಕಾಲ 05:00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 09–06–2025 ಮುಂಜಾನೆ 11:30 ಗಂಟೆಗೆ (ಸಾಧ್ಯವಾದಲ್ಲಿ). ತಾಂತ್ರಿಕ ಬಿಡ್ ಅನುಮೋದನೆ ಆದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

(The Estimate amount put to Tender is exclusive of GST. The tenderer should quote without GST. GST shall be paid separately @ prevailing rates during billing)

ಹೆಚ್ಚಿನ ಮಾಹಿತಿಯನ್ನು ಆಯುಕ್ತರು ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕೂಡಲಸಂಗಮ ತಾ: ಹುನಗುಂದ

ಇವರ ಕಛೇರಿಯಲ್ಲಿ ಕೆಲಸದ ಅವಧಿಯಲ್ಲಿ ಅಥವಾ https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/–
ಆಯುಕ್ತರು
ಕೂಡಲಸಂಗಮ ಅಭಿವೃದ್ಧಿ ಮಂಡಳಿ
ಕೂಡಲಸಂಗಮ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕ.ನೀ.ನಿ.ನಿ.,
ಮ.ಎ.ದಂ.ಕಾ.ನಿ. ವಿಭಾಗ ನಂ 3, ಬಾದಾಮಿ, ಜಿಲ್ಲೆ : ಬಾಗಲಕೋಟೆ,
ದೂರವಾಣಿ : 08357–220057, ಇ–ಮೇಲ್ : eemlb3bdm@gmail.com

ಸಂಖ್ಯೆ : ಕ.ನೀ.ನಿ.ನಿ./ಮ.ಎ.ಕಾ.ನಿ, ವಿ–3/ಡಿ.ಬಿ./ಟೆಂಡರ್/2025–26/104
ದಿನಾಂಕ : 20–05–2025

ಟೆಂಡರ್ ಪ್ರಕಟಣೆ

(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದವರಿಂದ ಲೆಕ್ಕ ಶೀರ್ಷಿಕೆ : 4701 ಎಂ&ಎಂಐ ಅಡಿಯಲ್ಲಿ ಬರುವ ಕಾಮಗಾರಿಗೆ, ಲೋಕೋಪಯೋಗಿ ಇಲಾಖೆಯಲ್ಲಿ ಸೂಕ್ತ ದರ್ಜೆ / ನಿಗಮದಲ್ಲಿ ನೊಂದಾಯಿತರಾಗಿರುವ ಅರ್ಹ ಗುತ್ತಿಗೆದಾರರಿಂದ, ಶೇಕಡಾವಾರು ಇ–ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ಕರೆಯಲಾಗಿದೆ.

1) ಕಾಮಗಾರಿಗಳ ಸಂಖ್ಯೆ : 1 ಕಾಮಗಾರಿ (ಇಂಡೆಂಟ್ ಸಂ. 2926), 2) ಟೆಂಡರಗಿಟ್ಟ ಕಾಮಗಾರಿಯ ಅಂದಾಜು ಮೊತ್ತ : ರೂ. 261.58 ಲಕ್ಷ, 3) ನಿಗದಿಪಡಿಸಿದ ಕಾಮಗಾರಿಯ ಇ.ಎಂ.ಡಿ. ಮೊತ್ತ : ರೂ. 3,93,000.00, 4) ಟೆಂಡರ್‌ನ ದಿನಾಂಕಗಳ ವಿವರ : (1) ಇ–ಟೆಂಡರ್ ದಾಖಲೆಗಳನ್ನು ಡೌನಲೋಡ ಮಾಡಿಕೊಳ್ಳಲು ಹಾಗೂ ಭರ್ತಿ ಮಾಡಿದ ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 20–6–2025 ರ ಸಂಜೆ 4.00 ಗಂಟೆವರೆಗೆ. (2) ಪ್ರೀ–ಬಿಡ್ ಸಭೆಯ ದಿನಾಂಕ : 16–6–2025 ರ ಬೆಳಿಗ್ಗೆ 11.00 ಗಂಟೆಗೆ, (3) ಟೆಂಡರ್ ಆಕ್ಷೇಪಣೆಗಳಿಗೆ / ಸ್ಪಷ್ಟೀಕರಣಕ್ಕಾಗಿ ನಿಗದಿಪಡಿಸಿದ ದಿನಾಂಕ : 17–06–2025 ರ ಸಂಜೆ 4.30 ಗಂಟೆವರೆಗೆ, (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21–06–2025 ರ ಸಂಜೆ 4.00 ಗಂಟೆಯ ನಂತರ. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ : 26–6–2025 ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ.

ಗುತ್ತಿಗೆದಾರರ ಅರ್ಹತೆ / ಟೆಂಡರ್ ನಿಯಮಗಳು / ಟೆಂಡರ್ ಪ್ರೊಸೆಸ್ಸಿಂಗ ಶುಲ್ಕ ಇತ್ಯಾದಿ ವಿವರಗಳಿಗೆ **ವೆಬ್‌ಸೈಟ್ : www.kpp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕಛೇರಿಯ ಸಮಯದಲ್ಲಿ ದೂರವಾಣಿ ಸಂ. : 08357–220057 ಕ್ಕೆ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ : 08357 – 220057 ರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಕ.ನೀ.ನಿ.ನಿ., ಮ.ಎ.ಕಾ.ನಿ.,
ವಿಭಾಗ ನಂ. 3, ಬಾದಾಮಿ.

ಡಿಐಪಿಆರ್/ಬಾಗಲಕೋಟೆ/81/ಮಣಿಪಾಲ್/2025–26

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಅಕ್ಷರ ಕಲಿತ ವ್ಯಕ್ತಿ ಭ್ರಷ್ಟನಾಗಬಹುದು. ಆದರೆ ಸಂಸ್ಕಾರ ಕಲಿತ ವ್ಯಕ್ತಿ ಎಂದೆಂದಿಗೂ ಭ್ರಷ್ಟನಾಗಲಾರ.

–ಸಿದ್ಧೇಶ್ವರ ಸ್ವಾಮೀಜಿ

ಸ್ಥಳಗಳ ಹೆಸರು ಬದಲಾವಣೆ ಚೀನಾದ ಪ್ರಚೋದನಕಾರಿ ಕ್ರಮ

ಅರುಣಾಚಲ ಪ್ರದೇಶದಲ್ಲಿನ ಕೆಲವು ಸ್ಥಳಗಳ ಹೆಸರು ಬದಲಾಯಿಸುವ ಮೂಲಕ ಚೀನಾ ದೇಶವು ಮತ್ತೊಂದು ಸುತ್ತಿನ ಪ್ರಚೋದನಕಾರಿ ನಡೆಯನ್ನು ಇರಿಸಿದೆ. ಚೀನಾ ಸತತ ಮೂರನೆಯ ವರ್ಷವೂ ಇಂತಹ ಕೆಲಸ ಮಾಡುತ್ತಿದೆ. ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ, ನಂತರದ 'ಸಿಂಧೂರ ಕಾರ್ಯಾಚರಣೆ'ಯ ಕಾರಣಕ್ಕೆ ಭಾರತ ಮತ್ತು ಪಾಕಿಸ್ತಾನದ ನಡುವೆ ಸಂಘರ್ಷ ಉಂಟಾಗಿದ್ದ ಸಂದರ್ಭದಲ್ಲಿ ಚೀನಾ ಈ ಕೆಲಸ ಮಾಡಿದೆ. ಭಾರತದ ಅವಿಭಾಜ್ಯ ಅಂಗವಾಗಿರುವ ಈ ರಾಜ್ಯದ ಮೇಲೆ ಚೀನಾ ತನ್ನ ಹಕ್ಕು ಪ್ರತಿಪಾದಿಸುವ ಮಾರ್ಗ ಇದು. ಚೀನಾವು ಈ ಪ್ರದೇಶವನ್ನು ಜಂಗ್ನಾನ್ ಎಂದು ಕರೆಯುತ್ತದೆ. ಚೀನಾದ ನಡೆಯು 'ಪ್ರಯೋಜನಕ್ಕೆ ಬರುವಂಥದ್ದಲ್ಲ, ಇದು ತರ್ಕರಹಿತ ಕ್ರಮ' ಎಂದು ಭಾರತ ಪ್ರತಿಕ್ರಿಯಿಸಿದೆ. ಈ ಮೂಲಕ ಚೀನಾದ ನಡೆಯು ತಪ್ಪು ಎಂದು ಭಾರತ ಹೇಳಿದೆ. ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗವಾಗಿ ಇರಲಿದೆ ಎಂಬುದನ್ನು ಸ್ಪಷ್ಟಪಡಿಸಿದೆ. ಅರುಣಾಚಲ ಪ್ರದೇಶವು ತನ್ನದು ಎಂದು ಚೀನಾ ಹೇಳಿಕೊಳ್ಳುವುದನ್ನು ಭಾರತವು ಹಿಂದೆಯೂ ಬಹಳ ಸ್ಪಷ್ಟವಾಗಿ ಖಂಡಿಸಿದೆ. ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಕಳೆದ ವರ್ಷ 'ನಿಮ್ಮ ಮನೆಯ ಹೆಸರನ್ನು ನಾನು ಇಂದು ಬದಲಾಯಿಸಿದರೆ, ಅದು ನನ್ನದಾಗುತ್ತದೆಯೇ' ಎಂದು ಪ್ರಶ್ನಿಸಿದ್ದರು.



ಪಾಕಿಸ್ತಾನದ ಜೊತೆ ಭಾರತ ಸಂಘರ್ಷದಲ್ಲಿ ಇದ್ದ ಸಂದರ್ಭದಲ್ಲಿಯೇ ಹೆಸರು ಬದಲಾಯಿಸುವ ಕೆಲಸಕ್ಕೆ ಚೀನಾ ಮುಂದಾಗಿದ್ದುದು ಕಾಕತಾಳೀಯವೋ ಆಕಸ್ಮಿಕವೋ ಆಗಿರಲಾರದು

ಸ್ಥಳಗಳ ಹೆಸರುಗಳನ್ನು ಬದಲಾಯಿಸುವುದರಿಂದ ವಾಸ್ತವದಲ್ಲಿ ಯಾವುದೇ ಪರಿಣಾಮ ಆಗುವುದಿಲ್ಲ. ಈ ಸ್ಥಳಗಳ ಮೇಲೆ ತನಗೆ ಹಕ್ಕು ಇದೆ ಎಂಬ ಭಾವನೆಯಲ್ಲಿರುವ ಚೀನಾ, ಸಾಂಕೇತಿಕವಾದ ಈ ಒಂದು ಕೃತ್ಯದ ಮೂಲಕ ಒಂದಿಷ್ಟು ತೃಪ್ತಿಪಟ್ಟುಕೊಳ್ಳಬಹುದು. ಭಾರತ ದಾಖಲಿಸಿರುವ ಆಕ್ಷೇಪಗಳನ್ನು ಅಲಕ್ಷಿಸಿರುವ ಚೀನಾ, ಸ್ಥಳಗಳಿಗೆ ಹೊಸ ಹೆಸರು ನೀಡುವುದು ಭೌಗೋಳಿಕ ಪ್ರದೇಶಗಳ ಹೆಸರುಗಳನ್ನು ಶಿಷ್ಟಗೊಳಿಸುವ ಪ್ರಕ್ರಿಯೆಯ ಒಂದು ಭಾಗ ಎಂದು ಹೇಳಿದೆ. ಆದರೆ ತನ್ನ ಭೂಪ್ರದೇಶದ ಆಚೆಗಿರುವ ಸ್ಥಳಗಳ ಹೆಸರನ್ನು 'ಶಿಷ್ಟಗೊಳಿಸುವ' ಕೆಲಸವನ್ನು ಅದು ಮಾಡಬಾರದು. ಚೀನಾ ದೇಶವು ಇತರ ಮಾರ್ಗಗಳ ಮೂಲಕ ತನ್ನ ಹಕ್ಕು ಸಾಧಿಸುವ ಪ್ರಯತ್ನ ಮಾಡಿದೆ. ಭಾರತದ ಪ್ರಮುಖ ನಾಯಕರು ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿದಾಗಲೆಲ್ಲ ಚೀನಾ ಪ್ರತಿಭಟನೆ ದಾಖಲಿಸಿದೆ. ಅಲ್ಲದೆ, ಕ್ರೀಡಾಪಟುಗಳು ಈ ರಾಜ್ಯವನ್ನು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಪ್ರತಿನಿಧಿಸಿದಾಗಲೂ ಚೀನಾ ಅದನ್ನು ವಿರೋಧಿಸಿದೆ. ಏಕೆಂದರೆ, ಆ ದೇಶವು ಅರುಣಾಚಲ ಪ್ರದೇಶದ ಜನರನ್ನು ತನ್ನ ಪ್ರಜೆಗಳು ಎಂದು ಭಾವಿಸುತ್ತದೆ. ಆದರೆ ಇಂತಹ ನಡೆಗಳನ್ನು ಭಾರತವು ಯಾವಾಗಲೂ ವಿರೋಧಿಸಿದೆ. ಚೀನಾ ದೇಶದ ನಂಬಿಕಸ್ಥ ಗೆಳೆಯ ಆಗಿರುವ ಪಾಕಿಸ್ತಾನದ ಜೊತೆ ಭಾರತ ಸಂಘರ್ಷದಲ್ಲಿ ಇದ್ದ ಸಂದರ್ಭದಲ್ಲಿಯೇ ಹೆಸರು ಬದಲಾಯಿಸುವ ಕೆಲಸಕ್ಕೆ ಚೀನಾ ಮುಂದಾಗಿದ್ದುದು ಕಾಕತಾಳೀಯವೋ ಆಕಸ್ಮಿಕವೋ ಆಗಿರಲಾರದು. ಭಾರತದ ಜೊತೆಗಿನ ಸಂಘರ್ಷದ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಚೀನಾದ ಬೆಂಬಲ ಇತ್ತು, ಸಂಘರ್ಷದ ವೇಳೆ ಅದು ಚೀನಾದಿಂದ ಪೂರೈಕೆಯಾದ ಶಸ್ತ್ರಾಸ್ತ್ರಗಳನ್ನು ಬಳಕೆ ಮಾಡಿತ್ತು. ಹೀಗಾಗಿ, ಹೆಸರು ಬದಲಾಯಿಸುವ ಚೀನಾದ ನಡೆಯು ಒಂದು ಸಂದೇಶ ರವಾನಿಸುವ ಉದ್ದೇಶವನ್ನೂ ಹೊಂದಿರಬಹುದು.

ಕ್ಸಿನ್‌ಜಿಯಾಂಗ್ ಉಯ್ಗರ್ ಸ್ವಾಯತ್ತ ಪ್ರದೇಶದಲ್ಲಿ ಬರುವ ಹೊಟನ್ ಪರ್ಫೆಕ್ಚರ್‌ನಲ್ಲಿ ಎರಡು ಹೊಸ ಕೌಂಟಿಗಳನ್ನು ರಚಿಸುವ ತೀರ್ಮಾನವನ್ನು ಚೀನಾ ಈಚೆಗೆ ಪ್ರಕಟಿಸಿದೆ. ಈ ಕೌಂಟಿಗಳ ಕೆಲವು ಪ್ರದೇಶಗಳ ಗಡಿಯನ್ನು ಭಾರತದ ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನ ಒಳಗೂ ಇರುವಂತೆ ಗುರುತಿಸಲಾಗಿದೆ. ಭಾರತ ಮತ್ತು ಚೀನಾದ ವಿಶೇಷ ಪ್ರತಿನಿಧಿಗಳು ಗಡಿ ತಕರಾರು ಮತ್ತು ಇತರ ವಿಷಯಗಳ ಕುರಿತು ನಡೆಸುತ್ತಿರುವ ಮಾತುಕತೆಯು ಪೂರ್ಣಗೊಂಡಿಲ್ಲ. ಕೆಲವು ವರ್ಷಗಳ ಕಾಲ ಸ್ಥಗಿತಗೊಂಡಿದ್ದ ಈ ಮಾತುಕತೆಗಳು ಈಗ ಮತ್ತೆ ಶುರುವಾಗಿವೆ. ದ್ವಿಪಕ್ಷೀಯ ಸಂಬಂಧದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವಂತಹ ಏಕಪಕ್ಷೀಯ ಕ್ರಮಗಳನ್ನು ಎರಡೂ ದೇಶಗಳು ತೆಗೆದುಕೊಳ್ಳಬಾರದು ಎಂಬುದು ಕೂಡ ಈ ಮಾತುಕತೆಗಳ ಒಂದು ಉದ್ದೇಶ. ಹೀಗಿದ್ದರೂ ಚೀನಾ ದೇಶವು ಇಂತಹ ಆಕ್ರಮಣಕಾರಿ ಧೋರಣೆಯ ಕ್ರಮಗಳನ್ನು ತೆಗೆದುಕೊಳ್ಳುತ್ತಿರುತ್ತದೆ. ಪ್ರಚೋದನಕಾರಿ ಕ್ರಿಯೆಗಳ ರೂಪದಲ್ಲಿ ಕಾಣಿಸಿಕೊಳ್ಳುವ ಚೀನಾದ ವಿಸ್ತರಣಾವಾದಿ ನೀತಿಗಳ ಪರಿಣಾಮವನ್ನು ಅದರ ಇತರ ನೆರೆಯ ದೇಶಗಳು ಕೂಡ ಅನುಭವಿಸಿವೆ.

13 ಸುತ್ತಿನ ಚರ್ಚೆಯ ಬಳಿಕ ಸಹಿ ಬಿದ್ದಿರುವ ಈ ಒಪ್ಪಂದದ ಮಹತ್ವವಾದರೂ ಏನು?

ಸಾಂಕ್ರಾಮಿಕ ರೋಗ ನಿಗ್ರಹಕ್ಕೆ ಒಪ್ಪಂದ

ವಿಶ್ಲೇಷಣೆ

ಡಾ. ಗೋಪಾಲ ದಾಬಡೆ

ವಿಶ್ವ ಆರೋಗ್ಯ ಸಂಸ್ಥೆಯ ಸದಸ್ಯ ರಾಷ್ಟ್ರಗಳ ಮಧ್ಯೆ ಹದಿಮೂರು ಸುತ್ತಿನ ಚರ್ಚೆ ಮೂರು ವರ್ಷಗಳವರೆಗೆ ನಡೆದು, ಕಡೆಗೂ 'ಜಾಗತಿಕ ಸಾಂಕ್ರಾಮಿಕ ರೋಗಗಳ ಒಪ್ಪಂದ'ಕ್ಕೆ ಸಹಿ ಬಿದ್ದಿದೆ. ರೋಗ ತಡೆ, ರೋಗವನ್ನು ಎದುರಿಸಲು ಸಿದ್ಧತೆ, ಸಾಂಕ್ರಾಮಿಕಕ್ಕೆ ಪ್ರತಿಸ್ಪಂದನೆ- ಈ ಮೂರು ವಿಚಾರಗಳ ಕುರಿತು 2021ರಿಂದಲೇ ಚರ್ಚೆ ಆರಂಭವಾಗಿತ್ತು. ಚುಚ್ಚುಮದ್ದು, ಚಿಕಿತ್ಸೆ, ತಂತ್ರಜ್ಞಾನ ಇವೆಲ್ಲ ಬಡರಾಷ್ಟ್ರಗಳಿಗೂ ಎಟುಕುವ ರೀತಿಯಲ್ಲಿ ಜಾಗತಿಕ ಮಟ್ಟದ ಕಾನೂನು ಇರಬೇಕು ಎಂಬುದರ ಕುರಿತೇ ಇಷ್ಟು ದಿನಗಳ ಚರ್ಚೆ ಕೇಂದ್ರೀಕೃತವಾಗಿತ್ತು.

ಸಾಂಕ್ರಾಮಿಕ ರೋಗವೊಂದು ಜಾಗತಿಕ ಮಟ್ಟದಲ್ಲಿ ಹಬ್ಬತೊಡಗಿತೆಂದರೆ, ಅದು ಜಗತ್ತಿನ ಎಲ್ಲಾ ದೇಶಗಳ ಆರೋಗ್ಯ ವ್ಯವಸ್ಥೆಯ ಮೇಲಷ್ಟೇ ಅಲ್ಲದೆ ಸಾಮಾಜಿಕ ವ್ಯವಸ್ಥೆಯ ಮೇಲೂ ಪ್ರಭಾವ ಬೀರುತ್ತದೆ. ಕೊರೊನಾ-19 ಬಂದು ಇಡೀ ಭೂಗೋಳವನ್ನೇ ಬಾಧಿಸಿತು. ಅಂತಹದ್ದೇ ಅಥವಾ ಅದಕ್ಕಿಂತಲೂ ಕ್ರೂರವಾದ ಸಾಂಕ್ರಾಮಿಕ ರೋಗವೊಂದು ಮತ್ತೆ ಉದಯಿಸಬಹುದು, ಹಾಗೇನಾದರೂ ಅಂತಹ ರೋಗ ಬಂದರೆ, 2050ರ ಹೊತ್ತಿಗೆ ಏನಿಲ್ಲವೆಂದರೂ 2.5 ಕೋಟಿ ಜನ ಸಾಯಬಹುದು ಎಂದು 'ಲ್ಯಾನ್ಸೆಟ್' ನಿಯತಕಾಲಿಕದ 'ಗ್ಲೋಬಲ್ ಹೆಲ್ತ್- 2050' ಆಯೋಗವು ಭವಿಷ್ಯ ನುಡಿದಿದೆ. ಈ ರೋಗವನ್ನು ಎದುರಿಸಲು ಸೂಕ್ತ ಸಿದ್ಧತೆ ಮಾಡಿಕೊಳ್ಳುವ ಸಂಬಂಧ ಅಂತರರಾಷ್ಟ್ರೀಯ ಒಪ್ಪಂದವೊಂದು ಆಗಬೇಕು ಎಂದು ಅದು ಹೇಳಿದೆ.

'ಜಾಗತಿಕ ಸಾಂಕ್ರಾಮಿಕ ರೋಗಗಳ ಒಪ್ಪಂದ'ದ ಅವಶ್ಯಕತೆಯನ್ನು ಗ್ರಹಿಸಬೇಕಾದರೆ, ಕೋವಿಡ್- 19 ದಿನಗಳತ್ತ ಗಮನಹರಿಸಬೇಕು. ಈ ಸಾಂಕ್ರಾಮಿಕ ಉಂಟುಮಾಡಿದ ವಿನಾಶ, ಬಡ ದೇಶಗಳು, ಅದರಲ್ಲೂ ಆರೋಗ್ಯ ವ್ಯವಸ್ಥೆ ಸರಿಯಾಗಿಲ್ಲದ, ಉದ್ಯೋಗಗಳ ಅವಕಾಶ ಕಡಿಮೆ ಇರುವಂತಹ ದೇಶಗಳ ಕತೆ ಏನಾಯಿತೆಂಬುದನ್ನು ನೆನಪಿಸಿಕೊಳ್ಳಬೇಕು. ಶ್ರೀಮಂತ ರಾಷ್ಟ್ರಗಳಿಗಿಂತಲೂ ಲ್ಯಾಟಿನ್ ಅಮೆರಿಕದ ಬಡದೇಶಗಳು ಅತಿ ಹೆಚ್ಚು ಸಂಕಟವನ್ನು ಅನುಭವಿಸಿದವು. ಆರೋಗ್ಯ ಮತ್ತು ವೈದ್ಯಕೀಯದ ವಿಚಾರದಲ್ಲಿ ಶ್ರೀಮಂತ- ಬಡ ರಾಷ್ಟ್ರಗಳೆನ್ನದೆ, ಎಲ್ಲ ದೇಶಗಳಲ್ಲೂ ಸಮನಾದ ಚಿಕಿತ್ಸಾ ಅನುಕೂಲಗಳು ಇರಬೇಕಾದ ಅಗತ್ಯವನ್ನು ಅವುಗಳ ಪರಿಸ್ಥಿತಿ ಸಾರಿ ಹೇಳಿತು.

ಕೊರೊನಾ ಸಮಯದಲ್ಲಿ ವೈದ್ಯಕೀಯ ಸೌಲಭ್ಯಗಳೇ ಮಿತಿಯಲ್ಲಿದ್ದು, ಅವು ಎಲ್ಲರಿಗೂ ದಕ್ಕುವಂತೆ ಇರಲಿಲ್ಲ. ಅಷ್ಟೇ ಅಲ್ಲ, ಶ್ರೀಮಂತ ರಾಷ್ಟ್ರಗಳಿಗೇ ಅವು ಆದ್ಯತೆಯ ಮೇರೆಗೆ ಪೂರೈಕೆಯಾಗಿದ್ದೂ ನಿಜ. ಇನ್ನು ಬಡರಾಷ್ಟ್ರಗಳಿಗಂತೂ ಅವು ಕೈಗೆಟುಕಲೂ ಇಲ್ಲ, ಆ ದೇಶಗಳು ಸ್ವಂತ ಉತ್ಪಾದಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ.

ಸಾಂಕ್ರಾಮಿಕ ರೋಗವೊಂದು ಜಗತ್ತನ್ನೇ ವ್ಯಾಪಿಸಿದಾಗ, ಮುಂದುವರಿದ, ಶ್ರೀಮಂತ ರಾಷ್ಟ್ರಗಳಿಗಷ್ಟೇ ಔಷಧಗಳು ಸಿಕ್ಕಿದ್ದು ಜಗದ್ವ್ಯಾಪಿಯಾಗಿ ಚರ್ಚೆಗೆ ಒಳಗಾಯಿತು. ಇನ್ನೂ ಅಭಿವೃದ್ಧಿಯಾಗದ ದೇಶವಾಸಿಗಳಿಗೆ ಚುಚ್ಚುಮದ್ದು, ಸೂಕ್ತ ಚಿಕಿತ್ಸೆ ಮತ್ತು ಅವನ್ನೆಲ್ಲ ಪಡೆದುಕೊಳ್ಳುವ ತಂತ್ರಜ್ಞಾನ ಎಲ್ಲವೂ ಬೇಡವೇ? ಅಲ್ಲಿನ ಜನರ ಬದುಕುವ ಹಕ್ಕು, ಮಾನವ ಹಕ್ಕಿನ ಕತೆಯೇನು? ಇವೆಲ್ಲ ವಿಸ್ತೃತ ಚರ್ಚೆಗೆ ಒಳಗಾದವು ಎಂಬುದೇನೋ ನಿಜ. ಆದರೂ ಔಷಧಗಳು ಕಡಿಮೆ ಪ್ರಮಾಣದಲ್ಲಿ ಉತ್ಪಾದನೆಯಾದಾಗ ಅವು ಕೈಗೆಟುಕುವುದು ಶ್ರೀಮಂತ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಜನ ಹಾಗೂ ಸರ್ಕಾರಕ್ಕೆ ಮಾತ್ರ. ಶ್ರೀಮಂತ ದೇಶಗಳಲ್ಲಷ್ಟೇ ಉತ್ಪಾದನೆಯಾಗುವುದು, ಕಡಿಮೆ ಪ್ರಮಾಣದಲ್ಲಿ ಉತ್ಪಾದನೆ, ಬಡ ದೇಶಗಳು ಚಿಕಿತ್ಸೆ, ಔಷಧ ಮತ್ತು ಚುಚ್ಚುಮದ್ದಿಗಾಗಿ ಕಾಯುತ್ತಲೇ ಇರುವುದು… ಇಂತಹ ಬೆಳವಣಿಗೆಗಳು ಕೊರೊನಾ ಸಮಯದಲ್ಲಷ್ಟೇ ಅಲ್ಲ, ಇಂದಿಗೂ ನಡೆಯುತ್ತಲೇ ಇವೆ. ಇವು ಜಾಗತಿಕ ಮಟ್ಟದಲ್ಲಿ ಮುಂದುವರಿದಿರುವ ಅಸಮಾನತೆಯನ್ನು ಎತ್ತಿ ತೋರಿಸುತ್ತವೆ.

ಹದಿಮೂರು ಸುತ್ತುಗಳಲ್ಲಿ ಚರ್ಚೆ ನಡೆದು, ಅಂತೂ ಕೊನೆಗೆ ಶ್ರೀಮಂತ ರಾಷ್ಟ್ರಗಳನ್ನು ಒಪ್ಪಿಸಿ 'ಗ್ಲೋಬಲ್ ಪ್ಯಾಂಡೆಮಿಕ್ ಅಗ್ರೀಮೆಂಟ್' ಅಥವಾ 'ಜಾಗತಿಕ ಸಾಂಕ್ರಾಮಿಕ ರೋಗಗಳ ಒಪ್ಪಂದ'ಕ್ಕೆ ಸಹಿ ಹಾಕಿಸಲಾಯಿತು. ಈ ಒಪ್ಪಂದದ ಮಹತ್ವವೇನು? ತಂತ್ರಜ್ಞಾನದಲ್ಲಿ ಮುಂದುವರಿದಿರುವ ಶ್ರೀಮಂತ ರಾಷ್ಟ್ರಗಳಲ್ಲಿನ ಔಷಧ ಕಂಪನಿಗಳು ದಕ್ಷಿಣದ ಬಡ ದೇಶಗಳಿಂದ ತಮಗೆ ಬೇಕಾದ ರೋಗಾಣುಗಳ ಮಾದರಿಗಳನ್ನು ಒಯ್ಯುತ್ತವೆ. ಅದಕ್ಕೆ ಪ್ರತಿಯಾಗಿ ಆ ರಾಷ್ಟ್ರಗಳಿಗೆ ಏನನ್ನೂ ಕೊಡುವುದೇ ಇಲ್ಲ. ಆ ಮಾದರಿಗಳನ್ನು ಆಧರಿಸಿ ಔಷಧ ಕಂಡುಹಿಡಿದದ್ದು ಅಥವಾ ಅಭಿವೃದ್ಧಿಪಡಿಸಿದ್ದು ತಾವೇ ಎಂದು ಹೇಳಿಕೊಂಡು, ಅದಕ್ಕೆ ಪೇಟೆಂಟ್ ಮಾಡಿ ಇಟ್ಟುಕೊಳ್ಳುತ್ತವೆ. ಕೋವಿಡ್- 19ರ ಸಂದರ್ಭದಲ್ಲಿ ಆಗಿದ್ದೂ ಅದೇ.

ಶ್ರೀಮಂತ ರಾಷ್ಟ್ರಗಳು ಆ ಕಂಪನಿಗಳೊಂದಿಗೆ ದ್ವಿಪಕ್ಷೀಯ ಒಪ್ಪಂದ ಮಾಡಿಕೊಂಡು, ಅವು ಉತ್ಪಾದಿಸಿದ್ದ ಎಲ್ಲ ಚುಚ್ಚುಮದ್ದುಗಳನ್ನೂ ಪಡೆದುಕೊಂಡವು. ಎಲ್ಲರಿಗೂ ಸಮಾನವಾಗಿ ಸಿಗಲೆಂಬ ಆಶಯದಿಂದ ವಿಶ್ವ ಆರೋಗ್ಯ ಸಂಸ್ಥೆ ಅಭಿವೃದ್ಧಿಪಡಿಸಿದ 'ಕೋವ್ಯಾಕ್ಸ್'ನಿಂದ ಕೂಡ ಬಡದೇಶಗಳಿಗೆ ಪ್ರಯೋಜನ ಆಗದೇ ಹೋಯಿತು. ಬಡದೇಶಗಳು, ತಂತ್ರಜ್ಞಾನ ಇಲ್ಲದ ದೇಶಗಳು 'ನಮಗೂ ಚುಚ್ಚುಮದ್ದು ಕೊಡಿ' ಎನ್ನುತ್ತ ಸರದಿ ಸಾಲಿನಲ್ಲಿ ನಿಂತು ಕಾಯುವಂತಾಗಿತ್ತು.

ರೋಗಾಣು, ಸೂಕ್ಷ್ಮಜೀವಿಗಳನ್ನು ದಕ್ಷಿಣದ ಬಡ ದೇಶಗಳಿಂದ ಪಡೆದ ಕಂಪನಿಗಳು ತಾವು ಅಭಿವೃದ್ಧಿಪಡಿಸಿದ ಔಷಧ, ಸಲಕರಣೆ, ಚುಚ್ಚುಮದ್ದಿನ ಶೇ 10ರಷ್ಟು ಭಾಗವನ್ನು ವಿಶ್ವ ಆರೋಗ್ಯ ಸಂಸ್ಥೆಗೆ ಕಳಿಸಬೇಕೆಂದು ಹೊಸ ಪ್ಯಾಂಡೆಮಿಕ್ ಅಗ್ರೀಮೆಂಟ್ ಹೇಳುತ್ತದೆ. ನಿಜ ಅರ್ಥದಲ್ಲಿ ಇದು ಯಾತಕ್ಕೂ ಸಾಲದು. ಆದರೂ ಏನನ್ನೂ ಕೊಡದೆ ದೋಚಿಕೊಂಡು ಹೋಗುತ್ತಿರುವುದಕ್ಕಿಂತ ಇದು ಸ್ವಲ್ಪ ವಾಸಿ.

ಬಲಾಢ್ಯ ರಾಷ್ಟ್ರಗಳು ತಮ್ಮ ಬಿಗಿಮುಷ್ಟಿಯನ್ನು ಸಡಿಲ ಮಾಡುವ ಯಾವುದೇ ಲಕ್ಷಣ ಇಲ್ಲಿ ಕಾಣುವುದಿಲ್ಲ. ಬದಲಿಗೆ ತಮ್ಮ ರಾಷ್ಟ್ರಗಳಲ್ಲಿ ನೆಲೆಯೂರಿರುವ ಕಂಪನಿಗಳ ಹಿಡಿತವನ್ನು ಇನ್ನಷ್ಟು ಗಟ್ಟಿ ಮಾಡಲು ಸಹಾಯ ಮಾಡುತ್ತವೆ. ಬಡ ದೇಶಗಳಲ್ಲಿ ಸಂಪನ್ಮೂಲಗಳೂ ಇಲ್ಲ, ತಂತ್ರಜ್ಞಾನವೂ ಇಲ್ಲ. ಹೀಗಾಗಿ, ಯಾವುದೇ ಹೊಸ ಆವಿಷ್ಕಾರ ಅಥವಾ ಉತ್ಪಾದನೆ ಅಲ್ಲಿ ಸಾಧ್ಯ ಇಲ್ಲದಿರುವುದರಿಂದ ಮಾತುಕತೆ ನಡೆದಾಗ ಪಟ್ಟು ಹಿಡಿಯುವುದಕ್ಕೆ ಅವುಗಳಿಗೆ ಅವಕಾಶವೂ ಇಲ್ಲ.

ಉತ್ಪಾದನೆಯ ಮೇಲೆ ಹಿಡಿತವಿಲ್ಲದ ಕಾರಣದಿಂದ ರೋಗತಡೆ ಚುಚ್ಚುಮದ್ದುಗಳು ಅವುಗಳಿಗೆ ಸಕಾಲದಲ್ಲಿ ಸಿಗುವುದಿಲ್ಲ. ಆದಾಗ್ಯೂ ನಾಗರಿಕ ಹಿತಾಸಕ್ತ ಸಂಘಟನೆಗಳು, ಮಾಧ್ಯಮಗಳ ಕಾರಣದಿಂದಾಗಿ ಆ ಕುರಿತು ಚರ್ಚೆಯೇನೋ ನಡೆಯಿತು. ಮತ್ತೆ ಮತ್ತೆ ಸಭೆಗಳಾದವು. ಮಾನವ ಹಕ್ಕಿನ ಕಾನೂನಾತ್ಮಕ ಅಂಶಗಳನ್ನು ಸೇರಿಸಿಯಾದರೂ ಬಡರಾಷ್ಟ್ರಗಳ ರಕ್ಷಣೆ ಆಗಬೇಕಿತ್ತು. ಆದರೆ ಬರೀ ಪರಿಚ್ಛೇದ 12ರಲ್ಲಿನ ಕೆಲ ಅಂಶಗಳನ್ನು ಬಿಟ್ಟರೆ ಬೇರೆ ಎಲ್ಲಿಯೂ ವಿಶ್ವ ಆರೋಗ್ಯ ಸಂಸ್ಥೆ ಸಹ ತನ್ನ ನಿಲುವನ್ನು ಸ್ಪಷ್ಟಪಡಿಸುತ್ತಿಲ್ಲ. ಅಲ್ಲಿ ಕೂಡ ಶ್ರೀಮಂತ ರಾಷ್ಟ್ರಗಳದ್ದೇ ಹಿಡಿತ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಆರೋಗ್ಯ, ಆಹಾರದಂಥ ವಿಷಯಗಳಲ್ಲಿ ಬಡದೇಶಗಳಿಗೂ ಸಮಪಾಲು ಸಿಗಬೇಕೆಂಬುದು ಜಾಗತಿಕ ಮಟ್ಟದ ಸಂಸ್ಥೆಗಳ ಆಶಯ. ಆದರೆ ಅದು ಸಿಗುವ ಹಂತಕ್ಕೆ ಬಂದಾಗ ಅಥವಾ ಕ್ರಿಯೆಗಿಳಿಯಬೇಕಾದಾಗ ಶ್ರೀಮಂತ ದೇಶಗಳು ಏನಾದರೂ ಕೊಕ್ಕೆ ಹಾಕಿಯೋ ತರಲೆ ತೆಗೆದೋ ಅದು ಸಿಗದಂತೆ ಮಾಡುವಲ್ಲಿ ಯಶಸ್ವಿಯಾಗುತ್ತವೆ. ಇದಕ್ಕೆ ಹದಿಮೂರು ಬಾರಿ ಸಭೆ ಸೇರಿ ಒಂದು ನಿಲುವಿಗೆ ಬಂದ ಈ ಒಪ್ಪಂದವೇ ನಿದರ್ಶನ. ಹಿಂದಿನಿಂದ ನಡೆದು ಬಂದಿದ್ದೂ ಹಾಗೆಯೇ.

ಚುಚ್ಚುಮದ್ದುಗಳು, ಪರಿಣಾಮಕಾರಿಯಾದ ಔಷಧಗಳು, ತಂತ್ರಜ್ಞಾನ ಯಾವಾಗಲೂ ಉತ್ತರದ ಶ್ರೀಮಂತ ರಾಷ್ಟ್ರಗಳಲ್ಲಿಯೇ ತಯಾರಾಗುತ್ತವೆ. ಅವನ್ನು ಬಡದೇಶಗಳಿಗೆ ಕೊಡಲು ಅವು ತಯಾರಿಲ್ಲ. ಖರೀದಿಸುವ ತಾಕತ್ತೂ ಇವರಿಗಿಲ್ಲ. 'ನಮಗೂ ಕೊಡಿ' ಎಂದು ಬೇಡುವಂಥ ಪರಿಸ್ಥಿತಿ. ಈ ಒಪ್ಪಂದದಲ್ಲಾದರೂ ಬಡದೇಶಗಳಿಗೆ ಹಕ್ಕಿನಿಂದ ಕೇಳಬಹುದಾದ ಅವಕಾಶವನ್ನು ಕಲ್ಪಿಸಿಕೊಡಬೇಕಾಗಿತ್ತು. ಹಸಿದ ನಾಯಿಗೆ ರೊಟ್ಟಿಯ ಚೂರು ಒಗೆದಂತೆ ಒಟ್ಟು ಉತ್ಪಾದನೆಯ ಹತ್ತು ಶತಾಂಶ ಕೊಡಲು ಒಪ್ಪಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಗೆ ಬರುವ ಈ ಹತ್ತು ಶತಾಂಶ ಭಾಗವನ್ನು ಅದು ಅವಶ್ಯಕತೆ ಇರುವ ಎಲ್ಲ ಬಡದೇಶಗಳಿಗೂ ಹಂಚಬೇಕು. ಎಂಥ ವಿಡಂಬನೆ!

ಮುಂದಿನ ತಿಂಗಳು ಜಿನೀವಾದಲ್ಲಿ ನಡೆಯಲಿರುವ ಜಾಗತಿಕ ಆರೋಗ್ಯ ಸಮಾವೇಶದಲ್ಲಿ (ವರ್ಲ್ಡ್ ಹೆಲ್ತ್ ಅಸೆಂಬ್ಲಿ) ಈ ಒಪ್ಪಂದದ ಕರಡನ್ನು ಮಂಡಿಸಲಾಗುತ್ತದೆ. ಅಲ್ಲಿ ಏನು ನಿರ್ಧಾರವಾಗುವುದೋ ಕಾದು ನೋಡೋಣ.

ಲೇಖಕ: ಅಧ್ಯಕ್ಷ, ಡ್ರಗ್ ಆ್ಯಕ್ಷನ್ ಫೋರಮ್- ಕರ್ನಾಟಕ

ಚುರುಮುರಿ

ಬೋಟ್ ಪಾರ್ಟಿ!

● ಬಿ.ಎನ್. ಮಲ್ಲೇಶ್

'ವಿಷ್ ಯೂ ಹ್ಯಾಪಿ ಚಹಾ ದಿನ ಮಂಜಮ್ಮ, ಇವತ್ತು ಎಲ್ರಿಗೂ ನನ್ ಲೆಕ್ಕದಲ್ಲಿ ಚಾ ಕೊಡು' ಎಂದ ಗುಡ್ಡೆ.

'ಲೇಯ್ ವಿಶ್ವ, ಚಾ ದಿನ ಇದ್ದದ್ದು ಮೊನ್ನೆ, ನೀನು ಇವತ್ತು ಶುಭಾಶಯ ಹೇಳ್ತಿದ್ದೀಯ?' ದುಬ್ಬೀರ ನಕ್ಕ.

'ಹಳೆ ಪೇಪರ್ ಇವತ್ತು ನೋಡಿದೆ ಕಣಲೆ, ಅದಿರ್ಲಿ ನಮ್ ಮಂಜಮ್ಮನ್ನ ನೋಡಿದ್ರೆ ಅಯ್ಯೋ ಅನ್ನುತ್ತಪ್ಪ, ಚಾ ಮಾರೋರೊಬ್ರು ಈ ದೇಶದ ಪ್ರಧಾನಿ ಆದ್ರು. ಈ ಮಂಜಮ್ಮ ಏನೂ ಆಗ್ಲಿಲ್ಲವಲ್ಲ ಅಂತ'.

'ಅಲ್ಲ, ಈ ದೇಶದಲ್ಲಿ ಕಾಫಿ ಮಾರಿ ಯಾರೂ ಪ್ರಧಾನಿ ಆಗಿಲ್ವಾ?' ಕೊಟ್ರೇಶಿ ಕೊಕ್ಕೆ.

'ಆಮೇಲೆ ಎಲ್ರೂ 'ಚಹಾ ಕಪ್ಪಲ್ಲಿ ಬಿರುಗಾಳಿ' ಅಂತಾರೆ, ಕಾಫಿ ಕಪ್ಪಲ್ಲಿ ಯಾಕಿಲ್ಲ?' ಗುಡ್ಡೆ ಪ್ರಶ್ನೆ.

'ಅದೇ ತರ 'ಚಾಯ್ ಪೇ ಚರ್ಚಾ' ಅಂತಾರೆ, ಕಾಫಿ ಪೇ ಚರ್ಚಾ ಯಾಕಿಲ್ಲ?' ತೆಪರೇಸಿ ತಾನೂ ಒಂದು ಸೇರಿಸಿದ.

'ಎಲ್ಲೋ ಕಾಫೀದೇ ಏನೋ ತಪ್ಪಿರಬೇಕು' ಎಂದ ದುಬ್ಬೀರ, 'ನಿಮಗೆ ಗೊತ್ತಾ? ಅಮೆರಿಕಾದಲ್ಲಿ ಈಸ್ಟ್ ಇಂಡಿಯಾ ಕಂಪನಿಯೋರು ಚಹಾ ಮೇಲೆ ವಿಪರೀತ ಟ್ಯಾಕ್ಸ್ ಹಾಕಿದ್ದಕ್ಕೆ ಅವತ್ತಿನ ಕಾಲದಲ್ಲೇ ದೊಡ್ಡ ಕ್ರಾಂತಿ ಆತಂತೆ. ಅವತ್ತಿಂದ 'ಟೀ ಡೇ' ಜಾರಿಗೆ ಬಂತಂತೆ' ಎಂದ.

'ನಮ್ಮಲ್ಲಿ ಎಣ್ಣೆ ಮೇಲೆ ದಿನಾ ಟ್ಯಾಕ್ಸ್ ಹಾಕ್ತಾನೇ ಅದಾರೆ, ಕ್ರಾಂತಿ ಅಲ್ಲ, ಒಬ್ರೂ ಕೇಳೋರಿಲ್ಲ' ಗುಡ್ಡೆಗೆ ಬೇಸರ.

ಅಷ್ಟರಲ್ಲಿ ಗುಡ್ಡೆಗೆ ಪರಮೇಶಿ ಫೋನ್. 'ಗುಡ್ಡೆ, ಮೆಜೆಸ್ಟಿಕ್ ಬಾರಲ್ಲಿದೀನಿ, ಏನಾದ್ರು ತರ್ಬೇಕಾ?'

'ಎಣ್ಣೆ, ಸೈಡ್ಸು ತಗಂಡ್ ಬಾ, ನೀರು ಇಲ್ಲೇ ಐತೆ. ಗ್ರೇಟರ್ ಬೆಂಗಳೂರ್‌ನ ವಾಟರ್‌ನಲ್ಲೇ ತೇಲ್ತಾ ಅದೀನಿ. ಬೇಗ ಬಂದ್ರೆ ಬೋಟ್ ಪಾರ್ಟಿ ಮಾಡಬೋದು. ಹುಷಾರು, ಬರುವಾಗ ಯಾವುದಾದ್ರು ಚರಂಡಿಗೆ ಬಿದ್ದು ಆಮೇಲೆ 'ಗಟಾರ್ ಬೆಂಗಳೂರು' ಆಗ್ಬಿಟ್ಟೀಯ'.

ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್

ಎಲ್ಲಿದೆ ಸಮಸ್ಯೆ?

ಹೆಚ್ಚು ಗಮನಕ್ಕೆ ಬಾರದ ಪುಸ್ತಕವು ಅನುವಾದಗೊಂಡ ಬಳಿಕ ಪ್ರಶಸ್ತಿ ಪಡೆಯುತ್ತದೆ, ಅಲ್ಲಿಗೆ ನಿಜವಾದ ಸಮಸ್ಯೆ ಎಲ್ಲಿದೆ ಎಂಬುದನ್ನು ಗಮನಿಸಬೇಕಿದೆ.

(ಬಾನು ಮುಷ್ತಾಕ್ ಅವರ ಕನ್ನಡದ ಕೃತಿಯು ಇಂಗ್ಲಿಷ್‌ಗೆ ಅನುವಾದಗೊಂಡು ಬೂಕರ್ ಪ್ರಶಸ್ತಿ ಪಡೆದಿರುವುದಕ್ಕೆ ಪ್ರತಿಕ್ರಿಯೆ)

ಸತ್ಯದೇವ್ ಸಿಂಗ್ ನೇಗಿ, ಎಂಜಿನಿಯರ್

ಕಿಡಿನುಡಿ

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರಿಗೆ ದಿಗ್ಬಂಧನ ಮಾಡಿದ್ದು ಖಂಡನೀಯ. ವಿರೋಧ ಪಕ್ಷದ ನಾಯಕರ ಕಾರಿಗೆ ಮಸಿ ಬಳಿಯುವುದು, ಅವರ ಮೇಲೆ ಹಲ್ಲೆಗೆ ಯತ್ನಿಸುವುದು, ಗೂಂಡಾಗಿರಿ ಮಾಡಿ ಗಂಟೆಗಟ್ಟಲೆ ಒಳಗೆ ಕೂಡಿಸುವುದು, ಪೊಲೀಸರನ್ನು ಮೂಕಪ್ರೇಕ್ಷಕರನ್ನಾಗಿ ಮಾಡುವುದು ಸರಿಯಲ್ಲ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 23-5-2000

● **'ಕಬ್ಬಿನ ಬೆಲೆಯಲ್ಲಿ ತಾರತಮ್ಯ ಬೇಡ'**

ಬೆಂಗಳೂರು, ಮೇ 22– 'ರಾಜ್ಯದ ಬೆಳಗಾವಿ, ವಿಜಾಪುರ, ಕಲ್ಬುರ್ಗಿ ಮತ್ತು ಬೀದರ್ ಜಿಲ್ಲೆಗಳ ರೈತರು ಸರಬರಾಜು ಮಾಡುವ ಕಬ್ಬಿಗೆ ನಿಮ್ಮ ರಾಜ್ಯದ ರೈತರಿಗೆ ಕೊಡುವ ಬೆಲೆಯನ್ನೇ ಕೊಡಬೇಕು' ಎಂದು ರಾಜ್ಯದ ಸಕ್ಕರೆ ಸಚಿವ ಎ.ಕೃಷ್ಣಪ್ಪ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿ ವಿಲಾಸರಾವ್ ದೇಶಮುಖ್ ಅವರಿಗೆ ಪತ್ರ ಬರೆದು ವಿನಂತಿಸಿಕೊಂಡಿದ್ದಾರೆ.

'ಗಡಿ ಪ್ರದೇಶದಲ್ಲಿರುವ ನಿಮ್ಮ ರಾಜ್ಯದ ಸಕ್ಕರೆ ಕಾರ್ಖಾನೆಗಳು ಬೆಳಗಾವಿ ಜಿಲ್ಲೆಯ ಕೆಲವು ಭಾಗದಿಂದ ಕಳಿಸಿದ ಕಬ್ಬಿಗೆ ಹಾಗೂ ನಿಮ್ಮ ರಾಜ್ಯದ ರೈತರ ಕಬ್ಬಿಗೆ ಟನ್ ಒಂದಕ್ಕೆ ರೂ.700 ನೀಡಲಾಗುತ್ತಿದೆ. ಆದರೆ ವಿಜಾಪುರ, ಕಲ್ಬುರ್ಗಿ ಹಾಗೂ ಬೀದರ್ ಜಿಲ್ಲೆಗಳ ರೈತರು ಕಳಿಸುವ ಕಬ್ಬಿಗೆ ರೂ. 550ರಿಂದ ರೂ. 600 ಮಾತ್ರ ನೀಡಲಾಗುತ್ತದೆ. ಈ ತಾರತಮ್ಯವನ್ನು ಹೋಗಲಾಡಿಸಿ ರೂ. 700 ಕೊಡಿಸಬೇಕು' ಎಂದು ಕೃಷ್ಣಪ್ಪ ಪತ್ರದಲ್ಲಿ ಒತ್ತಾಯಿಸಿದ್ದಾರೆ.

● **ಆಲಮಟ್ಟಿ: ಮುಳುಗಡೆ ದಿನದ ನಿರೀಕ್ಷೆಯಲ್ಲಿ ಕೊಲ್ಹಾರ ಗ್ರಾಮಸ್ಥರು**

ವಿಜಾಪುರ, ಮೇ 22– ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 519.6 ಮೀಟರ್‌ಗೆ ಏರಿಸಿ ಈ ಮಳೆಗಾಲದಲ್ಲಿ 173 ಟಿಎಂಸಿ ಅಡಿ ನೀರು ಸಂಗ್ರಹಿಸಲು ಭರದ ಸಿದ್ಧತೆ ನಡೆಯುತ್ತಿರುವಂತೆಯೇ ಕೃಷ್ಣಾ ನದಿ ತೀರದ ಕೊಲ್ಹಾರ ಗ್ರಾಮಸ್ಥರು ತಮ್ಮ ಹೊಸ ನೆಲೆಗಾಗಿ ಚಡಪಡಿಸತೊಡಗಿದ್ದಾರೆ.

ಈವರೆಗೆ ಪ್ರತಿವರ್ಷ ಕೆಲ ಭಾಗಗಳು ಮಾತ್ರ ನೀರಿನಿಂದ ಆವೃತ್ತವಾಗುತ್ತಿದ್ದ ಈ ಗ್ರಾಮ, ಈ ಮಳೆಗಾಲದ ಬಳಿಕ ಆಲಮಟ್ಟಿ ಅಣೆಕಟ್ಟೆಯಲ್ಲಿ ನೀರು ನಿಂತಾಗ ಸಂಪೂರ್ಣ ಮುಳುಗಡೆ ಆಗಲಿದೆ. ಇದರೊಂದಿಗೆ ಗ್ರಾಮದ ಈವರೆಗಿನ ಸಮೃದ್ಧ ಜೀವನ ಹೊಸ ತಿರುವು ಪಡೆಯಲಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 23-5-1975

● **ಹುಬ್ಬಳ್ಳಿ- ಧಾರವಾಡ ಕಾರ್ಪೊರೇಷನ್ ರದ್ದಿಗೆ ಷೋಕಾಸ್ ನೋಟಿಸ್**

ಬೆಂಗಳೂರು, ಮೇ 22– ಹುಬ್ಬಳ್ಳಿ- ಧಾರವಾಡ ನಗರ ಕಾರ್ಪೊರೇಷನ್ ಅನ್ನು ಏಕೆ ರದ್ದು ಮಾಡಬಾರದೆಂದು ವಿವರಣೆ ಕೇಳಿ ಸರ್ಕಾರ ಷೋಕಾಸ್ ನೋಟಿಸ್ ನೀಡಿದೆಯೆಂದು ಅಧಿಕೃತವಾಗಿ ತಿಳಿದುಬಂದಿದೆ.

ಆಡಳಿತ ನಿರ್ವಹಣೆಯಲ್ಲಿ ನಗರಸಭೆ ಆಡಳಿತ ತನ್ನ ಕರ್ತವ್ಯಲೋಪ ಮಾಡಿದೆಯೆಂದು ಹಲವು ಆಪಾದನೆಗಳನ್ನು ನೋಟಿಸಿನಲ್ಲಿ ಸೇರಿಸಲಾಗಿದೆ ಎಂದು ಗೊತ್ತಾಗಿದೆ.

ಹುಬ್ಬಳ್ಳಿ- ಧಾರವಾಡ ನಗರಸಭೆಯ ಮಾಜಿ ಮೇಯರ್ ಬೆಂಗಳೂರಿನ ಅವರು ಅಧಿಕಾರದಲ್ಲಿ ಮುಂದುವರೆದ ಪ್ರಸಂಗ ಶಾಸನಸಭೆಯಲ್ಲಿ ವಿಪರೀತ ಟೀಕೆಗಳಿಗೆ ಅವಕಾಶ ನೀಡಿದ ಮೇಲೆ ಚುನಾವಣೆಯನ್ನು ನಡೆಸಲಾಗಿದ್ದು, ವಿರೋಧ ಪಕ್ಷದ ಮಥಿಯಾಸ್ ಅವರು 9 ತಿಂಗಳ ಅವಧಿಗೆ ಮಾತ್ರ ಮೇಯರ್ ಆಗಿ ಆಯ್ಕೆಯಾದರು. ಜೂನ್ 3ರಂದು ಹೊಸ ಮೇಯರ್ ಆಯ್ಕೆ ನಡೆಯಬೇಕಾಗಿದೆ.

● **ಸದ್ಯದಲ್ಲೇ ಕೃತಕ ಮಳೆ ಕಾರ್ಯಾರಂಭ**

ಬೆಂಗಳೂರು, ಮೇ 22– ಲಿಂಗನಮಕ್ಕಿ ಜಲಾಶಯಕ್ಕೆ ನೀರು ಬರುವ ಪ್ರದೇಶದಲ್ಲಿ ಕೃತಕ ಮಳೆ ಬರಿಸುವ ಯತ್ನ ಸದ್ಯದಲ್ಲೇ ಪ್ರಾರಂಭವಾಗಲಿದೆ.

ಈಗಾಗಲೇ ವಿದ್ಯುತ್ ಮಂಡಳಿಯ ವಿಶೇಷಾಧಿಕಾರಿಗಳು ಸಂಬಂಧಪಟ್ಟವರೊಡನೆ ಮಾತುಕತೆ ನಡೆಸಲು ಮುಂಬಯಿ ಮತ್ತು ಪೂನಾಕ್ಕೆ ತೆರಳಿದ್ದಾರೆ. ಖಾಸಗಿ ವಿಮಾನವನ್ನು ಅದಕ್ಕಾಗಿ ಪಡೆಯುವ ಯತ್ನ ನಡೆದಿದೆ.

ಸಂಗತ

ಸರ್ಕಾರಿ ನೌಕರರಿಗೆ ಸಾಹಿತ್ಯ ದೀಕ್ಷೆ

ಸರ್ಕಾರಿ ಇಲಾಖೆಗಳಿಗೆ ಸಾಹಿತ್ಯದ ದೀಕ್ಷೆ ನೀಡುವ ಮೂಲಕ ಅಲ್ಲಿನ ವಾತಾವರಣವನ್ನು ಒಂದಿಷ್ಟಾದರೂ ಸಹನೀಯವಾಗಿಸಬೇಕು

● ರಾಜಕುಮಾರ ಕುಲಕರ್ಣಿ

ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಲು ಇತ್ತೀಚೆಗೆ ಶಿವಮೊಗ್ಗಕ್ಕೆ ಹೋಗಿದ್ದ ನನ್ನ ಶಿಕ್ಷಕ ಮಿತ್ರರಿಗೆ, ಹತ್ತಿರದಲ್ಲಿದ್ದ ಕುಪ್ಪಳಿಗೆ ಭೇಟಿ ನೀಡಬೇಕೆಂದೆನಿಸಿತು. ಕ್ರೀಡಾಕೂಟದ ನಡುವೆ ಬಿಡುವು ಮಾಡಿಕೊಂಡು ಒಂದರ್ಧ ದಿನ ಕುಪ್ಪಳಿಗೆ ಹೋಗಿಬರಲು ನಿರ್ಧರಿಸಿದರು. ಕ್ರೀಡಾಕೂಟಕ್ಕೆಂದು ಬಂದಿದ್ದ ಪರಿಚಿತ ಶಿಕ್ಷಕರಿಗೆ ತಮ್ಮ ಮನದ ಇಂಗಿತ ತಿಳಿಸಿ ಜೊತೆಗೆ ಬರಲು ಆಹ್ವಾನಿಸಿದರು. ಬಹುತೇಕ ಶಿಕ್ಷಕರು ನಿರಾಕರಿಸಿದ್ದೇ ಹೆಚ್ಚು. ಕೊನೆಗೆ ಒಬ್ಬರೇ ಹೋಗಿ ಕವಿಮನೆಯ ಅಂಗಳದಲ್ಲಿ ನಿಂತು, ಜೊತೆಯ ಶಿಕ್ಷಕರು ಒಂದು ಅವಿಸ್ಮರಣೀಯ ಗಳಿಗೆಯನ್ನು ಕಳೆದುಕೊಂಡರೆಂದು ಹಳಹಳಿಸಿದರು. ವಿಪರ್ಯಾಸ ಎಂದರೆ, ಕುಪ್ಪಳಿಗೆ ಬರಲು ನಿರಾಕರಿಸಿದ ಶಿಕ್ಷಕರಲ್ಲಿ ಅನೇಕರು ಸಿನಿಮಾ, ಮಾಲ್, ರೆಸಾರ್ಟ್ ಎಂದು, ಮೋಜುಮಸ್ತಿಗಾಗಿ ಸಮಯದ ಸದುಪಯೋಗ ಮಾಡಿಕೊಂಡ ಧನ್ಯತೆಯಿಂದ ಬೀಗಿದರು.

ಮಕ್ಕಳಿಗೆ ಪಾಠ ಮಾಡಬೇಕಾದ ಶಿಕ್ಷಕರಲ್ಲೇ ಸಾಹಿತ್ಯಾಸಕ್ತಿ ಕ್ಷೀಣಿಸುತ್ತಿರುವಾಗ ಇನ್ನು ಶಿಕ್ಷಕೇತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಂದ ಸಾಹಿತ್ಯ ಪ್ರೀತಿಯನ್ನು ನಿರೀಕ್ಷಿಸುವುದು ದೂರದ ಮಾತು. ಸಾಹಿತ್ಯಾಸಕ್ತಿಯ ಕೊರತೆಯ ಪರಿಣಾಮವಾಗಿ, ಹೆಚ್ಚಿನ ಸರ್ಕಾರಿ ನೌಕರರಲ್ಲಿ ಸೂಕ್ಷ್ಮಸಂವೇದನೆ ಇಲ್ಲವಾಗಿದೆ. ಕಚೇರಿಗಳಿಗೆ ಭೇಟಿ ನೀಡುವ ಸಾರ್ವಜನಿಕರನ್ನು ಮಾತನಾಡಿಸುವಾಗ ಬಹುತೇಕ ನೌಕರರಲ್ಲಿ ಕನಿಷ್ಠ ಸೌಜನ್ಯ ಕೂಡ ಇರುವುದಿಲ್ಲ. ಅಹವಾಲು ಸಲ್ಲಿಸಲು ಬರುವವರ ವಯೋಮಾನವನ್ನು ಸಹ ಪರಿಗಣಿಸದೆ ವಯೋವೃದ್ಧರ ಜೊತೆಗೂ ಧಾರ್ಷ್ಟ್ಯದಿಂದ ವರ್ತಿಸುವವರಿದ್ದಾರೆ.

ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಮತ್ತು ಸರ್ಕಾರಿ ನೌಕರರು ಅಕ್ರಮವಾಗಿ ಆಸ್ತಿ ಗಳಿಸುತ್ತಿದ್ದಾರೆ ಎನ್ನುವ ಆಪಾದನೆ ಸಾಮಾನ್ಯವಾಗಿ ಎಲ್ಲ ಕಡೆ ಕೇಳಿಬರುತ್ತಿದೆ. ಸದ್ಯದ ಸಂದರ್ಭದಲ್ಲಿ ಸರ್ಕಾರಿ ಇಲಾಖೆಗಳಲ್ಲಿ ನೈತಿಕ ಶಿಕ್ಷಣದ ಅಗತ್ಯವಿದೆ. ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ಸದಾಚಾರ, ನಿರ್ಮೋಹ, ಸಾಮಾಜಿಕ ಪ್ರಜ್ಞೆಯಂತಹ ಉತ್ತಮ ಗುಣಗಳನ್ನು ಸರ್ಕಾರಿ ನೌಕರರಲ್ಲಿ ಬೆಳೆಸಬೇಕಾಗಿದೆ. ಸರ್ಕಾರಿ ಇಲಾಖೆಯು ತನ್ನ ಕರ್ತವ್ಯನಿಷ್ಠೆಯ ಮೂಲಕ ಸಾರ್ವಜನಿಕಸ್ನೇಹಿ ಎನ್ನುವ ಮನ್ನಣೆಗೆ ಪಾತ್ರವಾಗಬೇಕಿದೆ. ಸರ್ಕಾರಿ ಕಚೇರಿಗಳಲ್ಲಿ ವಿಳಂಬವಿಲ್ಲದೆ ತಮ್ಮ ಕೆಲಸಕಾರ್ಯಗಳಾಗುತ್ತಿವೆ ಎನ್ನುವ ಸದಭಿಪ್ರಾಯ ಸಾರ್ವಜನಿಕರಲ್ಲಿ ಮೂಡಬೇಕು.

ಸರ್ಕಾರಿ ಇಲಾಖೆಗಳಿಗೆ ಸಾಹಿತ್ಯದ ದೀಕ್ಷೆ ನೀಡುವ ಮೂಲಕ ಅಲ್ಲಿನ ವಾತಾವರಣವನ್ನು ಒಂದಿಷ್ಟಾದರೂ ಸಹನೀಯವಾಗಿಸಬಹುದು. ಸಾಹಿತ್ಯವೇ ಎಲ್ಲಕ್ಕೂ ಮದ್ದಲ್ಲವಾದರೂ ಮನುಷ್ಯನನ್ನು ಸೂಕ್ಷ್ಮಸಂವೇದಿಯಾಗಿಸುವಲ್ಲಿ ಅದರ ಪಾತ್ರವನ್ನು ಕಡೆಗಣಿಸುವಂತಿಲ್ಲ.

ಸರ್ಕಾರಿ ನೌಕರರಲ್ಲಿ ಸಾಹಿತ್ಯಾಸಕ್ತಿಯನ್ನು ಬೆಳೆಸುವ ದೃಷ್ಟಿಯಿಂದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ವಿಶೇಷ ರಜೆ ಪಡೆಯುವ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಈ ಸೌಲಭ್ಯವನ್ನು ಸಾಹಿತ್ಯಕ್ಕಾಗಿ ಸದುಪಯೋಗಪಡಿಸಿಕೊಳ್ಳುವ ನೌಕರರ ಸಂಖ್ಯೆ ಬಹಳಷ್ಟು ಕಡಿಮೆ. ಸಾಹಿತ್ಯ ಸಮ್ಮೇಳನದ ನೆಪದಲ್ಲಿ ರಜೆ ಪಡೆದರೂ ಬೇರೆ ಚಟುವಟಿಕೆಗಳಲ್ಲಿ ಹಾಗೂ ಮೋಜು ಮಸ್ತಿಯಲ್ಲಿ ಸಮಯ ಕಳೆಯುವವರ ಸಂಖ್ಯೆ ಹೆಚ್ಚಿದೆ. ಸರ್ಕಾರಿ ನೌಕರರ ಪುಸ್ತಕ ಪ್ರಕಾಶನ ಮತ್ತು ಪುಸ್ತಕ ಕೇಂದ್ರ ಅಸ್ತಿತ್ವದಲ್ಲಿ ಇವೆಯಾದರೂ ಅಲ್ಲಿ ಸಾಹಿತ್ಯದ ಚಟುವಟಿಕೆ ಶೂನ್ಯವಾಗಿದೆ. ಸೇವಾ ನಿಯಮಗಳು, ವೇತನ ಬಡ್ತಿ, ಪಿಂಚಣಿಯಂತಹ ಉದ್ಯೋಗ ಸಂಬಂಧಿತ ಪುಸ್ತಕಗಳನ್ನು ಹೊರತುಪಡಿಸಿ ಸಾಹಿತ್ಯದ ಪುಸ್ತಕಗಳು ಲಭ್ಯವಿಲ್ಲ.

ಸರ್ಕಾರದ ಉನ್ನತ ಹುದ್ದೆಯಲ್ಲಿದ್ದ ಮಾಸ್ತಿ ಅವರು ಕಥೆಗಳನ್ನು ಬರೆದು 'ಸಣ್ಣ ಕಥೆಗಳ ಜನಕ' ಎನ್ನುವ ಗೌರವಕ್ಕೆ ಪಾತ್ರರಾದರು. ಕಥೆ ಎನ್ನುವುದು ಮಾಸ್ತಿ ಅವರಿಗೆ ಜೊತೆಯ ಜೀವದ ಜೀವನವನ್ನು ಬೇರೊಂದು ಜೀವಕ್ಕೆ ಹೇಳುವುದಾಗಿತ್ತು. ಸರ್ಕಾರಿ ನೌಕರರಾಗಿ ಇದ್ದುಕೊಂಡೇ ಕೆ.ಎಸ್.ನರಸಿಂಹಸ್ವಾಮಿ ನಿತ್ಯನೂತನವಾದ ದಾಂಪತ್ಯಗೀತೆಗಳನ್ನು ಬರೆದರು. ಪೊಲೀಸ್ ಇಲಾಖೆಯಲ್ಲಿದ್ದ ಬೀಚಿ ತಮ್ಮ ಮೊನಚು ಮತ್ತು ವ್ಯಂಗ್ಯದ ಲೇಖನಗಳ ಮೂಲಕ ಸಮಾಜದ ಅವ್ಯವಸ್ಥೆಗೆ ಚಾಟಿ ಬೀಸಿದರು. ಮುಳುಗಡೆ ಸಂತ್ರಸ್ತರ ನೋವಿಗೆ ನಾ.ಡಿಸೋಜ ಸ್ಪಂದಿಸಿದ್ದು ತಮ್ಮ ಕಥೆ ಮತ್ತು ಕಾದಂಬರಿಗಳ ಮೂಲಕ. ಶರಾವತಿ ಯೋಜನೆಯಲ್ಲಿನ ಉದ್ಯೋಗದ ಅನುಭವವು ಮುಳುಗಡೆ ಸಂತ್ರಸ್ತರ ನೋವನ್ನು ಅಕ್ಷರವಾಗಿಸಲು ಅವರನ್ನು ಪ್ರೇರೇಪಿಸಿತು.

'ಎಷ್ಟೇ ಸಂಪಾದನೆ ಮಾಡಿರಲಿ ಎರಡು ಚಪಾತಿ, ಎರಡು ಹಿಡಿ ಅನ್ನಕ್ಕಿಂತ ಒಂದು ಸಲಕ್ಕೆ ಹೆಚ್ಚು ತಿನ್ನಕ್ಕೆ ಆಗೊಲ್ಲ, ಒಟ್ಟಿಗೆ ಎರಡು ಶರಟು ಹಾಕುಕ್ಕೆ ಆಗೊಲ್ಲ, ಒಂದೇ ಸಲ ಎರಡು ಕಾರಿನಲ್ಲಿ ಕೂಡುಕ್ಕೆ ಆಗೊಲ್ಲ ಅಂತ ಅರ್ಥ ಮಾಡಿಕೊಂಡರೆ ದುರಾಶೆ ತನಗೆ ತಾನೆ ಇಳಿದು ಹೋಗುತ್ತೆ. ಒಬ್ಬನಿಗೆ ಎಷ್ಟು ಭೂಮಿ ಬೇಕು? ಸತ್ತವರನ್ನು ಹೂಳುವ ಪದ್ಧತಿ ಇರುವ ಸಮಾಜಕ್ಕೆ ಬೇಕಾದುದು ಆರಡಿ ಉದ್ದ ಮೂರಡಿ ಅಗಲ ಜಾಗ ಮಾತ್ರ. ಹೆಣಾನ ಸುಡೂ ಪದ್ಧತಿ ಇರುವವರಿಗೆ ಅದೂ ಬೇಕಿಲ್ಲ' ಎಂದು ವೈರಾಗ್ಯದ ಮಾತನಾಡುವ, ಎಸ್.ಎಲ್.ಭೈರಪ್ಪನವರ 'ತಂತು' ಕಾದಂಬರಿಯಲ್ಲಿನ ಪಾತ್ರವೊಂದು ಬದುಕಿನ ನಿಜವಾದ ಅರ್ಥವನ್ನು ಅನಾವರಣಗೊಳಿಸುತ್ತದೆ. ಇಂತಹ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಲ್ಲಿ ಅಪ್ರಾಮಾಣಿಕತೆ, ಅನ್ಯಾಯ ಮತ್ತು ಭ್ರಷ್ಟಾಚಾರವನ್ನು ಬೇರುಮಟ್ಟದಿಂದಲೇ ಕಿತ್ತೊಗೆಯಲು ಸಾಧ್ಯ. ಸಾಹಿತ್ಯದ ಓದು ಇಂತಹದ್ದೊಂದು ಸಾಧ್ಯತೆಯನ್ನು ಸಾಧ್ಯವಾಗಿಸುತ್ತದೆ ಎನ್ನುವ ನಂಬಿಕೆ ಸತ್ಯಕ್ಕೆ ಹತ್ತಿರವಾಗಿದೆ.

ವಾಚಕರ ವಾಣಿ

ಕನ್ನಡಕ್ಕೆ ಬೂಕರ್: ಯುವಜನರಿಗೆ ಸ್ಫೂರ್ತಿಯಾಗಲಿ

ದೀಪಾ ಭಾಸ್ತಿ ಅವರು 'ಹಾರ್ಟ್ ಲ್ಯಾಂಪ್' ಹೆಸರಿನಲ್ಲಿ ಅನುವಾದಿಸಿರುವ ಬಾನು ಮುಷ್ತಾಕ್ ಅವರ 'ಎದೆಯ ಹಣತೆ' ಕಥಾ ಸಂಕಲನಕ್ಕೆ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಲಭಿಸಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಬಾನು ಅವರ ಕಥೆಗಳು ಮಾನವೀಯ ಮೌಲ್ಯಗಳನ್ನು ಪಸರಿಸುವುದರ ಜೊತೆಗೆ, ಆಧುನಿಕ ಸಮಾಜಕ್ಕೆ ಸೂಕ್ಷ್ಮವಾದ ಅರಿವನ್ನು ಮೂಡಿಸುತ್ತವೆ.

ದೀಪಾ ಭಾಸ್ತಿ ಅವರು ಮೂಲ ಕೃತಿಯ ಆಶಯಗಳನ್ನು ಸಮರ್ಥವಾಗಿ ಅನುವಾದಿಸಿ ಕನ್ನಡದ ಸೊಗಡನ್ನು ಇಂಗ್ಲಿಷ್ ಓದುಗರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಇಬ್ಬರ ಸಾಧನೆಯು ಇಂತಹ ಇನ್ನಷ್ಟು ಕನ್ನಡದ ಕೃತಿಗಳನ್ನು ಜಾಗತಿಕವಾಗಿ ಗುರುತಿಸಲು ಮತ್ತು ಅನುವಾದಿಸಲು ಯುವ ಬರಹಗಾರರು ಹಾಗೂ ಅನುವಾದಕರಿಗೆ ಸ್ಫೂರ್ತಿಯಾಗಲಿ.

ಮಹೇಂದ್ರ ಟಿ.ಎಂ., ಶಂಕರಘಟ್ಟ

ನೆಲಮಾಳಿಗೆ ನಿರ್ಮಾಣ: ನಿರ್ಬಂಧ ಸೂಕ್ತ

ಕೆರೆಗಳ ಹತ್ತಿರ ಹಾಗೂ ತಗ್ಗುಪ್ರದೇಶಗಳಲ್ಲಿ ನೆಲಮಾಳಿಗೆ ನಿರ್ಮಿಸಿ ವಾಹನ ನಿಲ್ದಾಣಕ್ಕೆ ಅವಕಾಶ ನೀಡದಂತೆ ಕಾನೂನು ರೂಪಿಸಲಾಗುವುದು ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆ ಸ್ವಾಗತಾರ್ಹ. ಅನೇಕ ಕಟ್ಟಡಗಳಲ್ಲಿ ನೆಲಮಾಳಿಗೆ ಇದ್ದು ಅದನ್ನು ಕಾರ್ ಪಾರ್ಕಿಂಗ್‌ಗೂ ಬಿಡದೆ ಅಲ್ಲಿ ವಾಣಿಜ್ಯ ವ್ಯವಹಾರ ನಡೆಸುತ್ತಿರುವುದು ಕಂಡುಬರುತ್ತದೆ. ಅಂತಹ ಮಳಿಗೆಗಳಲ್ಲಿ ನೀರು ನುಗ್ಗಿ ಹಲವರು ಜೀವ ಕಳೆದುಕೊಂಡ ಉದಾಹರಣೆಗಳಿವೆ.

ಇಷ್ಟಕ್ಕೂ ಈ ನೆಲಮಾಳಿಗೆ ಅವಶ್ಯವೇ ಎಂದು ಚಿಂತಿಸಬೇಕಾದ ಕಾಲ ಇದಾಗಿದೆ. ಕಟ್ಟಡದ ಎತ್ತರದ ಮಿತಿಯನ್ನು ಕೊಂಚ ಸಡಿಲಿಸಿದರೆ ನೆಲಮಾಳಿಗೆ ಮಾಡದೆಯೇ ನೆಲ ಅಂತಸ್ತಿನಲ್ಲಿ ವಾಹನಗಳಿಗೆ ಜಾಗ ಮಾಡಬಹುದು. ಅತ್ಯಂತ ಚಿಕ್ಕ ನಿವೇಶನಗಳಲ್ಲಿಯೂ ನೆಲಮಾಳಿಗೆ ಮಾಡಿರುವುದು ಅಪಾಯವೇ ಸರಿ. ಜೊತೆಗೆ ಅಕ್ಕಪಕ್ಕದ ಕಟ್ಟಡಗಳಿಗೂ ಹಾನಿಯಾಗುವ ಸಂಭವ ಇರುತ್ತದೆ. ಅಂತೆಯೇ ಒಳಚರಂಡಿಯ ನೀರು ಕಟ್ಟಡದ ಸಂಪು ಹಾಗೂ ಅಂತರ್ಜಲವನ್ನು ಸೇರಿ, ನೀರು ಕಲುಷಿತಗೊಂಡು ಜನರ ಆರೋಗ್ಯಕ್ಕೆ ಕುತ್ತು ಬರುವ ಸಂಭವ ಇರುತ್ತದೆ. ಈ ಎಲ್ಲ ಕಾರಣಗಳಿಂದ ದೊಡ್ಡ ದೊಡ್ಡ ಮಾಲ್‌ಗಳ ಹೊರತಾದ ಇತರ ನಿವೇಶನಗಳಲ್ಲಿ ನೆಲಮಾಳಿಗೆ ಕಟ್ಟುವುದನ್ನು ನಿಷೇಧಿಸುವುದು ಸೂಕ್ತ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಊರೇ ಕಾಣೆ!

ಬೆಂಗಳೂರಿನಲ್ಲಿ
ಕೃಷ್ಣಾ, ಕಾವೇರಿ...
ಯಾವ ನದಿಯನ್ನೂ
ನಾ ಕಾಣೆ,
ಆದರೆ ಮಳೆ ಬಂದರೆ
ನೆರೆಯಾಗಿ
ಬೆಂಗಳೂರೇ ಕಾಣೆ!

ಮುಳ್ಳೂರು ಪ್ರಕಾಶ್
ಮೈಸೂರು

ಶಿಕ್ಷಣ ವ್ಯವಸ್ಥೆ: ಅಧ್ಯಯನ ಅಗತ್ಯ

ಸರ್ವರಿಗೂ ಸಮಾನ ಶಿಕ್ಷಣದ ವಿಷಯ ಕುರಿತ ಬರಗೂರು ರಾಮಚಂದ್ರಪ್ಪ ಅವರ ಲೇಖನವು (ಪ್ರ.ವಾ., ಮೇ 22) ಸರ್ಕಾರ, ಸಾರ್ವಜನಿಕರು ಹಾಗೂ ಶಿಕ್ಷಣ ತಜ್ಞರು ಗಂಭೀರವಾಗಿ ಚಿಂತನೆ ನಡೆಸಬೇಕಾದ ಅಗತ್ಯವನ್ನು ಹುಟ್ಟುಹಾಕಿದೆ. ಏಕರೂಪ ಕಲಿಕಾ ಕ್ರಮ, ಮಾತೃಭಾಷಾ ಬೋಧನಾ ಪದ್ಧತಿಯನ್ನು ಎಲ್ಲಾ ಶಾಲೆಗಳು ಅಳವಡಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಆಗ ಬಡವರು, ಶ್ರೀಮಂತರೆನ್ನದೆ ಎಲ್ಲ ವರ್ಗಗಳಿಗೆ ಸೇರಿದ ಮಕ್ಕಳಿಗೂ ಸಮಾನ ಬೌದ್ಧಿಕ ಜ್ಞಾನ, ಕಲಿಕೆಯ ಅವಕಾಶ ಸಿಕ್ಕಂತೆ ಆಗುತ್ತದೆ. ಬೇರೆ ಬೇರೆ ದೇಶಗಳಲ್ಲಿ ಶಿಕ್ಷಣ ಅದರಲ್ಲೂ ಪ್ರಾಥಮಿಕ ಶಿಕ್ಷಣ ನೀತಿ ಅನುಕರಣಾ ಯೋಗ್ಯ ರೀತಿಯಲ್ಲಿದೆ. ಉದಾಹರಣೆಗೆ, ಫಿನ್‌ಲ್ಯಾಂಡ್ ದೇಶದ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಉಚಿತವಾಗಿದ್ದು, ಅಲ್ಲಿ ಖಾಸಗಿ ಶಾಲೆಗಳೇ ಇಲ್ಲ. ಏಳನೇ ವಯಸ್ಸಿಗೆ ಶಾಲಾ ಪ್ರವೇಶ ಆಗಿ ಹದಿನಾರನೇ ವಯಸ್ಸಿನವರೆಗೂ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರವೇ ನೋಡಿಕೊಳ್ಳುತ್ತದೆ. ಜೊತೆಗೆ ಉಪಾಹಾರ, ಸಾರಿಗೆ ವ್ಯವಸ್ಥೆ ಉಚಿತ. ಇತರ ದೇಶಗಳಲ್ಲಿನ ಶಿಕ್ಷಣ ವ್ಯವಸ್ಥೆಗಳ ಅಧ್ಯಯನ ನಡೆಸಿ, ನಮಗೆ ಒಪ್ಪುವಂತಹ ಪಠ್ಯಕ್ರಮ ಅಳವಡಿಸಿಕೊಳ್ಳಲು ಅನುವಾಗುವ ದಿಸೆಯಲ್ಲಿ ಸರ್ಕಾರ ಶ್ರಮಿಸಬೇಕಾದ ಜರೂರು ಇದೆ.

ಶಾಂತಕುಮಾರ್, ಸರ್ಜಾಪುರ

ರಾಜ್ಯ ಭಾಷೆ ಅವಜ್ಞೆಗೆ ಒಳಗಾಗದಿರಲಿ

ರಾಷ್ಟ್ರೀಯ ಶಿಕ್ಷಣ ನೀತಿ- 2020 ಮತ್ತು 'ಪಿಎಂಶ್ರೀ' ಯೋಜನೆ ಅನುಷ್ಠಾನ ಮಾಡದ ಕಾರಣಕ್ಕೆ ಸಮಗ್ರ ಶಿಕ್ಷಣ ಯೋಜನೆಯಡಿ ಕೇಂದ್ರ ಸರ್ಕಾರ ತಡೆಹಿಡಿದಿರುವ ₹ 2151.59 ಕೋಟಿ ಅನುದಾನವನ್ನು ಬಡ್ಡಿಸಹಿತ ಬಿಡುಗಡೆ ಮಾಡುವಂತೆ ಕೋರಿ ಕೇಂದ್ರ ಸರ್ಕಾರದ ವಿರುದ್ಧ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ ಬಗ್ಗೆ ವರದಿಯಾಗಿದೆ. ತ್ರಿಭಾಷಾ ಸೂತ್ರವನ್ನು ಅನುಸರಿಸಲು ರಾಜ್ಯಗಳಿಗೆ ನಿರ್ದೇಶಿಸಲಾಗದು ಎಂದು ಸುಪ್ರೀಂ ಕೋರ್ಟ್ ಕೆಲ ದಿನಗಳ ಹಿಂದೆ ಹೇಳಿದ ಬೆನ್ನಲ್ಲೇ ನಡೆದಿರುವ ಈ ಬೆಳವಣಿಗೆ ಮಹತ್ವದ್ದು ಎನಿಸುತ್ತದೆ. ನಮ್ಮ ರಾಜ್ಯ ಮೊದಲಿನಿಂದಲೂ ತ್ರಿಭಾಷಾ ಸೂತ್ರವನ್ನು ಅನುಸರಿಸುತ್ತಾ ಬಂದಿದೆ. ಅದರಿಂದ ನಮ್ಮ ರಾಜ್ಯಕ್ಕೆ ದಕ್ಕಿದ ಹೆಚ್ಚಿನ ಪ್ರತಿಫಲವೇನು? ವಿದ್ಯಾರ್ಥಿಗಳಿಗೆ ಮತ್ತೊಂದು ಭಾಷೆಯ ಕಲಿಕೆಯ ಭಾರ, ಅದೂ ನಮ್ಮ ನಾಡ ಭಾಷೆಯ ಕಲಿಕೆಗೆ ಮಾರಕವಾಗಿ. ಆದ್ದರಿಂದ ಸರ್ಕಾರವು ಮಕ್ಕಳ ಮೇಲಿರುವ ಹಿಂದಿ ಭಾಷೆಯ ಭಾರವನ್ನು ತ್ವರಿತವಾಗಿ ತಗ್ಗಿಸಬೇಕು, ಹಿಂದಿ ಭಾಷೆಯ ಕಲಿಕೆಯನ್ನು ಐಚ್ಛಿಕಗೊಳಿಸಬೇಕು. ಶಾಲೆಗಳಿಗೆ ಹೊರೆಯಾಗುವ ಹಿಂದಿ ಶಿಕ್ಷಕರ ವೇತನ ಮತ್ತಿತರ ಖರ್ಚು ವೆಚ್ಚಗಳನ್ನು ಕೇಂದ್ರ ಸರ್ಕಾರವೇ ಭರಿಸಬೇಕು. ಹಿಂದಿ, ಸಂಸ್ಕೃತ ಭಾಷೆಗಳ ಪಠ್ಯಕ್ರಮ, ಮೌಲ್ಯಮಾಪನ ಮತ್ತು ಅದರಿಂದ ಕನ್ನಡ ಭಾಷೆ ಕಲಿಕೆಯ ಮೇಲೆ ಆಗುತ್ತಿರುವ ಪರಿಣಾಮಗಳ ಕುರಿತು ಅವಶ್ಯ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕು.

ನಾಡು- ನುಡಿ ಕುರಿತು ನವೆಂಬರ್ ತಿಂಗಳಲ್ಲಿ ಸರ್ಕಾರ ಸ್ವಲ್ಪ ಸದ್ದು ಮಾಡುವುದನ್ನು ಬಿಟ್ಟರೆ ಈ ವಿಷಯದಲ್ಲಿ ನಂತರ ಯಾವುದೇ ಗಮನವನ್ನು ಹರಿಸುತ್ತಿಲ್ಲ. ಶಿಕ್ಷಣ, ಸಂಸ್ಕೃತಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ರಾಜ್ಯ ಸರ್ಕಾರದ ಸ್ಪಂದನ ತೀರಾ ನಕಾರಾತ್ಮಕವಾಗಿದೆ. ರಾಜ್ಯ ಭಾಷೆಯ ಸಮರ್ಪಕ ಕಲಿಕೆ ಮತ್ತು ಬಳಕೆಯನ್ನು ಎಲ್ಲ ಹಂತದಲ್ಲಿ ಖಚಿತಪಡಿಸುವ ಮತ್ತು ಅದು ಇತರ ಭಾಷೆಗಳಿಂದಾಗಿ ಅವಜ್ಞೆಗೆ ಒಳಗಾಗುವುದನ್ನು ತಪ್ಪಿಸುವ ಗ್ಯಾರಂಟಿಯನ್ನು ಸರ್ಕಾರ ನಾಡ ಜನತೆಗೆ ಮೊದಲು ನೀಡಬೇಕು. ಅದಕ್ಕೆ ಅವಶ್ಯಕತೆ ಇರುವ ಎಲ್ಲ ಪೂರಕ ಕ್ರಮಗಳನ್ನೂ ತಕ್ಷಣ ತೆಗೆದುಕೊಳ್ಳಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ ನಕ್ಸಲ್ ಮುಕ್ತ?

ನಕ್ಸಲ್ ಮುಖಂಡ ನಂಬಾಲ ಕೇಶವರಾವ್ ಅಲಿಯಾಸ್ ಬಸವರಾಜು ಅವರನ್ನು ಭದ್ರತಾ ಪಡೆಗಳು ಹತ್ಯೆ ಮಾಡಿರುವುದನ್ನು ಐತಿಹಾಸಿಕ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಣ್ಣಿಸಿದ್ದಾರೆ. 'ನಕ್ಸಲ್ ಮುಕ್ತ ಭಾರತ'ದ ತಮ್ಮ ಗುರಿಯಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂದು ಹೇಳಿದ್ದಾರೆ. 2026ರ ಮಾರ್ಚ್ ಒಳಗೆ 'ಎಡಪಂಥೀಯ ತೀವ್ರಗಾಮಿ'ಗಳನ್ನು ನಿರ್ಮೂಲನೆ ಮಾಡಬೇಕು ಎನ್ನುವುದು ಕೇಂದ್ರದ ಸಂಕಲ್ಪ. ಈ ದಿಸೆಯಲ್ಲಿ ಕೇಂದ್ರ ಸರ್ಕಾರವು ಈಗಾಗಲೇ ಸಾಕಷ್ಟು ಪ್ರಗತಿ ಸಾಧಿಸಿದೆ ಎನ್ನಲಾಗುತ್ತಿದೆ. ಒಂದೆಡೆ ಭದ್ರತಾ ಪಡೆಗಳ ತೀವ್ರ ಕ್ರಮ, ಅಭಿವೃದ್ಧಿ ಕಾರ್ಯಕ್ರಮಗಳು; ಮತ್ತೊಂದೆಡೆ ಹಿರಿಯ ನಾಯಕರ ಕೊರತೆ, ಕ್ಷೀಣಿಸುತ್ತಿರುವ ಜನಬೆಂಬಲದಿಂದ ನಕ್ಸಲ್ ಚಳವಳಿಯ ಬಲ ತೀವ್ರವಾಗಿ ಕುಗ್ಗಿದ್ದು, ಅದರ ಅಂತ್ಯ ಸಮೀಪಿಸಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ

ಸಿಪಿಐ (ಮಾವೋವಾದಿ) ಪಕ್ಷದ ಪ್ರಧಾನ ಕಾರ್ಯದರ್ಶಿ ಬಸವರಾಜು ಹಾಗೂ ಇತರ 26 ನಕ್ಸಲರ ಎನ್‌ಕೌಂಟರ್ ನಂತರ ಭದ್ರತಾ ಪಡೆಗಳು ಮತ್ತಷ್ಟು ಚುರುಕಾಗಿವೆ. ನಕ್ಸಲರನ್ನು ನಿರ್ಮೂಲನೆ ಮಾಡಲು ಕೇಂದ್ರ ಸರ್ಕಾರವು 2026ರ ಮಾರ್ಚ್ 31ರ ಗಡುವು ನಿಗದಿಪಡಿಸಿದ್ದು, ಗಡುವು ಮುಟ್ಟುವ ವಿಶ್ವಾಸದೊಂದಿಗೆ ಹೊಸ ಕಾರ್ಯತಂತ್ರ ರೂಪಿಸುತ್ತಿವೆ. ಈ ಕಾರ್ಯಕ್ಕಾಗಿ 1.5 ಲಕ್ಷ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಅವರು ವಿವಿಧ ರಾಜ್ಯಗಳ ನಕ್ಸಲ್‌ಪೀಡಿತ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

1967ರಲ್ಲಿ ಪಶ್ಚಿಮ ಬಂಗಾಳದ ನಕ್ಸಲ್‌ಬಾರಿ ಎಂಬಲ್ಲಿ, ಮಾವೋವಾದಿ ಚಿಂತನೆಯ ಪ್ರಭಾವದಿಂದ ಕೆಲವು ಕಮ್ಯುನಿಸ್ಟ್ ಮುಖಂಡರು ಸಣ್ಣ ಪ್ರಮಾಣದಲ್ಲಿ ಆರಂಭಿಸಿದ ಹೋರಾಟ ಮುಂದೆ ನಕ್ಸಲ್ ಹೋರಾಟ ಎಂದೇ ಖ್ಯಾತಿ ಪಡೆಯಿತು. ಶೋಷಕರನ್ನು ಎದುರಿಸಲು ಶಸ್ತ್ರಸಜ್ಜಿತ ಹೋರಾಟ ಅನಿವಾರ್ಯ ಎನ್ನುವುದು ಈ ಗುಂಪಿನ ನಂಬಿಕೆಯಾಗಿತ್ತು. ಪಶ್ಚಿಮ ಬಂಗಾಳದ ಜತೆಗೆ, ಅವಿಭಜಿತ ಆಂಧ್ರಪ್ರದೇಶ, ಮಹಾರಾಷ್ಟ್ರ, ಜಾರ್ಖಂಡ್, ಛತ್ತೀಸಗಢ, ಬಿಹಾರ ಮುಂತಾದ ರಾಜ್ಯಗಳಿಗೆ ಚಳವಳಿ ಹರಡಿತು. ನಕ್ಸಲೀಯರ ಪ್ರಭಾವ ಇರುವ ಪ್ರದೇಶಗಳನ್ನು ಸರ್ಕಾರವು 'ಕೆಂಪು ಕಾರಿಡಾರ್' ಎಂದೇ ಗುರುತಿಸತೊಡಗಿತು. ನಕ್ಸಲೀಯರನ್ನು 'ಎಡಪಂಥೀಯ ತೀವ್ರಗಾಮಿ'ಗಳು (ಎಲ್‌ಡಬ್ಲ್ಯುಇ) ಎಂದು ಕರೆದು, ಅವರನ್ನು ಪೊಲೀಸರು, ಭದ್ರತಾ ಪಡೆಗಳ ಮೂಲಕ ದಮನ ಮಾಡಲು ಆರಂಭಿಸಿತು. 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನಕ್ಸಲರ ವಿರುದ್ಧದ ಕಾರ್ಯಾಚರಣೆ ತೀವ್ರಗೊಂಡಿತು. ಅದಕ್ಕಾಗಿ ಸಿಆರ್‌ಪಿಎಫ್, ಬಿಎಸ್‌ಎಫ್, ಐಟಿಬಿಪಿ ಮುಂತಾದ ಪಡೆಗಳನ್ನು ಬಳಸತೊಡಗಿತು.

ಹೀಗೆ ಕೇಂದ್ರ ಸಶಸ್ತ್ರ ಪಡೆಗಳ ನೆರವು, ರಾಜ್ಯ ಪೊಲೀಸ್ ವ್ಯವಸ್ಥೆಯ ಆಧುನೀಕರಣ, ರಸ್ತೆ ನಿರ್ಮಾಣ, ಟೆಲಿಕಮ್ಯುನಿಕೇಷನ್ ವ್ಯವಸ್ಥೆ ಬಲಪಡಿಸುವ ಮೂಲಕ ನಕ್ಸಲರ ಸಂಖ್ಯೆ ಮತ್ತು ಪ್ರಭಾವ ತಗ್ಗುವಂತೆ ನೋಡಿಕೊಳ್ಳಲಾಗಿದೆ; ನಕ್ಸಲ್ ಮುಕ್ತ ಭಾರತ ಅಭಿಯಾನ ಆರಂಭಿಸಿ, ಅದರ ಮೂಲಕ ರೆಡ್ ಕಾರಿಡಾರ್ ಅನ್ನು ಅಭಿವೃದ್ಧಿಯ ಕಾರಿಡಾರ್ ಆಗಿ ರೂಪಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರವು ಪ್ರತಿಪಾದಿಸಿದ್ದು, ಈ ಸಂಬಂಧದ ಅಂಕಿಅಂಶ ಬಿಡುಗಡೆ ಮಾಡಿದೆ.

ನಕ್ಸಲಿಸಂ ಎನ್ನುವುದನ್ನು ಒಂದು ಹೋರಾಟ, ಚಳವಳಿ ಎಂದೇ ಬಹುಕಾಲದವರೆಗೆ ಜನರೂ, ಸರ್ಕಾರಗಳೂ ನಂಬಿದ್ದವು. ನಕ್ಸಲರ ಆಶಯಗಳು ಸಮರ್ಥನೀಯವಾದರೂ ಅವರು ತಮ್ಮ ಗುರಿ ಸಾಧನೆಗೆ ಹಿಂಸಾಮಾರ್ಗ ಅನುಸರಿಸುವುದು ಸರಿಯಲ್ಲ ಎನ್ನುವುದು ಹೆಚ್ಚಿನವರ ಅಭಿಪ್ರಾಯವಾಗಿತ್ತು. ಹೀಗಾಗಿ ನಕ್ಸಲರನ್ನು ನಿರ್ಮೂಲನೆ ಮಾಡಲೇಬೇಕು ಎನ್ನುವ ಉದ್ದೇಶವನ್ನು ಸರ್ಕಾರಗಳು ಹೊಂದಿರಲಿಲ್ಲ; ಅವರನ್ನು ಮುಖ್ಯವಾಹಿನಿಗೆ ಕರೆದುಕೊಂಡು ಬರಬೇಕು ಎನ್ನುವ ಆಶಯದೊಂದಿಗೆ ಅವರೊಂದಿಗೆ ಮಾತುಕತೆ ನಡೆಸಿದ ನಿದರ್ಶನಗಳೂ ಹೇರಳವಾಗಿವೆ. ಆದರೆ, ನಕ್ಸಲರು ಹಿಂಸಾಚಾರಕ್ಕೆ ಇಳಿದಾಗ, ಪೊಲೀಸ್ ಅಧಿಕಾರಿಗಳು ಮತ್ತಿತರರ ಹತ್ಯೆ ಮಾಡಿದಾಗ ಕಾಲದಿಂದ ಕಾಲಕ್ಕೆ ಅದಕ್ಕೆ ತಕ್ಕ ಪ್ರತ್ಯುತ್ತರವನ್ನೂ ನೀಡಲಾಗುತ್ತಿತ್ತು.

ಆದರೆ, 2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನಕ್ಸಲರನ್ನು ನಿರ್ಮೂಲನೆ ಮಾಡಬೇಕೆಂದು ಪಣ ತೊಟ್ಟಿತು. ನಕ್ಸಲರೊಂದಿಗೆ ಯಾವುದೇ ಮಾತುಕತೆ ನಡೆಸುವುದಿಲ್ಲ ಎನ್ನುವ ನಿಲುವು ತಳೆಯಲಾಯಿತು. ಶರಣಾದ ನಕ್ಸಲರ ಪುನರ್ವಸತಿಗೆ ನೀಡುತ್ತಿದ್ದ ಹಣ ಕಡಿತಗೊಳಿಸಲಾಯಿತು. ಎಲ್ಲಕ್ಕಿಂತ ಹೆಚ್ಚಾಗಿ, ಭದ್ರತಾ ಪಡೆಗಳನ್ನು ಬಳಸಿ, ನಕ್ಸಲರ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಯಿತು.

ಕೇಂದ್ರ ಸರ್ಕಾರವು ಇತ್ತೀಚೆಗೆ ನಕ್ಸಲರ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಿದ ಕಾರಣ ತೆಲಂಗಾಣದ ಮಾಜಿ ಮುಖ್ಯಮಂತ್ರಿ ಹಾಗೂ ಬಿಆರ್‌ಎಸ್ ಮುಖಂಡ ಕೆ.ಚಂದ್ರಶೇಖರ ರಾವ್ ಅವರು ನಕ್ಸಲರ ವಿರುದ್ಧದ 'ಆಪರೇಷನ್ ಕಗಾರ್' ಅನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದ್ದರು. ನಕ್ಸಲರಲ್ಲಿ ಹೆಚ್ಚಿನವರು ಬಡವರು, ಶೋಷಿತರು, ಆದಿವಾಸಿಗಳು ಮತ್ತು ಗುಡ್ಡಗಾಡು ಜನ ಇದ್ದು, ಎನ್‌ಕೌಂಟರ್‌ಗಳ ಹೆಸರಲ್ಲಿ ಕೇಂದ್ರವು ಅವರನ್ನು ಕೊಲ್ಲುತ್ತಿದೆ ಎಂದು ಆರೋಪಿಸಿದ್ದರು. ಅವರನ್ನು ಕರೆದು ಮಾತುಕತೆ ನಡೆಸಬೇಕು ಎಂದಿದ್ದರು. ಹಲವು ಸಂಘಟನೆಗಳು ಕೂಡ ಇದೇ ಮನವಿಯನ್ನು ಕೇಂದ್ರದ ಮುಂದಿಟ್ಟಿವೆ.

ನಕ್ಸಲ್ ಚಳವಳಿಯ ಬಹುತೇಕ ನಾಯಕರು ಒಂದೋ ವಯಸ್ಸಿನ ಕಾರಣಕ್ಕೆ ನಿವೃತ್ತರಾಗಿದ್ದಾರೆ ಇಲ್ಲವೇ ಪೊಲೀಸರಿಂದ ಹತರಾಗಿದ್ದಾರೆ. ಉಳಿದ ನಾಯಕರು ಮತ್ತು ಕೇಡರ್‌ಗಳಿಗೆ ತಮ್ಮ ಜೀವಗಳನ್ನು ರಕ್ಷಣೆ ಮಾಡಿಕೊಳ್ಳುವುದೇ ಸವಾಲಾಗಿದೆ. ಜತೆಗೆ, ಅವರಿಗೆ ಜನಬೆಂಬಲ ಸಿಗುವುದೂ ಕ್ಲಿಷ್ಟಕರ ಎನ್ನಲಾಗುತ್ತಿದೆ. ತೆಲಂಗಾಣ–ಛತ್ತೀಸಗಢ ಗಡಿಯಲ್ಲಿರುವ ಕರ್ರೆಗುಟ್ಟ ಬೆಟ್ಟದಂಥ ಅವರ ನೂರಾರು ಅಡಗುದಾಣಗಳು ಪೊಲೀಸರ ಕೈವಶವಾಗಿವೆ. ಅನೇಕರು ಶಸ್ತ್ರಾಸ್ತ್ರ ತೊರೆದು ಶರಣಾಗುವ ಮೂಲಕ ಮುಖ್ಯವಾಹಿನಿಗೆ ಬಂದಿದ್ದಾರೆ. ಹೀಗಾಗಿ 60 ವರ್ಷಗಳ ನಕ್ಸಲ್ ಚಳವಳಿಯ ಅಂತ್ಯ ಸನ್ನಿಹಿತವಾಗಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಆಧಾರ: ಪಿಟಿಐ, ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ, ಸಂಸತ್ ಟಿವಿ

ಕೇಂದ್ರದ ವಿವಿಧ ಯೋಜನೆಗಳು

- ಭದ್ರತಾ ವೆಚ್ಚ ಯೋಜನೆ (ಎಸ್‌ಆರ್‌ಇ): 2014–15ರಿಂದ 2024–25ರವರೆಗೆ ₹3260 ಕೋಟಿ ಬಿಡುಗಡೆ
- ಎಲ್‌ಡಬ್ಲ್ಯುಇ ಜಿಲ್ಲೆಗಳಿಗೆ ಕೇಂದ್ರದ ವಿಶೇಷ ನೆರವು ಯೋಜನೆ (ಎಸ್‌ಸಿಎ): 2017ರಿಂದ ₹3563 ಕೋಟಿ ಬಿಡುಗಡೆ
- ವಿಶೇಷ ಮೂಲಸೌಕರ್ಯ ಯೋಜನೆ (ಎಸ್‌ಐಎಸ್): ₹1741 ಕೋಟಿ ಬಿಡುಗಡೆ
- ಎಲ್‌ಡಬ್ಲ್ಯುಇ ನಿರ್ವಹಣೆಗಾಗಿ ಕೇಂದ್ರೀಯ ಸಂಸ್ಥೆಗಳಿಗೆ ನೆರವು ಯೋಜನೆ: 2014–15ರಿಂದ 2024–25ರವರೆಗೆ ₹1120 ಕೋಟಿ ಬಿಡುಗಡೆ
- ನಾಗರಿಕ ಕ್ರಿಯಾ ಯೋಜನೆ (ಸಿಎಪಿ): 196 ಕೋಟಿ
- ಎಲ್‌ಡಬ್ಲ್ಯುಇ ಜಿಲ್ಲೆಗಳಲ್ಲಿ 17,589 ಕಿ.ಮೀ. ರಸ್ತೆ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಗಿದ್ದು, ಈ ಪೈಕಿ 14, 618 ಕಿ.ಮೀ ಪೂರ್ಣ
- ಮೊಬೈಲ್ ಸಂಪರ್ಕ ಯೋಜನೆಯ ಭಾಗವಾಗಿ 10,505 ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲು ಯೋಜನೆ; 7,768 ಟವರ್ ಸ್ಥಾಪನೆ ಪೂರ್ಣ
- 30 ಜಿಲ್ಲೆಗಳಲ್ಲಿ 1007 ಬ್ಯಾಂಕ್ ಶಾಖೆಗಳನ್ನು ಆರಂಭಿಸಲಾಗಿದ್ದು, 937 ಎಟಿಎಂ, 5,731 ಪೋಸ್ಟ್ ಆಫೀಸ್‌ಗಳನ್ನು ತೆರೆಯಲಾಗಿದೆ
- 48 ಐಟಿಐ, 61 ಕೌಶಾಲಾಭಿವೃದ್ಧಿ ಕೇಂದ್ರಗಳ ಸ್ಥಾಪನೆ
- ತೀವ್ರ ಪ್ರಭಾವ ಇರುವ ಜಿಲ್ಲೆಗಳ ಮೂಲಸೌಕರ್ಯ ಅಭಿವೃದ್ಧಿಗೆ ₹30 ಕೋಟಿ ವಿಶೇಷ ಪ್ಯಾಕೇಜ್
- ನಕ್ಸಲ್ ಆತಂಕದ ಜಿಲ್ಲೆಗಳಿಗೆ ₹10 ಕೋಟಿ ವಿಶೇಷ ಪ್ಯಾಕೇಜ್

ಎಲ್ಲೆಲ್ಲಿ ನಕ್ಸಲ್ ಪ್ರಭಾವ?

ನಕ್ಸಲ್ ಪ್ರಭಾವ ಇರುವ ಪ್ರದೇಶಗಳನ್ನು ಕೇಂದ್ರವು ಮೂರು ರೀತಿ ಗುರುತಿಸುತ್ತದೆ; 2014ರಲ್ಲಿ ದೇಶದ 35 ಜಿಲ್ಲೆಗಳಲ್ಲಿ 'ಅತಿ ಹೆಚ್ಚು ನಕ್ಸಲ್ ಪ್ರಭಾವ' ಇತ್ತು. 2025ಕ್ಕೆ ಅವುಗಳ ಸಂಖ್ಯೆ 6ಕ್ಕೆ ಕುಸಿದಿದೆ. ಅದೇ ರೀತಿ 'ನಕ್ಸಲ್ ಪ್ರಭಾವದ ಜಿಲ್ಲೆ'ಗಳ ಸಂಖ್ಯೆ 126ರಿಂದ 18ಕ್ಕೆ ಕುಸಿದಿದೆ. 'ನಕ್ಸಲ್ ಪ್ರಭಾವ ಇರುವ ಇತರೆ ಜಿಲ್ಲೆ'ಗಳ ಸಂಖ್ಯೆಯು 17ರಿಂದ 6ಕ್ಕೆ ಕುಸಿದಿದೆ ಎಂದು ಕೇಂದ್ರವು ಹೇಳಿದೆ.

ರಾಜ್ಯ	ಅತಿ ಹೆಚ್ಚು ನಕ್ಸಲ್ ಪ್ರಭಾವ ಇರುವ ಜಿಲ್ಲೆಗಳು
ಛತ್ತೀಸಗಢ	ಬಿಜಾಪುರ, ಕಾಂಕೇರ್, ನಾರಾಯಣಪುರ, ಸುಕ್ಮಾ
ಜಾರ್ಖಂಡ್	ಪಶ್ಚಿಮ ಸಿಂಘಭೂಮ್
ಮಹಾರಾಷ್ಟ್ರ	ಗಢ್‌ಚಿರೋಲಿ

ರಾಜ್ಯ	ನಕ್ಸಲ್ ಪ್ರಭಾವದ ಜಿಲ್ಲೆಗಳು
ತೆಲಂಗಾಣ	ಭದ್ರಾದ್ರಿ–ಕೊತ್ತಗೂಡೆಂ
ಆಂಧ್ರಪ್ರದೇಶ	ಅಲ್ಲೂರಿ ಸೀತಾರಾಮರಾಜು ಜಿಲ್ಲೆ
ಮಧ್ಯಪ್ರದೇಶ	ಬಾಲಘಾಟ್
ಒಡಿಶಾ	ಕಾಲಾಹಾಂಡಿ, ಕಂಧಮಾಲ್, ಮಲ್ಕಾನ್‌ಗಿರಿ

ರಾಜ್ಯ	ನಕ್ಸಲ್ ಪ್ರಭಾವ ಇರುವ ಇತರೆ ಜಿಲ್ಲೆಗಳು
ತೆಲಂಗಾಣ	ಮುಲುಗು
ಒಡಿಶಾ	ನೌಪಾದ
ಛತ್ತೀಸಗಢ	ದಾಂತೆವಾಡ, ಗರಿಯಾಬಂದ್, ಮೊಹ್ಲಾ–ಮಾನ್‌ಪುರ–ಅಂಬಾಗಢ ಚೌಕಿ
ಜಾರ್ಖಂಡ್	ಲಾತೇಹಾರ್

ಕರ್ನಾಟಕ ಮಾದರಿ

ನೆರೆಯ ಆಂಧ್ರ, ತೆಲಂಗಾಣ, ಮಹಾರಾಷ್ಟ್ರದಂತೆ ಕರ್ನಾಟಕಕ್ಕೂ ನಕ್ಸಲ್ ಚಳವಳಿ ಹಬ್ಬಿತ್ತು. 1985ರ ಆಸುಪಾಸಿನಲ್ಲಿ ರಾಯಚೂರು, ಪಾವಗಡ, ಬೀದರ್ ಮುಂತಾದೆಡೆ ಸಣ್ಣ ಪ್ರಮಾಣದಲ್ಲಿ ಅವರ ಚಟುವಟಿಕೆಗಳು ಆರಂಭವಾಗಿದ್ದವು. ನಂತರ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡು ನಕ್ಸಲರು ಕಾರ್ಯಾಚರಣೆ ತೀವ್ರಗೊಳಿಸಿದ್ದರು. ಅವರ ದಮನಕ್ಕೆ ರಾಜ್ಯ ಸರ್ಕಾರವು ನಕ್ಸಲ್ ನಿಗ್ರಹ ಪಡೆಯನ್ನು ರೂಪಿಸಿತ್ತು. 2002ರಲ್ಲಿ ರಾಜ್ಯದಲ್ಲಿ ಮೊದಲ ಎನ್‌ಕೌಂಟರ್ ನಡೆದಿತ್ತು. ನಂತರ ಹಲವು ಎನ್‌ಕೌಂಟರ್‌ಗಳು ನಡೆದು, ಸಾಕೇತ್ ರಾಜನ್ ಸೇರಿದಂತೆ ಹಲವರು ಹತರಾಗಿದ್ದರು. 2024ರ ನವೆಂಬರ್‌ನಲ್ಲಿ ವಿಕ್ರಂ ಗೌಡನ ಎನ್‌ಕೌಂಟರ್ ನಡೆದಿತ್ತು. ನಕ್ಸಲ್ ಸಮಸ್ಯೆಗೆ ಎನ್‌ಕೌಂಟರ್‌ಗಳು ಪರಿಹಾರ ಅಲ್ಲ, ಮಾತುಕತೆ ನಡೆಸಬೇಕು ಎಂದು ನಾಗರಿಕ ಸಂಘಟನೆಗಳು ಒತ್ತಾಯಿಸಿದವು. ಸಂಘಟನೆಗಳ ಮಧ್ಯಪ್ರವೇಶದೊಂದಿಗೆ ಮಾತುಕತೆಯೂ ನಡೆದು, ಉಳಿದ ನಕ್ಸಲರು ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗಿದ್ದರು. ಸರ್ಕಾರ ಅವರಿಗೆ ಪ್ಯಾಕೇಜ್ ಘೋಷಿಸಿತು. ಕರ್ನಾಟಕವು ನಕ್ಸಲ್ ಮುಕ್ತ ರಾಜ್ಯ ಎಂದು 2025–26ರ ಬಜೆಟ್ ಭಾಷಣದಲ್ಲಿ ಘೋಷಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಕ್ಸಲ್ ನಿಗ್ರಹ ಪಡೆಯನ್ನು ವಿಸರ್ಜಿಸಿದ್ದರು.

ತೆಲುಗರ ಪ್ರಾಬಲ್ಯ

ಅವಿಭಜಿತ ಆಂಧ್ರಪ್ರದೇಶವು ಹಿಂದೊಮ್ಮೆ ನಕ್ಸಲ್ ಚಳವಳಿಯ ಮುಖ್ಯ ನೆಲೆಯಾಗಿತ್ತು. ಆಂಧ್ರದ ಅನೇಕ ಹಳ್ಳಿಗಳಲ್ಲಿ ಅವರ ಬೆಂಬಲಿಗರಿದ್ದರು. ಆಂಧ್ರ ಮೂಲದ ನಕ್ಸಲ್ ನಾಯಕರು ಸಿಪಿಎಂ (ಮಾವೋವಾದಿ) ಪಕ್ಷದ ಅತ್ಯುನ್ನತ ಸ್ಥಾನಗಳಿಗೆ ಏರಿದ್ದರು. 2021ರ ಗುಪ್ತಚರ ವರದಿಯೊಂದರ ಪ್ರಕಾರ, 21 ಮಂದಿ ಸದಸ್ಯ ಬಲದ ಪಕ್ಷದ ಕೇಂದ್ರ ಸಮಿತಿಯಲ್ಲಿ 10 ಮಂದಿ ತೆಲಂಗಾಣದವರಿದ್ದರೆ, ಇಬ್ಬರು ಆಂಧ್ರದವರಿದ್ದರು. ಅವರ ಪೈಕಿ ಅನೇಕರು ಸ್ನಾತಕೋತ್ತರ ಪದವೀಧರರು, ಎಂಜಿನಿಯರ್‌ಗಳು, ಶಿಕ್ಷಕರು ಇದ್ದರು. ಅವರಲ್ಲಿ, ಚೆರುಕೂರಿ ರಾಜಕುಮಾರ್ ಅಲಿಯಾಸ್ ಆಜಾದ್, ಮಲ್ಲೋಜುಲ ಕೋಟೇಶ್ವರ ರಾವ್ ಅಲಿಯಾಸ್ ಕಿಶನ್‌ಜಿ, ನಂಬಾಲ ಕೇಶವರಾವ್ ಅಲಿಯಾಸ್ ಬಸವರಾಜ್, ಅಕ್ಕಿರಾಜು ಹರಗೋಪಾಲ್ ಅಲಿಯಾಸ್ ಆರ್‌ಕೆ, ಮಲ್ಲಾ ರಾಜಿರೆಡ್ಡಿ ಅಲಿಯಾಸ್ ಸತ್ತೆನ್ನ, ಕೋಬಾಡ್ ಗಾಂಧಿ ಅಲಿಯಾಸ್ ಸಲೀಂ ಪ್ರಮುಖರಾಗಿದ್ದಾರೆ. ದಶಕಗಳ ಕಾಲ ದೇಶದ ನಕ್ಸಲ್ ಚಳವಳಿಯ ನಾಯಕತ್ವ ವಹಿಸಿದ್ದ ಮುಪ್ಪಾಲ ಲಕ್ಷ್ಮಣರಾವ್ ಅಲಿಯಾಸ್ ಗಣಪತಿ ಕೂಡ ತೆಲಂಗಾಣದವರೇ. ಕರೀಂನಗರದಲ್ಲಿ ಶಿಕ್ಷಕರಾಗಿದ್ದ ಗಣಪತಿ ನಂತರ ನಕ್ಸಲರಾಗಿ ಬದಲಾಗಿದ್ದರು. ವಯೋಸಹಜ ಕಾಯಿಲೆಗಳಿಂದ ಅವರು 2018ರಲ್ಲಿ ನೇಪಥ್ಯಕ್ಕೆ ಸರಿದರು ಎನ್ನಲಾಗಿದ್ದು, ಅವರ ಸ್ಥಾನವನ್ನು ಎರಡು ದಿನಗಳ ಹಿಂದೆ ಎನ್‌ಕೌಂಟರ್ ಆದ ಬಸವರಾಜು ತುಂಬಿದ್ದರು ಎನ್ನಲಾಗಿದೆ.

ನಕ್ಸಲರ ಪ್ರಭಾವ ಇಳಿಮುಖ

2014ರಲ್ಲಿ ದೇಶದ 76 ಜಿಲ್ಲೆಗಳ 330 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ 1,080 ನಕ್ಸಲ್ ಪ್ರಕರಣಗಳು ವರದಿಯಾಗಿದ್ದವು. ಅದೇ 2024ರಲ್ಲಿ 42 ಜಿಲ್ಲೆಗಳ ವ್ಯಾಪ್ತಿಯಲ್ಲಿ 374 ನಕ್ಸಲ್ ಪ್ರಕರಣಗಳು ವರದಿಯಾಗಿವೆ. 2014ರಲ್ಲಿ 88 ಪೊಲೀಸರು ನಕ್ಸಲ್ ಹಿಂಸಾಚಾರದಲ್ಲಿ ಹುತಾತ್ಮರಾಗಿದ್ದರು; 2024ರಲ್ಲಿ 19 ಪೊಲೀಸರು ಹುತಾತ್ಮರಾಗಿದ್ದಾರೆ. ಇದೇ ವೇಳೆ ಪೊಲೀಸರಿಂದ ಎನ್‌ಕೌಂಟರ್‌ಗೆ ಒಳಗಾದ ನಕ್ಸಲರ ಸಂಖ್ಯೆಯು 63ರಿಂದ 2,089ಕ್ಕೆ ಏರಿದೆ. 2019ರಿಂದ 2025ರವರೆಗೆ ರಾಜ್ಯ ಪೊಲೀಸರ ಸಹಕಾರದೊಂದಿಗೆ ಭದ್ರತಾ ಪಡೆಗಳು ನಕ್ಸಲ್ ನಿಗ್ರಹಕ್ಕಾಗಿ ವಿವಿಧೆಡೆ 320 ಶಿಬಿರಗಳನ್ನು ರೂಪಿಸಿದ್ದವು. 2014ರಲ್ಲಿ 66 ಇದ್ದ ವಿಶೇಷ ಪೊಲೀಸ್ ಠಾಣೆಗಳ ಸಂಖ್ಯೆಯು 555ಕ್ಕೆ ಏರಿದೆ ಎಂದು ಕೇಂದ್ರ ಸರ್ಕಾರವು ತಿಳಿಸಿದೆ.

ಅಂಕಿ ಅಂಶ

197
ಕಳೆದ ನಾಲ್ಕು ತಿಂಗಳಲ್ಲಿ ಪೊಲೀಸರಿಂದ ಹತರಾದ ನಕ್ಸಲರು

8,000
ಕಳೆದ 10 ವರ್ಷದಲ್ಲಿ ಮುಖ್ಯವಾಹಿನಿಗೆ ಬಂದ ನಕ್ಸಲರ ಸಂಖ್ಯೆ

928
2024ರಲ್ಲಿ ಶರಣಾದ ನಕ್ಸಲರ ಸಂಖ್ಯೆ

718
2025ರ ನಾಲ್ಕು ತಿಂಗಳಲ್ಲಿ ಶರಣಾದ ನಕ್ಸಲರ ಸಂಖ್ಯೆ

ರಾಷ್ಟ್ರೀಯ

ಜಾಮೀನು ಅರ್ಜಿ 27 ಬಾರಿ ಮುಂದಕ್ಕೆ ಕೋರ್ಟ್ ಅಸಮಾಧಾನ

ನವದೆಹಲಿ (ಪಿಟಿಐ): ವಂಚನೆ ಪ್ರಕರಣದ ಆರೋಪಿ ಸಲ್ಲಿಸಿದ ಜಾಮೀನು ಅರ್ಜಿಯ ವಿಚಾರಣೆಯನ್ನು 27 ಬಾರಿ ಮುಂದೂಡಿದ ಅಲಹಾಬಾದ್ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಗುರುವಾರ ಅಸಮಾಧಾನ ವ್ಯಕ್ತಪಡಿಸಿದೆ. ಆರೋಪಿಗೆ ಜಾಮೀನು ಮಂಜೂರು ಮಾಡಿದೆ.

'ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ 27 ಬಾರಿ ಮುಂದೂಡಿದ್ದು ಹೇಗೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠ ಪ್ರಶ್ನಿಸಿತು.

ಆರೋಪಿ ಲಕ್ಷ್ಯ ಎನ್ನುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು. ಅವರ ವಿರುದ್ಧ ತನಿಖೆ ನಡೆಸುತ್ತಿರುವ ಸಿಬಿಐಗೆ ನೋಟಿಸ್ ಜಾರಿಗೆ ಪೀಠ ಆದೇಶಿಸಿದೆ.

ಪ್ರಕರಣದ ವಿಚಾರಣೆಯನ್ನು ಮುಂದೂಡಿದ್ದಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಸಾಮಾನ್ಯವಾಗಿ ವಿಚಾರಣೆಗೆ ಎತ್ತಿಕೊಳ್ಳುವುದಿಲ್ಲ ಎಂದು ಪೀಠವು ಹೇಳಿದೆ. ಆದರೆ, 'ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಷಯವನ್ನು ಹೈಕೋರ್ಟ್ ಬಾಕಿ ಇರಿಸಿಕೊಳ್ಳುವುದು, ಅದನ್ನು 27 ಬಾರಿ ಮುಂದೂಡುವುದು ಅಪೇಕ್ಷಣೀಯ ಅಲ್ಲ' ಎಂದು ಸಿಜೆಐ ಹೇಳಿದರು.

ಲಕ್ಷ್ಯ ಅವರು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ಎದುರಿಸುತ್ತಿದ್ದಾರೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿಯಲ್ಲಿಯೂ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ಹೆದ್ದಾರಿ ಒತ್ತುವರಿ: ಕ್ರಮಕ್ಕೆ ತಾಕೀತು

ನವದೆಹಲಿ (ಪಿಟಿಐ): ಹೆದ್ದಾರಿಗೆ ಸೇರಿದ ಜಾಗವು ಅನಧಿಕೃತವಾಗಿ ಒತ್ತುವರಿ ಆಗುವುದನ್ನು ತಡೆಯಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಗಸ್ತು ಕೈಗೊಳ್ಳಲು ಪೊಲೀಸ್ ಅಧಿಕಾರಿಗಳ ತಂಡವನ್ನು ರಚಿಸಬೇಕು ಎಂದು ಕೂಡ ಕೋರ್ಟ್ ಹೇಳಿದೆ. 'ರಾಜಮಾರ್ಗ್ ಯಾತ್ರಾ' ಹೆಸರಿನ ಆ್ಯಪ್ ಲಭ್ಯವಿರುವ ಬಗ್ಗೆ ಸಾರ್ವಜನಿಕರಿಗೆ ತಿಳಿಸಲು ಮಾಧ್ಯಮಗಳ ಮೂಲಕ ಜಾಹೀರಾತು ನೀಡಬೇಕು ಎಂದು ಕೇಂದ್ರಕ್ಕೆ ಸೂಚನೆ ನೀಡಿದೆ.

ರಾಷ್ಟ್ರೀಯ ಹೆದ್ದಾರಿ ಬಳಕೆ ಮಾಡುವವರಿಗೆ ಸಮಗ್ರ ಮಾಹಿತಿ ಒದಗಿಸಲು ಹಾಗೂ ಅವರ ದೂರುಗಳನ್ನು ಪರಿಹರಿಸಲು ಎನ್‌ಎಚ್‌ಎಐ ಈ ಆ್ಯಪ್ ಅಭಿವೃದ್ಧಿಪಡಿಸಿದೆ.

ರಾಜ್ಯಗಳ ಪೊಲೀಸರು ಅಥವಾ ಇತರ ಸಿಬ್ಬಂದಿಯನ್ನು ಒಳಗೊಂಡ ವಿಚಕ್ಷಣಾ ತಂಡವನ್ನು ಎನ್‌ಎಚ್‌ಎಐ ರಚಿಸಬೇಕು. ಈ ತಂಡಗಳು ನಿಯಮಿತವಾಗಿ ಗಸ್ತು ತಿರುಗಬೇಕು ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ನಟ ಸಲ್ಮಾನ್ ನಿವಾಸಕ್ಕೆ ಅತಿಕ್ರಮ ಪ್ರವೇಶ ಯತ್ನ: ಇಬ್ಬರ ಬಂಧನ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ಬಾಂದ್ರಾದ ನಿವಾಸಕ್ಕೆ ಅತಿಕ್ರಮವಾಗಿ ಪ್ರವೇಶಿಸಲು ಯತ್ನಿಸಿದ ಮಹಿಳೆ ಹಾಗೂ ಪುರುಷನನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಮಂಗಳವಾರ ಹಾಗೂ ಬುಧವಾರ ನಡೆದ ಪ್ರತ್ಯೇಕ ಘಟನೆಗಳಲ್ಲಿ ಈ ಇಬ್ಬರನ್ನು ಬಂಧಿಸಲಾಗಿದೆ.

ಮಾಹಿತಿಗಳ ಪ್ರಕಾರ, ಛತ್ತೀಸಗಢ ಮೂಲದ ಜಿತೇಂದ್ರ ಕುಮಾರ್ ಸಿಂಗ್ (23) ಎಂಬ ವ್ಯಕ್ತಿ ಮಂಗಳವಾರ ಬೆಳಿಗ್ಗೆ ನಟನ ನಿವಾಸದ ಸುತ್ತ ಅನುಮಾನಾಸ್ಪದವಾಗಿ ಓಡಾಡಿದ್ದು ಅದನ್ನು ಗಮನಿಸಿದ ಪೊಲೀಸರು, ಅಲ್ಲಿಂದ ತೆರಳುವಂತೆ ಎಚ್ಚರಿಕೆ ನೀಡಿದ್ದಾರೆ.

ಬಳಿಕ ಅದೇ ದಿನ ಸಂಜೆ ಸಲ್ಮಾನ್ ಅವರ ನಿವಾಸವಿರುವ ಗ್ಯಾಲಕ್ಸಿ ಅಪಾರ್ಟ್‌ಮೆಂಟ್‌ನ ಬೇರೊಬ್ಬ ನಿವಾಸಿಯ ಕಾರ್‌ನಲ್ಲಿ ಸಿಂಗ್ ಅಪಾರ್ಟ್‌ಮೆಂಟ್‌ನ ಒಳಗೆ ಪ್ರವೇಶಿಸಿದ್ದು ಆಗ ಬಂಧಿಸಲಾಗಿದೆ. ಅಪಾರ್ಟ್‌ಮೆಂಟ್ ನಿವಾಸಿಯ ಕಾರ್ ಒಳಗೆ ಹೇಗೆ ಪ್ರವೇಶಿಸಿದ ಎಂಬುದು ತಿಳಿದುಬಂದಿಲ್ಲ.

ಬುಧವಾರ ಮಹಿಳೆಯೊಬ್ಬರು ಗ್ಯಾಲಕ್ಸಿ ಅಪಾರ್ಟ್‌ಮೆಂಟ್ ಪ್ರವೇಶಿಸಿದ್ದಲ್ಲದೇ, ನಟನ ಫ್ಲಾಟ್‌ವರೆಗೂ ತಲುಪಿದ್ದಾರೆ. ಬಳಿಕ ಆಕೆಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಿಷ್ಣೋಯ್ ಗ್ಯಾಂಗ್‌ನಿಂದ ನಟ ಸಲ್ಮಾನ್ ಖಾನ್‌ಗೆ ಪ್ರಾಣ ಬೆದರಿಕೆ ಇರುವ ಕಾರಣ ಅವರ ಭದ್ರತೆ ಹೆಚ್ಚಿಸಲಾಗಿದೆ. ಇದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ನಿಸರ್ಗವನ್ನು ಆರಾಧಿಸಬೇಕು

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

201

ದೇವರನ್ನು ಆರಾಧಿಸಬೇಕು ಎಂದರೆ ದೀಪ ಹಚ್ಚಬೇಕು. ನಿಸರ್ಗವನ್ನು ಆರಾಧಿಸಬೇಕು ಎಂದರೆ ಗಿಡ ಹಚ್ಚಬೇಕು. ಗಿಡಗಳನ್ನು ಬೆಳೆಸದಿದ್ದರೆ ಮನುಷ್ಯನಿಗೆ ಬದುಕೇ ಇಲ್ಲ. ಒಬ್ಬ ಮನುಷ್ಯ ನೂರು ಅಡಿ ಅಗೆದ. ಆದರೂ ನೀರು ಸಿಗಲಿಲ್ಲ. ಸುಸ್ತಾಗಿ ಒಂದು ಗಿಡದ ಬಳಿ ನೆರಳಿನಲ್ಲಿ ಕುಳಿತ. ಆಗ ಗಿಡ 'ನೀನು ನೂರು ಅಡಿ ಆಳ ಕೊರೆದು ನೀರು ಹುಡುಕುವ ಬದಲು ಮೂರು ಅಡಿ ಗುಣಿ ತೆಗೆದು ಗಿಡ ನೆಟ್ಟಿದ್ದರೆ ಮಳೆ ಬರಿಸಿ ನಾನೇ ನೀರು ಕೊಡಿಸುತ್ತಿದ್ದೆ' ಎಂದು ಹೇಳಿತು. ಈ ದೇಶದ ಸಂಪ್ರದಾಯದಲ್ಲಿ ಒಂದು ಪವಿತ್ರ ಹಬ್ಬ ಇದೆ. ಅದೇ ರಕ್ಷಾ ಬಂಧನ. ಅಂದು ತಂಗಿ ಅಣ್ಣನಿಗೆ ರಾಖಿ ಕಟ್ಟುತ್ತಾಳೆ. ಯಾಕೆಂದರೆ, ನನಗೆ ಎಂತಹದೇ ಪರಿಸ್ಥಿತಿ ಬಂದರೂ ಅಣ್ಣ ನನ್ನನ್ನು ಜೋಪಾನ ಮಾಡುತ್ತಾನೆ ಎಂದು. ಅದು ಆಕೆಯ ಭರವಸೆ. ಬಹಳ ವರ್ಷ ನಾವು ನೀವು ಇಂತಹ ಕಾರ್ಯಕ್ರಮ ಮಾಡಿಕೊಂಡು ಬಂದಿದ್ದೀವಿ. ತಂಗಿ ಕಟ್ಟಿದ ದಾರಗಳೂ ಹರಿದಿವೆ. ಆದರೆ ಇನ್ನು ಮೇಲೆ ಹೊಸ ಉಪಕ್ರಮ ಶುರು ಮಾಡಿ. ಎಲ್ಲಾದರೂ ಒಂದು ಗಿಡ ಮುರಿಯಲು ಬಂದಿತ್ತು, ಬೇಲಿ ಇರಲಿಲ್ಲ, ನೀರು ಇರಲಿಲ್ಲ ಅಂದರೆ, ಆ ಗಿಡಕ್ಕೆ ಬೇಲಿ ಹಾಕಿ, ನೀರು ಹಾಕಿ ವೃಕ್ಷಾ ಬಂಧನ ಮಾಡಬೇಕು. ಅದು ನಿಸರ್ಗ ಜಾಗೃತಿ. ಜೀವನದಲ್ಲಿ ಮನುಷ್ಯನಿಗೆ ರಕ್ಷಾ ಬಂಧನವೂ ಮುಖ್ಯ, ವೃಕ್ಷಾ ಬಂಧನವೂ ಮುಖ್ಯ. ನೀವು ಮನೆಗೆ ಏರ್ ಕಂಡೀಷನ್ ಹಾಕಿಸಿಕೊಳ್ಳುತ್ತೀರಿ. ನೆನಪಿರಲಿ ಅದು ಕಂಡೀಷನ್ಡ್ ಗಾಳಿ ಕೊಡುತ್ತದೆ. ಆದರೆ, ನೀವು ಗಿಡ ಹಚ್ಚಿದರೆ ಅದು ಅನ್ ಕಂಡೀಷನ್ಡ್ ಗಾಳಿ ಕೊಡುತ್ತದೆ; ಉಚಿತವಾಗಿ ಕೊಡುತ್ತದೆ.

ಗೂಳೆಪ್ಪ ಭಟ್ರಳ್ಳಿ ಅಂತ ಒಬ್ಬರು ಕೂಡ್ಲಿಗಿ ತಾಲ್ಲೂಕಿನಲ್ಲಿರುವ 121 ಎಕರೆ ಸರ್ಕಾರಿ ಜಮೀನಿನಲ್ಲಿ ಗಿಡ ಹಚ್ಚಿ ಬೆಳೆಸಿದರು. ಆಶ್ಚರ್ಯ ಎಂದರೆ 21 ವರ್ಷ ಅವರಿಗೆ ಸರ್ಕಾರ ಪಗಾರ ಕೊಟ್ಟಿರಲಿಲ್ಲ. ಆದರೂ ಗಿಡ ಬೆಳೆಸೋದನ್ನು ಅವರು ಬಿಡಲಿಲ್ಲ. ನಂತರ ಸರ್ಕಾರ ಪಗಾರ ಕೊಟ್ಟಿತು. ಒಮ್ಮೆ ಅವರ ಮೇಲೆ ಹಂದಿಗಳು ದಾಳಿ ಮಾಡಿ ಗಾಯಗೊಳಿಸಿದವು. ಅವರನ್ನು ದಾವಣಗೆರೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕೆಲವು ದಿನಗಳ ನಂತರ ಆಸ್ಪತ್ರೆಯಿಂದ ಬಿಡುಗಡೆಯಾದ ಅವರು ಮನೆಗೆ ಹೋಗಲಿಲ್ಲ, ಸೀದಾ ತಾನು ಹಚ್ಚಿದ ಕಾಡಿಗೇ ಹೋದರು. ಮರಗಳ ಯೋಗಕ್ಷೇಮ ವಿಚಾರಿಸಿದರು. ಉತ್ತರ ಭಾರತದ ಸುಂದರ ಲಾಲ್ ಬಹುಗುಣ ಅವರು ಅಪ್ಪಿಕೊ ಚಳವಳಿ ಮಾಡಿದರು. ಅದೇ ಮಾದರಿಯ ಚಳವಳಿಯನ್ನು ಮಾಡಿದವರು ಭಟ್ರಳ್ಳಿ ಗೂಳೆಪ್ಪನವರು. ಯಾರಾದರೂ ಗಿಡ ಕಡಿಯಲು ಬಂದರೆ ಗಿಡವನ್ನು ಅಪ್ಪಿಕೊಂಡು 'ಗಿಡವನ್ನು ಕಡಿಯುವುದಾದರೆ ಮೊದಲು ನನ್ನನ್ನು ಕಡಿಯಿರಿ ನಂತರ ಗಿಡ ಕಡಿಯಿರಿ' ಎಂದು ಹೇಳಿ ಗಿಡಗಳನ್ನು ರಕ್ಷಿಸಿದವರು ಅವರು.

ನಾವೂ ಕೂಡ ಇಂತಹ ಸಂಕಲ್ಪಗಳನ್ನು ಮಾಡಬೇಕು. ಹಚ್ಚಿದ ದೀಪ ಆರಿಸಿ ಹುಟ್ಟುಹಬ್ಬ ಆಚರಿಸಿಕೊಳ್ಳುವುದಕ್ಕಿಂತ ಗಿಡ ಹಚ್ಚಿ ಹುಟ್ಟುಹಬ್ಬ ಆಚರಿಸಿಕೊಂಡರೆ ನಿಸರ್ಗ ಸಂತೋಷ ಪಡುತ್ತದೆ. ನಿಸರ್ಗಕ್ಕೆ ಅನುವಾಗುವಂತಹ ಕೆಲಸಗಳನ್ನು ಮಾಡಬೇಕು. ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ ಮುಂತಾದ ಸಂದರ್ಭದಲ್ಲಿ ನಿಸರ್ಗಕ್ಕೆ ಸಂತೋಷವಾಗುವಂತಹ ಕೆಲಸವನ್ನು ನಾವು ಮಾಡಬೇಕು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಮೇ 23, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಏಕಾದಶಿ ಗಂ. 22-30 ನಕ್ಷತ್ರ: ಪೂರ್ವಭಾದ್ರ ಗಂ. 16-02 ಯೋಗ: ಪ್ರೀತಿ ಗಂ. 18-36 ಕರಣ: ಬವ ಗಂ. 11-55, ವೃಷಭ ಮಾಸದ 09 ನೇ ದಿನ.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-07 ಸೂರ್ಯಾಸ್ತ : 06-48
ಮುಸ್ಲಿಂ ದಿನಾಂಕ : 24 ಜುಲ್ಕಾಯದ್
ಅದೃಷ್ಟ ಸಂಖ್ಯೆ : 8, 11

ಮೇಷ: ಸಂದಿಗ್ಧ ಪರಿಸ್ಥಿತಿಯಲ್ಲಿರುವ ನೀವು ಪರಿಸ್ಥಿತಿಯನ್ನು ಅವಲೋಕಿಸಿ ಇಷ್ಟದೇವರನ್ನು ಪ್ರಾರ್ಥಿಸಿ ತೀರ್ಮಾನ ಕೈಗೊಳ್ಳಿ. ಅನಗತ್ಯದ ಅಲೆದಾಟಗಳು ತಪ್ಪಲಿವೆ. ಸಮಯವನ್ನು ವ್ಯರ್ಥ ಮಾಡಬೇಡಿ.

ವೃಷಭ: ಉದ್ಯೋಗಕ್ಕೆ ಸಂಬಂಧಿಸಿದಂತೆ ಒದಗಿಬಂದಿರುವ ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ. ಅವಸರದಿಂದ, ಬೇಜವಾಬ್ದಾರಿತನದಿಂದಾಗಿ ನಷ್ಟ ಉಂಟಾಗಲಿದೆ. ಧಾರ್ಮಿಕ ವೃತ್ತಿಯವರಿಗೆ ಶುಭದಿನ.

ಮಿಥುನ: ಜೀವನದಲ್ಲಿ ಬೇರೆಯವರ ಹಿಡಿತದಿಂದ ಬಳಲಿರುವ ನಿಮಗೆ ಹೊರಬರುವ ಅವಕಾಶಗಳು ಎದುರಾಗುವುದು. ನಗರಪ್ರಾಂತ್ಯದಲ್ಲಿ ನಿವೇಶನ ಕೊಳ್ಳುವ ಕನಸು ನನಸಾಗಲಿದೆ. ಮನೆಯ ಖರ್ಚಿನಲ್ಲಿ ಹಿಡಿತವಿರಲಿ.

ಕರ್ಕಾಟಕ: ಎಲೆಕ್ಟ್ರಾನಿಕ್ಸ್ ಉಪಕರಣ ವ್ಯಾಪಾರಿಗಳಿಗೆ ಒಳ್ಳೆಯ ಲಾಭ ಪ್ರಾಪ್ತಿ. ಲೆಕ್ಕಪತ್ರಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳುವ ಕಾರ್ಯದ ಬಗ್ಗೆ ಯೋಚನೆ ಮಾಡಿ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು.

ಸಿಂಹ: ಕೇವಲ ಮನೆಮಂದಿಯ ಜತೆ ವ್ಯವಹರಿಸುವ ಬದಲು ಅಕ್ಕಪಕ್ಕದ ಜನರೊಂದಿಗೆ ಬೆರೆಯುವ ಪ್ರಯತ್ನ ನಡೆಸಿ. ಹೈನುಗಾರಿಕೆಯಲ್ಲಿ ಆದಾಯ ಹೆಚ್ಚಿಸಿಕೊಳ್ಳುವಿರಿ. ಕೃಷಿಕರಿಗೆ ಕೆಲಸದಲ್ಲಿ ಬಿಡುವಿಲ್ಲದಂತೆ ಆಗುವುದು.

ಕನ್ಯಾ: ಎಂದಿನಂತೆ ಮನಸ್ಸು ಹೆಚ್ಚು ಉಲ್ಲಾಸದಿಂದ ಕೂಡಿರುವುದರಿಂದ ಕೆಲಸ ಕಾರ್ಯಗಳು ಅಡೆತಡೆಗಳಿಲ್ಲದೇ ಸರಾಗವಾಗಿ ನಡೆಯುವುದು. ರಾಜಕೀಯ ಪಕ್ಷದ ನಾಯಕರು ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಬಹುದು.

ತುಲಾ: ದೀರ್ಘಕಾಲಿಕ ಯೋಜನೆಗಳ ಕೆಲಸವನ್ನು ಪ್ರಾರಂಭ ಮಾಡುವ ಮೊದಲು ಸಂಕ್ಷಿಪ್ತ ಸಭೆಯೊಂದಿಗೆ ಪಾಲುದಾರರಿಗೂ ಧ್ಯೇಯೊದ್ದೇಶಗಳನ್ನು ತಿಳಿಸಿ. ಹೆಚ್ಚುವರಿ ಜವಾಬ್ದಾರಿಗಳನ್ನು ಜಾಗುರೂಕತೆಯಿಂದ ನಿರ್ವಹಿಸಿ.

ವೃಶ್ಚಿಕ: ಯಾವುದೇ ವಿಷಯದಲ್ಲಿ ಮುಂದುವರಿಯುವ ಮೊದಲು ಅದರ ಸತ್ಯಾಸತ್ಯತೆಗಳನ್ನು ಅರಿಯುವ ಬಗ್ಗೆ ಗಮನವಿರಲಿ. ಮೊಬೈಲ್ ಫೋನ್‌ಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಆದಾಯ ಇರಲಿದೆ.

ಧನು: ಇಂದು ನೀವು ನಡೆಸುವ ಹಣಕಾಸಿನ ವ್ಯವಹಾರದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಿರಿ. ಇಲ್ಲವಾದರೆ ಇಲ್ಲಸಲ್ಲದ ಆರೋಪಕ್ಕೆ ಗುರಿಯಾಗುವಿರಿ. ಕೆಲಸಗಳಿಗೆ ಸ್ವಪ್ರಯತ್ನದೊಂದಿಗೆ ದೈವ ಬಲವೂ ಇರುತ್ತದೆ.

ಮಕರ: ದೃಷ್ಟಿದೋಷ ಸರಿಪಡಿಸಿಕೊಳ್ಳಲು ವೈದ್ಯರನ್ನು ಭೇಟಿ ಮಾಡಿ. ಕಣ್ಣಿನ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ. ಜೀವನದಲ್ಲಿ ನಿಮ್ಮದ್ದೇ ಆದ ನಿಯಮವನ್ನು ರೂಢಿಸಿಕೊಳ್ಳಿ. ಹಣಕಾಸಿನ ಪರಿಸ್ಥಿತಿ ಕೈಮೀರಿ ಹೋಗುವುದು.

ಕುಂಭ: ಮಾತಿನ ಮೇಲೆ ಹಿಡಿತ ನಿಮ್ಮ ವ್ಯವಹಾರಗಳಿಗೆ ಅನುಕೂಲವಾಗಲಿದೆ. ರಫ್ತು ವ್ಯಾಪಾರಗಳಲ್ಲಿ ಹೇರಳ ಲಾಭ ಇರುವುದು. ತಿಳಿ ಮನಸ್ಸಿನಿಂದ ಆಲೋಚಿಸಿ. ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಇದ್ದೇ ಇರುತ್ತದೆ.

ಮೀನ: ಸಾರ್ವಜನಿಕವಾಗಿ ಊಟ, ವಸತಿ ಮತ್ತು ಬೆರೆಯುವ ಸಂದರ್ಭ ಬರುವುದರಿಂದ ಆರೋಗ್ಯದಲ್ಲಿ ಗಮನ ವಹಿಸಿ. ನಿಮ್ಮ ದಿನ ನಿತ್ಯದ ವೃತ್ತಿಗಳಲ್ಲಿ ಬದಲಾವಣೆ ಇರುವುದಿಲ್ಲ. ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ದಿನ.

ಪದಬಂಧ 6051

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಜನಕನಿಗೆ ಉಸಿರಾಡಲು ಬೇಕಾಗಿರುವ ಪ್ರಾಣವಾಯು (5)
5.ಹಸೆ ಹಾಕುವ ಜಾಗದಲ್ಲಿ ಬೆಳೆದಿರುವ ಪಾಚಿ (3)
6.ಪಾಲನ್ನು ಹಿಡಿದುಕೊಂಡಿರುವವ ರಕ್ಷಿಸುವವನು (3)
7.ಗರಳವಲ್ಲ! ಇದು ಅಪರೂಪ! (3)
8.ಜನರ ಹತ್ತಿರವಿರುವ ತಂದೆ (3)
10.ಸಂಪಾದನೆಯಲ್ಲಿಯೇ ಅಡಿ ಇದೆ! (2)
11.ಲೋಹದ ಹಕ್ಕಿಯಲ್ಲಿನ ಪ್ರಯಾಣ (5)
13.ಅಕ್ಕರೆಯಿಂದ ಮಾತಾಡಿಸುವ ಹಿರಿಯ ಸಹೋದರಿ (2)
14.ಗಣಿಯ ಧಣಿ ಹೇಳಿಕೊಟ್ಟರುವ ಲೆಕ್ಕಶಾಸ್ತ್ರ (3)
16.ಪ್ರತಿಬಂಧ ತೋರದೇ ಕನ್ನಡಿಗನು ಬರೆದ ಎಸ್ಸೇ! (3)
17.ವಿರಸದ ವಿರುದ್ಧ ಪದ (3)
18.ದೋಣಿಯನ್ನು ನಡೆಸುವವನು (3)
19.ಈತ ಕಾಡಿನ ರಕ್ಷಕ (5)

ಮೇಲಿಂದ ಕೆಳಕ್ಕೆ
1.ಮಜದಲ್ಲಿರುವ ಚಕ್ರವರ್ತಿ (4)
2.ಅಪೇಕ್ಷೆ ಹೀಗೆ ಬಂದಿದೆ (2)
3.ಮೋಕ್ಷ ಮಾಡಿಸಿಕೊಂಡಿರುವ ಕನ್ನೆ! (3)
4.ಹೂವಿನಲ್ಲಿರುವ ಸಿಹಿ ರಸ (4)
7.ಕೆಂಗಲ್ ಹನುಮಂತಯ್ಯನವರ ಆಡಳಿತ ಅವಧಿಯಲ್ಲಿ ನಿರ್ಮಾಣವಾದ ಸರ್ಕಾರಿ ಕಟ್ಟಡ (5)
9.ಕವಿತೆಗಳನ್ನು ಬರೆಯುವವನು (2)
12.ನಗರದಲ್ಲಿ ಖರೀದಿಸಿರುವ ಆಭರಣ (2)
13.ಅವನು ಸರ ತರಲು ತೋರಿದ ಅರ್ಜೆಂಟು! (4)
15.ಗರತಿಗೆ ಕಾಣಿಸಿದ ವರ್ಗ (4)
16.ಪ್ರಯಾಸವಿಲ್ಲದೆ ಆದ ಹೆರಿಗೆ (3)
18.ಅಂಕಣದಲ್ಲಿ ನಾಟಕದ ಒಂದು ವಿಭಾಗವಿದೆ (2)



6050ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅರಸ 5.ವಾದಕ
6.ಮುಡದಿ 7.ಆಟ
8.ನವ 12.ಹುಸಿ
14.ವಾರ 15.ವಲಯ
16.ಕಮ್ಮಾರ 17.ತೆವರಿ

ಮೇಲಿಂದ ಕೆಳಕ್ಕೆ:
1.ಕವಾಟ 2.ಅಕಳಂಕ
3.ಸಮನ್ವಯ 4.ಸುದಿನ
7.ಅಜಾನುಬಾಹು
9.ವರ್ಣವಿಕಾರ
10.ಆತ್ಮೀಯತೆ 11.ಮದಕರಿ
13.ಸಿವುದು 14.ವಾರಸು

ಸುಡೊಕು 6435

4				2		6		1
		2			5		9	
	4		3		1		7	
1	3	7		8		4	6	5
			4		7		1	
	2		5				3	
6		9				5		4
	5				2		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6434 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ರಾಶಿ	22899-57470	ತಟ್ಟಿಬೆಟ್ಟೆ	26709-38099
ಚಾಲಿ	35350-43000	ಸಿಪ್ಪೆಗೋಟು	7432-17889	**ಶಿರಸಿ**	
ಚಿಪ್ಪು	21209-33499	**ಶಿವಮೊಗ್ಗ**		ಬೆಟ್ಟೆ	29899-43561
ಕೋಕ	5858-30434	ಬೆಟ್ಟೆ	51599-59399	ಬಿಳಿಗೋಟು	15999-31899
ಹೊಸಚಾಲಿ	31934-42899	ಗೊರಬಲು	17009-32869	ಚಾಲಿ	35399-43100
ಪುತ್ತೂರು		ರಾಶಿ	48299-57599	ಕೆಂಪುಗೋಟು	22309-23899
ಕೋಕ	20000-30500	ಸರಕು	53400-99150	ರಾಶಿ	42289-47219
ಹೊಸತು	26000-47000	**ಸಿದ್ದಾಪುರ**		**ಯಲ್ಲಾಪುರ**	
ಹಳತು	36000-50000	ಬಿಳಿಗೋಟು	25019-30119	ಅಪಿ	66435-66435
ಸಾಗರ		ಚಾಲಿ	34679-41009	ಬಿಳಿಗೋಟು	16009-33601
ಬಿಳಿಗೋಟು	8677-27832	ಕೋಕ	15129-26769	ಚಾಲಿ	33800-41666
ಚಾಲಿ	16099-39019	ಕೆಂಪುಗೋಟು	21899-22809	ಕೋಕ	8899-18969
ಕೋಕ	8919-18999	ರಾಶಿ	41099-46099	ಕೆಂಪುಗೋಟು	15899-26023
ಕೆಂಪುಗೋಟು	17599-27499				

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,813
ಇಂದಿನ ಅಂತ್ಯ	24,609
▼	203
ದಿನದ ಕನಿಷ್ಠ	24,462

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹605

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ.ಜಿ)	₹195-555
ದ್ವಿತಳಿ (ಪ್ರ.ಕೆ.ಜಿ)	₹300-685

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹188
ಲಾಟ್ (ಪ್ರತಿ ಕೆ.ಜಿಗೆ)	₹178

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹18000-18000
ಮಧುಗಿರಿ	₹10000-15500
ತಿಪಟೂರು	₹18500-19566
ತುಮಕೂರು	₹16100-17800

ಮಳೆಗೆ ಸಾವಿರಾರು ಹೆಕ್ಟೇರ್ ಬೆಳೆ ಹಾನಿ • ಸಮೀಕ್ಷೆಯಲ್ಲಿ ಕನಿಷ್ಠ ಪ್ರಮಾಣ ದಾಖಲು

ರೈತರಿಗೆ ಎನ್‌ಡಿಆರ್‌ಎಫ್ 'ಮಾರ್ಗಸೂಚಿ' ಕಂಟಕ

• ರಾಮಮೂರ್ತಿ ಪಿ.

ದಾವಣಗೆರೆ: ರಾಜ್ಯದಾದ್ಯಂತ ಏಪ್ರಿಲ್‌ನಿಂದಲೇ ಆರಂಭವಾಗಿರುವ ವರುಣನ ಆರ್ಭಟಕ್ಕೆ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳಿಗೆ ಹಾನಿಯಾಗಿದೆ. ಆದರೆ, ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಸಮೀಕ್ಷೆ ನಡೆಸಿ ರೈತರಿಗೆ ಪರಿಹಾರ ಕೊಡಿಸಲು ನೈಸರ್ಗಿಕ ವಿಕೋಪ ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿ ಅಡ್ಡಿಯಾಗಿದೆ.

ದಾವಣಗೆರೆ ಜಿಲ್ಲೆಯಲ್ಲೇ ಮಳೆಗೆ ಅಪಾರ ಪ್ರಮಾಣದ ಬೆಳೆ ಹಾನಿಗೀಡಾಗಿದೆ. ಆದರೆ, ಸರ್ಕಾರದ ಸಮೀಕ್ಷೆಯಲ್ಲಿ, '55 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬೆಳೆ ನಷ್ಟವಾಗಿದೆ' ಎಂದು ದಾಖಲಿಸಲಾಗಿದೆ.

ಎನ್‌ಡಿಆರ್‌ಎಫ್ ಮಾರ್ಗಸೂಚಿ ಅನ್ವಯ ಬಿತ್ತನೆ ಮಾಡಲಾದ ಸಂಪೂರ್ಣ ಭೂಪ್ರದೇಶದಲ್ಲಿ ಶೇ 33ಕ್ಕಿಂತ ಅಧಿಕ ಪ್ರಮಾಣದಲ್ಲಿ ಬೆಳೆ ಹಾನಿಗೀಡಾಗಿದ್ದರೆ ಮಾತ್ರ ಪರಿಹಾರ ವಿತರಣೆಗೆ ಅವಕಾಶ ಇದೆ. ಈ ನಿಯಮದಿಂದ ಶೇ 33ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬೆಳೆ ಹಾನಿಯಾದ ರೈತರಿಗೆ ಸರ್ಕಾರದಿಂದ ಪರಿಹಾರ ಪಡೆಯಲು ಅವಕಾಶವಿಲ್ಲ. ಇದರಿಂದಾಗಿ ಅನ್ನದಾತರು ಪರಿಹಾರದಿಂದ ವಂಚಿತರಾಗುತ್ತಿದ್ದಾರೆ.

ಜಿಲ್ಲೆಯಲ್ಲಿ ಅಡಿಕೆ, ಬಾಳೆ, ತೆಂಗು, ಮಾವು, ಪಪ್ಪಾಯ, ದಾಳಿಂಬೆ ಬೆಳೆಗಳ ಪೈಕಿ ಬಾಳೆ, ಅಡಿಕೆ ಹಾಗೂ ಪಪ್ಪಾಯ ಬೆಳೆಗೆ ಗಾಳಿ ಮತ್ತು ಮಳೆಯಿಂದ ಹೆಚ್ಚಿನ ಪ್ರಮಾಣದ ಹಾನಿಯಾಗಿದೆ. ಆಲಿಕಲ್ಲು ಮಳೆಯಿಂದ ಮಾವಿನ ಫಸಲಿಗೆ ಧಕ್ಕೆಯಾಗಿದೆ. ಮೇಲ್ನೋಟಕ್ಕೆ ಹಾನಿಯು ಶೇ 33ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಂಡರೂ ದಿನಗಳು ಕಳೆದಂತೆ ಮಳೆಯ ಪ್ರಭಾವ ಸಂಪೂರ್ಣ ಫಸಲನ್ನೇ ಆಪೋಷನ ತೆಗೆದುಕೊಳ್ಳುತ್ತದೆ. ಆದರೆ, ಸಮೀಕ್ಷೆ ವೇಳೆ ಕಡಿಮೆ ಪ್ರಮಾಣದ ಹಾನಿ ಕಂಡುಬರುವುದರಿಂದ ಪರಿಹಾರ ನೀಡಲಾಗದು ಎಂಬುದು ತೋಟಗಾರಿಕೆ ಮತ್ತು ಕೃಷಿ ಇಲಾಖೆ ಅಧಿಕಾರಿಗಳ ಹೇಳಿಕೆ.

'ಎನ್‌ಡಿಆರ್‌ಎಫ್‌ನ ಮಾರ್ಗ ಸೂಚಿಯೇ ಅವೈಜ್ಞಾನಿಕವಾಗಿದೆ. ಪ್ರಮಾಣ ಎಷ್ಟೇ ಆದರೂ ಹಾನಿ ಹಾನಿಯೇ. ಮಾನದಂಡವನ್ನು ಬದಲಿಸಿ ಕಡಿಮೆ ಪ್ರಮಾಣದಲ್ಲಿ ಬೆಳೆ ಹಾನಿಯಾದರೂ ಪರಿಹಾರ ವಿತರಿಸಬೇಕು' ಎಂದು ರೈತ ಬಿ.ಎಂ. ಸತೀಶ್ ಆಗ್ರಹಿಸಿದ್ದಾರೆ.

'ಜೋರು ಮಳೆಯಿಂದಾಗಿ ಕಟಾವಿನ ಹಂತಕ್ಕೆ ಬಂದಿರುವ ಭತ್ತದ ಬೆಳೆ ನೆಲಕಚ್ಚಿದೆ. ಜಿಲ್ಲೆಯಲ್ಲಿ ಅಂದಾಜು 15 ಸಾವಿರದಿಂದ 20 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರಮಾಣದಲ್ಲಿ ಭತ್ತದ ಬೆಳೆ ಹಾನಿಗೀಡಾಗಿದೆ. ಕೃಷಿ ಇಲಾಖೆ ಸಿಬ್ಬಂದಿ ಸಮೀಕ್ಷೆ ಕೈಗೊಂಡಿಲ್ಲ. ನಷ್ಟದ ನಿಖರ ಅಂಕಿ–ಅಂಶ ದಾಖಲಿಸುತ್ತಿಲ್ಲ' ಎಂದು ಅವರು ದೂರಿದರು.

'8 ಎಕರೆಯಲ್ಲಿ ಬೆಳೆದ ಭತ್ತದ ಪೈಕಿ 1 ಎಕರೆಯಷ್ಟು ಬೆಳೆ ಮಳೆಯಿಂದ ಹಾನಿಗೀಡಾಗಿದೆ. ಆದರೆ, ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಒಂದೆಡೆ ಭತ್ತದ ದರ ತೀವ್ರ ಪ್ರಮಾಣದಲ್ಲಿ ಕುಸಿದಿದೆ. ಹೀಗಿರುವಾಗ ಪರಿಹಾರವೂ ದೊರೆಯುವುದಿಲ್ಲ ಎಂದಾದರೆ ಮತ್ತಷ್ಟು ನಷ್ಟವಾಗಲಿದೆ' ಎಂದು ದಾವಣಗೆರೆ ತಾಲ್ಲೂಕಿನ ಕೋಳೇನಹಳ್ಳಿ ಗ್ರಾಮದ ಹಾಲಸಿದ್ದಪ್ಪ, ನಾಗರಸನಹಳ್ಳಿಯ ವೆಂಕಟಸುಬ್ಬರಾವ್ ತಿಳಿಸಿದರು.

ದಾವಣಗೆರೆ ಜಿಲ್ಲೆಯ ಕಡರನಾಯ್ಕನಹಳ್ಳಿ ಸಮೀಪದ ಕಮಲಾಪುರ ಗ್ರಾಮದ ರೈತರೊಬ್ಬರ ಜಮೀನಿನಲ್ಲಿ ಭತ್ತದ ಬೆಳೆ ಚಾಪೆ ಹಾಸಿರುವುದು ಪ್ರಜಾವಾಣಿ ಚಿತ್ರ

ಭತ್ತ; ಕಟಾವಿನ ನಂತರವೂ ಸಮಸ್ಯೆ

ಮಳೆಯಿಂದಾಗಿ ಕಟಾವು ಮಾಡಿದ ಭತ್ತವನ್ನು ಉಳಿಸಿಕೊಳ್ಳುವುದೇ ರೈತರಿಗೆ ದೊಡ್ಡ ಸವಾಲಾಗಿದೆ. ಭತ್ತವು ತೇವಾಂಶ ಹೊಂದಿರುವ ಕಾರಣಕ್ಕೆ ಮಾರಾಟ ಮಾಡಲೂ ಆಗುತ್ತಿಲ್ಲ. ಬಿಸಿಲಿಗೆ ಒಣಗಿಸಲು ವರುಣ ಬಿಡುತ್ತಿಲ್ಲ. ಹೀಗಾಗಿ ಎಲ್ಲೆಂದರಲ್ಲಿ ಭತ್ತವನ್ನು ರಾಶಿ ಮಾಡಿ ಮೇಲೆ ತಾಡಪಲ್ ಹೊದಿಸುವುದು ರೈತರಿಗೆ ಅನಿವಾರ್ಯವಾಗಿದೆ. ಕೆಲವೆಡೆ ರಾಶಿ ಮಾಡಿದ ಭತ್ತವು ತೀವ್ರ ತೇವಾಂಶದಿಂದಾಗಿ ಮೊಳಕೆಯೊಡೆದು ಹಾಳಾಗುತ್ತಿದೆ. ಇದರಿಂದಲೂ ರೈತರಿಗೆ ಆರ್ಥಿಕವಾಗಿ ನಷ್ಟ ಉಂಟಾಗುತ್ತಿದೆ. ಭತ್ತದ ಕಟಾವು ಮುಗಿಸಿರುವ ರೈತರು ಹಾಳಾಗುತ್ತಿರುವ ಮೇವನ್ನು ಉಳಿಸಿಕೊಳ್ಳುವ ಸವಾಲನ್ನೂ ಎದುರಿಸುತ್ತಿದ್ದಾರೆ. ಕಟಾವಿನ ನಂತರದ ಹಾನಿಯನ್ನೂ ಪರಿಹಾರಕ್ಕೆ ಪರಿಗಣಿಸಬೇಕು ಎಂಬುದೂ ರೈತರ ಕೋರಿಕೆಯಾಗಿದೆ.

> ಕನಿಷ್ಠ ಶೇ 33ರಷ್ಟು ಹಾನಿಯಾದರೆ ಮಾತ್ರ ಪರಿಹಾರ ಎಂಬ ಮಾನದಂಡದಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಮಾನದಂಡ ಬದಲಾವಣೆಗೆ ಸರ್ಕಾರದ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ
> **ತೇಜಸ್ವಿ ಪಟೇಲ್,** ರೈತ ಮುಖಂಡ

ಬೆಳ್ಳಿ ದರ ಕೆ.ಜಿಗೆ ₹2,040 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹200 ಏರಿಕೆಯಾಗಿ, ₹98,650ರಂತೆ ಮಾರಾಟವಾಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ, ₹98,200 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹2,040 ಏರಿಕೆಯಾಗಿ, ₹1.01 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಐಟಿಸಿಗೆ ₹19,807 ಕೋಟಿ ಲಾಭ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಐಟಿಸಿ ಲಿಮಿಟೆಡ್ ₹19,807 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹5,013 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ನಾಲ್ಕು ಪಟ್ಟು ಹೆಚ್ಚಳವಾಗಿದೆ ಎಂದು ಕಂಪನಿ ಷೇರುಪೇಟೆಗೆ ಗುರುವಾರ ತಿಳಿಸಿದೆ. ವರಮಾನವು ₹20,376 ಕೋಟಿಯಾಗಿದೆ ಎಂದು ತಿಳಿಸಿದೆ.

2024–25ರ ಪೂರ್ಣ ಆರ್ಥಿಕ ವರ್ಷದ ನಿವ್ವಳ ಲಾಭದಲ್ಲಿ ಶೇ 68ರಷ್ಟು ಹೆಚ್ಚಳವಾಗಿದ್ದು, ₹35,052 ಕೋಟಿಯಾಗಿದೆ. ವರಮಾನವು ₹81,612 ಕೋಟಿಯಾಗಿದ್ದು, ಶೇ 10ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

₹1 ಮುಖ ಬೆಲೆಯ ಪ್ರತಿ ಷೇರಿಗೆ ₹7.85 ಅಂತಿಮ ಲಾಭಾಂಶ ನೀಡಲು ಕಂಪನಿಯ ಆಡಳಿತ ಮಂಡಳಿ ಶಿಫಾರಸು ಮಾಡಿದೆ.

ಈ ಬಾರಿ ರಸಗೊಬ್ಬರಕ್ಕೆ ಬೇಡಿಕೆ ಹೆಚ್ಚು: ಆರ್‌ಬಿಐ ಬುಲೆಟಿನ್

ಆಹಾರ ಬೆಳೆ ದರ ಎಂಎಸ್‌ಪಿಗಿಂತ ಇಳಿಕೆ

ಮುಂಬೈ (ಪಿಟಿಐ): ಮುಂಗಾರು ಮತ್ತು ಹಿಂಗಾರು ಬೆಳೆಗಳ ಫಸಲು ಹೆಚ್ಚಿದೆ. ಹೀಗಾಗಿ ಗೋಧಿ ಹೊರತುಪಡಿಸಿ ಪ್ರಮುಖ ಆಹಾರ ಬೆಳೆಗಳ ಸರಾಸರಿ ಮಾರುಕಟ್ಟೆ ಬೆಲೆಯು ಕನಿಷ್ಠ ಬೆಂಬಲ ಬೆಲೆಗಿಂತ (ಎಂಎಸ್‌ಪಿ) ಕಡಿಮೆ ಇದೆ ಎಂದು ಆರ್‌ಬಿಐನ ಬುಲೆಟಿನ್ ತಿಳಿಸಿದೆ.

ಕೇಂದ್ರ ಸರ್ಕಾರವು 23 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿದೆ. ಈ ಪೈಕಿ 14 ಮುಂಗಾರು, 7 ಹಿಂಗಾರು ಮತ್ತು ಎರಡು ವಾಣಿಜ್ಯ ಬೆಳೆಗಳಾಗಿವೆ. ಆಹಾರ ಭದ್ರತೆ ಕಲ್ಪಿಸುವ ಉದ್ದೇಶದಿಂದ ಗೋಧಿ, ಅಕ್ಕಿ ಸೇರಿ ಕೆಲವು ಧಾನ್ಯಗಳನ್ನು ಮಾತ್ರ ಸರ್ಕಾರ ಖರೀದಿಸುತ್ತಿದೆ.

ಅಡುಗೆ ಎಣ್ಣೆ ದರದಲ್ಲಿ ಏರಿಳಿತವಿದೆ. ಸೋಯಾ, ಸೂರ್ಯಕಾಂತಿ ಮತ್ತು ಸಾಸಿವೆ ಎಣ್ಣೆ ದರ ಏರುಗತಿಯಲ್ಲಿದ್ದರೆ, ತಾಳೆ ಮತ್ತು ಶೇಂಗಾ ಎಣ್ಣೆ ದರ ಇಳಿಕೆಯಾಗಿದೆ. ದ್ವಿದಳ ಧಾನ್ಯಗಳು ಮತ್ತು ಈರುಳ್ಳಿ ದರ ಇಳಿದಿದೆ. ಆಲೂಗಡ್ಡೆ ಮತ್ತು ಟೊಮೆಟೊ ಬೆಲೆ ಏರಿಕೆಯಾಗಿದೆ ಎಂದು ಆರ್‌ಬಿಐ ಬುಲೆಟಿನ್‌ನಲ್ಲಿ ಪ್ರಕಟ ಆಗಿರುವ ಲೇಖನ ಗುರುವಾರ ತಿಳಿಸಿದೆ.

ಸಮೃದ್ಧ ಫಸಲು ಮತ್ತು ಸರ್ಕಾರದ ಆಹಾರ ಹಣದುಬ್ಬರ ನಿಯಂತ್ರಣ ಕ್ರಮದಿಂದ ಪ್ರಮುಖ ಆಹಾರ ಬೆಳೆಗಳ ಬೆಲೆಗಳು ಕಡಿಮೆಯಾಗಿವೆ. ಇದರಿಂದ ದೇಶದ ಆಹಾರ ಭದ್ರತೆಯ ವೆಚ್ಚದ ಮೇಲಿನ ಹೊರೆ ಕಡಿಮೆಯಾಗಬಹುದು ಎಂದು ಹೇಳಿದೆ.

ಏಪ್ರಿಲ್ 1ರಿಂದ ಮೇ 19ರ ವರೆಗಿನ ಮಾರುಕಟ್ಟೆ ದರವನ್ನು ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ. ರಾಜಸ್ಥಾನ ಮತ್ತು ಮಧ್ಯಪ್ರದೇಶವು ಪ್ರತಿ ಕ್ವಿಂಟಲ್ ಗೋಧಿಗೆ ಕ್ರಮವಾಗಿ ಎಂಎಸ್‌ಪಿ ಮೇಲೆ ಹೆಚ್ಚುವರಿ ₹150 ಮತ್ತು ₹175 ನೀಡಿವೆ. ಈ ಅವಧಿಯಲ್ಲಿ ದ್ವಿದಳ ಧಾನ್ಯಗಳ ಬಿತ್ತನೆ ಬಹುತೇಕ ಪೂರ್ಣಗೊಂಡಿದೆ ಎಂದು ಹೇಳಿದೆ. ಈ ಬಾರಿ ಮಳೆಯು ಮೊದಲೇ ಆರಂಭವಾಗಿದೆ. ಪ್ರಮುಖ ರಸಗೊಬ್ಬರ-ಗಳಿಗೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಬೇಡಿಕೆ ಹೆಚ್ಚಿರಲಿದೆ ಎಂದು ವರದಿ ಅಂದಾಜಿಸಿದೆ.

ಈ ವರದಿಯು ಲೇಖಕರ ಅಭಿಪ್ರಾಯವೇ ಹೊರತು, ತನ್ನ ನಿಲುವು ಅಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.

'ಹಠಾತ್ ಮಳೆ: ಬೆಳೆ ಹಾನಿ ಆಗಿಲ್ಲ'

ನವದೆಹಲಿ (ಪಿಟಿಐ): 'ದೇಶದ ಕೆಲವು ಭಾಗಗಳಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದ ಪ್ರಮುಖ ಬೆಳೆಗಳಿಗೆ ಹಾನಿಯಾಗಿಲ್ಲ. ಈ ಮಳೆಯು ಬೇಸಿಗೆಯ ಬೆಳೆ ಉತ್ಪಾದನೆಯನ್ನು ಹೆಚ್ಚಿಸುವ ನಿರೀಕ್ಷೆಯಿದೆ' ಎಂದು ಕೇಂದ್ರ ಕೃಷಿ ಇಲಾಖೆಯ ಕಾರ್ಯದರ್ಶಿ ದೇವೇಶ್ ಚತುರ್ವೇದಿ ಹೇಳಿದ್ದಾರೆ.

ಈ ಹಠಾತ್ ಮಳೆಯಿಂದ ಇಲ್ಲಿಯವರೆಗೆ ಯಾವುದೇ ಹಾನಿ ವರದಿಯಾಗಿಲ್ಲ. ಅಲ್ಲದೇ, ಈ ಮಳೆ ಹೆಸರುಕಾಳು, ಜೋಳ ಮತ್ತು ಭತ್ತದ ಬೆಳೆಗಳಿಗೆ ಅನುಕೂಲವಾಗಿದೆ. ಉತ್ತರ ಪ್ರದೇಶ ಮತ್ತು ಬಿಹಾರದ ಕೆಲವು ಭಾಗಗಳಲ್ಲಿ ಸುರಿದ ಆಲಿಕಲ್ಲು ಮಳೆ ಮತ್ತು ಬಿರುಗಾಳಿಯಿಂದ ಮಾವು ಮತ್ತು ಲಿಚಿ ಹಣ್ಣುಗಳು ಉದುರಿವೆ. ಆದರೆ, ಆಯಾ ರಾಜ್ಯ ಸರ್ಕಾರಗಳು ಈ ಕುರಿತು ಸಚಿವಾಲಯಕ್ಕೆ ವರದಿ ಸಲ್ಲಿಸಿಲ್ಲ ಎಂದರು.

ಜುಲೈನಿಂದ ಪ್ರಾರಂಭವಾಗುವ ಭತ್ತದ ಬಿತ್ತನೆಯ ಸಿದ್ಧತೆ ಪ್ರಗತಿಯಲ್ಲಿದೆ. 2024-25ನೇ ಬೆಳೆ ವರ್ಷದ (ಜುಲೈ-ಜೂನ್) ಮೂರನೇ ಆಹಾರ ಧಾನ್ಯ ಉತ್ಪಾದನಾ ಅಂದಾಜು ಮೂರ್ನಾಲ್ಕು ದಿನಗಳಲ್ಲಿ ಬಿಡುಗಡೆಯಾಗುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಒಎನ್‌ಜಿಸಿ ಲಾಭ ಶೇ 35ರಷ್ಟು ಇಳಿಕೆ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮದ (ಒಎನ್‌ಜಿಸಿ) ನಿವ್ವಳ ಲಾಭದಲ್ಲಿ ಶೇ 35ರಷ್ಟು ಇಳಿಕೆಯಾಗಿದೆ.

ಪ್ರಸಕ್ತ ಮಾರ್ಚ್ ತ್ರೈಮಾಸಿಕದಲ್ಲಿ ₹6,448 ಕೋಟಿ ಲಾಭ ಗಳಿಸಿದೆ. 2023–24ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹9,869 ಕೋಟಿ ಲಾಭ ಗಳಿಸಿತ್ತು. ಕಚ್ಚಾ ತೈಲ ಬೆಲೆಯಲ್ಲಿನ ಇಳಿಕೆಯೇ ಲಾಭ ಕಡಿಮೆಯಾಗಲು ಕಾರಣ ಎಂದು ತಿಳಿಸಿದೆ.

ವರಮಾನವು, ₹34,982 ಕೋಟಿ ಆಗಿದೆ. 47 ಲಕ್ಷ ಟನ್ ಕಚ್ಚಾ ತೈಲ ಉತ್ಪಾದನೆಯಾಗಿದೆ. 2024–25ರ ಪೂರ್ಣ ಆರ್ಥಿಕ ವರ್ಷದ ಲಾಭದಲ್ಲಿ ಶೇ 12ರಷ್ಟು ಇಳಿಕೆಯಾಗಿದ್ದು, ₹35,610 ಕೋಟಿ ಲಾಭ ಗಳಿಸಿದೆ. ವರಮಾನ ₹1.37 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಟಾಟಾ ಆಲ್ಟ್ರೋಜ್ ಫೇಸ್‌ಲಿಫ್ಟ್ ಬಿಡುಗಡೆ

• ಕೆ.ಎಚ್. ಓಬಳೇಶ್

ಮುಂಬೈ: ಟಾಟಾ ಮೋಟರ್ಸ್ ತನ್ನ ಜನಪ್ರಿಯ ಆಲ್ಟ್ರೋಜ್ ಹ್ಯಾಚ್‌ಬ್ಯಾಕ್‌ನ ಫೇಸ್‌ಲಿಫ್ಟ್ ಆವೃತ್ತಿಯನ್ನು ಗುರುವಾರ ದೇಶದ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹6.89 ಲಕ್ಷ ಆಗಿದೆ.

2020ರಲ್ಲಿ ಮಾರುಕಟ್ಟೆಗೆ ಪರಿಚಯಿಸಿದ್ದ ಈ ಕಾರಿನ ನವೀಕರಿಸಿದ ಮಾದರಿಯು ಬಿಡುಗಡೆ ಆಗಿರಲಿಲ್ಲ. ಈಗ ಪ್ರೀಮಿಯಂ ಹ್ಯಾಚ್‌ಬ್ಯಾಕ್ ಪ್ರಿಯರ ಬೇಡಿಕೆಗೆ ತಕ್ಕಂತೆ ಬಾಹ್ಯ ವಿನ್ಯಾಸದಲ್ಲಿ ಸಂಪೂರ್ಣ ಬದಲಾವಣೆ ಮಾಡಲಾಗಿದ್ದು, ಹೊಸ ಫೀಚರ್‌ಗಳನ್ನು ಅಳವಡಿಸಲಾಗಿದೆ. ಮಾರುಕಟ್ಟೆಯಲ್ಲಿರುವ ಮಾರುತಿ ಬೊಲೆನೊ, ಹುಂಡೈ ಐ20, ಟೊಯೊಟೊ ಗ್ಲಾಜಾದಂತಹ ಕಾರುಗಳೊಂದಿಗೆ ಸ್ಪರ್ಧಿಸಲು ಅನುವಾಗುವಂತೆ ವಿನ್ಯಾಸ ರೂಪಿಸಲಾಗಿದೆ. ಜೂನ್ 2ರಿಂದ ವಾಹನದ ಬುಕಿಂಗ್ ಆರಂಭವಾಗಲಿದೆ.

ವೈಶಿಷ್ಟ್ಯ ಏನು?: ಆಲ್ಟ್ರೋಜ್ ಫೇಸ್‌ಲಿಫ್ಟ್ ಮುಖ್ಯವಾಗಿ ಪ್ರಿಸ್ಟೈನ್ ವೈಟ್, ಪ್ಯೂರ್ ಗ್ರೇ, ರಾಯಲ್ ಬ್ಲೂ, ಎಂಬರ್ ಗ್ಲೊ ಮತ್ತು ಡ್ಯೂನ್ ಗ್ಲೊ ಬಣ್ಣದಲ್ಲಿ ದೊರೆಯಲಿದೆ. ಡ್ಯಾಶ್‌ಬೋರ್ಡ್ ಹೊಸದಾಗಿ ವಿನ್ಯಾಸಗೊಂಡಿದೆ. ಡ್ರೈವರ್ ಡಿಸ್‌ಪ್ಲೇಯಲ್ಲಿಯೂ ನ್ಯಾವಿಗೇಷನ್ ಸೌಲಭ್ಯವಿದೆ. 10.25 ಇಂಚಿನ ಟಚ್‌ಸ್ಕ್ರೀನ್ ಇನ್ಫೋಟೈನ್‌ಮೆಂಟ್ ಸಿಸ್ಟಂ ಸೌಲಭ್ಯವಿದೆ. ಇದು ವೈರ್‌ಲೆಸ್ ಆ್ಯಂಡ್ರಾಯ್ಡ್ ಆಟೊ ಮತ್ತು ಆ್ಯಪಲ್ ಕಾರ್ ಪ್ಲೇ ಅನ್ನು ಬೆಂಬಲಿಸುತ್ತದೆ. ಸಿಂಗಲ್ ಪ್ಯಾನ್ ಸನ್‌ರೂಫ್, ಹೊಸ ಆರಾಮದಾಯಕ ಸೀಟುಗಳು ಮತ್ತು 360 ಡಿಗ್ರಿ ಕ್ಯಾಮೆರಾ ವೈಶಿಷ್ಟ್ಯವನ್ನು ಹೊಂದಿದೆ.

ಗ್ರಿಲ್, ಹೆಡ್‌ಲ್ಯಾಂಪ್, ಟೈಲ್‌ಲ್ಯಾಂಪ್, ಕನೆಕ್ಟಿಂಗ್ ಎಲ್‌ಇಡಿ ಬಾರ್ ಮತ್ತು ಫ್ಲಶ್ ಡೋರ್ ಹ್ಯಾಂಡಲ್ ಹಾಗೂ ಹೊಸ ವಿನ್ಯಾಸದ ಅಲಾಯ್ ವೀಲ್‌ಗಳನ್ನು ಒಳಗೊಂಡಿದೆ. 1.2 ಲೀಟರ್ ಪೆಟ್ರೋಲ್, 1.5 ಲೀಟರ್ ಟರ್ಬೊ ಡೀಸೆಲ್ ಮತ್ತು ಎರಡು ಸಿಲಿಂಡರ್ ಸಹಿತ 1.2 ಲೀಟರ್ ಸಾಮರ್ಥ್ಯದ ಸಿಎನ್‌ಜಿ ಎಂಜಿನ್ ಹೊಂದಿದೆ.

ಟಾಟಾ ಮೋಟರ್ಸ್‌ನ ಆಲ್ಟ್ರೋಜ್ ಫೇಸ್‌ಲಿಫ್ಟ್ ಆವೃತ್ತಿಯನ್ನು ಮುಂಬೈನಲ್ಲಿ ಗುರುವಾರ ಬಿಡುಗಡೆ ಮಾಡಲಾಯಿತು. ವಿನ್ಯಾಸ ವಿಭಾಗದ ಮುಖ್ಯಸ್ಥ ಮಾರ್ಟಿನ್ ಎಂ. ಉಹ್ಲಾರಿಕ್, ಮುಖ್ಯ ವಾಣಿಜ್ಯ ಅಧಿಕಾರಿ ವಿವೇಕ್ ಶ್ರೀವಾಸ್ತವ, ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ ಲಿಮಿಟೆಡ್ ಮತ್ತು ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ಇದ್ದರು

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಹೂಡಿಕೆದಾರರು ಲಾಭ ಗಳಿಸುವ ಉದ್ದೇಶದಿಂದ ಐ.ಟಿ, ತೈಲ ಮತ್ತು ಎಫ್‌ಎಂಸಿಜಿ ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಮಾರುಕಟ್ಟೆಯು ಇಳಿಕೆಯ ಹಾದಿ ಹಿಡಿಯಿತು ಎಂದು ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 644 ಅಂಶ ಕುಸಿದು, 80,951ಕ್ಕೆ ಅಂತ್ಯಗೊಂಡಿವೆ. . ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 203 ಅಂಶ ಕಡಿಮೆಯಾಗಿ, 24,609ಕ್ಕೆ ಕೊನೆಗೊಂಡಿತು.

ಮಹೀಂದ್ರ ಆ್ಯಂಡ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ಟೆಕ್ ಮಹೀಂದ್ರ, ಪವರ್ ಗ್ರಿಡ್, ಐಟಿಸಿ, ಹಿಂದೂಸ್ತಾನ್ ಯುನಿಲಿವರ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಮಾರುತಿ ಸುಜುಕಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 36 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹85.95 ಆಗಿದೆ.

ಟ್ರಂಪ್ ಸುಂಕ ನೀತಿ: 12 ರಾಜ್ಯಗಳು ಕೋರ್ಟ್‌ಗೆ

ವಾಷಿಂಗ್ಟನ್ (ಎ.ಪಿ): 'ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇತ್ತೀಚೆಗೆ ಜಾರಿಗೊಳಿಸಿದ್ದ ಭಾರಿ ಪ್ರಮಾಣದ ಆಮದು ಸುಂಕ ರದ್ದುಪಡಿಸಬೇಕು' ಎಂದು ಅಮೆರಿಕದ 12 ರಾಜ್ಯಗಳು ಫೆಡರಲ್ ಕೋರ್ಟ್ ಮೊರೆ ಹೋಗಿವೆ. 'ಅಧಿಕಾರ ಮೀರಿ ಟ್ರಂಪ್ ತೀರ್ಮಾನ ಕೈಗೊಂಡಿದ್ದಾರೆ' ಎಂದೂ ಪ್ರತಿಪಾದಿಸಿವೆ.

ವಿಶ್ವದ ವಿವಿಧ ರಾಷ್ಟ್ರಗಳ ಮೇಲೆ ವಿಧಿಸಲಾಗಿದ್ದ ತೀವ್ರ ಆಮದು ಸುಂಕವನ್ನು ಈ ರಾಜ್ಯಗಳು ಪ್ರಶ್ನಿಸಿದ್ದು, ಇದು ಅಮೆರಿಕದ ವ್ಯಾಪಾರ ಚಟುವಟಿಕೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದಿವೆ.

ಅಕ್ರಮ ವಲಸೆ ತಡೆಯಲು ಇದಕ್ಕೂ ಹಿಂದೆ ಡೊನಾಲ್ಡ್ ಟ್ರಂಪ್ ಅವರು ಕೆನಡಾ, ಚೀನಾ ಮತ್ತು ಮೆಕ್ಸಿಕೊದ ಆಮದು ಉತ್ಪನ್ನಗಳ ಮೇಲೆ ವಿಧಿಸಿದ್ದ ಭಾರಿ ಸುಂಕವನ್ನೂ ಈ ರಾಜ್ಯಗಳು ಪ್ರಶ್ನಿಸಿವೆ.

ನ್ಯೂಯಾರ್ಕ್‌ನಲ್ಲಿ ಇರುವ ಅಂತರರಾಷ್ಟ್ರೀಯ ವಹಿವಾಟು ಕುರಿತ ಕೋರ್ಟ್‌ನ ಮೂವರು ನ್ಯಾಯಮೂರ್ತಿಗಳ ಪೀಠವು ಬುಧವಾರ ಈ ಕುರಿತು ರಾಜ್ಯಗಳ ವಾದವನ್ನು ಆಲಿಸಿತು. ಐದು ಸಣ್ಣ ಉದ್ಯಮ ಸಂಘಟನೆಗಳು ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿಯೂ ವಾದ ಆಲಿಸಿತು.

ಹೊಸ ಸುಂಕ ನೀತಿ ಪ್ರಶ್ನಿಸಿ ಒಟ್ಟು ಏಳು ಅರ್ಜಿಗಳು ಸಲ್ಲಿಕೆಯಾಗಿವೆ. ಅರಿಜೋನಾ, ಮೈನೆ, ಕೊಲೊರಾಡೊ, ಕೊನೆಕ್ಟಿಕಟ್, ಡೆಲವೇರ್, ಇಲಿನಾಯ್ಸ್, ಮಿನೆಸೊಟಾ, ನೆವಡಾ, ನ್ಯೂ ಮೆಕ್ಸಿಕೊ, ನ್ಯೂಯಾರ್ಕ್, ಒರೆಗಾನ್, ವೆರ್ಮಾಂಟ್ ಈಗ ಕೋರ್ಟ್ ಮೆಟ್ಟಿಲೇರಿರುವ ರಾಜ್ಯಗಳಾಗಿವೆ.

ಜಪಾನ್, ಯುಎಇಗೆ ಭಾರತದ ನಿಯೋಗ ಭೇಟಿ

'ಜಾಗತಿಕ ಭದ್ರತೆ, ಶಾಂತಿ ಸಂಕಲ್ಪ'

ಅಬುಧಾಬಿ/ಟೋಕಿಯೊ (ಪಿಟಿಐ): ಪಾಕ್ ನೆಲದಿಂದ ನಡೆಯುತ್ತಿರುವ ಉಗ್ರರ ಚಟುವಟಿಕೆ ಹಾಗೂ ಭಯೋತ್ಪಾದನೆ ನಿರ್ಮೂಲನೆ ಭಾರತದ ನಿಲುವನ್ನು ವಿವಿಧ ರಾಷ್ಟ್ರಗಳಿಗೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಸರ್ವಪಕ್ಷಗಳ ಎರಡು ಪ್ರತ್ಯೇಕ ನಿಯೋಗಗಳು ಜಪಾನ್ ಮತ್ತು ಯುಎಇಗೆ ತಲುಪಿವೆ.

ಜನತಾದಳ (ಯು) ಸಂಸದ ಸಂಜಯ್ ಝಾ ನೇತೃತ್ವದ ನಿಯೋಗವು ಜಪಾನ್‌ಗೆ ತಲುಪಿದರೆ, ಶಿವಸೇನಾ ಸಂಸದ ಶ್ರೀಕಾಂತ ಶಿಂದೆ ನೇತೃತ್ವದ ನಿಯೋಗವು ಯುಎಇಗೆ ತಲುಪಿದೆ.

'ಆಪರೇಷನ್ ಸಿಂಧೂರದ ನಿರ್ದಿಷ್ಟ ದಾಳಿ ಹಾಗೂ ಪಾಕ್ ನೆಲದಿಂದ ನಡೆಯುತ್ತಿರುವ ಉಗ್ರರ ಚಟುವಟಿಕೆಗ-ಳನ್ನು ಕುರಿತು ಜಪಾನ್ ಪ್ರತಿನಿಧಿಗಳಿಗೆ ಮಾಹಿತಿ ನೀಡಲಾಯಿತು' ಎಂದು ಶಿಂದೆ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಈ ನಿಯೋಗದಲ್ಲಿ ಬಿಜೆಪಿಯ ಅಪರಾಜಿತಾ ಸಾರಂಗಿ, ಬ್ರಿಜ್‌ಲಾಲ್, ಪ್ರಧಾನ್ ಬರುಅ, ಹೇಮಾಂಗ್ ಜೋಶಿ, ಕಾಂಗ್ರೆಸ್‌ನ ಸಲ್ಮಾನ್ ಖುರ್ಷಿದ್, ಟಿಎಂಸಿಯ ಅಭಿಷೇಕ್ ಬ್ಯಾನರ್ಜಿ, ಸಿಪಿಎಂನ ಜಾನ್ ಬ್ರಿಟ್ಟಾಸ್ ಇದ್ದಾರೆ.

ಈ ಸಂದರ್ಭದಲ್ಲಿ ಜಪಾನ್ ವಿದೇಶಾಂಗ ಸಚಿವ ಟಕೆಶಿ ಇವಾಯಾ ಅವರು, 'ಯಾವುದೇ ಸ್ವರೂಪದ ಭಯೋತ್ಪಾದನೆ ಸಹಿಸಲಾಗದು. ಇದರ ವಿರುದ್ಧದ ಹೋರಾಟಕ್ಕೆ ಜಪಾನ್ ಬೆಂಬಲಿಸಲಿದೆ' ಎಂದರು.

ಜಪಾನ್‌ಗೆ ತೆರಳಿರುವ ಭಾರತದ ಸಂಸದ ನಿಯೋಗವು ಟೋಕಿಯೊದಲ್ಲಿ ಜಪಾನ್‌ನ ವಿದೇಶಾಂಗ ಸಚಿವ ಟಕೆಶಿ ಇವಾಯಾ ಅವರೊಂದಿಗೆ ಚರ್ಚಿಸಿತು –ಪಿಟಿಐ ಚಿತ್ರ

'ಭಯೋತ್ಪಾದನೆ ಜಾಗತಿಕ ಬೆದರಿಕೆ'

ಭಯೋತ್ಪಾದನೆ ಎಂಬುದು ಜಾಗತಿಕ ಬೆದರಿಕೆ. ಮಾನವೀಯತೆಗೇ ದಕ್ಕೆ ಉಂಟು ಮಾಡುವಂತಹದು' ಎಂದು ಯುಎಇ ಹೇಳಿದ್ದು, ಭಯೋತ್ಪಾದನೆ ವಿರುದ್ಧದ ಭಾರತದ ಹೋರಾಟಕ್ಕೆ ಬೆಂಬಲ ಸೂಚಿಸಿದೆ.

ಅಬುದಾಭಿಯಲ್ಲಿ ಶಿವಸೇನೆ ಸಂಸದ ಶ್ರೀಕಾಂತ್ ಶಿಂದೆ ನೇತೃತ್ವದ ನಿಯೋಗವನ್ನು ಭೇಟಿಯಾಗಿದ್ದ ಯುಎಇ ರಕ್ಷಣಾ ವ್ಯವಹಾರದ ಸಚಿವ ಅಲಿ ರಷೀದ್ ಅಲ್ ನೌಯಾಮಿ ಈ ಮಾತು ಹೇಳಿದರು.

ಈ ನಿಯೋಗದಲ್ಲಿ ಬಿಜೆಪಿಯ ಮನನ್ ಕುಮಾರ್ ಮಿಶ್ರಾ, ಎಸ್.ಎಸ್. ಅಹ್ಲುವಾಲಿಯಾ, ಅತುಲ್ ಗರ್ಗ್, ಬಾನ್ಸುರಿ ಸ್ವರಾಜ್, ಬಿಜೆಡಿಯ ಸಸ್ಮಿತ್ ಪಾತ್ರಾ, ಐಯುಎಂಎಲ್‌ನ ಮೊಹಮ್ಮದ್ ಬಶೀರ್, ಮಾಜಿ ರಾಜತಾಂತ್ರಿಕ ಸುಜಾನ್ ಆರ್. ಚಿನೊಯ್, ಯುಎಇಯ ಭಾರತದ ರಾಯಭಾರಿ ಸುಂಜಯ್ ಇದ್ದರು.

ಸಂಕ್ಷಿಪ್ತ ಸುದ್ದಿ

ಭಾರತದ ಸಿಬ್ಬಂದಿಗೆ ದೇಶ ತೊರೆಯಲು ಪಾಕ್ ಆದೇಶ

ಇಸ್ಲಾಮಾಬಾದ್ (ಪಿಟಿಐ): ಇಲ್ಲಿರುವ ಭಾರತ ರಾಯಭಾರ ಕಚೇರಿಯ ಸಿಬ್ಬಂದಿಯೊಬ್ಬರಿಗೆ 24 ಗಂಟೆಯಲ್ಲಿ ದೇಶ ತೊರೆಯಬೇಕು ಎಂದು ಪಾಕಿಸ್ತಾನ ಸರ್ಕಾರ ಆದೇಶಿಸಿದೆ.

ಬೇಹುಗಾರಿಕೆ ಆರೋಪದಡಿ ಭಾರತ ಬುಧವಾರ ನವದೆಹಲಿಯ ಪಾಕ್ ರಾಯಭಾರಿ ಕಚೇರಿಯ ಅಧಿಕಾರಿ ಒಬ್ಬರನ್ನು ದೇಶ ತೊರೆಯಲು ಆದೇಶಿಸಿತ್ತು. ಅದರ ಹಿಂದೆಯೇ ಪಾಕ್ ಈ ಕ್ರಮ ಕೈಗೊಂಡಿದೆ.

ಸಿಬ್ಬಂದಿ ಅಧಿಕೃತ ಕೆಲಸ ಹೊರತುಪಡಿಸಿದ ಕಾರ್ಯಗಳಲ್ಲಿ ನಿರತರಾಗಿದ್ದರು ಎಂದು ಪಾಕ್ ವಿದೇಶಾಂಗ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಿದೆ.

ಕದನ ವಿರಾಮ: ಉಕ್ರೇನ್ ಜೊತೆ ಚರ್ಚೆ ನಿಗದಿಯಾಗಿಲ್ಲ –ರಷ್ಯಾ

ಮಾಸ್ಕೊ (ಎ.ಪಿ): ರಷ್ಯಾ ಮತ್ತು ಉಕ್ರೇನ್ ನಡುವಿನ ಮೂರು ವರ್ಷಗಳ ಯುದ್ಧ ಅಂತ್ಯಗೊಳಿಸುವ ಕುರಿತಂತೆ ನೇರ ಮಾತುಕತೆಗೆ ಯಾವುದೇ ಸಭೆ ನಿಗದಿಯಾಗಿಲ್ಲ ಎಂದು ರಷ್ಯಾ ಗುರುವಾರ ತಿಳಿಸಿದೆ.

2022ರಲ್ಲಿ ಯುದ್ಧ ಆರಂಭವಾಗಿದೆ. 'ಶೀಘ್ರ ಕದನವಿರಾಮ ಮೂಡಲಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ಹಿಂದೆ, ವಾರದ ಹಿಂದಷ್ಟೇ ಉಭಯ ದೇಶಗಳ ನಿಯೋಗ ಚರ್ಚಿಸಿದ್ದವು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಎಚ್. ವನಜ ಕುಮಾರಿ
ನಿಧನ: 20ನೇ ಮೇ 2025
ಪ್ರೀತಿಯ ಪತ್ನಿ, ತಾಯಿ, ಅಜ್ಜಿ ಮತ್ತು ಸಹೋದರಿಯಾಗಿ, ನೀವು ದೃಢವಾದ ಚೈತನ್ಯ, ಇಚ್ಛಾಶಕ್ತಿ, ದೇವರ ಭಕ್ತಿ ಮತ್ತು ಧ್ಯಾನದ ಮನಸ್ಸಿನಿಂದ ದೀರ್ಘಕಾಲದ ಕಾಯಿಲೆಯನ್ನು ಎದುರಿಸಿದಿರಿ. ನೀವು ಯಾವಾಗಲೂ ನಮ್ಮ ಹೃದಯದಲ್ಲಿ ಮತ್ತು ನೆನಪಿನಲ್ಲಿ ಇರುವಿರಿ, ಎಂದೆಂದಿಗೂ ಪ್ರೀತಿಸಲ್ಪಡುವಿರಿ.
ದುಃಖತಪ್ತರು: ಕುಟುಂಬದವರು ಮತ್ತು ಸ್ನೇಹಿತರು

HEALTH SPECIAL

ಶ್ರೀ ಶಕ್ತಿ ಮಸಾಜ್ ಥೆರಪಿ
ಬೆಂಗಳೂರು ಇವರ ವತಿಯಿಂದ
ಉಚಿತ ಚಿಕಿತ್ಸೆ (ಬೆಂಗಳೂರುನಲ್ಲಿ)
ದಿನಾಂಕ ರಿಂದ 19/05/2025 ಪ್ರಾರಂಭವಾಗಿದೆ
ಸಮಯ ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ವರಗೆ
ವಿಳಾಸ : ಆನಂದ್ ರಾವ್ ಸರ್ಕಲ್ ಹತ್ತಿರ SC ರೋಡ್, ಕುಮಾರಕೀನೊ ಅಪಾರ್ಟ್ಮೆಂಟ್ ಎದುರು, ಶೇಷಾದ್ರಿಪುರಂ, ಬೆಂಗಳೂರು 20
9019626612
ಮಂಡಿ, ಬೆನ್ನು, ಕತ್ತುನೋವು, ಕೀಲುನೋವು, ಲಕ್ವ, ಹಿಮ್ಮಡಿ ನೋವು, ಟೆನ್ನಿಸ್ ಎಲಬೋ ಪೇನ್, ತಲೆನೋವು, ಮೈಗ್ರೇನ್, ಮಾನಸಿಕ ಸಮಸ್ಯೆ, ಚಿಕನ್‌ಗುನ್ಯ ಗಂಟುನೋವು, ರೊಮೆಟೆಡ್ ಅರ್ಥೈಟಿಸ್, ವೆರಿಕೋಸ್ ವೇಯನ್ಸ್ ಸಮಸ್ಯೆ ಕಾಲುಗಳಲ್ಲಿ ಊತ ಮತ್ತು ರಕ್ತ ಚಲನೆ ಇಲ್ಲದವರಿಗೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ, ಸಯಾಟಕ್, ಮೂಳೆ ನೋವುಗಳಿಗೆ ಯಾವುದೇ ರೀತಿಯ ಔಷಧಿ ಇಲ್ಲದೆ, ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಇಲ್ಲದೆ ವಿಶೇಷವಾದ A C U ಎಲೆಕ್ಟೋ ಮ್ಯಾಗ್ನೆಟಿಕ್ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ.

ಪಾಶ್ವವಾಯು ಪೀಡಿತರಿಗೆ ದೇಶೀಯ ಚಿಕಿತ್ಸೆ
ಸೂಚನೆ : ಪಾರ್ಶ್ವವಾಯುವಿಗೆ ಗುರಿಯಾಗಿ ಒಂದು ವರ್ಷದಿಂದ ಮೇಲ್ಪಟ್ಟ ವಯೋವೃದ್ಧಿಯಾಗಿ ಬಾಯಿಯ ಮುಖಾಂತರ ಔಷಧಿಯನ್ನು ಸೇವಿಸಲು ಸಾಧ್ಯವಾಗುವಂತಹ ರೋಗಿಗಳಿಗೆ ಮಾತ್ರ ಈ ಚಿಕಿತ್ಸೆ ಮಾಡಲಾಗುವುದು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ. 14,000-18,000. 8951315839, 7022770052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣವೇ ಬೇಕಾಗಿದ್ದಾರೆ. ಹಳದಿ ಬೋರ್ಡ್ ವಾಹನಕ್ಕೆ ಹಳದಿ ಬೋರ್ಡ್ ಪರವಾನಗಿ ಹೊಂದಿರುವ ಹಾಗೂ ಕನಿಷ್ಠ 2 ವರ್ಷಗಳ ಚಾಲನಾ ಅನುಭವವಿರುವ ಚಾಲಕರು ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ಪ್ರೋತ್ಸಾಹ ಧನ ನೀಡಲಾಗುತ್ತದೆ. ಕೂಡಲೇ ಸಂಪರ್ಕಿಸಿ : 9886630796, 9686119888

ಭವಿಷ್ಯ

Astrology

(ಪ್ರೇಮ ಭವಿಷ್ಯ) LOVE BREAKUP ಸ್ತ್ರೀಲೈಂಗಿಕ ಸಂಭೋಗ ವಶೀಕರಣ ಶತ್ರುಉಚ್ಚಾಟನೆ ಶತ್ರುಸ್ತಂಭನ ಶತ್ರುಸರ್ವನಾಶ ಇಷ್ಟಪಟ್ಟವರು ನಿಮ್ಮಂತೆ ಆಗಲು ಗಂಡಹೆಂಡತಿ ಸಮಸ್ಯೆ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ವೈಯಕ್ತಿಕ

Change of Name

WE, SURESH M & Geetha Suresh, resident of C-1005, Brigade Gardenia J P Nagar, 7th Phase, Bangalore 560078, hereby declare that our minor son's name has been changed from AVANISH VAIBHAV SURESH to AVANIISH VAIBHAV SURESSH, vide affidavit dated 16 April, 2025, sworn before Notary, ARAVIND PATIL, Bangalore 560011.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 | 080-45557163/164

ರಜತ್ ಪಾಟೀದಾರ್ ಪಡೆಗೆ ಸನ್‌ರೈಸರ್ಸ್ ಸವಾಲು ಇಂದು • ವಿರಾಟ್ ಕೊಹ್ಲಿ ಆಕರ್ಷಣೆ

ಆರ್‌ಸಿಬಿಗೆ ಅಗ್ರಸ್ಥಾನದ ಮೇಲೆ ಕಣ್ಣು

ಲಖನೌ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಅಂಕಪಟ್ಟಿಯ ಅಗ್ರಸ್ಥಾನದ ಮೇಲೆ ಕಣ್ಣಿಟ್ಟಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶುಕ್ರವಾರ ಸನ್‌ರೈಸರ್ಸ್ ಹೈದರಾಬಾದ್ ಎದುರು ಕಣಕ್ಕಿಳಿಯಲಿದೆ.

ಏಕನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಮಳೆ ಬರುವ ಮುನ್ಸೂಚನೆಯ ಕಾರಣದಿಂದಾಗಿ ಈ ಪಂದ್ಯವನ್ನು ಬೆಂಗಳೂರಿನಿಂದ ಇಲ್ಲಿಗೆ ಸ್ಥಳಾಂತರವಾಗಿದೆ. ಮೇ 17ರಂದು ಇಲ್ಲಿ ಆಯೋಜಿಸಲಾಗಿದ್ದ ಆರ್‌ಸಿಬಿ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ಪಂದ್ಯವು ಮಳೆಗೆ ಕೊಚ್ಚಿ ಹೋಗಿತ್ತು. ಟಾಸ್ ಕೂಡ ಮಾಡಲು ಸಾಧ್ಯವಾಗಿರಲಿಲ್ಲ. ಆರ್‌ಸಿಬಿಗೆ ಲೀಗ್ ಹಂತದಲ್ಲಿ ಇನ್ನೆರಡು ಪಂದ್ಯಗಳು ಬಾಕಿ ಇವೆ. ಆದ್ದರಿಂದ ಅಗ್ರ ಎರಡು ತಂಡಗಳಲ್ಲಿ ಸ್ಥಾನ ಪಡೆಯುವ ಅವಕಾಶ ಇನ್ನೂ ಇದೆ. ಸದ್ಯ 12 ಪಂದ್ಯಗಳಿಂದ 17 ಅಂಕಗಳನ್ನು ಗಳಿಸಿದೆ. 2016ರ ಟೂರ್ನಿಯ ಲೀಗ್ ಹಂತದಲ್ಲಿ ಅಗ್ರ ಎರಡರಲ್ಲಿ ಸ್ಥಾನ ಪಡೆದಿತ್ತು. ಅದರ ನಂತರ ಈ ಸಲ ನಿರೀಕ್ಷೆ ಗರಿಗೆದರಿದೆ.

ಭಾರತ ಮತ್ತು ಪಾಕಿಸ್ತಾನ ನಡುವಣ ಸೇನಾ ಸಂಘರ್ಷದ ಕಾರಣಕ್ಕೆ ಟೂರ್ನಿಗೆ ಒಂದು ವಾರ ಬಿಡುವು ನೀಡಲಾಗಿತ್ತು. ಆದರೆ ಆರ್‌ಸಿಬಿಗೆ ಬಹುತೇಕ 20 ದಿನಗಳ ವಿರಾಮ ಸಿಕ್ಕಂತಾಗಿದೆ. ಮೇ 3ರಂದು ಚೆನ್ನೈ ಸೂಪರ್ ಕಿಂಗ್ಸ್ ಎದುರು ಆಡಿದ ನಂತರ ಮತ್ತೆ ಕಣಕ್ಕಿಳಿದಿಲ್ಲ. ಈ ಬಾರಿ ತಂಡದ ಸಂಯೋಜನೆ ಚೆನ್ನಾಗಿದೆ. ಆಟಗಾರರು ಉತ್ತಮ ಲಯ ದಲ್ಲಿಯೂ ಇದ್ದಾರೆ. ಆದ್ದರಿಂದ ಚೊಚ್ಚಲ ಪ್ರಶಸ್ತಿ ಗೆಲ್ಲುವ ಭರವಸೆಯೂ ಮೂಡಿದೆ.

ಅದಕ್ಕೆ ತಕ್ಕಂತೆ ತಂಡದ ಸೂಪರ್‌ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಅಮೋಘ ಫಾರ್ಮ್‌ನಲ್ಲಿದ್ದಾರೆ. 11 ಇನಿಂಗ್ಸ್‌ಗಳಿಂದ ಏಳು ಅರ್ಧಶತಕ ಗಳಿಸಿದ್ದಾರೆ. ಆರಂಭಿಕ ಆಟಗಾರನಾಗಿ ಉತ್ತಮ ಕಾಣಿಕೆ ನೀಡಿದ್ದಾರೆ.

ಟಿಮ್ ಡೇವಿಡ್ ಮತ್ತು ರೊಮೆರಿಯೊ ಶೆಫರ್ಡ್ ಅವರು ತಮ್ಮ 'ಪವರ್ ಪ್ಲೇ' ಮೂಲಕ ತಂಡದ ಬಲ ಇಮ್ಮಡಿಗೊಳಿಸಿದ್ದಾರೆ. ನಾಯಕ ರಜತ್ ಪಾಟೀದಾರ್ ಅವರು ತಮ್ಮ ಮೊದಲ ಐದು ಪಂದ್ಯಗಳಲ್ಲಿ 37.2 ಸರಾಸರಿಯಲ್ಲಿ ರನ್ ಗಳಿಸಿದ್ದರು. ಆದರೆ ನಂತರದ ಐದು ಹಣಾಹಣಿ ಗಳಲ್ಲಿ ಅವರ ಫಾರ್ಮ್ ಕುಂದಿತ್ತು. 10.6ರ ಸರಾಸರಿಯಲ್ಲಿ ರನ್ ಗಳಿಸಿದ್ದಾರೆ. ಚೆನ್ನೈ ಎದುರಿನ ಪಂದ್ಯದಲ್ಲಿ ರಜತ್ ಕೈಬೆರಳಿಗೆ ಗಾಯವೂ ಆಗಿತ್ತು.

ಎಡಗೈ ಸ್ಪಿನ್ನರ್ ಕೃಣಾಲ್ ಪಾಂಡ್ಯ ಮತ್ತು ಸುಯಶ್ ಶರ್ಮಾ ಅವರು ಪಂದ್ಯಗಳನ್ನು ಗೆದ್ದು ಕೊಡುವ ಸಮರ್ಥರಾಗಿ ದ್ದಾರೆ. ವೇಗದ ವಿಭಾಗದಲ್ಲಿ ಯಶ್ ದಯಾಳ್ ಮತ್ತು ಜೋಷ್ ಹೇಜಲ್‌ವುಡ್ ಅವರು ಆರಂಭಿಕ ಮತ್ತು ಕೊನೆಯ ಹಂತದ ಸ್ಪೆಲ್‌ಗಳಲ್ಲಿ ಅಮೋಘವಾಗಿ ಬೌಲಿಂಗ್ ಮಾಡಿದ್ದಾರೆ. ಆದರೆ ಭುಜದ ಗಾಯದ ಚಿಕಿತ್ಸೆಗಾಗಿ ತೆರಳಿರುವ ಹೇಜಲ್‌ವುಡ್ ಈ ಪಂದ್ಯಕ್ಕೆ ಮರಳುವುದು ಖಚಿತವಿಲ್ಲ. ಈ ಬಾರಿ ಆರ್‌ಸಿಬಿ ತಂಡವು ತವರಿನಾಚೆ ಆಡಿರುವ ಎಲ್ಲ ಪಂದ್ಯಗಳಲ್ಲಿಯೂ ಗೆದ್ದಿದೆ.

ಹೋದ ವರ್ಷದ ರನ್ನರ್ಸ್ ಅಪ್ ಸನ್‌ರೈಸರ್ಸ್ ಹೈದರಾಬಾದ್ ತಂಡವು ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿದೆ. ಈಚೆಗೆ ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಸಮಾಧಾನಕರ ಜಯ ಸಾಧಿಸಿತ್ತು. ಅದೇ ಗೆಲುವಿನ ಲಯವನ್ನು ಮುಂದು ವರಿಸುವತ್ತ ಹೈದರಾಬಾದ್ ಚಿತ್ತ ನೆಟ್ಟಿದೆ. ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ, ಇಶಾನ್ ಕಿಶನ್, ಹೆನ್ರಿಚ್ ಕ್ಲಾಸನ್, ಕಮಿಂದು ಮೆಂಡಿಸ್ ಮತ್ತು ಆಲ್‌ರೌಂಡರ್ ನಿತೀಶ್‌ಕುಮಾರ್ ರೆಡ್ಡಿ ಅವರು ಉತ್ತಮ ಕಾಣಿಕೆ ನೀಡಬಲ್ಲ ಸಮರ್ಥರು. ನಾಯಕ ಪ್ಯಾಟ್‌ಕಮಿನ್ಸ್ ಮಾರ್ಗದರ್ಶನದ ಬೌಲಿಂಗ್ ಪಡೆಯೂ ಆರ್‌ಸಿಬಿ ಬ್ಯಾಟರ್‌ಗಳಿಗೆ ಸವಾಲೊಡ್ಡಲು ಸಿದ್ಧವಾಗಿದೆ.

ಸನ್‌ರೈಸರ್ಸ್ ಹೈದರಾಬಾದ್ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಹರ್ಷಲ್ ಪಟೇಲ್ – ಎಎಫ್‌ಪಿ ಚಿತ್ರ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ನಾಯಕ ರಜತ್, ಸಾಲ್ಟ್ ಫಿಟ್

ಲಖನೌ (ಪಿಟಿಐ): ನಾಯಕ ರಜತ್ ಪಾಟೀದಾರ್ ಮತ್ತು ಆರಂಭಿಕ ಬ್ಯಾಟರ್ ಫಿಲ್ ಸಾಲ್ಟ್ ಗಾಯದಿಂದ ಗುಣಮುಖರಾಗಿದ್ದು ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ.

'ರಜತ್ ಅವರ ಬಲಗೈ ಬೆರಳಿಗೆ ಜೋರಾಗಿಯೇ ಪೆಟ್ಟಾಗಿತ್ತು. ಈಗ ಚೇತರಿಸಿಕೊಂಡಿದ್ದಾರೆ. ಬ್ಯಾಟಿಂಗ್ ಮಾಡಲು ಸಿದ್ಧರಾಗಿದ್ದಾರೆ. ದೀರ್ಘ ಬಿಡುವು ಲಭಿಸಿದ್ದರಿಂದ ಫಿಲ್ ಸಾಲ್ಟ್ ಕೂಡ ಫಿಟ್ ಆಗಿದ್ದಾರೆ' ಎಂದು ಆರ್‌ಸಿಬಿ ಮುಖ್ಯ ಕೋಚ್ ಆ್ಯಂಡಿ ಫ್ಲವರ್ ತಿಳಿಸಿದ್ದಾರೆ.

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಜಿಟಿ	13	9	4	0	18	0.602
ಆರ್‌ಸಿಬಿ	12	8	3	1	17	0.482
ಪಿಬಿಕೆಎಸ್	12	8	3	1	17	0.389
ಎಂಐ	13	8	5	0	16	1.292
ಡಿಸಿ	13	6	6	1	13	-0.019
ಎಲ್‌ಎಸ್‌ಜಿ	13	6	7	0	12	-0.337
ಕೆಕೆಆರ್	13	5	6	2	12	0.193
ಎಸ್‌ಆರ್‌ಎಚ್	12	4	7	1	9	-1.005
ಆರ್‌ಆರ್	14	4	10	0	8	-0.549
ಸಿಎಸ್‌ಕೆ	13	3	10	0	6	-1.030

ಆರೇಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 638 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ (ಜಿಟಿ) 21 ವಿಕೆಟ್

ಆರ್‌ಸಿಬಿಗೆ ಬೆಥೆಲ್ ಬದಲು ಸೀಫರ್ಟ್

ನವದೆಹಲಿ (ಪಿಟಿಐ): ಜೇಕಬ್ ಬೆಥೆಲ್ ಅವರು ಐಪಿಎಲ್ ಪ್ಲೇ ಆಫ್‌ಗೆ ಮೊದಲು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಿಂದ ನಿರ್ಗಮಿಸುವ ಕಾರಣ ತಂಡವು ಅವರ ಸ್ಥಾನಕ್ಕೆ ಟಿಮ್ ಸೀಫರ್ಟ್ ಅವರನ್ನು ಸೇರ್ಪಡೆ ಮಾಡಿಕೊಂಡಿದೆ. ಈ ಬದಲಾವಣೆ ಮೇ 24ರಿಂದ ಅನ್ವಯವಾಗಲಿದೆ ಎಂದು ಬಿಸಿಸಿಐ ಹೇಳಿಕೆ ತಿಳಿಸಿದೆ.

ಬೆಥೆಲ್ ಅವರು ವೆಸ್ಟ್ ಇಂಡೀಸ್ ವಿರುದ್ಧ ಆಡುವ ಇಂಗ್ಲೆಂಡ್ ತಂಡಕ್ಕೆ ಸೇರ್ಪಡೆಗೊಂಡಿದ್ದಾರೆ.

ನ್ಯೂಜಿಲೆಂಡ್‌ನ ವಿಕೆಟ್ ಕೀಪರ್– ಬ್ಯಾಟರ್ ಆಗಿರುವ ಸೀಫರ್ಟ್ 66 ಟಿ20 ಪಂದ್ಯಗಳಿಂದ1540 ರನ್ ಗಳಿಸಿದ್ದಾರೆ.

ಅವರು ₹2 ಕೋಟಿ ಮೊತ್ತಕ್ಕೆ ಆರ್‌ಸಿಬಿ ತಂಡವನ್ನು ಸೇರಿಕೊಳ್ಳಲಿದ್ದಾರೆ.

ಬೆಥೆಲ್ ಶುಕ್ರವಾರ ಆರ್‌ಸಿಬಿ ಪರ (ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ) ತಮ್ಮ ಕೊನೆಯ ಪಂದ್ಯ ಆಡಲಿದ್ದಾರೆ. ಆರ್‌ಸಿಬಿಯ ಕೊನೆಯ ಲೀಗ್ ಪಂದ್ಯ ಮೇ 27ರಂದು (ಲಖನೌ ಸೂಪರ್ ಜೈಂಟ್ಸ್ ವಿರುದ್ಧ) ನಡೆಯಲಿದೆ.

ಟಿಮ್ ಸೀಫರ್ಟ್

ಲಖನೌಗೆ ಮಣಿದ ಗುಜರಾತ್

ಮಾರ್ಷ್ ಮಿಂಚಿನ ಶತಕ • ರೂರ್ಕಿಗೆ ಮೂರು ವಿಕೆಟ್

ಅಹಮದಾಬಾದ್ (ಪಿಟಿಐ): ಆರಂಭಿಕ ಆಟಗಾರ ಮಿಚೆಲ್ ಮಾರ್ಷ್ (117; 64ಎ, 4x10, 6x8) ಅವರ ಅಮೋಘ ಶತಕದ ಬಳಿಕ ನ್ಯೂಜಿಲೆಂಡ್‌ನ ವೇಗಿ ವಿಲ್ ಓ ರೂರ್ಕಿ (27ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡವು ಗುರುವಾರ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ 33 ರನ್‌ಗಳ ಸಮಾಧಾನಕರ ಗೆಲುವು ಪಡೆಯಿತು.

ಪ್ಲೇ ಆಫ್‌ಗೆ ಈಗಾಗಲೇ ಅರ್ಹತೆ ಪಡೆದಿರುವ ಗುಜರಾತ್ ತಂಡವು ಈ ಸೋಲಿನ ಹೊರತಾಗಿಯೂ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದೆ. ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿರುವ ಲಖನೌ ಸತತ ನಾಲ್ಕು ಸೋಲಿನ ಬಳಿಕ ಗೆಲುವಿನ ಹಳಿಗೆ ಮರಳಿತು. ಉಭಯ ತಂಡಗಳಿಗೆ ಲೀಗ್‌ನಲ್ಲಿ ತಲಾ ಒಂದು ಪಂದ್ಯ ಬಾಕಿಯಿದೆ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಾರ್ಷ್ ಮತ್ತು ನಿಕೊಲಸ್ ಪೂರನ್ (ಅಜೇಯ 56; 27ಎ, 4x4, 6x5) ಅವರ ಜೊತೆಯಾಟದ ನೆರವಿನಿಂದ ಲಖನೌ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 235 ರನ್ ಗಳಿಸಿತು.

ಗುರಿಯನ್ನು ಬೆನ್ನಟ್ಟಿದ ಗುಜರಾತ್ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 202 ರನ್ ಗಳಿಸಿ ಹೋರಾಟ ಮುಗಿಸಿತು. ಮಧ್ಯಮ ಕ್ರಮಾಂಕದಲ್ಲಿ ಶಾರೂಕ್ ಖಾನ್ (57; 29ಎ, 4x5, 6x3) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ.

ಆರಂಭಿಕ ಬ್ಯಾಟರ್‌ಗಳಾದ ಸಾಯಿ ಸುದರ್ಶನ್ (21) ಮತ್ತು ನಾಯಕ ಶುಭಮನ್ ಗಿಲ್ (35;20ಎ) ಅವರು ಬೇಗನೇ ನಿರ್ಗಮಿಸಿದರು. ನಂತರ ಬಂದ ಜೋಸ್ ಬಟ್ಲರ್ (33;18) ಮತ್ತು ಶೆರ್ಫೆನ್ ರುದರ್‌ಫೋರ್ಡ್ (38;22ಎ) ಕೊಂಚ ಪ್ರತಿರೋಧ ತೋರಿದರು.

ಬಟ್ಲರ್ ನಿರ್ಗಮನದ ಬಳಿಕ ಶೆರ್ಫೆನ್ ಜೊತೆಗೂಡಿದ ಶಾರೂಕ್ ಗುಜರಾತ್ ತಂಡಕ್ಕೆ ಗೆಲುವಿನ ಆಸೆ ಚಿಗುರಿಸಿದರು. ಅವರಿಬ್ಬರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 86 (40ಎ) ಸೇರಿಸಿದರು. ಆದರೆ, 17ನೇ ಓವರ್‌ನಲ್ಲಿ ದಾಳಿಗಿಳಿದ ರೂರ್ಕಿ ಅವರು ಶೆರ್ಫೆನ್ ವಿಕೆಟ್ ಪಡೆದು ಜೊತೆಯಾಟ ಮುರಿದರು. ಅಲ್ಲದೆ, ಅದೇ ಓವರ್‌ನಲ್ಲಿ ರಾಹುಲ್ ತೆವಾಟಿಯಾ ಅವರಿಗೆ ಪೆವಿಲಿಯನ್ ದಾರಿ ತೋರಿಸಿದ್ದರಿಂದ ಪಂದ್ಯ ಮತ್ತೆ ಲಖನೌದತ್ತ ವಾಲಿತು. ನಂತರ ಗುಜರಾತ್ ತಂಡ ಚೇತರಿಸಿಕೊಳ್ಳಲಿಲ್ಲ.

ಮಾರ್ಷ್ ಅಬ್ಬರ: ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್ ಇಳಿದ ಲಖನೌ ತಂಡಕ್ಕೆ ಆರಂಭಿಕ ಬ್ಯಾಟರ್ ಮಾರ್ಷ್ ಮತ್ತು ಏಡನ್ ಮರ್ಕರಂ (36; 24ಎ) ಭರ್ಜರಿ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 91 ರನ್ ಗಳಿಸಿದರು. ಸ್ಪಿನ್ನರ್ ಸಾಯಿಕಿಶೋರ್ ಬೌಲಿಂಗ್‌ನಲ್ಲಿ ಶಾರೂಕ್ ಖಾನ್ ಪಡೆದ ಕ್ಯಾಚ್‌ಗೆ ಮರ್ಕರಂ ಔಟಾದರು.

ಮಾರ್ಷ್ ಜೊತೆಗೂಡಿದ ಪೂರನ್ ಬೀಸಾಟ ಆರಂಭಿಸಿದರು. ರನ್‌ಗಳು ಸರಾಗವಾಗಿ ಹರಿದುಬಂದವು. ಪ್ರಸಕ್ತ ಟೂರ್ನಿಯಲ್ಲಿ ಪೂರನ್ ಐದನೇ ಅರ್ಧಶತಕ (23 ಎಸೆತಗಳಲ್ಲಿ) ದಾಖಲಿಸಿದರು. ಮಾರ್ಷ್ 56 ಎಸೆತಗಳಲ್ಲಿ ಐಪಿಎಲ್‌ನ ಚೊಚ್ಚಲ ಶತಕದ ಗಡಿ ಮುಟ್ಟಿದರು. ಇಬ್ಬರೂ ಎರಡನೇ ವಿಕೆಟ್ ಜೊತೆಯಾಟದಲ್ಲಿ 121 ರನ್ (8.3 ಓವರ್‌ಗಳಲ್ಲಿ) ಸೇರಿಸಿದರು.

ಲಖನೌ ತಂಡದ ಬ್ಯಾಟರ್‌ಗಳು ಒಟ್ಟು 17 ಸಿಕ್ಸರ್‌ಗಳನ್ನು ಸಿಡಿಸಿದರು. ಲಖನೌ ತಂಡದ ಮಟ್ಟಿಗೆ ಇದು ಪಂದ್ಯವೊಂದರಲ್ಲಿ ಗರಿಷ್ಠ ಸಿಕ್ಸರ್‌ಗಳ ದಾಖಲೆಯಾಗಿದೆ.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 235 (ಏಡನ್ ಮರ್ಕರಂ 36, ಮಿಚೆಲ್ ಮಾರ್ಷ್ 117, ನಿಕೊಲಸ್ ಪೂರನ್ ಔಟಾಗದೇ 56, ರಿಷಭ್ ಪಂತ್ ಔಟಾಗದೇ 16, ಅರ್ಷದ್ ಖಾನ್ 36ಕ್ಕೆ1, ಸಾಯಿಕಿಶೋರ್ 34ಕ್ಕೆ1). ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 202 (ಸಾಯಿ ಸುದರ್ಶನ್ 21, ಶುಭಮನ್ ಗಿಲ್ 35, ಜೋಸ್ ಬಟ್ಲರ್ 33, ಶೆರ್ಫೆನ್ ರುದರ್‌ಫೋರ್ಡ್ 38, ಶಾರೂಕ್ ಖಾನ್ 57; ವಿಲ್ ಓ ರೂರ್ಕಿ 27ಕ್ಕೆ 3, ಆವೇಶ್ ಖಾನ್ 51ಕ್ಕೆ 2, ಆಯುಷ್ ಬದೋನಿ 4ಕ್ಕೆ 2). ಪಂದ್ಯದ ಆಟಗಾರ: ಮಿಚೆಲ್ ಮಾರ್ಷ್.

ಲಖನೌ ತಂಡದ ಮಿಚೆಲ್ ಮಾರ್ಷ್ ಮತ್ತು ನಿಕೊಲಸ್ ಪೂರನ್ –ಎಎಫ್‌ಪಿ ಚಿತ್ರ

ಕ್ಯಾನ್ಸರ್ ಜಾಗೃತಿಗಾಗಿ ತಿಳಿನೇರಳೆ ಪೋಷಾಕು

ಕ್ಯಾನ್ಸರ್ ಜಾಗೃತಿಗಾಗಿ ಗುಜರಾತ್ ಟೈಟನ್ಸ್ ತಂಡದ ಆಟಗಾರರು ಲಖನೌ ಎದುರಿನ ಪಂದ್ಯದಲ್ಲಿ ತಿಳಿನೇರಳೆ ಬಣ್ಣದ ಪೋಷಾಕು ಧರಿಸಿ ಆಡಿದರು.

ಕಳೆದ ಮೂರು ವರ್ಷಗಳಿಂದ ತಂಡವು ಈ ಜಾಗೃತಿ ಅಭಿಯಾನವನ್ನು ಮಾಡುತ್ತಿದೆ. ಪಂದ್ಯದ ಸಂದರ್ಭದಲ್ಲಿ ಅಭಿಮಾನಿಗಳಿಗೆ 30 ಸಾವಿರ ತಿಳಿನೇರಳೆ ಬಣ್ಣದ ಬಾವುಟಗಳು ಮತ್ತು 10 ಸಾವಿರ ಜೆರ್ಸಿಗಳನ್ನು ವಿತರಿಸಲಾಯಿತು ಎಂದು ತಂಡದ ಮೂಲಗಳು ತಿಳಿಸಿವೆ.

ಡೆಲ್ಲಿ ವೇಗದ ಬೌಲರ್ ಮುಕೇಶ್ ಕುಮಾರ್‌ಗೆ ದಂಡ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ವಿರುದ್ಧ ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದ ವೇಳೆ ಅನುಚಿತ ವರ್ತನೆಗಾಗಿ ಡೆಲ್ಲಿ ಕ್ಯಾಪಿಟಲ್ಸ್ ವೇಗಿ ಮುಕೇಶ್ ಕುಮಾರ್ ಅವರಿಗೆ ಪಂದ್ಯ ಸಂಭಾವನೆಯ ಶೇ 10ರಷ್ಟು ದಂಡ ವಿಧಿಸಲಾಗಿದೆ. ಅವರ ಶಿಸ್ತಿನ ದಾಖಲೆಗೆ ಒಂದು ಡಿಮೆರಿಟ್ ಪಾಯಿಂಟ್ ಸೇರಿಸಲಾಗಿದೆ.

ಶಿಸ್ತುಸಂಹಿತೆಯ 2.2ರ ವಿಧಿಯ ಅಡಿ ಅವರು ಒಂದನೇ ಹಂತದ ತಪ್ಪು ಮಾಡಿದ್ದಾರೆ ಎಂದು ಐಪಿಎಲ್ ಪ್ರಕಟಣೆ ತಿಳಿಸಿದೆ. ಈ ವಿಧಿಯು, ಆಟಗಾರರು ಕ್ರಿಕೆಟ್ ಪರಿಕರಗಳನ್ನು ಸಿಟ್ಟಿನಿಂದ ನೆಲಕ್ಕೆ ಬಿಸಾಕುವುದು, ಅಥವಾ ಮೈದಾನದ ಸಲಕರಣೆ ಅಥವಾ ಬಟ್ಟೆಬರೆ ಹಾಳುಮಾಡುವುದಕ್ಕೆ ಸಂಬಂಧಿಸಿದೆ.

'ರಾಜವಂಶಸ್ಥರಿಗೆ ₹3400 ಕೋಟಿ ಕೊಡಿ'

ಒಂದನೇ ಪುಟದಿಂದ...

ಮೈಸೂರು ರಾಜವಂಶಸ್ಥರ ಪರವಾಗಿ ವಕೀಲೆ ನಯನಾತಾರಾ ಬಿ.ಜಿ. ಹಾಗೂ ಇತರರು ಪ್ರತಿನಿಧಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಗಳನ್ನು ಪೀಠ ವಿಲೇವಾರಿ ಮಾಡಿದೆ.

ಅರಮನೆ ಮೈದಾನ ಒಟ್ಟು 472 ಎಕರೆ 16 ಗುಂಟೆ ಜಾಗ ಹೊಂದಿದೆ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ ಮತ್ತು ಇತರರು ಸಲ್ಲಿಸಿದ ನ್ಯಾಯಾಂಗ ನಿಂದನೆ ಅರ್ಜಿಗಳು ಮತ್ತು ಇತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು. ಆ ಆದೇಶದ ಪ್ರಕಾರ ಕರ್ನಾಟಕ ಸ್ಟ್ಯಾಂಪ್ ಕಾಯ್ದೆಯ ಸೆಕ್ಷನ್ 45 ಬಿ ಗೆ ಅನುಗುಣವಾಗಿ ಅರಮನೆ ಮೈದಾನಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಗುಣವಾಗಿ ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಅರಮನೆ ಜಾಗವನ್ನು ಮೌಲ್ಯೀಕರಿಸಿ, ವರ್ಗಾವಣೆ ಮಾಡಬಹುದಾದ ಟಿಡಿಆರ್ ನೀಡುವಂತೆ ನಿರ್ದೇಶನ ನೀಡಿತ್ತು.

ಸಣ್ಣ ಜಾಗಕ್ಕೆ ಭಾರಿ ಮೊತ್ತವನ್ನು ಪಾವತಿಸಬೇಕಾದ ಹೊರೆಯಿಂದ ತಪ್ಪಿಸಿಕೊಳ್ಳಲು ಸುಗ್ರೀವಾಜ್ಞೆಯ ಆಸರೆ ಪಡೆಯಲು ಸರ್ಕಾರ ತೀರ್ಮಾನಿಸಿತ್ತು. ಬೆಂಗಳೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ಕಾಯ್ದೆ–1996ಕ್ಕೆ ಸಂಬಂಧಪಟ್ಟ ಸಿವಿಲ್ ಮೇಲ್ಮನವಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಸರ್ಕಾರವು ಮೇಲ್ಮನವಿ ಸಲ್ಲಿಸಿತ್ತು. ಆ ಬಳಿಕ, ₹3,400 ಕೋಟಿಯ ಟಿಡಿಆರ್ ಅನ್ನು ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರ ಠೇವಣಿ ಇಟ್ಟಿತ್ತು. ಈ ಟಿಡಿಆರ್‌ಗಳನ್ನು ರಾಜವಂಶಸ್ಥರಿಗೆ ಹಸ್ತಾಂತರ ಮಾಡಬಾರದು ಎಂದು ರಾಜ್ಯ ಸರ್ಕಾರ ಮಧ್ಯಂತರ ಅರ್ಜಿಯಲ್ಲಿ ಮನವಿ ಮಾಡಿತ್ತು. ವಿಚಾರಣೆ ನಡೆಸಿದ್ದ ಪೀಠ ಮೇ 1ರಂದು ತೀರ್ಪು ಕಾಯ್ದಿರಿಸಿತ್ತು.

ರಾಜ್ಯ ಸರ್ಕಾರದ ಪರವಾಗಿ ಹಿರಿಯ ವಕೀಲರಾದ ಕಪಿಲ್ ಸಿಬಲ್, ರಾಜೀವ್ ಧವನ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಇತರರು ವಾದಿಸಿದ್ದರು.

ಹಿರಿಯ ವಕೀಲರಾದ ಎ.ಕೆ. ಗಂಗೂಲಿ, ರಾಕೇಶ್ ದ್ವಿವೇದಿ, ಮಾಧವಿ ದಿವಾನ್ ಮತ್ತು ಗೋಪಾಲ್ ಶಂಕರನಾರಾಯಣನ್, 'ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ಹಾಗೂ ಬಿಡಿಎ ಆಯುಕ್ತರು ನ್ಯಾಯಾಂಗ ನಿಂದನೆ ಎಸಗಿದ್ದಾರೆ ಎಂದು ಪೀಠವು 2024ರ ಡಿಸೆಂಬರ್ 10ರಂದು ಹೇಳಿತ್ತು' ಎಂದು ಗಮನಕ್ಕೆ ತಂದಿದ್ದರು. ಈ ಅಧಿಕಾರಿಗಳು ವಿಚಾರಣೆ ವೇಳೆ ಕಡ್ಡಾಯವಾಗಿ ಹಾಜರಿರಬೇಕು ಎಂದು ಪೀಠ ಸೂಚಿಸಿತ್ತು.

ಸರ್ಕಾರದ ವಾದವೇನು?

'ರಸ್ತೆ ವಿಸ್ತರಣೆಗೆ 1994ರಲ್ಲಿ ಭೂಸ್ವಾಧೀನ ಮಾಡಲಾಗಿತ್ತು. ಆದರೆ, ಮೌಲ್ಯಮಾಪನವನ್ನು 2004ರ ದರದ ಪ್ರಕಾರ ಮಾಡಲಾಗುತ್ತಿದೆ. 15 ಎಕರೆ ಜಾಗಕ್ಕೆ ಟಿಡಿಆರ್ ನೀಡಲು ಅನುಮತಿಸಿದರೆ, 472 ಎಕರೆಗಳ ಸಂಪೂರ್ಣ ಸ್ವಾಧೀನಕ್ಕೆ ಟಿಡಿಆರ್ ಮೊತ್ತ ಒಂದು ಲಕ್ಷ ಕೋಟಿಗೂ ಹೆಚ್ಚು ಆಗಲಿದೆ. ಇದರಿಂದ, ರಾಜ್ಯದ ಖಜಾನೆಗೆ ಭಾರಿ ಹೊರೆ ಬೀಳಲಿದೆ' ಎಂದು ರಾಜ್ಯ ಸರ್ಕಾರದ ವಕೀಲರು ವಾದಿಸಿದ್ದರು. 'ರಾಜ್ಯ ಹೈಕೋರ್ಟ್‌ನಲ್ಲಿ ಸರ್ಕಾರದ ಪರವಾಗಿ ತೀರ್ಪು ಬಂದಿದೆ. ರಾಜ್ಯ ಸರ್ಕಾರದ ಮುಖ್ಯ ಮೇಲ್ಮನವಿ ಅರ್ಜಿಯನ್ನು ಪೀಠ ವಿಚಾರಣೆ ನಡೆಸಬೇಕು' ಎಂದು ಕೋರಿದ್ದರು.

ಎಲ್ಲೆಲ್ಲಿ 'ಡೇ ಕೇರ್ ಕಿಮೋಥೆರಪಿ' ಕೇಂದ್ರ?

ಜಿಲ್ಲೆ	ಸೇವೆ ಒದಗಿಸುವ ಆಸ್ಪತ್ರೆ
ವಿಜಯಪುರ	ಜಿಲ್ಲಾಸ್ಪತ್ರೆ
ಉಡುಪಿ	ಜಿಲ್ಲಾಸ್ಪತ್ರೆ
ಬಳ್ಳಾರಿ	ಹುಬ್ಬಳ್ಳಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
ಧಾರವಾಡ	ಎಚ್‌ಸಿಜಿ ಆಸ್ಪತ್ರೆ
ಚಿತ್ರದುರ್ಗ	ಹುಬ್ಬಳ್ಳಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
ವಿಜಯನಗರ	ಹುಬ್ಬಳ್ಳಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
ಹಾವೇರಿ	ಹುಬ್ಬಳ್ಳಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
ಬೆಂಗಳೂರು ಗ್ರಾಮಾಂತರ	ಸಂಜೀವಿನಿ ಆಸ್ಪತ್ರೆ
ರಾಮನಗರ	ಸಂಜೀವಿನಿ ಆಸ್ಪತ್ರೆ
ಬೆಂಗಳೂರು ನಗರ	ಸಂಜೀವಿನಿ ಆಸ್ಪತ್ರೆ
ದಕ್ಷಿಣ ಕನ್ನಡ	ಕೆಎಂಸಿ, ಮಂಗಳೂರು
ಮೈಸೂರು	ಕಿದ್ವಾಯಿ ಆಸ್ಪತ್ರೆ
ದಾವಣಗೆರೆ	ಹುಬ್ಬಳ್ಳಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
ತುಮಕೂರು	ಸಿದ್ದಾರ್ಥ ವೈದ್ಯಕೀಯ ಕಾಲೇಜು
ಕೋಲಾರ	ಆರ್.ಎಲ್. ಜಾಲಪ್ಪ ವೈದ್ಯಕೀಯ ಕಾಲೇಜು– ಆಸ್ಪತ್ರೆ
ಬಾಗಲಕೋಟೆ	ನಿಜಲಿಂಗಪ್ಪ ವೈದ್ಯಕೀಯ ಕಾಲೇಜು– ಆಸ್ಪತ್ರೆ

'ಟ್ರಂಪ್ ಹೇಳಿಕೆ: ಮೋದಿ ದಿವ್ಯ ಮೌನ'

ನವದೆಹಲಿ (ಪಿಟಿಐ): 'ವ್ಯಾಪಾರವನ್ನು ಮುಂದಿಟ್ಟುಕೊಂಡು ನಾನು ಪಾಕಿಸ್ತಾನ ಮತ್ತು ಭಾರತ ಮಧ್ಯೆ ನಡೆಯುತ್ತಿದ್ದ ಸಂಘರ್ಷವನ್ನು ನಿಲ್ಲಿಸಿದೆ. ಎರಡೂ ದೇಶಗಳ ಸಂಘರ್ಷ ಶಮನದಲ್ಲಿ ಮಧ್ಯಸ್ಥಿಕೆ ವಹಿಸಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಂಟನೇ ಬಾರಿಗೆ ಹೇಳಿದ್ದಾರೆ. ಆದರೆ, ಪ್ರಧಾನಿ ಮೋದಿ ಮಾತ್ರ ಈ ಬಗ್ಗೆ ದಿವ್ಯ ಮೌನ ವಹಿಸಿದ್ದಾರೆ' ಎಂದು ಕಾಂಗ್ರೆಸ್ ಗುರುವಾರ ದೂರಿದೆ.

ಟ್ರಂಪ್ ಅವರು ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರೊಂದಿಗೆ ಶ್ವೇತಭವನದಲ್ಲಿ ಮಾತುಕತೆ ನಡೆಸಿದರು. ಈ ವೇಳೆ ಭಾರತ–ಪಾಕಿಸ್ತಾನ ಸಂಘರ್ಷ ಶಮನ ಕುರಿತು ಟ್ರಂಪ್ ಮತ್ತೊಮ್ಮೆ ಪ್ರಸ್ತಾಪ ಮಾಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಕಳೆದ 11 ದಿನಗಳಲ್ಲಿ 8ನೇ ಬಾರಿಗೆ ಟ್ರಂಪ್ ಅವರು ಸಂಘರ್ಷ ಶಮನವನ್ನು ನಾನೇ ಮಾಡಿಸಿದ್ದು ಎನ್ನುತ್ತಿದ್ದಾರೆ. ಪಾಕ್ ಪ್ರಧಾನಿ ಮತ್ತು ಭಾರತದ ಪ್ರಧಾನಿ ಮೋದಿ ಅವರನ್ನು ಒಂದೇ ತಟ್ಟೆಯಲ್ಲಿಟ್ಟು ತೂಗುತ್ತಿದ್ದಾರೆ. ಇಷ್ಟೆಲ್ಲಾ ಆಗುತ್ತಿದ್ದರೂ ಟ್ರಂಪ್ ಅಣ್ಣನ ಆತ್ಮೀಯ ಸ್ನೇಹಿತ ಮಾತ್ರ ಸಂಪೂರ್ಣವಾಗಿ ಮೌನ ವಹಿಸಿದ್ದಾರೆ' ಎಂದಿದ್ದಾರೆ.

ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಡಿಜಿಟಲ್ ಸ್ಪರ್ಶ

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಿವೃತ್ತ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರನ್ನು ಕೃಷಿ ಸಚಿವ ಚಲುವರಾಯಸ್ವಾಮಿ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅಭಿನಂದಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಚಾರಣೆಗೆ ಬಾಕಿಯಿರುವ ಪ್ರಕರಣಗಳ ತ್ವರಿತ ವಿಲೇವಾರಿಯಲ್ಲಿ ದೇಶದಲ್ಲಿ ಮೂರನೇ ಸ್ಥಾನದಲ್ಲಿರುವ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವನ್ನು ಮೊದಲನೇ ಸ್ಥಾನಕ್ಕೆ ಕೊಂಡೊಯ್ಯಲಾಗುವುದು. ಅದಕ್ಕಾಗಿ ಡಿಜಿಟಲ್ ಸ್ಪರ್ಶ ನೀಡಲಾಗುವುದು' ಎಂದು ನಿವೃತ್ತ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಹೇಳಿದರು.

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾಗಿ ಗುರುವಾರ ಅಧಿಕಾರ ಸ್ವೀಕರಿಸಿದ ಬಳಿಕ ಅವರು ಮಾತನಾಡಿದರು.

ರಾಜ್ಯ ಆಯೋಗದಲ್ಲಿ ಏಳು ಸಾವಿರ, ಜಿಲ್ಲಾ ವೇದಿಕೆಗಳಲ್ಲಿ ಏಳು ಸಾವಿರ ಪ್ರಕರಣಗಳು ಬಾಕಿ ಉಳಿದಿವೆ. ಇವುಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲಾಗುವುದು. ಕಕ್ಷಿದಾರರಿಗೆ ಶೀಘ್ರ ಮತ್ತು ಪಾರದರ್ಶಕವಾಗಿ ನ್ಯಾಯ ವಿತರಣೆ ಮಾಡಲಾಗುವುದು. ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಆದೇಶಗಳನ್ನು ಆ್ಯಪ್‌ಗಳ ಮೂಲಕ ತಲುಪಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಯೋಜನೆಗಳನ್ನು ಹಂಚಿಕೊಂಡರು.

ಆಯೋಗದ ಆದೇಶಗಳು ಮತ್ತು ಮಾಹಿತಿ ಬೆರಳ ತುದಿಯಲ್ಲಿ ಸಿಗುವಂತೆ ಮಾಡಲಾಗುವುದು. ಖಾಲಿಯಿರುವ ಹುದ್ದೆಗಳ ಭರ್ತಿಗೂ ಕ್ರಮವಹಿಸಲಾಗುವುದು ಎಂದರು.

ಆಯೋಗದ ಪ್ರಭಾರ ಅಧ್ಯಕ್ಷ ರವಿಶಂಕರ್ ಅಧಿಕಾರ ಹಸ್ತಾಂತರಿಸಿದರು. ಆಯೋಗದ ರಿಜಿಸ್ಟ್ರಾರ್ ಮಲ್ಲಿಕಾರ್ಜುನ ಎಂ. ಕಮಟಗಿ, ಆಯೋಗದ ಸದಸ್ಯೆ ಸುನೀತಾ ಬಾಗೇವಾಡಿ ಉಪಸ್ಥಿತರಿದ್ದರು.

ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್: ತಾನ್ಯಾಗೆ ಡಬಲ್ ಸ್ವರ್ಣ

ದಿನಿಧಿಗೆ ಮತ್ತೆರಡು ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಯನ್ ದಿನಿಧಿ ದೇಸಿಂಗು ಅವರು ಎನ್‌ಆರ್‌ಜೆ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಮತ್ತೆರಡು ಚಿನ್ನದ ಪದಕಗಳಿಗೆ ಕೊರಳೊಡ್ಡಿದ್ದಾರೆ.

ಬಸವನಗುಡಿಯ ಕಾರ್ಪೊರೇಷನ್ ಈಜುಕೊಳದಲ್ಲಿ ಕರ್ನಾಟಕ ಈಜು ಸಂಸ್ಥೆ ಆಯೋಜಿಸಿರುವ ಕೂಟದ ಎರಡನೇ ದಿನ ಡಾಲ್ಫಿನ್ ಅಕ್ವೆಟಿಕ್ಸ್‌ನ ದಿನಿಧಿ ಮಹಿಳೆಯರ 50 ಮೀಟರ್ಸ್ ಮತ್ತು 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಪಾರಮ್ಯ ಮೆರೆದರು. ಬುಧವಾರ 100 ಮೀ. ಬಟರ್‌ಫ್ಲೈ ಮತ್ತು 100 ಮೀ. ಫ್ರೀಸ್ಟೈಲ್‌ನಲ್ಲಿ ಸ್ವರ್ಣ ಸಾಧನೆ ಮಾಡಿದ್ದ 15 ವರ್ಷದ ಈಜುಪಟು ಕೂಟದಲ್ಲಿ ಒಟ್ಟು ನಾಲ್ಕು ಚಿನ್ನ ಗೆದ್ದಂತಾಗಿದೆ.

ಜೆಐಆರ್‌ಎಸ್‌ನ ತಾನ್ಯಾ ಎಸ್. ಅವರೂ ಡಬಲ್ ಚಿನ್ನದ ಸಾಧನೆ ಮಾಡಿದರು. ಮಹಿಳೆಯರ 200 ಮೀ. ಮೆಡ್ಲೆ ಮತ್ತು 200 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಅವರು ಅಗ್ರಸ್ಥಾನ ಪಡೆದರು. ಪುರುಷರ

ದಿನಿಧಿ ದೇಸಿಂಗು

4x100 ಮೀ. ಫ್ರೀಸ್ಟೈಲ್ ರಿಲೆ ಮತ್ತು ಮಹಿಳೆಯರ 4x200 ಮೀ. ಫ್ರೀಸ್ಟೈಲ್ ರಿಲೆ ಸ್ಪರ್ಧೆಯಲ್ಲಿ ಬಸವನಗುಡಿ ಅಕ್ವಟಿಕ್ ಸೆಂಟರ್ (ಬಿಎಸಿ) ತಂಡಗಳು ಚಾಂಪಿಯನ್ ಆದವು. ಈಜುಕೂಟಕ್ಕೆ ಶುಕ್ರವಾರ ತೆರೆಬೀಳಲಿದೆ.

ಫಲಿತಾಂಶ: ಪುರುಷರು: 200 ಮೀ. ಬ್ರೆಸ್ಟ್‌ಸ್ಟ್ರೋಕ್: ಮಣಿಕಂಠ ಎನ್ (ಕಾಲ:- 2ನಿ.23.28ಸೆ)–1, ಸೂರ್ಯ ಜೋಯಪ್ಪ–2, ಡೇನಿಯಲ್ ಪಾಲ್ ಜೆ. (ಮೂವರು ಬಿಎಸಿ)–3. 50 ಮೀ. ಫ್ರೀಸ್ಟೈಲ್: ತನಿಶ್ ಜಾರ್ಜ್ ಮ್ಯಾಥ್ಯೂ (ಕಾಲ:23.51ಸೆ)–1, ಆಕಾಶ್ ಮಣಿ–2, ಪೃಥ್ವಿ ಎಂ. (ಮೂವರು ಬಿಎಸಿ)–3. 200 ಮೀ.ಬಟರ್‌ಫ್ಲೈ: ದರ್ಶನ್ ಎಸ್. (ಕಾಲ: 2ನಿ.08.02ಸೆ)–1, ಅನೀಶ್ ಎಸ್. ಗೌಡ (ಇಬ್ಬರು ಬಿಎಸಿ)–2, ರಾಘವ್ ಸ್ವಚಂದಂ (ಲಕ್ಷ್ಯನ್ ಸ್ವಿಮ್ಮಿಂಗ್)–3. 200 ಮೀ. ಫ್ರೀಸ್ಟೈಲ್: ಅನೀಶ್ ಎಸ್.ಗೌಡ (ಕಾಲ: 1ನಿ.52.41ಸೆ)–1, ದಕ್ಷಣ್ ಎಸ್.–2, ತನಿಶ್ ಜಾರ್ಜ್ ಮ್ಯಾಥ್ಯೂ (ಮೂವರು ಬಿಎಸಿ)–3. 50 ಮೀ. ಬಟರ್‌ಫ್ಲೈ: ಚಿಂತನ್ ಎಸ್. ಶೆಟ್ಟಿ (ಲಕ್ಷ್ಮನ್; ಕಾಲ: 25.41ಸೆ)–1, ಪೃಥ್ವಿ ಎಂ. (ಗ್ಲೋಬಲ್ ಸ್ವಿಮ್ ಸೆಂಟರ್ (25.50ಸೆ)–2, ಇಶಾನ್ ಮೆಹ್ರಾ (ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್)–3. 200 ಮೀ. ಮೆಡ್ಲೆ: ಶಾನ್ ಗಂಗೂಲಿ (ಕಾಲ: 2ನಿ.09.27ಸೆ)–1, ಶಿವ ಶ್ರೀಧರ್–2, ಶಿವಾಂಕ್ ವಿಶ್ವನಾಥ್ (ಮೂವರು ಬಿಎಸಿ)–3. 800 ಮೀ. ಫ್ರೀಸ್ಟೈಲ್: ದಕ್ಷಣ್ ಎಸ್. (ಕಾಲ: 8ನಿ.26.67ಸೆ)–1, ಅನೀಶ್ ಎಸ್. ಗೌಡ–2, ಶಿವಾಂಕ್ ವಿಶ್ವನಾಥ್ (ಮೂವರು ಬಿಎಸಿ)–3. 4x100 ಫ್ರೀಸ್ಟೈಲ್ ರಿಲೆ: ಬಸವನಗುಡಿ ಅಕ್ವಟಿಕ್ ಸೆಂಟರ್ 'ಎ' (ಕಾಲ: 3ನಿ.38.36ಸೆ)–1, ಡಾಲ್ಫಿನ್ ಅಕ್ವಟಿಕ್ಸ್–2, ಬಸವನಗುಡಿ 'ಬಿ'–3

ಮಹಿಳೆಯರು: 200 ಮೀ. ಬ್ರೆಸ್ಟ್‌ಸ್ಟ್ರೋಕ್: ತಾನ್ಯಾ ಎಸ್. (ಜೆಐಆರ್‌ಎಸ್; ಕಾಲ: 2ನಿ.43. 13ಸೆ)–1, ಲಕ್ಷ್ಯಾ ಎಸ್. (ಬಿಎಸಿ)–2, ಹಿತೈಷಿ ವಿ. (ವಿಜಯನಗರ ಅಕ್ವಟಿಕ್ ಸೆಂಟರ್)–3. 50 ಮೀ. ಫ್ರೀಸ್ಟೈಲ್: ದಿನಿಧಿ ದೇಸಿಂಗು (ಕಾಲ: 27.11ಸೆ), ರುತುಜಾ ಎಸ್–2, ನೀನಾ ವೆಂಕಟೇಶ್ (ಮೂವರು ಡಾಲ್ಫಿನ್)–3. 200 ಮೀ. ಬಟರ್‌ಫ್ಲೈ: ಜೇಡಿದಾ ಎ. (ಗ್ಲೋಬಲ್ ಸ್ವಿಮ್ ಸೆಂಟರ್; ಕಾಲ: 2ನಿ.29.27ಸೆ)–1, ಸುಹಾಸಿನಿ ಘೋಷ್ (ಡಾಲ್ಫಿನ್)–2, ಅಂಜಲಿ ಹೊಸಕೆರೆ (ಬಿಎಸಿ)–3. 200 ಮೀ. ಫ್ರೀಸ್ಟೈಲ್: ದಿನಿಧಿ ದೇಸಿಂಗು (ಡಾಲ್ಫಿನ್; ಕಾಲ: 2ನಿ.06. 22ಸೆ)–1, ತ್ರಿಶಾ ಸಿಂಧು ಎಸ್ (ಗ್ಲೋಬಲ್)–2, ಶಿರಿನ್ (ಬಿಎಸಿ)–3. 50 ಮೀ. ಬಟರ್‌ಫ್ಲೈ: ಮಾನವಿ ವರ್ಮಾ (ಕಾಲ:28.40ಸೆ), ನೀನಾ ವೆಂಕಟೇಶ್–2, ರುತುಜಾ ಎಸ್. (ಮೂವರು ಡಾಲ್ಫಿನ್)–3. 200 ಮೀ. ಮೆಡ್ಲೆ: ತಾನ್ಯಾ ಎಸ್. (ಜೆಐಆರ್‌ಎಸ್; ಕಾಲ: 2ನಿ.28.81ಸೆ)–1, ದಿನಿಧಿ ದೇಸಿಂಗು–2, ಮಾನವಿ ವರ್ಮಾ (ಇಬ್ಬರು ಡಾಲ್ಫಿನ್)–3. 800 ಮೀ. ಫ್ರೀಸ್ಟೈಲ್: ಅದಿತಿ ಎನ್ ಮುಲ್ಯೆ (ಕಾಲ: 9ನಿ.28.42ಸೆ)–1, ಶಿರಿನ್–2, ಮೀನಾಕ್ಷಿ ಮೆನನ್ (ಮೂವರು ಬಿಎಸಿ)–3. 4x200 ಮೀ. ಫ್ರೀಸ್ಟೈಲ್ ರಿಲೆ: ಬಸವನಗುಡಿ ಅಕ್ವಟಿಕ್ ಸೆಂಟರ್ 'ಎ' (ಕಾಲ: 9ನಿ,10.04ಸೆ)–1, ಡಾಲ್ಫಿನ್ ಅಕ್ವಟಿಕ್ಸ್–2, ಬಸವನಗುಡಿ ಅಕ್ವಟಿಕ್ ಸೆಂಟರ್ 'ಬಿ'–3.

ಸಂಕ್ಷಿಪ್ತ ಸುದ್ದಿ

ಶ್ರೀಕಾಂತ್‌ಗೆ ಜಯ ಪ್ರಣಯ್ ನಿರ್ಗಮನ

ಕ್ವಾಲಾಲಂಪುರ (ಪಿಟಿಐ): ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಐರ್ಲೆಂಡ್‌ನ ನಾಟ್ ನೂಯೆನ್ ಅವರನ್ನು ಸೋಲಿಸಿ ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗುರುವಾರ ಸೆಮಿಫೈನಲ್ ತಲುಪಿದರು. ಆದರೆ ಭಾರತದ ಇನ್ನೊಬ್ಬ ಆಟಗಾರ ಎಚ್.ಎಸ್.ಪ್ರಣಯ್ ಎರಡನೇ ಸುತ್ತಿನಲ್ಲಿ ನೇರ ಗೇಮ್‌ಗಳ ಸೋಲಿನೊಡನೆ ನಿರ್ಗಮಿಸಿದರು.

ಶ್ರೀಕಾಂತ್ ಸುಮಾರು ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 23-21, 21-17ರಿಂದ 33ನೇ ಸ್ಥಾನದಲ್ಲಿರುವ ನೂಯೆನ್ ಅವರ ಸವಾಲನ್ನು ಬದಿಗೊತ್ತಿದರು.

ಆದರೆ ಪ್ರಣಯ್ ಇನ್ನೊಂದು ಮುಖಾಮುಖಿಯಲ್ಲಿ 9–21, 18–21 ರಿಂದ ಜಪಾನ್‌ನ ಯುಶಿ ತನಾಕ ಅವರಿಗೆ ಮಣಿದರು. ಪುರುಷರ ವಿಭಾಗದ ಇನ್ನೊಂದು ಪಂದ್ಯದಲ್ಲಿ ಆಯುಷ್ ಶೆಟ್ಟಿ 14–21, 16–21 ರಲ್ಲಿ ನೇರ ಗೇಮ್‌ಗಳಿಂದ ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್ ಅವರಿಗೆ ಸೋತರು. ಪೊಪೊವ್ ಎಂಟರ ಘಟ್ಟದ ಪಂದ್ಯದಲ್ಲಿ ಶ್ರೀಕಾಂತ್ ಅವರನ್ನು ಎದುರಿಸಲಿದ್ದಾರೆ.

ಎಂಟರ ಘಟ್ಟಕ್ಕೆ ಧ್ರುವ್–ತನಿಶಾ: ಮಿಶ್ರ ಡಬಲ್ಸ್ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಧ್ರುವ್ ಕಪಿಲ–ತನಿಶಾ ಕ್ರಾಸ್ಟೊ ಜೋಡಿ 21–17, 18–21, 21–15 ರಿಂದ ಫ್ರಾನ್ಸ್‌ನ ಜೂಲಿಯೆನ್ ಮಯಿಯೊ– ಲಿಯಾ ಪಾಲೆರ್ಮೊ ಜೋಡಿಯನ್ನು ಮಣಿಸಿತು.

ರೈಝಾಗೆ ಬೆಳ್ಳಿ ಪದಕ

ಝೂಲ್ (ಜರ್ಮನಿ): ಭಾರತದ ರೈಝಾ ಧಿಲ್ಲೋನ್ ಅವರು ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನ ಮಹಿಳೆಯರ ಸ್ಕೀಟ್ ಸ್ಪರ್ಧೆಯಲ್ಲಿ ಗುರುವಾರ ಬೆಳ್ಳಿ ಗೆದ್ದುಕೊಂಡರು. ಇದು ಈ ಕೂಟದಲ್ಲಿ ಭಾರತಕ್ಕೆ ಮೂರನೇ ಪದಕ.

ಒಲಿಂಪಿಯನ್ ದಿಲ್ಲೋನ್ ಅವರು 60 ಶಾಟ್‌ಗಳ ಫೈನಲ್‌ನಲ್ಲಿ 51 ಸಲ ಯಶಸ್ವಿಯಾಗಿ ಗುರಿಯಿಟ್ಟರು. ಬ್ರಿಟನ್‌ನ ಬೋಡ್ಲಿ–ಸ್ಕಾಟ್ (53 ಸಲ ಗುರಿಸಾಧನೆ) ಚಿನ್ನ ಗೆದ್ದರೆ, ಸ್ಥಳೀಯ ಫೇವರಿಟ್ ಅನ್ನಾಬೆಲ್ಲಾ ಹೆಟ್ಮೆರ್ ಕಂಚಿನ ಪದಕ ಗೆದ್ದುಕೊಂಡರು. ಇದು ರೈಝಾ ಅವರಿಗೆ ವಿಶ್ವಕಪ್‌ನಲ್ಲಿ ಮೊದಲ ಪದಕವಾಗಿದೆ.

ಭಾರತ ಯುವ ತಂಡಕ್ಕೆ ಆಯುಷ್ ನಾಯಕ



ನವದೆಹಲಿ (ಪಿಟಿಐ): ಮುಂಬೈನ ಬ್ಯಾಟರ್ ಆಯುಷ್ ಮ್ಹಾತ್ರೆ ಅವರನ್ನು, ಇಂಗ್ಲೆಂಡ್ ಪ್ರವಾಸ ಕೈಗೊಳ್ಳುವ ಭಾರತ 19 ವರ್ಷದೊಳಗಿನವರ ಕ್ರಿಕೆಟ್ ತಂಡಕ್ಕೆ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಐಪಿಎಲ್‌ನಲ್ಲಿ ಸಂಚಲನ ಮೂಡಿಸಿದ 14 ವರ್ಷ ವಯಸ್ಸಿನ ವೈಭವ್ ಸೂರ್ಯವಂಶಿ ಸಹ ಈ ತಂಡದಲ್ಲಿದ್ದಾರೆ.

ಜೂನ್ 24ರಂದು ಅಭ್ಯಾಸ ಪಂದ್ಯದೊಡನೆ ಭಾರತ ತಂಡದ ಪ್ರವಾಸ ಆರಂಭವಾಗಲಿದೆ. ಇದರ ನಂತರ ಐದು ಪಂದ್ಯಗಳ ಯುವ ಏಕದಿನ ಸರಣಿ ಮತ್ತು ಎರಡು ಅಭ್ಯಾಸ ಪಂದ್ಯಗಳನ್ನು ಭಾರತ ಆಡಲಿದೆ. ರಾಜಸ್ಥಾನ ರಾಯಲ್ಸ್ ಪರ ಗಮನ ಸೆಳೆಯುವ ಪ್ರದರ್ಶನ ನೀಡಿದ್ದಕ್ಕಾಗಿ ಬಿಹಾರದ ಬ್ಯಾಟರ್ ಆಯ್ಕೆ ಆಗಿದ್ದಾರೆ. ಪ್ರಬಲ ಗುಜರಾತ್ ಟೈಟನ್ಸ್ ವಿರುದ್ಧ 35 ಎಸೆತಗಳಲ್ಲಿ ಶತಕ ಬಾರಿಸಿ ಪರಾಕ್ರಮ ಮೆರೆದಿದ್ದರು. ಇದು ಲೀಗ್‌ನ ಎರಡನೇ ಅತಿ ವೇಗದ ಶತಕವಾಗಿತ್ತು.

ಭಾರತದ ಸವಾಲು ಅಂತ್ಯ

ದೋಹಾ (ಪಿಟಿಐ): ಯಶಸ್ವಿನಿ ಘೋರ್ಪಡೆ ಮತ್ತು ದಿಯಾ ಚಿತಳೆ ಜೋಡಿಯ ನಿರ್ಗಮನದೊಂದಿಗೆ ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ.

ಮಹಿಳೆಯರ ಡಬಲ್ಸ್‌ನ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕದ ಘೋರ್ಪಡೆ ಮತ್ತು ಮಹಾರಾಷ್ಟ್ರದ ಚಿತಾಳೆ 0–3 (7–11, 8–11, 9–11)ಯಿಂದ ಜಪಾನಿನ ಮಿವಾ ಹರಿಮೊಟೊ ಮತ್ತು ಮಿಯು ಕಿಹರಾ ವಿರುದ್ಧ ಪರಾಭವ ಗೊಂಡರು.

ಓಜಸ್‌ಗೆ ರಿಷಿ ಆಘಾತ

ಬೆಂಗಳೂರು: ಆರನೇ ಶ್ರೇಯಾಂಕದ ರಿಷಿ ರೆಡ್ಡಿ ಅವರು ಅಗ್ರ ಶ್ರೇಯಾಂಕದ ಓಜಸ್ ತೇಜೊ ಅವರಿಗೆ ಆಘಾತ ನೀಡಿ ಎಐಟಿಎ ಟಿಎನ್‌ಆರ್ ಸ್ಮರಣಾರ್ಥ ಆಲ್ ಇಂಡಿಯಾ ರ‍್ಯಾಂಕಿಂಗ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಇಲ್ಲಿನ ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿಯಲ್ಲಿ ಗುರುವಾರ ನಡೆದ ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕದ ರಿಷಿ 7-6 (3), 7-6 (4) ರಿಂದ ಓಜಸ್ ಅವರನ್ನು ಮಣಿಸಿದರು.

ಯುವ ಫುಟ್‌ಬಾಲ್: ರಾಜ್ಯದ ಇಬ್ಬರಿಗೆ ಸ್ಥಾನ

ಬೆಂಗಳೂರು: ಕರ್ನಾಟಕದ ವಿನೀತ್ ವೆಂಕಟೇಶ್ ಮತ್ತು ಮೆಕಾರ್ಟನ್ ಲೂಯಿಸ್ ನಿಕ್ಸನ್ ಅವರು ತಜಿಕಿಸ್ತಾನದ ದುಷಾಂಬೆಯಲ್ಲಿ ಮುಂದಿನ ತಿಂಗಳು ನಡೆಯಲಿರುವ ಸ್ನೇಹಪರ ಪಂದ್ಯಗಳಲ್ಲಿ ಆಡುವ ಭಾರತ 23 ವರ್ಷದೊಳಗಿನವರ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಹೆಡ್ ಕೋಚ್ ನೌಷಾದ್ ಮೂಸಾ ಅವರು ಗುರುವಾರ 29 ಮಂದಿ ಸಂಭವನೀಯರ ತಂಡವನ್ನು ಪ್ರಕಟಿಸಿದರು.

ಭಾರತ ತಂಡವು ಜೂನ್ 18 ಮತ್ತು 21 ರಂದು ಕ್ರಮವಾಗಿ ತಜಿಕಿಸ್ತಾನ ಮತ್ತು ಕಿರ್ಗಿಜ್ ರಿಪಬ್ಲಿಕ್ ವಿರುದ್ಧ ಎರಡು ಪಂದ್ಯಗಳನ್ನು ಆಡಲಿದೆ.

VML.5805.2025